ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧೫ನೇ ನಿಯಮದ ಮೇರೆಗೆ ದಿನಾಂಕ ೧೨ನೇ ಮಾರ್ಚ್ ೧೯೮೭ರಂದು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳು (ಪಕ್ಷಾಂತರ ನಿಷೇಧ) ವಿಧೇಯಕವನ್ನು ವಿಧಾನಸಭೆಯ ಅನುಮೋದನೆಗಾಗಿ ಕಳುಹಿಸುತ್ತಿದ್ದೇನೆ."

ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಅಭಿಯಾಚನೆ ಕ್ರಮಾಂಕ ೨೧—ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀ ಎ. ಲಕ್ಷ್ಮೀಸಾಗರ್—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೪,೬೨,೫೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೧೦ ೦೦ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೨—ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫. ೭೧, ೦೦, ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೨೧ ೦೦ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕಮಾಂಕ ೩೩—ನಿಗಮ ಮತ್ತು ನಗರ ಪಾಲಿಕೆಗಳಿಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳಿಗೆ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೭,೨೩,೪೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೪—ರಾಜ್ಯ ವಿಧಾನ ಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಸಭೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೧೫,೯೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೭–ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೩,೬೧,೨೬,೮೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರುಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾಪಗಳನ್ನು ಮಂಡಿಸಲಾಯಿತು

ಅಧ್ಯಕ್ಷರು.—ಪ್ರಸ್ತಾವಗಳನ್ನು ಮಂಡಿಸಲಾಯಿತು. ಈಗ ಎಲ್ಲಾ ಬೇಡಿಕೆಗಳು ಸಭೆಯ ಮುಂದಿವೆ. ಮಾನ್ಯ ಧರ್ಮ ಸಿಂಗರು ಚರ್ಚೆಯನ್ನು ಪ್ರಾರಂಭಿಸುವುದು.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು. ನಾವು ಮೊದಲಿನಿಂದಲೂ ಡಿಮ್ಯಾಂಡ್ ಅನ್ನುವುದಕ್ಕೆ ಬೇಡಿಕೆ ಅನ್ನುತ್ತಿದ್ದೆವು; ಈಗ ಅಭಿಯಾಚನೆ ಎಂಬ ಹೊಸ ಪದವನ್ನು ಇಂಟ್ರಡ್ಯೂಸ್ ಮಾಡಿದ್ದಾರೆ ಇದು ಯಾವ ಯಾಚನೆ? ನಾವು ಈ ಸಭೆಯಲ್ಲಿ ಕೆಲವು ವರ್ಷಗಳನ್ನು ಕಳೆದಿದ್ದೇವೆ. ಇದು ನಾವು ಕೇಳದೆ ಇರತಕ್ಕ ಕನ್ನಡ. ಬೇಡಿಕೆ ಅನ್ನಿ, ಅದರಲ್ಲೇನು ತಪ್ಪಿದೆ

ಶ್ರೀ ಎ. ಲಕ್ಷ್ಮೀಸಾಗರ್ —ಇದು ನಾನು ತಯಾರು ಮಾಡಿದಂತ ಭಾಷಾಂತರ ಶಬ್ದ ಅಲ್ಲ.

ಶ್ರೀ ಎಸ್, ಬಂಗಾರಪ್ಪ.—ನಾನು ನಮ್ಮ ಬಗ್ಗೆ ಹೇಳಲಿಲ್ಲ. ಯಾರು ಮಾಡಿದ್ದಾರೆ ಅವರು ಏತಕ್ಕೆ ಈ ರೀತಿ ಮಾಡಿದ್ದಾರೆ ಎಂದು ಅವರ ಬಗ್ಗೆ ಹೇಳಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಡಿಮ್ಯಾಂಡ್ ಅಂದರೆ ಅಭಿಯಾಚನೆ ಎಂದು.

ಶ್ರೀ ಎಸ್. ಬಂಗಾರಪ್ಪ.—ನೀವು ಆ ಪದವನ್ನು ಹೊಸದಾಗಿ ಹುಟ್ಟು ಹಾಕಿದ್ದೀರಿ ಎಂದು ಹೇಳಲಿಲ್ಲ. ನೀವು ಪಂಡಿತರಿಗೆ ಕಳುಹಿಸಿ ಕೊಟ್ಟಿದ್ದೀರಿ. ಅವರು ಬೇಡಿಕೆ ಎಂಬ......

ಅಧ್ಯಕ್ಷರು.—ಅಚ್ಚ ಕನ್ನಡ ಪದ ಬೇಡಿಕೆ ಎಂಬುದು. ಬೇಡಿಕೆ ಎಂಬ ಶಬ್ದ ಬಹಳ ಒಳ್ಳೆಯದು. ನಿಮ್ಮ ವಾದವನ್ನು ಒಪ್ಪುತ್ತೇನೆ. ಮಾನ್ಯ ಧರ್ಮಸಿಂಗ್‌ರವರೇ ಮಾತನಾಡಿ, ತಾವು ೪೦ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್. (ಜೇವರ್ಗಿ).—ಮಾನ್ಯ ಅಧ್ಯಕ್ಷರೇ ೨೧, ೩೨, ೩೩ ೩೬ ಮತ್ತು ೩೭ನೇ ಬೇಡಿಕೆಗಳನ್ನು ಈಗಾಗಲೇ ಮಾನ್ಯ ಮಂತ್ರಿಗಳು ಏನು ಮಂಡನೆ ಮಾಡಿದ್ದಾರೆ ಅದಕ್ಕೆ ವಿರೋಧ ಮಾಡಬೇಕೆಂಬ ಉದ್ದೇಶದಿಂದ ಅಲ್ಲ, ಆದರೆ ಕೆಲಸ ಕಾರ್ಯಗಳಾಗಿಲ್ಲದೇ ಇರುವುದರಿಂದ ವಿರೋಧಿಸಿ ಮಾತನಾಡಬೇಕಾಗಿದೆ. ಈ ಒಂದು ಬೇಡಿಕೆಗಳನ್ನು ಮಂಡನೆ ಮಾಡಿದಾಗ, ೧೯೮೭–೮೮ರ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಲ್ಲಿ ಏನೇನು ಕೆಲಸ ಕಾರ್ಯಗಳು ಆಗಬೇಕಾಗಿವೆ; ಏನೇನು ಮಾಡುತ್ತಿದ್ದಾರೆ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದಾರೆಂಬ ಬಗ್ಗೆ ಪರ್‌ಫಾರ್ಮೆನ್ಸ್ ಬಡ್ಜೆಟ್ಟನ್ನು ನೋಡಿದಾಗ ಇದರಲ್ಲಿ ತಾವು ಏನನ್ನೂ ಉಲ್ಲೇಖ ಮಾಡಿಲ್ಲ.

(ಶ್ರೀ ವೈ. ಕೆ. ರಾಮಯ್ಯನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

೧೧–೩೦ ಎ. ಎಂ.

೧೯೮೬–೮೭ನೇ ಸಾಲಿನಲ್ಲಿ ಪರ್‌ಫಾರ್ಮೆನ್ಸ್ ಬಜೆಟ್ ಕೊಟ್ಟಾಗ ನಿರ್ದಿಷ್ಟವಾಗಿ ಯಾವ ಯಾವ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ ಎಂಬುದನ್ನು ಉಲ್ಲೇಖ ಮಾಡಿದ್ದೀರಿ. ಮೊನ್ನೆ ನಾನು ಈ ಸಾರಿಯ ವರದಿಯನ್ನು ನೋಡಿದಾಗ ಸರ್ಕಾರದ ಕಡೆಯಿಂದ ತಮ್ಮ ಇಲಾಖೆ ಪರವಾಗಿ ಏನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ ಎಂಬುದನ್ನು ಏನೂ ಉಲ್ಲೇಖ ಮಾಡಿಲ್ಲ. ಯಾವ ಯಾವ ಬಾಬ್ತಿಗೆ ಎಷ್ಟೆಷ್ಟು ಖರ್ಚು ಮಾಡುತ್ತೀರಿ ಎಂಬುದೂ ಕೂಡ ಇದರಲ್ಲಿ ತಾವು ನಿರ್ದಿಷ್ಟವಾಗಿ ಪ್ರಕಟಣೆ ಮಾಡಿಲ್ಲ. ನಗರಾಡಳಿತ ಇಲಾಖೆ ಜನಗಳ ಸಮಸ್ಯೆ ಬಗ್ಗೆ ವಿಚಾರ ಮಾಡತಕ್ಕ ಇಲಾಖೆ. ಅವರ ದೈನಿಕ ಜೀವನಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕುರಿತು ಪಟ್ಟಣ ಪ್ರದೇಶದಲ್ಲಿರತಕ್ಕ ಜನರು ಏನಿದ್ದಾಗೆ ಅವರ ಎಲ್ಲ ಸಮಸ್ಯೆಗಳ ಬಗ್ಗೆ ತಾವು ವಿಚಾರ ಮಾಡತಕ್ಕ ಇಲಾಖೆಯಾಗಿದೆ. ನಾಲ್ಕು ಕೋಟಿ ಜನ

ಸಂಖ್ಯೆ ಇರತಕ್ಕ ಕರ್ನಾಟಕ ರಾಜ್ಯದಲ್ಲಿ ೧೦೦ಕ್ಕೆ ೩೦ ಜನರು ಪಟ್ಟಣ ಪ್ರದೇಶದಲ್ಲಿ ಏನಿರುತ್ತಾರೆ ಅವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿ ಅವರ ಸಮಸ್ಯೆಗಳ ಬಗ್ಗೆ ಈ ಒಂದು ಜನತಾ ಸರ್ಕಾರ ಬಂದ ಮೇಲೆ ೧೯೮೩ ರಿಂದ ೮೪ ಆಗಲಿ ೧೯೮೪ ರಿಂದ ೮೫ ಆಗಲಿ ೧೯೮೫ ರಿಂದ ೮೬ ಆಗಲಿ ಮತ್ತು ೧೯೮೬–೮೭ರಲ್ಲಿ ಏನೇನು ಸಾಧನೆಗಳು ತಾವು ಸಾಧಿಸಿದ್ದೀರಿ, ಏನೇನು ಕೆಲಸಕಾರ್ಯಗಳನ್ನು ಮೊದಲಿನ ಸರ್ಕಾರಕ್ಕಿಂತ ಕಂಪ್ಯಾರಟೀವ್‌ವಾಗಿ ಮಾಡಿದ್ದೀರಿ ಎಂಬುದನ್ನು ಕೂಡ ಜನರ ಗಮನಕ್ಕೆ ತರಬೇಕಾಗುತ್ತದೆ. ಮತ್ತು ಸದನದಲ್ಲಿ ಕೂಡ ಆ ವಿಚಾರಗಳನ್ನು ತಾವು ಇಡಬೇಕಾಗುತ್ತದೆ. ಇದನ್ನು ನೋಡಿದಾಗ ಬಹಳಷ್ಟು ಸಮಸ್ಯೆಗಳನ್ನು ಚರ್ಚೆ ಮಾಡಬೇಕಾಗಿದೆ. ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ನಲ್ವತ್ತು ನಿಮಿಷಗಳ ಕಾಲ ಮಾತ್ರ ಮಾತನಾಡಬೇಕೆಂದು ಅಧ್ಯಕ್ಷರು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುತ್ತಿದ್ದಾಗ (ಶ್ರೀ ಎ. ಲಕ್ಷ್ಮೀಸಾಗರ್ ಅವರಿಗೆ) ೧೯೮೨–೮೩ರಲ್ಲಿ ಇದೇ ಡಿಪಾರ್ಟ್‌ಮೆಂಟಿನಲ್ಲಿ ಮೂರು ದಿವಸಗಳ ಕಾಲ ಚರ್ಚೆ ಮಾಡಿದ್ದೇವೆ. ಮೂರು ದಿವಸ ನಡೆದಂಥ ಚರ್ಚೆಯಲ್ಲಿ ೩೩ ಸದಸ್ಯರುಗಳು ಭಾಗವಹಿಸಿದ್ದರು. ತಮ್ಮ ತಮ್ಮ ಕ್ಷೇತ್ರದಲ್ಲಿ ಇರತಕ್ಕ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರದ ಬಗ್ಗೆ ಮತ್ತು ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿದ್ದೇವೆ. ಚರ್ಚೆ ಕೂಡ ಮಾಡಿದ್ದೇವೆ. ಆದರೆ ಇವತ್ತು ಕೇವಲ ಒಂದೆರಡು ಗಂಟೆಗಳ ಕಾಲದಲ್ಲಿ ಎಲ್ಲಾ ವಿರೋಧಪಕ್ಷದ ಸದಸ್ಯರು ಮಾತನಾಡಬೇಕು, ಆ ಕಡೆ ಸದಸ್ಯರೂ ಕೂಡ ಮಾತನಾಡಬೇಕು, ಉತ್ತರ ಕೂಡ ಆಗಬೇಕು ಎಂಬ ರೀತಿಯಲ್ಲಿ ಇದೆ. ಆದ್ದರಿಂದ ನಾನು ಬಹಳಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ತಯಾರಿಲ್ಲ. ೧೯೮೩–೮೪ರಲ್ಲಿ ಕೂಡ ಚರ್ಚೆಯನ್ನು ಪ್ರಾರಂಭ ಮಾಡತಕ್ಕ ಕಾಲದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದೇನೆ, ೧೯೮೪–೮೫ರಲ್ಲಿ ಕೂಡ ಹೇಳಿದ್ದೇನೆ. ಮಾನ್ಯ ಚಂದ್ರಶೇಖರ್ ಅವರು ಈ ಖಾತೆಯ ಮಂತ್ರಿಗಳಾಗಿದ್ದರು. ಹೋದಸಾರಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಮುಂದಿನ ವರ್ಷ ಇದರ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅದನ್ನು ಪ್ರಕಟಣೆ ಮಾಡುತ್ತಿದ್ದೇವೆ. ಎಂಬ ರೀತಿಯಲ್ಲಿ ಲಕ್ಷ್ಮೀಸಾಗರ್ ಅವರು ಹೇಳಿದ್ದರು. ಯಾವಾಗಲೂ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದಾಗ, ಪ್ರಶ್ನೋತ್ತರ ಕಾಲದಲ್ಲಾಗಲಿ, ಗಮನ ಸೆಳೆಯುವ ಸೂಚನೆ ಮುಖಾಂತರ ಆಗಲಿ ಏನೇನು ಸಮಸ್ಯೆಗಳು ರಾಜ್ಯದಲ್ಲಿ ಆಗುತ್ತಿವೆ ಎಂಬುದನ್ನು ಹೇಳಿದಾಗ ಮಾನ್ಯ ಲಕ್ಷ್ಮೀಸಾಗರ್ ಅವರು ಗಂಭೀರವಾಗಿ ತೆಗೆದುಕೊಳ್ಳದೆ ಸರಳವಾಗಿ ತೆಗೆದುಕೊಳ್ಳುತ್ತಿದ್ದರು. ಬಹಳ ಶುದ್ಧವಾದ ಕನ್ನಡದಲ್ಲಿ ಅಚ್ಚುಕಟ್ಟಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ, ಸರ್ಕಾರ ಅದರ ಬಗ್ಗೆ ಗಮನ ಕೊಡುತ್ತಿದೆ ತಾವೇನೂ ಕಾಳಜಿ ಮಾಡಬಾರದು ಎಂದು ಹೇಳುತ್ತಿದ್ದರು. ಆದರೆ ಕರ್ನಾಟಕ ರಾಜ್ಯದಲ್ಲಿ ಇವತ್ತು. ತಮ್ಮ ಇಲಾಖೆಗೆ ಸಂಬಂಧಪಟ್ಟ ವಿಷಯಗಳೇನಿವೆ ಅದರ ಬಗ್ಗೆ ಜನರ ಮನಸ್ಸಿನಲ್ಲಿ ಏನು ಭಾವನೆ ಇದೆ ಎಂಬುದನ್ನು ಕೂಡ ತಿಳಿದುಕೊಳ್ಳಬೇಕು. ಪೌರಕಾರ್ಮಿಕರ ಸ್ಟ್ರೈಕ್ ಆಗಿದೆ. ಕರ್ನಾಟಕ ಅರ್ಬನ್ ವಾಟರ್‌ಸಪ್ಲೈ ಬೋರ್ಡಿನವರು ಕೂಡ ಸ್ಟ್ರೈಕ್ ಪ್ರಾರಂಭ ಮಾಡುತ್ತಿದ್ದಾರೆ. ಹುಬ್ಬಳ್ಳಿ–ಧಾರವಾಡದಲ್ಲಿ ಮೊಟ್ಟ ಮೊದಲನೆಯದಾಗಿ ಕರ್ನಾಟಕದ ಇತಿಹಾಸದಲ್ಲಿ ಮೇಯರ್ ಅವರು ಖುದ್ದಾಗಿ ರಸ್ತೆ ರೋಖೋ ಚಳುವಳಿ ಮಾಡಿದ್ದಾರೆ. ಬರತಕ್ಕ ದಿವಸಗಳಲ್ಲಿ, ಬೇಸಿಗೆ ಕಾಲದಲ್ಲಿ ನೀರಿನ ಸಮಸ್ಯೆಯಾಗಲಿ, ಕೊಳಚೆ ಪ್ರದೇಶದಲ್ಲಿರತಕ್ಕ ಬಡವರ ಗೋಳಾಗಲಿ ಸಾಕಷ್ಟು ಇದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದಾರೆ ? ಇವತ್ತು ಬೆಂಗಳೂರು ನಗರದಲ್ಲಿರತಕ್ಕ ಜನರಿಗೆ ಅನುಕೂಲವಾಗುವ ಸಲುವಾಗಿ ಕಾವೇರಿ ೩ನೇ ಹಂತದ ಯೋಜನೆಯನ್ನು ಏನು ತೆಗೆದುಕೊಳ್ಳಬೇಕೆಂದಿದ್ದೀರಿ. ಅದರ ಬಗ್ಗೆ ನಂತರ ಹೇಳುತ್ತೇನೆ. ನಗರದಲ್ಲಿ ನೀರು ಸರಬರಾಜು ಸಮಸ್ಯೆ ಏನು ಇದೆ, ನಗರಾಭಿವೃದ್ಧಿ ಸಚಿವರಾಗಿ ತಾವು ಏನು ಇದ್ದೀರಿ, ಚಿಕ್ಕಪೇಟೆಯಿಂದ ತಾವು ಏನು ಆರಿಸಿ ಬಂದಿದ್ದೀರಿ, ಏನೊಂದು ಆಶ್ವಾಸನೆಯನ್ನು ಜನರಿಗೆ ಕೊಟ್ಟಿದ್ದೀರಿ, ಆ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕಿಕೊಂಡು ಹೋಗುತ್ತಿದ್ದೀರೆಂಬುದರ ಬಗ್ಗೆ ಕೂಡ ಸವಿಸ್ತಾರವಾಗಿ ಉಲ್ಲೇಖನವನ್ನು ನಾನು ಮಾಡಬೇಕಾಗಿದೆ. ಆ ಬಗ್ಗೆ ಈ ಮೊದಲೂ ಕೂಡ ಹೇಳಿದ್ದೇನೆ. ಒಂದು ಕೋಟಿಗಿಂತ ಹೆಚ್ಚು ಜನ ಏನು ಪಟ್ಟಣ ಪ್ರದೇಶದಲ್ಲಿದ್ದಾರೆ, ಆ ಒಂದು ಸ್ಥಳೀಯ ಸಂಸ್ಥೆಗಳ ಬಗ್ಗೆ, ಅವರು ಒಳ್ಳೆಯ ಕೆಲಸಕಾರ್ಯಗಳನ್ನು ಮಾಡತಕ್ಕಂತಹ ರೀತಿಯಲ್ಲಿ, ಯಾವರೀತಿಯಲ್ಲಿ ಆದರ ಆರ್ಥಿಕ ಪರಿಸ್ಥಿತಿಗೆ ಭದ್ರತೆಯನ್ನು ಕೊಟ್ಟಿದ್ದೀರಿ ? ಏನು ಕೆಲಸ ಮಾಡು

ತ್ತಿದ್ದಾರೆಂಬುದರ ಬಗ್ಗೆಯೂ ಸಹ ಹೋದ ಸಲ ಕೂಡ ೧೯೮೨ ರಿಂದ ಸಾಕಷ್ಟು ಅಂಕಿ ಅಂಶಗಳನ್ನು ತಮಗೆ ಕೊಟ್ಟಿದ್ದೆ. ಈಗಲೂ ಅದೇ ರೀತಿಯ ಅಂಕಿ ಅಂಶಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆಕ್ಟ್ರಾಯಿ ಕಾಂಪನ್‌ಸೇಷನ್ ಬಗ್ಗೆ ಹೇಳುವುದಾದರೆ ೪೭ ಕೋಟಿ ರೂಪಾಯಿಗಳ ಆಕ್ಟ್ರಾಯಿ ಕಾಂಪನ್‌ಸೇಷನ್ ಕೊಡಬೇಕಾಗಿದೆ. ಅದರಲ್ಲಿ ಈಗಾಗಲೇ ೨೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇನ್ನೂ ಎರಡು ಕಂತುಗಳ ಆಕ್ಟ್ರಾಯಿ ಪರಿಹಾರವನ್ನು ಕೊಡಬೇಕಾಗಿದೆ. ಅದನ್ನೂ ಕೂಡ ತಾವು ಕೊಟ್ಟಿಲ್ಲ. ಅಲ್ಲಿ ಇರತಕ್ಕಂತಹ ಪೌರ ಕಾರ್ಮಿಕರಿಗೆ ಸಂಬಳ ಸಿಕ್ಕುತ್ತಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದವರಿಗೆ ಸಂಬಳ ಸಿಕ್ಕುತ್ತಿಲ್ಲ. ಆ ಬಗ್ಗೆ ಅನೇಕ ಒತ್ತಾಯಗಳು ಬರುತ್ತಿವೆ. ಅದರ ಬಗ್ಗೆ ತಾವು ಗಮನ ಕೊಡಬೇಕಾಗಿದೆ. ಶೇಕಡ ೧೦ರಷ್ಟೇ ಗ್ರಾಂಟನ್ನು ಕೊಡುತ್ತಿದ್ದೀರಿ. ಇದು ೧೯೭೯-೮೦ರಲ್ಲಿ ತೀರ್ಮಾನವಾದಂತಹದ್ದು. ಇವತ್ತಿನ ದಿವಸ ಅವರಿಗೆ ಆಕ್ಟ್ರಾಯಿ ಹೋದ ಮೇಲೆ ಪುರಸಭೆಗಳ ಹಾಗೂ ನಗರಸಭೆಗಳ ಹಣಕಾಸಿನ ಪರಿಸ್ಥಿತಿಯನ್ನು ಯಾವ ರೀತಿ ಉತ್ತಮ ಪಡಿಸಬೇಕೆಂಬುದರ ಬಗ್ಗೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಗುಲ್ಹಾಟಿ ಕಮೀಷನ್ ನೇಮಕ ಮಾಡಿದ್ದೆವು. ಆದರೆ ತಾವು ಬಂದ ಮೇಲೆ ಅದನ್ನು ತೆಗೆದುಹಾಕಿ ಶ್ರೀ ಲಕ್ಷ್ಮಣ್‌ರಾವ್ ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿದಿರಿ. ಆ ಕಮಿಟಿಯ ಬಗ್ಗೆಯೂ ಕಳೆದ ಸಲ ಇಲಾಖೆಯ ಬೇಡಿಕೆಯ ಮೇಲೆ ನಡೆದಂತಹ ಉತ್ತರದ ಸಮಯದಲ್ಲೂ ಕೂಡ ಸರ್ಕಾರದ ಮಂತ್ರಿಗಳು ಹೇಳಿದ್ದರು. ೧೯೮೬-೮೭ನೇ ಸಾಲಿನಲ್ಲೇ ಶ್ರೀ ಲಕ್ಷ್ಮಣ್ ರಾವ್‌ರವರ ಕಮಿಟಿಯ ವರದಿ ಕೂಡ ಸರ್ಕಾರಕ್ಕೆ ಬಂದಿದೆ. ಅದರ ಬಗ್ಗೆ ಸರ್ಕಾರ ಗಮನ ಕೊಟ್ಟಿದೆಯೇ ? ಅವರು ಏನು ಶಿಫಾರಸ್ಸು ಮಾಡಿದ್ದಾರೆ ? ಅವರು ಮಾಡಿರುವಂತಹ ಶಿಫಾರಸ್ಸಿನ ಪ್ರಕಾರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಭದ್ರತೆಯ ಬಗ್ಗೆ ಏನು ವಿಚಾರ ಮಾಡಿದ್ದೀರೆಂಬುದರ ಬಗ್ಗೆಯೂ ಕೂಡ ತಾವು ತಮ್ಮ ಇಲಾಖೆಯ ವಾರ್ಷಿಕ ವರದಿಯಲ್ಲೂ ಪ್ರಸ್ತಾಪ ಮಾಡಿಲ್ಲ. ಅದರ ಬಗ್ಗೆ ನಿರ್ದಿಷ್ಟವಾಗಿ ತಾವು ಹೇಳಬೇಕಾಗುತ್ತದೆ. ಈ ಜನತಾ ಸರ್ಕಾರ ಏನು ಇದೆ, ಪಟ್ಟಣ ಪ್ರದೇಶದಲ್ಲಿರತಕ್ಕ ಹಾಗೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಮೊಟ್ಟಮೊದಲ ಬಾರಿಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಕಡೆ ಚುನಾವಣೆ ಮಾಡಿದ್ದೇವೆ. ಅವರ ಕೈಗೇ ಅಧಿಕಾರವನ್ನು ಕೊಟ್ಟಿದ್ದೇವೆ ಎಂಬುದಾಗಿ ಶ್ರೀಮಾನ್ ಅಬ್ದುಲ್ ನಜೀರ್ ಸಾಬ್‌ವರರೂ ಕೂಡ ಪದೇಪದೇ ಹೇಳುತ್ತಿದ್ದಾರೆ. ತಾವು ಕೂಡ ಹೇಳಿದ್ದೀರಿ. ಆದರೆ ಅದರ ಬಗ್ಗೆ ತಾವು ಏನು ಗಮನ ಕೊಟ್ಟಿದ್ದೀರಿ ? ಅಲ್ಲಿರತಕ್ಕ ಪುರಸಭೆಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು, ಅಲ್ಲಿನ ನೌಕರರಿಗೆ ಸಂಬಳ ಕೊಡತಕ್ಕಂತಹ ಪರಿಸ್ಥಿತಿಯೂ ಇಲ್ಲ. ಅವರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಿಕೊಂಡು ಹೋಗುವಂತಹ ಮಾತು ಬೇರೆ. ಸಾಕಷ್ಟು ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಏನು ಸಮಸ್ಯೆಗಳು ಇವೆ ಎಂಬುದರ ಬಗ್ಗೆ ಅವರೇ ವಿವರವಾಗಿ ಮುಂದೆ ಹೇಳುತ್ತಾರೆ. ಅದರ ಬಗ್ಗೆ ಎಷ್ಟರ ಮಟ್ಟಿಗೆ ಆ ಸಮಸ್ಯೆಗಳನ್ನು ಎದುರಿಸಿದ್ದೇವೆಂಬುದನ್ನು ಕೂಡ ತಮ್ಮ ಮನಸ್ಸಿನಲ್ಲಿ ಪ್ರಶ್ನೆ ಹಾಕಿಕೊಳ್ಳಬೇಕು. ಅದರ ಬಗ್ಗೆ ನಿವಾರಣೆ ಮಾಡುವುದಕ್ಕೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನ್ನೂ ಕೂಡ ತಾವು ಹೆಚ್ಚು ಮಾಡಿದ್ದೀರಿ. ಪಟ್ಟಣ ಪ್ರದೇಶದಿಂದ ಬರತಕ್ಕ ಜನರಿಂದ ಮೋಟಾರ್ ವೆಹಿಕಲ್ ಟ್ಯಾಕ್ಸ್ ಹಾಗೂ ಎಂಟ್ರಿ ಟ್ಯಾಕ್ಸ್ ಇವೆರಡರಿಂದ ೯೮ ಕೋಟಿ ರೂಪಾಯಿಗಳನ್ನು ವಸೂಲು ಮಾಡುತ್ತಿದ್ದೀರಿ. ಬಜೆಟ್ಟಿನಲ್ಲಿರತಕ್ಕ ಒಟ್ಟು ಹಣ ಏನು ಇದೆ, ಅದರಲ್ಲಿ ಸುಮಾರು ಅರ್ಧ ಭಾಗದಷ್ಟು ಹಣವನ್ನು ತಾವು ಅವರಿಂದ ವಸೂಲು ಮಾಡುತ್ತಿದ್ದೀರಿ. ಆ ಒಂದು ಹಣದಲ್ಲಿ ಪುರಸಭೆಗಳಿಗೆ ಹಾಗೂ ನಗರ ಸಭೆಗಳಿಗೆ ಎಷ್ಟು ಹಣವನ್ನು ಕೊಡುತ್ತಿದ್ದೀರಿ ಎಂಬುದನ್ನೂ ಕೂಡ ತಾವು ಹೇಳಬೇಕಾಗಿದೆ. ನಾವು ಹೋದ ಸಲ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೆ. ನಂತರ ನಾವು ಡೈರೆಕ್ಟರೇಟ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಂಬುದಾಗಿ ಮಾಡಿದ್ದೀರಿ. ಅವರಿಗೆ ಅಧಿಕಾರವನ್ನೂ ಕೂಡ ವಹಿಸಿ ಕೊಟ್ಟಿದ್ದೇವೆಂಬುದಾಗಿ ಪ್ರಸ್ತಾಪ ಕೂಡ ಮಾಡಿದ್ದೀರಿ. ಆದರೆ ಪ್ರಾಕ್ಟಿಕಲ್ಲಾಗಿ ಅವರು ಯಾವುದೇ ಹೆಚ್ಚಿನ ಅಧಿಕಾರವನ್ನು ಕೊಟ್ಟಿಲ್ಲ. ಈ ಒಂದು ವರ್ಷಗಳ ಕಾಲದಲ್ಲಿ ವ್ಯವಸ್ಥಿತವಾಗಿ ಆಡಳಿತವನ್ನು ನಡೆಸತಕ್ಕಂತಹ ಕಾಲದಲ್ಲಿ ಅವರಿಗೆ ಹಣದ ಕೊರತೆ ಕೂಡ ಇದೆ, ಯಾವ್ಯಾವ ಸಮಸ್ಯೆಗಳ ಬಗ್ಗೆ ನೇರವಾಗಿ ನಿವಾರಣೆ ಮಾಡಬೇಕು, ಯಾವ್ಯಾವ ವಿಷಯಗಳ ಬಗ್ಗೆ ಗಮನ ಕೊಡಬೇಕು ಎನ್ನತಕ್ಕಂತಹದ್ದರ ಬಗ್ಗೆ ನಿರ್ದಿಷ್ಟವಾದ ಆದೇಶ ಸರ್ಕಾರದ ಕಡೆಯಿಂದ ಹೋಗಿಲ್ಲ.

ಇವತ್ತು ಕೆಲಸ ಕಾರ್ಯ ಆಗುತ್ತಾ ಇಲ್ಲ. ಕೇವಲ ಬೆಂಗಳೂರಿನಲ್ಲಿ ಮಾತ್ರ ತಪ್ಪು ಆದೇಶ ಇದೆ. ಇವತ್ತು ಡೈರೆಕ್ಟರೇಟ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಲ್ಲಿ ತಾನೇ ಕೆಲಸ ಮಾಡುತ್ತಿದೆ? ನಾನೂ ಕೂಡ ಸಾಕಷ್ಟು ಪುರಸಭೆಗಳು, ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳಲ್ಲಿ ನೋಡಿರುವಂತೆ ಯಾವ ರೀತಿ ನೇರವಾಗಿ ಸಂಬಂಧ ಇಟ್ಟುಕೊಂಡು ಈ ಡೈರೆಕ್ಟರೇಟ್ ಕೆಲಸ ಮಾಡುತ್ತಿದೆ ಎಂದರೆ, ಇನ್ನೂ ಕೂಡ ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂದು ಹೇಳುತ್ತೇನೆ. ನಾನು ಇವತ್ತು ಹೆಚ್ಚು ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಿಂತಿಲ್ಲ. ಇವತ್ತು ಪಟ್ಟಣ ಪ್ರದೇಶದಲ್ಲಿ ೨,೪೦೦ ರೂ.ಗಳಿಗಿಂತಲೂ ಕಡಿಮೆ ಆದಾಯ ಪಡೆಯುವ ಕಡು ಬಡವರು ಏನಿದ್ದಾರೆ ಅವರಿಗೆ ಇವತ್ತು ಮುನಿಸಿಪಾಲಿಟಿಯಿಂದ ೨೫ ಪರ್ಸೆಂಟ್, ಸರ್ಕಾರದಿಂದ ೫೦ ಪರ್ಸೆಂಟ್ ಕೊಡುವ ವ್ಯವಸ್ಥೆ ಇದೆ. ಅದೇ ಪ್ರಕಾರ ೪,೮೦೦ ರೂ.ಗಿಂತ ಕಡಿಮೆ ಆದಾಯ ಇರುವಂತಹ ಸೈಟ್‌ಲೆಸ್ ಪೀಪಲ್ ಯಾರು ಇದ್ದಾರೆ ಅವರಿಗೆ ೫೦ ಪರ್ಸೆಂಟ್ ಲೋನ್ ಕೂಡ ಕೊಡುವ ಒಂದು ಸ್ಕೀಮ್ ಇದೆ. ಇವತ್ತು ತಾವು ಏನು ಎಲಿಜಿಬಲ್ ಫ್ಯಾಮಿಲೀಸ್ ತಾವು ಐಡೆಂಟಿಫೈ ಮಾಡಿದ್ದೀರಿ ಅದರಲ್ಲಿ ತಾವು ಶೆಡ್ಯೂಲ್ಡ್ ಕಾಸ್ಟ್‌ನ ೨೩,೯೩೭ ಜನರನ್ನು, ಶೆಡ್ಯೂಲ್ಡ್ ಟ್ರೈಬ್ಸ್‌ನ ೪೫೧೬ ಜನರನ್ನೂ ಮತ್ತು ಇತರೆಯವರು ೯೬,೧೪೧ ಜನರನ್ನು ಐಡೆಂಟಿಫೈ ಮಾಡಿದ್ದೀರಿ. ಒಟ್ಟಾರೆ ಪಟ್ಟಣ ಪ್ರದೇಶದಲ್ಲಿ ಸೈಟ್‌ಲೆಸ್ ಪೀಪಲ್ ೧ ಲಕ್ಷದ ೬೩ ಸಾವಿರದ ೪೭ ಜನ ಇದ್ದಾರೆಂದು ಐಡೆಂಟಿಫೈ ಮಾಡಿದ್ದೀರಿ. ಬಡತನ ರೇಖೆ ಕೆಳಗೆ ಯಾರಿದ್ದಾರೆ ಅವರಿಗೆ ಸೌಕರ್ಯ ಕೊಡುವ ಕಾರ್ಯಕ್ರಮ ಹಾಕಿದ್ದೀರಿ. ಆದರೆ ತಾವು ಕೊಟ್ಟಿದ್ದು ಏನು? ಕೇವಲ ೪೨ ೨೧೩ ಜನರಿಗೆ ಅನುಕೂಲವನ್ನು ಕೊಟ್ಟಿದ್ದೀರಿ. ೧೯೮೩ ರಿಂದ ಕೊಡುತ್ತಿದ್ದು ಇನ್ನೂ ಕೂಡಾ ೧ ಲಕ್ಷದ ೮೧೪ ಜನರಿಗೆ ಇನ್ನೂ ಸೈಟ್ ಕೊಡಬೇಕಾಗಿದೆ. ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇವತ್ತು ಲ್ಯಾಂಡ್ ಅಕ್ವೈರ್ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಈ ಬಗ್ಗೆ ಸರ್ಕಾರ ಆಸಕ್ತಿ ವಹಿಸಿ ರೆವ್ಯೂ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಪಟ್ಟಣ ಪ್ರದೇಶದಲ್ಲಿ ೧ ಲಕ್ಷದ ೪೩ ಸಾವಿರ ಜನರನ್ನು ಐಡೆಂಟಿಫೈ ಮಾಡಿ ಅದರಲ್ಲಿ ೪೨ ಸಾವಿರ ಜನರಿಗೆ ಮಾತ್ರ ಸೈಟ್ ಕೊಟ್ಟಿದ್ದೀರಿ. ಮಿಕ್ಕ ಜನರಿಗೆ ತಾವು ಸೈಟ್ ಕೊಟ್ಟಿಲ್ಲ. ಬಡ್ಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. We have identified 14 lakhs people out of whom we have provided to 13 lakhs people. ೧೪ ಲಕ್ಷ, ೧೩ ಲಕ್ಷ ಎಂದು ಅವರು ಲಂಪ್‌ಸಮ್ ಆಗಿ ಹೇಳುತ್ತಾರೆ. ಈ ಕರ್ನಾಟಕ ರಾಜ್ಯದಲ್ಲಿ ಇರತಕ್ಕ ರೂರಲ್ ಏರಿಯಾ ಆಗಲೀ, ಅರ್ಬನ್ ಏರಿಯಾ ಆಗಲೀ, ಸೈಟ್‌ಲೆಸ್ ಜನರಿಗೆ ೧೪ ಲಕ್ಷ ಇವತ್ತು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ೧೪ ಲಕ್ಷ ಯಾವಾಗ ಕೊಟ್ಟಿದ್ದೀರಿ? ಏನು ೧೯೭೩ರ ಅಂಕಿ ಅಂಶಗಳನ್ನು ತೆಗೆದುಕೊಳ್ಳುತ್ತೀರಾ? ೧೯೮೩ ರಿಂದ ಇಲ್ಲಿಯವರೆಗೆ ೩ ವರ್ಷಗಳಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅರ್ಬನ್ ಏರಿಯಾದಲ್ಲಿ ರೂರಲ್ ಏರಿಯಾದಲ್ಲಿ ಎಷ್ಟು ಸರ್ವೇ ಮಾಡಲಾಗಿದೆ ? ಎಷ್ಟು ಜನ ಸೈಟ್‌ಲೆಸ್ ಜನ ಇದ್ದಾರೆ, ಎಷ್ಟು ಜನರಿಗೆ ಸೈಟ್ ಕೊಡಲಾಗಿದೆ, ಹಾಗೂ ಈ ಬಗ್ಗೆ ಎಷ್ಟು ಹಣವನ್ನು ಒದಗಿಸಲಾಗಿದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು. ಯಾವುದೇ ಒಂದು ಕಾರ್ಯಕ್ರಮ ಹಾಕಬೇಕಾದರೆ ಅದಕ್ಕೆ ಕಮಿಟ್‌ಮೆಂಟ್ ಬೇಕಾಗುತ್ತದೆ. ೧೯೭೮ ರಿಂದ ಪ್ರಾರಂಭವಾಗಿ ೩ ವರ್ಷದ ಕಾಲದಲ್ಲಿ ನಾವು ಎಷ್ಟು ಸೈಟ್ ಕೊಟ್ಟಿದ್ದೇವು ಎಂಬುದನ್ನು ನೋಡಿ. ಪಟ್ಟಣದ ಪ್ರದೇಶದ ಸೈಟ್‌ಲೆಸ್ ಜನರಿಗೆ ಸೈಟ್ ಕೊಡಲು ಭಾಗ್ಯಮಂದಿರ ಯೋಜನೆ ಇದೆ. ಪಟ್ಟಣ ಪ್ರದೇಶದಲ್ಲಿ ೧೯೮೦ ರಿಂದ ೮೩ರವರೆಗೆ ನಾವು ಕೊಟ್ಟ ಸೈಟ್‌ಗಳ ಬಗ್ಗೆ ಅಂಕಿಅಂಶಗಳನ್ನು ನೋಡಬೇಕು. ೧೯೮೦ ರಿಂದ ೧೯೮೩ರವರೆಗೆ ೨೫ ೭೭೫ ಮನೆಗಳು ನಾವು ಸ್ಯಾಂಕ್ಷನ್ ಮಾಡಿದೆವು. ನಾವು ಮೂರು ವರ್ಷಗಳ ಕಾಲದಲ್ಲಿ ೨೩,೫೩೫ ಮನೆಗಳನ್ನು ಕಟ್ಟಿದ್ದೇವೆ. ಅದಕ್ಕೆ ಸಬ್ಸಿಡಿ ರೂಪದಲ್ಲಿ ೫೮೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಲೋನ್ ರೂಪದಲ್ಲಿ ೩೮೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮೂರು ವರ್ಷಗಳ ಅವಧಿಯಲ್ಲಿ ೧೯೮೦—೮೩ರಲ್ಲಿ ನಾನು ಮಂತ್ರಿಯಾಗಿದ್ದಾಗ ಪಟ್ಟಣ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸಲಿಕ್ಕೆ ಒಂದು ಮನೆಗೆ ೩ ಸಾವಿರ ರೂಪಾಯಿ ಸಾಲ ಕೊಟ್ಟಿದ್ದೇವೆ. ೧೫೦೦ ರೂಪಾಯಿಗಳನ್ನು ಸಬ್ಸಿಡಿ ಕೊಟ್ಟಿದ್ದೇವೆ. ೫೦೦ ರೂಪಾಯಿಗಳನ್ನು ಫಲಾನುಭವಿಗಳು ಹಾಕಿಕೊಳ್ಳಬೇಕು. ಒಟ್ಟು ೫ ಸಾವಿರ ರೂಪಾಯಿಗಳನ್ನು ಮನೆ ಕಟ್ಟಿಕೊಳ್ಳಲಿಕ್ಕೆ ಟೌನ್ ಮುನಿಸಿಪಾಲಿಟಿ ಆವರಣಗಳಲ್ಲಿ ೨೦ ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರತಕ್ಕ ಊರುಗಳಲ್ಲಿ ಕೊಟ್ಟಿದ್ದೇವೆ. ಪಟ್ಟಣ ಪ್ರದೇಶಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರತಕ್ಕ

ಮುನಿಸಿಪಾಲಿಟಿ ಏರಿಯಾಗಳಲ್ಲಿ ಮನೆಗಳನ್ನು ಕಟ್ಟಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಅಷ್ಟನ್ನು ನಾವು ಮಾಡಿದ್ದೇವೆ. ನೀವು ೧೯೭೩—೭೬ರವರೆಗೆ ವಾರ್ಷಿಕ ವರದಿಯ ಪುಟ ೬ರಲ್ಲಿ, ೯ರಲ್ಲಿ ಮತ್ತು ೧೫ರಲ್ಲಿ ಕೂಡ ಹೇಳಿದ್ದೀರಿ. ನೀವು ೧೯೭೩ರಿಂದ ೧೯೭೬ರವರೆಗೆ ಕೇವಲ ೭೯೩೮ ಮನೆಗಳನ್ನು ಮಂಜೂರು ಮಾಡಿದ್ದೀರಿ. ೫೧೭೨ ಮನೆಗಳು ತಾವು ಕಂಪ್ಲೀಟ್ ಮಾಡಿದ್ದೀರಿ. ಇದಕ್ಕೆ ಸರ್ಕಾರ ಸಬ್ಸಿಡಿ ಕೊಟ್ಟಿರತಕ್ಕದ್ದು ೨೩೫ ಲಕ್ಷ ರೂಪಾಯಿ, ಲೋನ್ ೬೧ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಇದು ನಿಮ್ಮ ಕಮಿಟ್‌ಮೆಂಟ್, ನಾನು ಮೂರು ವರ್ಷಗಳ ಅಂಕಿಅಂಶಗಳನ್ನು ಕೊಡುತ್ತಿದ್ದೇನೆ. ೧೯೭೦ ರಿಂದ ಪ್ರಾರಂಭವಾದ ಈ ಯೋಜನೆಯಡಿಯಲ್ಲಿ ನಾವು ೨೫ ಸಾವಿರ ಮನೆಗಳನ್ನು ಮಂಜೂರು ಮಾಡಿ ೨೫ ಸಾವಿರ ಮನೆಗಳನ್ನು ಕಟ್ಟಿದ್ದೇವೆ. ತಾವು ೬ ಸಾವಿರ ಮನೆಗಳನ್ನು ಸ್ಯಾಂಕ್ಷನ್ ಮಾಡಿ ೬ ಸಾವಿರ ಮನೆಗಳನ್ನು ಕಂಪ್ಲೀಟ್ ಮಾಡಿದ್ದೀರಿ. ಹಣವನ್ನು ಸಹ ಬಹಳ ಕಡಿಮೆ ಒದಗಿಸಲಾಗಿದೆ. ಇದನ್ನು ತಮ್ಮ ವಾರ್ಷಿಕ ವರದಿಯಲ್ಲಿ ಕೊಡಲಾಗಿದೆ ಇನ್ನು ಮನೆಗಳ ರಿಪೇರಿಗಾಗಿ ಪಟ್ಟಣ ಪ್ರದೇಶಗಳಲ್ಲಿ ಹಣವನ್ನು ಮಂಜೂರು ಮಾಡತಕ್ಕ ಯೋಜನೆ ಇದೆ. ನಾವು ೧೯೭೦-೭೩ರವರೆಗೆ ೧೧,೧೬೨ ಮನೆಗಳಿಗೆ ರಿಪೇರಿಗಾಗಿ ಹಣವನ್ನು ಮಂಜೂರು ಮಾಡಿದ್ದೇವೆ. ಅದರಲ್ಲಿ ೧೦,೮೯೬ ಮನೆಗಳನ್ನು ರಿಪೇರಿ ಮಾಡಿಸಲಾಗಿದೆ. ನೀವು ೧೯೭೩-೭೬ರವರೆಗೆ ೩೭೯೩ ಮನೆಗಳಿಗೆ ಮಂಜೂರು ಮಾಡಿ ಅದರಲ್ಲಿ ೨೩೧೦ ಮನೆಗಳಿಗೆ ರಿಪೇರಿಗಾಗಿ ಹಣವನ್ನು ಕೊಡಲಾಗಿದೆ. ರಿಪೇರಿ ಮಾಡಿಸುವುದರಲ್ಲಿ ತಾವು ಕಡಿಮೆ ಕೆಲಸ ಮಾಡಿದ್ದೀರಿ. ಈ ರೀತಿಯಾಗಿ ತಾವು ಪಟ್ಟಣ ಪ್ರದೇಶಗಳಲ್ಲಿರತಕ್ಕ ಜನರಿಗೆ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ, ಆ ಕಾರ್ಯಕ್ರಮವನ್ನು ಅಷ್ಟು ಸಮಂಜಸವಾಗಿ ನಡೆಸುತ್ತಿಲ್ಲ, ಅದರ ಬಗ್ಗೆ ಸರ್ಕಾರ ಗಮನಹರಿಸಿಲ್ಲ. ಯಾವ್ಯಾವ ಬಾಬಿಗೆ ಎಷ್ಟೆಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ. ನಿವೇಶನ ಇಲ್ಲದ ಜನರಿಗೆ ನಿವೇಶನ ಕೊಡತಕ್ಕದ್ದು ಕೇಂದ್ರ ಸರ್ಕಾರದ ನೆರವಿನಿಂದ ನಡೆಯುತಕ್ಕ ಕೆಲಸ. ಆ ಹಣವನ್ನು ಪಡೆಯುವುದಕ್ಕೆ ನೀವು ಪ್ರಯತ್ನ ಮಾಡಿಲ್ಲ. ಬಡವರಿಗೆ ನಿವೇಶನಗಳನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಬಡವರಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳಿದ್ದೀರಿ. ೪ ಲಕ್ಷದ ೬೮ ಸಾವಿರ ಮನೆಗಳನ್ನು ಕಟ್ಟಿ ಮುಗಿಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಇದು ಸತ್ಯಕ್ಕೆ ದೂರವಾದುದು. ತಮ್ಮ ಸರ್ಕಾರ ಎಷ್ಟು ಮನೆಗಳನ್ನು ಕಟ್ಟಿಸಿದೆ, ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಇಲಾಖೆಯಿಂದ ಜನರು ಏನನ್ನು ನಿರೀಕ್ಷೆ ಮಾಡುತ್ತಿದ್ದಾರೆ ಅದಕ್ಕನುಸಾರವಾಗಿ ಕೆಲಸಕಾರ್ಯಗಳು ನಡೆಯುತ್ತಿಲ್ಲವೆನ್ನುವುದು ಎಲ್ಲಾ ಕಡೆಗೂ ಗೊತ್ತಿದೆ. ತಮ್ಮ ವಾರ್ಷಿಕ ವರದಿಯ ಪುಟ ೩೦ರಲ್ಲಿ ಶೇಕಡ ೧೮ರಷ್ಟು ಹಣವನ್ನು ಹರಿಜನ ಗಿರಿಜನರಿಗಾಗಿ ಖರ್ಚು ಮಾಡಬೇಕೆಂದು ಹೇಳಲಾಗಿದೆ. ಎಲ್ಲಾ ಪುರಸಭೆಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಡಿವಿಜನ್‌ಪೈಸ್ ಹಣವನ್ನು ಖರ್ಚು ಮಾಡಬೇಕೆಂದು ತಾವು ಅದರಲ್ಲಿ ಹೇಳಿದ್ದೀರಿ. ನಾವು ನಮ್ಮ ಕಾಲದಲ್ಲಿ ಎಲ್ಲಾ ಪುರಸಭೆಗಳಲ್ಲಿ ಮುನಿಸಿಪಾಲಿಟಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಟೋಟಲ್ ಬಡ್ಜೆಟ್‌ನಲ್ಲಿ ಏನು ಹಣ ವಿರುತ್ತದೆ ಅದರಲ್ಲಿ ಶೇಕಡ ೧೮ರಷ್ಟು ಹಣವನ್ನು ಹರಿಜನ ಗಿರಿಜನರಿಗಾಗಿ ಖರ್ಚು ಮಾಡಲೇಬೇಕೆಂದು ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಎಲ್ಲಾ ಕಡೆಗೂ ಇರಬೇಕೆಂದು ಹೇಳಿ ಯಾವರೀತಿ ಸ್ಟ್ಯಾಂಡಿಂಗ್ ಕಮಿಟಿ ಇರುತ್ತದೆ ಆ ತರಹ ಸೋಶಿಯಲ್ ಜಸ್ಟೀಸ್ ಕಮಿಟಿ ಇರಬೇಕೆಂದು ಕಾನೂನನ್ನು ತಿದ್ದುಪಡಿ ಮಾಡಿ ಒಂದು ಕಾನೂನನ್ನು ತಂದಿದ್ದೇವೆ. ಈಗ ಅದು ಎಷ್ಟು ಯಶಸ್ವಿಯಾಗಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ಆಗುತ್ತಿಲ್ಲ

ತಾವು ಮಂತ್ರಿಗಳಾಗಿ ಯಾವ ಪುರಸಭೆಗಳಿಗೆ ಹೋಗಿದ್ದೀರಿ ? ಬೇರೆ ಕಡೆಗೆ ಪ್ರವಾಸ ಕಾರ್ಯಕ್ರಮ ಹಾಕಿಕೊಂಡಾಗ ಅದರ ಬಗ್ಗೆ ರಿವ್ಯೂ ಕೂಡ ಮಾಡುತ್ತಿಲ್ಲ. ಆದೇಶ ಕೂಡ ಕೊಡುತ್ತಿಲ್ಲವೆಂದು ಇದರಿಂದ ಗೊತ್ತಾಗುತ್ತದೆ. ಬೆಂಗಳೂರು ಡಿವಿಜನ್ನಿನಲ್ಲಿ ೧೧೮ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೀರಿ. ಆದರೆ ಖರ್ಚಾಗಿರುವ ಹಣ ಕೇವಲ ೧೨ ಲಕ್ಷ ರೂಪಾಯಿಗಳು ಮಾತ್ರ. ಇನ್ನೂ ೧೦೬ ಲಕ್ಷ ರೂಪಾಯಿಗಳು ಇನ್ನೂ ಖರ್ಚಾಗಬೇಕಾಗಿದೆ. ಇದು ನಿಮ್ಮ ಆಡಳಿತ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ತಾವು ಏನು ಮಾಡುತ್ತಿದ್ದೀರಿ ? ಹರಿಜನ ಗಿರಿಜನರ ಮೇಲೆ ಖರ್ಚು ಮಾಡತಕ್ಕಂಥ ಹಣ ಏನಿದೆ, ಏನು ನಿಗದಿ ಮಾಡಲಾಗಿತ್ತೋ. ಅದರಲ್ಲಿ ಇನ್ನೂ ೧೦೬ ಲಕ್ಷ ರೂಪಾಯಿಗಳು ಹಾಗೆಯೇ ಉಳಿದಿದೆ ಎಂದು ಹೇಳಬಯಸುತ್ತೇನೆ. ಮೈಸೂರು ಡಿವಿಜನ್‌ನಲ್ಲಿ ೫೧ ಲಕ್ಷ

ರೂಪಾಯಿ ಖರ್ಚಾಗಬೇಕಾಗಿದೆ. ಕೇವಲ ೪.೬೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಬೆಳಗಾವಿ ಡಿವಿಜನ್‌ನಲ್ಲಿ ೮೦ ಲಕ್ಷ ರೂಪಾಯಿ ನಿಗದಿ ಮಾಡಿದ್ದರೆ, ಇಲ್ಲಿಯವರೆಗೆ ಖರ್ಚು ಮಾಡಿದ ಹಣ ೧೧ ಲಕ್ಷ ರೂಪಾಯಿಗಳು. ಇನ್ನೂ ೬೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಗುಲ್ಬರ್ಗಾ ಡಿವಿಜನ್ನಿನಲ್ಲಿ ೨೭ ಲಕ್ಷ ರೂಪಾಯಿ ನಿಗದಿ ಮಾಡಿದ್ದಾರೆ, ಕೇವಲ ೪ ಲಕ್ಷ ಖರ್ಚಾಗಿದೆ. ಇನ್ನೂ ೨೩ ಲಕ್ಷ ರೂಪಾಯಿ ಖರ್ಚಾಗಬೇಕಾಗಿದೆ. ಈ ರೀತಿಯಾಗಿ ೨೭೮ ಲಕ್ಷ ರೂಪಾಯಿಗಳನ್ನು. ಏನು ೧೮ ಪರ್ಸೆಂಟ್ ಪ್ರಕಾರ ಖರ್ಚು ಮಾಡಬೇಕಾಗಿತ್ತು. ಅದರಲ್ಲಿ ೩೨ ಲಕ್ಷ ಮಾತ್ರ ಖರ್ಚಾಗಿದೆ. ೨೪೬ ಲಕ್ಷ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಬೇಕಾಗಿದೆ. ಈ ರೀತಿಯಾಗಿ ಯಾರು ಈ ಸಮಾಜದಲ್ಲಿ ಹರಿಜನ ಗಿರಿಜನರು ಇದ್ದಾರೆ, ಯಾರು ಪರಿಶಿಷ್ಟಜಾತಿ ಮತ್ತು ವರ್ಗದವರು ಇದ್ದಾರೆ ಇಂತಹ ಜನರಿಗೆ ಏನು ತಮ್ಮ ಇಲಾಖೆಯಿಂದ ಪುರಸಭೆಗಳಿಂದ ಖರ್ಚು ಮಾಡಬೇಕಾಗಿತ್ತು ಅದನ್ನು ಮಾಡುತ್ತಿಲ್ಲ. ಹಣ ಹಾಗೆಯೇ ಉಳಿದಿದೆ ಒಂದು ಕಡೆ ಸ್ಥಳೀಯ ಸಂಸ್ಥೆಗಳಿಗೆ ದುಡ್ಡು ಕೊಡತಕ್ಕ ಕಾರ್ಯಕ್ರಮ ತಮ್ಮಲ್ಲಿ ಇಲ್ಲ, ಮತ್ತೊಂದು ಕಡೆ ಹಣ ಏನಿದೆ ಅದನ್ನು ಖರ್ಚು ಮಾಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಬಯಸುತ್ತೇನೆ. ಇದು ನಿಮ್ಮ ಸರ್ಕಾರ ಕೆಲಸ ಮಾಡತಕ್ಕ ವೈಖರಿ. ಇದೇ ರೀತಿಯಾಗಿ ನಡೆದುಕೊಂಡು ಹೋಗಲಿ ಎಂದು ನಿಮ್ಮ ಮನಸ್ಸಿನಲ್ಲಿ ಏನು ಭಾವನೆ ಇದೆ. ಅದು ಹೆಚ್ಚು ದಿವಸ ನಡೆಯುಲಾರದು. ಇವತ್ತು ಪ್ರಾಪರ್ಟಿ ಟ್ಯಾಕ್ಸ್ ಬಗ್ಗೆ ಹೇಳಬೇಕೆಂದರೆ, ಬೆಂಗಳೂರಿನ ಆಸ್ತಿ ತೆರಿಗೆ ಪರಿಷ್ಕರಣ ವಿಷಯದಲ್ಲಿ ನಿಮ್ಮ ಪಾರ್ಟಿಯಲ್ಲೇ ಇದರ ಬಗ್ಗೆ ಭಿನ್ನಾಭಿಪ್ರಾಯ ಇದೆ, ಶ್ರೀಮಾನ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಪಾರ್ಟಿ ಕಡೆಯಿಂದ ಒಂದು ಕಮಿಟಿ ಕೂಡ ಆಗಿತ್ತು. ಕೆಲವರು ಇದರ ಬಗ್ಗೆ ಜಾಸ್ತಿ ಮಾಡಬೇಕು ಮತ್ತು ಕೆಲವರು ಮಾಡಬಾರದು ಎಂದು ಇದೆ. ಇವತ್ತು ಬೆಂಗಳೂರು ನಗರದಲ್ಲಿ ವಾಟರ್ ಟ್ಯಾಕ್ಸ್ ಜಾಸ್ತಿ ಮಾಡುವುದಕ್ಕೆ ಹೊರಟಿದ್ದೀರಿ. ತಮಗೆ ನೆನಪಿರಬೇಕು. ನಾನು ಮಂತ್ರಿಯಾಗಿದ್ದಾಗ, ಯಾವಾಗ ನಾವು ಡೊಮೆಸ್ಟಿಕ್ ಬಳಕೆದಾರರ ಮೇಲೆ ವಾಟರ್ ಟ್ಯಾಕ್ಸ್ ಹೆಚ್ಚು ಮಾಡುವುದಕ್ಕೆ ಹೊರಟಾಗ, ಬೆಂಗಳೂರು ನಗರದಲ್ಲಿ ಎಲ್ಲಾ ಶಾಸಕರು ಕೂಡ ನಮ್ಮ ಮೇಲೆ ಒತ್ತಾಯ ತಂದರು. ಇವತ್ತು ನಾನ್ ಡೊಮೆಸ್ಟಿಕ್ ಇಂಡಸ್ಟ್ರಿಯಲ್ ಪರ್ಪಸ್‌ಗೆ ಯಾರು ನೀರು ಉಪಯೋಗ ಮಾಡುತ್ತಿದ್ದಾರೆ ಅವರ ಮೇಲೆ ಬೇಕಾದರೆ ಹಾಕಿರಿ, ಆದರೆ ಎಲ್ಲರಿಗೂ ವಾಟರ್ ಟ್ಯಾಕ್ಸ್ ಜಾಸ್ತಿ ಮಾಡತಕ್ಕದ್ದು ಸರಿಯಲ್ಲ ಎನ್ನತಕ್ಕ ರೀತಿಯಲ್ಲಿ ಅವರು ಪ್ರಸ್ತಾಪ ಮಾಡಿದಾಗ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ರೀತಿಯಲ್ಲಿ ನಾವು ಏನು ತತ್ವವನ್ನು ಅನುಸರಿಸಿಕೊಂಡು ಹೋಗುತ್ತೇವೆ, ಯಾವಾಗ ಶಾಸಕರು ಬಂದು ಬೆಂಗಳೂರಿನ ಜನರಿಗೆ ಸಮರ್ಪಕವಾಗಿ ನೀರು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಒಂದು ಸ್ಥಿತಿಯಲ್ಲಿ ವಾಟರ್ ಟ್ಯಾಕ್ಸ್ ಹೆಚ್ಚು ಮಾಡಬಾರದು ಎಂದು ಹೇಳಿದಾಗ ನಾವು ಅದನ್ನು ಸ್ಥಗಿತಗೊಳಿಸಿದೆವು. ಇವತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ನೋಡಿದ್ದೇನೆ ಪತ್ರಿಕೆಯಲ್ಲಿ ಕೂಡ ಸವಿಸ್ತಾರವಾಗಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ನೀರಿನ ಮೇಲೆ ತೆರಿಗೆಯನ್ನು ಹೆಚ್ಚು ಮಾಡಲೇ ಬೇಕಾಗಿದೆ ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. ಎಲೆಕ್ಟ್ರಿಸಿಟಿ ದರ ಹೆಚ್ಚಾಗುತ್ತದೆ ಮತ್ತು ಇಂತಹ ಪರಿಸ್ಥಿತಿಯಲ್ಲಿ ಈ ಏರಿಕೆ ಮಾಡಲೇಬೇಕಾಗಿದೆ ಎಂಬ ಅಭಿಪ್ರಾಯ ಕೂಡ ವ್ಯಕ್ತವಾಗುತ್ತದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಏನೆಂದರೆ ಇವತ್ತು ಪ್ರಾಪರ್ಟಿ ಟ್ಯಾಕ್ಸ್ ಏನು ಇಂಕ್ರೀಸ್ ಮಾಡುತ್ತಿದ್ದೀರಿ, ಬೆಂಗಳೂರು ನಗರದಲ್ಲಿ ವಾಟರ್ ಟ್ಯಾಕ್ಸ್ ಇಂಕ್ರೀಸ್ ಮಾಡುತ್ತಿದ್ದೀರಿ. ಬೆಂಗಳೂರು ಸಿಟಿಯ ಡಿಮಾಂಡ್ ಏನಿದೆ. ೨೧೨೭ ಲಕ್ಷ ಕಲೆಕ್ಟ್ ಮಾಡಬೇಕು. ಎಂದು ಆದರೆ ಇದುವರೆಗೆ ಕಲೆಕ್ಟ್ ಮಾಡಿರುವುದು ೮೧೬ ಲಕ್ಷ ರೂಪಾಯಿಗಳು. ಇನ್ನೂ ೧೩೧೬ ಲಕ್ಷ ಬಾಕಿ ಇದೆ. ಯಾರ್‍ಯಾರು ಪ್ರಾಪರ್ಟಿ ಟ್ಯಾಕ್ಸ್‌ನಲ್ಲಿ ಬಾಕಿ ಉಳಿಸಿಕೊಂಡಿದ್ದಾರೆ, ಅದನ್ನು ವಸೂಲು ಮಾಡುವುದಕ್ಕೆ ಆಗುತ್ತಿಲ್ಲ. ಈ ರೀತಿಯಾಗಿ ಕಾರ್ಪೊರೇಷನ್‌ನಲ್ಲಿ ಆಡಳಿತ ನಡೆಯುತ್ತಿದೆ. ಅದಕ್ಕೆ ತಾವು ಪ್ರಾಪರ್ಟಿಟ್ಯಾಕ್ಸ್, ವಾಟರ್ ಟ್ಯಾಕ್ಸ್ ಇಂಕ್ರೀಸ್ ಮಾಡುವಾಗ ನಾನು ಹೇಳುತ್ತಿದ್ದೇನೆ. ಇದು ಬೆಂಗಳೂರಿನ ಜನತೆ ಏನು ನಿಮ್ಮನ್ನು ಆರಿಸಿ ಕಳಿಸಿದ್ದಾರೆ, ಅವರಿಗೆ ಇದನ್ನು ಒಂದು ಕೊಡುಗೆಯಾಗಿ ಕೊಡುತ್ತಿದ್ದೀರಿ ಎಂದು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಇವತ್ತು ಬೆಂಗಳೂರು ನೀರು ಸರಬರಾಜಿನ ಬಗ್ಗೆ ತಾವು ಹೇಳಿದ್ದೀರಿ. ಮಾನ್ಯ ರಘುಪತಿಯವರು ಇವತ್ತು ಇಲ್ಲ, ಅವರು ಮಲ್ಲೇಶ್ವರಂನಿಂದ ಆರಿಸಿ ಬಂದಿದ್ದಾರೆ. ಜನರು ಕೇಳುತ್ತಿದ್ದಾರೆ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ರಾಜಾಜಿನಗರದಿಂದ ಆರಿಸಿ ಬಂದಿದ್ದಾರೆ. ಎಲ್ಲಾ ಕಡೆಯಲ್ಲೂ

ಹಾಹಾಕಾರ ನಡೆಯುತ್ತಿದೆ. ಮಲ್ಲೇಶ್ವರಂ ಜನರು ನೀರು ಸರಬರಾಜಿನ ಬಗ್ಗೆ ಕೇಳಿದಾಗ, ಕಾಲಿಂಗ್ ಅಟೆನ್‌ಷನ್ ಹಾಕಿದರು. ಬೆಂಗಳೂರು ನೀರು ಸರಬರಾಜು ಬಗ್ಗೆ ಏನಾಯಿತು. ಕಾವೇರಿ ಥರ್ಡ್ ಸ್ಟೇಜ್ ಬಗ್ಗೆ ಏನಾಯಿತು, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಏನು ತೊಂದರೆ ಬಂದರೂ ಬೆಂಗಳೂರು ನಗರಕ್ಕೆ ನೀರು ಒದಗಿಸುವುದು ನಮ್ಮ ಪರಮ ಕರ್ತವ್ಯ ಎಂದು. ಯಾವುದಾದರೊಂದು ರೀತಿಯಲ್ಲಿ ಇದನ್ನು ಮಾಡುತ್ತೇವೆಂದು ಹೇಳಿದರು. ಇದು ಪತ್ರಿಕೆಗಳಲ್ಲೂ ಬಂತು. ಈಗ ಇಲ್ಲಿ ನೀರು ಸರಬರಾಜು ಏನಾಯಿತು ? ಕಾವೇರಿ ಮೊದಲನೇ ಹಂತ ಆಯಿತು, ಎರಡನೇ ಹಂತ ಆಯಿತು. ಈ ಎರಡನೇ ಹಂತ ಮುಗಿಸುವ ಕಾಲದಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಆಗಿನ ಸರ್ಕಾರ ಕಾವೇರಿ ೨ನೇ ಹಂತವನ್ನು ಮುಗಿಸಲೇಬೇಕು, ಬೆಂಗಳೂರು ರಾಜಧಾನಿ ನಗರವಾಗಿದೆ, ಜನರಿಗೆ ತೊಂದರೆಯಾಗಬಾರದು ಎಂದು, ೩೩ ಕೋಟಿ ರೂಪಾಯಿಗಳನ್ನು ಮೂರು ವರ್ಷಗಳ ಅವಧಿಯಲ್ಲಿ ನಾವು ಖರ್ಚು ಮಾಡಿದ್ದೇವೆ. ಎಲ್ಲೆಲ್ಲಿ ಕೆಲಸ ಕಾರ್ಯಗಳು ಆಗುತ್ತಿದ್ದವು, ಅಲ್ಲಿಗೆಲ್ಲಾ ಶಾಸಕರನ್ನು ಕರೆದುಕೊಂಡು ಹೋಗಿದ್ದೆವು. ಅವರು ರಿವ್ಯೂ ಮಾಡಿದ್ದಾರೆ. ಉತ್ತಮ ಕೆಲಸ ಮಾಡಿದಂಥ ಅಧಿಕಾರಿಗಳಿಗೆ ಶಹಭಾಸ್‌ಗಿರಿ ಕೊಟ್ಟಿದ್ದಾರೆ. ಈ ಮೂರನೇ ಹಂತದಲ್ಲಿ ೧೯೮೧ರ ಜನಗಣತಿ ಪ್ರಕಾರ ೨೯ ಲಕ್ಷ ಜನಸಂಖ್ಯೆ ಇದ್ದರೆ. ಇವತ್ತು ೪೫ ಲಕ್ಷ ಜನಸಂಖ್ಯೆ ಆಗುವ ಅಂದಾಜು ಇದೆ. ಇವತ್ತು ತಜ್ಞರ ಅಭಿಪ್ರಾಯ ಏನಿದೆ, ಗ್ರೀನ್ ಬೆಲ್ಟ್ ಏನು ಮಾಡಿದ್ದೀರಿ, ಮುಂದೆ ಬರತಕ್ಕಂಥ ೨೦೦೦ ಇಸವಿಯ ಹೊತ್ತಿಗೆ ಬೆಂಗಳೂರು ನಗರದ ಜನಸಂಖ್ಯೆ ೭೦ ಲಕ್ಷ ಆಗುತ್ತಾ ಇದೆ. ಬೆಂಗಳೂರು ನಗರದಲ್ಲಿ ಇಷ್ಟು ಜನಸಂಖ್ಯೆ ಆದಮೇಲೆ ನೀರು ಒದಗಿಸುವುದು ಬಹಳ ಕಷ್ಟ, ತೊಂದರೆಯಾಗುತ್ತದೆ. ಮಾನ್ಯ ಅಧ್ಯಕ್ಷರೇ ಅದರ ಕಷ್ಟ ಕೂಡ ತಮಗೂ ಗೊತ್ತಿದೆ. ಇವತ್ತು ಒಂದು ಭೌಗೋಳಿಕ ಪರಿಸ್ಥಿತಿ ಇದೆ. ಆದ್ದರಿಂದ ನೀರನ್ನು ಒದಗಿಸಬೇಕಾದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಇವತ್ತು ಬೊಂಬಾಯಿಯಲ್ಲಿ ನೀರು ಸರಬರಾಜು ಬಗ್ಗೆ ಯಾವ ವ್ಯವಸ್ಥೆ ಇದೆ. ಅದು ಬೆಂಗಳೂರಿನಲ್ಲಿ ಇಲ್ಲ. ಮದ್ರಾಸಿಗೆ ನೀರಿನ ತೊಂದರೆ ಬಂದಾಗ, ಕೃಷ್ಣಾ ಮತ್ತು ಗೋದಾವರಿ ನೀರನ್ನು ಒದಗಿಸುವ ಪರಿಸ್ಥಿತಿ ಬಂತು. ಈ ರೀತಿಯಾಗಿ ಬೆಂಗಳೂರು ನಗರಕ್ಕೆ ಕಾವೇರಿ ೩ನೇ ಹಂತದ ಯೋಜನೆ ಮತ್ತು ಸೈಮಲ್ಟೇನಿಯಸ್ ಆಗಿ ಕಾವೇರಿ ೪ನೇ ಹಂತದ ಯೋಜನೆಯನ್ನೂ ಪ್ರಾರಂಭ ಮಾಡಬೇಕಾಗಿದೆ. ೧೯೯೦ರಲ್ಲಿ ಕಾವೇರಿ ೩ನೇ ಹಂತದ ಯೋಜನೆಯನ್ನು ನಾವು ಮುಗಿಸುತ್ತೇವೆಂದು ತಾವೇನು ಹೇಳುತ್ತಿದ್ದೀರಿ, ಇದು ನಮಗೆ ಸಂಶಯಕ್ಕೆ ಎಡೆ ಮಾಡಿದೆ.

ಇನ್ನು ನಿಮ್ಮ ಮೆಟ್ರೋಪಾಲಿಟನ್ ಪ್ಲಾನ್ ಏನಿದೆ, ಅದರ ಪ್ರಕಾರ ೫೦೦ ಸ್ಕ್ವೇರ್ ಕಿಲೋ ಮೀಟರ್‌ನಿಂದ ೧೨೭೯ ಸ್ಕ್ವೇರ್ ಕಿಲೋ ಮೀಟರ್ ಉದ್ದವಾಗಿದೆ. ಗ್ರೀನ್ ಬೆಲ್ಟ್ ಹೋಯಿತು, ಹೌಸಿಂಗ್ ಸೊಸೈಟಿಗಳಿಗೆ ಪರವಾನೆ ಕೊಡುತ್ತಿದ್ದೀರಿ. ಗ್ರೀನ್ ಬೆಲ್ಟ್ ಮುಂದುವರಿದುಕೊಂಡು ಹೋಯಿತು. ಇವತ್ತು ಬೆಂಗಳೂರು ನಗರದ ಉದ್ದ ೧೨೭೯ ಸ್ಕ್ವೇರ್ ಕಿಲೋ ಮೀಟರ್. ೭೦ ಲಕ್ಷ ಜನ ಸಂಖ್ಯೆ ಆಗತಕ್ಕಂಥ ಈ ಸಂದರ್ಭದಲ್ಲಿ ಕಾವೇರಿ ೩ನೇ ಹಂತದ ಯೋಜನೆಯನ್ನು ೧೯೯೦ರೊಳಗೆ ಮುಗಿಸಬೇಕಾಗಿದೆ. ಈ ಸಂದರ್ಭದಲ್ಲಿ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತಾವು ವರ್ಲ್ಡ್ ಬ್ಯಾಂಕಿನಿಂದ ಲೋನ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೀರಿ. ಅವರು ಕೊಡತಕ್ಕ ಲೋನ್ ಮೇಲೆ ಹಾಕತಕ್ಕ ಬಡ್ಡಿಯೂ ಜಾಸ್ತಿ ಎಂದು ಹೇಳಿದ್ದೀರಿ. 'We have decided in the Cabinet not to take from the World Bank' ಎಂದು ತೀರ್ಮಾನ ಮಾಡಿದ್ದೀರಿ ಬೇರೆ ಪರ್ಯಾಯವಾಗಿ ವಿಚಾರ ಮಾಡುತ್ತೇವೆಂದು ಹೇಳಿದ್ದೀರಿ. ಕಾವೇರಿ ೩ನೇ ಹಂತಕ್ಕೆ ೬ನೇ ಯೋಜನೆಯಲ್ಲಿಯೇ, ೧೯೮೨-೮೩ರಲ್ಲಿ ಟೋಕನ್ ಗ್ರ್ಯಾಂಟ್ ಮಾಡಿ, ೧೯೮೩-೮೪ರಲ್ಲಿ ಸ್ಯಾಂಕ್ಷನ್ ಆಯಿತು. ನೀವು ಈ ಮೂರು ವರ್ಷಗಳ ಕಾಲ ಏನು ಮಾಡಿದಿರಿ ? ವರ್ಲ್ಡ್ ಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡಿದ್ದೀರಾ ? ಅದು ಉಪಯೋಗವಾಗುತ್ತಿದೆಯೋ ಎಂದರೆ, ಅದು ಆಗುವುದಿಲ್ಲವೆಂಬ ಮಾತನ್ನೂ ಹೇಳಿದ್ದೀರಿ.

ಮುಖ್ಯ ಮಂತ್ರಿಗಳು ಅವರ ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ, ಅವರೂ ಕೂಡಾ ಇವತ್ತು ಬಸವನಗುಡಿ ಕ್ಷೇತ್ರದಿಂದ ಆರಿಸಿ ಬಂದಿದ್ದಾರೆ. ಈ ನಗರವನ್ನು ಅವರು ಇವತ್ತು ಪ್ರತಿನಿಧಿಸುತ್ತಿದ್ದಾರೆ. ಅವರು ಬಜೆಟ್ ಸ್ಪೀಚ್‌ನ ಪ್ಯಾರಾ ನಂಬರ್ ೫೪ರಲ್ಲಿ ಹೇಳಿದ್ದಾರೆ, Annual Plan size for 1987-88 is fixed at Rs. 870 crores.

"I am confident that the Planning Commission will appreciate our compulsion and approve this additional

outlay. Depending upon the progress of the project, the outlay on the Cauvery Water Supply Project-Stage III will be increased to Rs. 28 crores, as originally approved, by readjustment. We are providing this additional outlay with the strict understanding that we will mobilise additional resources for this purpose. If we are unable to do so, we will proportionately cut the outlay on major and medium irrigation projects. x"

ತಾವು ಇಲ್ಲಿ ಏನು ಹೇಳಿದ್ದೀರಿ ಎಂದರೆ, ಕಾವೇರಿ ಥರ್ಡ್ ಸ್ಟೇಜ್‌ಗೆ ೧೯೮೭-೮೮ರಲ್ಲಿ ೩೮ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಮುಖ್ಯ ಮಂತ್ರಿಗಳು ಬಜೆಟ್ ಸ್ಪೀಚ್‌ನಲ್ಲಿ ಅಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್ ಆದರೆ ಮಾತ್ರ ೩೪ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡುತ್ತೇವೆ ಇಲ್ಲದೇ ಹೋದರೆ ಇಲ್ಲ ಎಂಬ ಮಾತನ್ನು ಹೇಳಿದ್ದಾರೆ. ಈ ರೀತಿಯಾಗಿರುವಾಗ ತಾವು ಯಾವ ಆಧಾರದ ಮೇಲೆ ಪದೇ ಪದೇ ಈ ಸದನದಲ್ಲಿ ಉತ್ತರ ಕೊಡುತ್ತಿದ್ದೀರಿ, ನಾವು ಕಾವೇರಿ ಮೂರನೇ ಹಂತದ ಯೋಜನೆಯನ್ನು ೧೯೯೦ಕ್ಕೆ ಮುಗಿಸುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. For 1986-87 you have provided only 839 lakhs. Out of that they have spent Rs. 258 lakhs. This is your progress With this speed, you cannot complete Cauvery III stage before 1990. This is my opinion. ತಾವು ಇಲ್ಲಿ ಜನರಿಗೆ ಒಂದು ತಪ್ಪು ಕಲ್ಪನೆಯನ್ನು ಉಂಟು ಮಾಡುತ್ತಿದ್ದೀರಿ. ಈ ರೀತಿಯಾಗಿ ತಾವು ಒಂದು ಕಡೆ ಕಾವೇರಿ ಮೂರನೇ ಹಂತದ ಯೋಜನೆಯನ್ನು ಮುಗಿಸತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಏನು ಮಾಡುತ್ತಿದ್ದಾರೆ ಎಂದರೆ ಹದಿಮೂರು ಸ್ಕೀಮ್‌ಗಳನ್ನು ಮಾಡಿ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ೧೩ ಸ್ಕೀಮ್‌ಗಳನ್ನು ಮಾಡಿ ೫೦೬೧ ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡು ೬೨,೧೪೧ ಸೈಟ್ಸ್ ಮಾಡತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಒಂದು ಕಡೆ ಬೆಂಗಳೂರಿನಲ್ಲಿರತಕ್ಕಂಥ ಜನರಿಗೆ ಕುಡಿಯುವ ನೀರಿನ ಕೊರತೆ ಇದೆ, ಇನ್ನೊಂದು ಕಡೆಗೆ ಹೊಸದಾಗಿ

೧೨-೦೦ ಪಿ.ಎಂ.

ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯವರು ೬೨ ಸಾವಿರ ಸೈಟ್‌ಗಳನ್ನು ಮಾಡಿ ಕೊಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ಇರುವುದು ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯವರಿಗೆ ಗೊತ್ತಿದೆಯೋ ಇಲ್ಲವೋ ಎಂಬ ಅನುಮಾನ ಬಂದಿದೆ, ಮುಂದೆ ಮನೆ ಕಟ್ಟುವವರಿಗೆ ಎಲ್ಲಿಂದ ನೀರನ್ನು ಕೊಡಬೇಕೆಂದು ಗೊತ್ತಾಗುತ್ತಿಲ್ಲ. ಮೆಟ್ರೋಪೋಲಿಟನ್ ಅಥಾರಿಟಿ ಎಂಬ ಅಫೆಕ್ಸ್ ಬಾಡಿಯನ್ನು ತಾವು ಮಾಡಿರುತ್ತೀರಿ. ಇದನ್ನು ಕಲ್ಕತ್ತಾದಲ್ಲಾಗಲೀ ಬೊಂಬಾಯಿಯಲ್ಲಾಗಲೀ ಡೆಹಲಿಯಲ್ಲಾಗಲೀ ಇರುವ ರೀತಿ ಕೋಆರ್ಡಿನೇಟ್ ಬಾಡಿ ಮಾಡಬಹುದಾಗಿತ್ತು. ಅಡ್ವೈಸರಿ ಬಾಡಿಯಾಗಿ ಇದು ಕೆಲಸ ಮಾಡುವುದಕ್ಕೆ ಇವತ್ತು ಆಗುವುದಿಲ್ಲ. ಇವತ್ತು ಮೆಟ್ರೋಪೋಲಿಟನ್ ಅಥಾರಿಟಿಗೆ ಏನು ಪವರ್ಸ್ ಇದೆ ? ಇದಕ್ಕೆ ಚೀಫ್ ಮಿನಿಸ್ಟರ್ ಅಧ್ಯಕ್ಷರಾಗಿದ್ದಾರೆ, ತಾವು ಉಪಾಧ್ಯಕ್ಷರಾಗಿರುತ್ತೀರಿ. ಇದರಲ್ಲಿ ಇವತ್ತು ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಆಗಲಿ, ಎಲೆಕ್ಟ್ರಿಸಿಟಿ ಬೋರ್ಡ್ ಆಗಲೀ, ಕಾರ್ಪೊರೇಷನ್ ಆಗಲೀ ಸೇರಿಕೊಂಡು ಕೂಲಂಕುಷವಾಗಿ ವಿಚಾರ ಮಾಡಬೇಕಾಗುತ್ತದೆ. ಆದರೆ ಬಿ.ಡಿ.ಎ. ನವರು ಇವತ್ತು ೬೨ ಸಾವಿರ ಸೈಟ್‌ಗಳನ್ನು ಮಾಡಿ ಜನಗಳಿಗೆ ಹಂಚತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. Whether they are able to give water to these people ? ಜನರಿಗೆ ಮನೆಗಳನ್ನು ಕಟ್ಟಲಿಕ್ಕೆ ಏನು ಅವಕಾಶ ಮಾಡಿ ಕೊಡುತ್ತಿದ್ದೀರಿ, ಅವರಿಗೆ ನೀರನ್ನು ಕೊಡತಕ್ಕ ಪರಿಸ್ಥಿತಿಯಲ್ಲಿದ್ದೀರಾ ಎಂಬುದನ್ನೂ ಕೂಡಾ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಇವತ್ತು ಬಿ.ಡಿ.ಎ.ನವರು ೧೩ ಸ್ಕೀಮ್ ಮಾಡಿ ಗೌರ್ನಮೆಂಟ್‌ಗೆ ಕಳುಹಿಸಿಕೊಟ್ಟಿದ್ದಾರೆ, ೬೨ ಸಾವಿರ ಸೈಟ್‌ಗಳನ್ನು ಮಾಡುತ್ತಿದ್ದಾರೆ, ಇದರಲ್ಲಿ ಕಟ್ಟತಕ್ಕಂಥ ೬೨ ಸಾವಿರ ಮನೆಗಳಿಗೆ ನೀರನ್ನು ಕೊಡತಕ್ಕ ರೀತಿಯಲ್ಲಿ ಇವತ್ತು ತಾವು ಬೆಂಗಳೂರು ವಾಟರ್ ಸಪ್ಲೈ ಮೂರನೇ ಸ್ಟೇಜನ್ನು ಬೇಗ ಕಾರ್ಯಗತ ಮಾಡಬೇಕಾಗಿದೆ.

ತಾವು ಕಾವೇರಿ ಮೂರನೇ ಸ್ಟೇಜ್ ಮಾಡುತ್ತೇವೆಂದು ಏನು ಹೇಳುತ್ತಿದ್ದೀರೋ ಅದು ನಿಮ್ಮ ಕಡೆಯಿಂದ ಆಗುವುದಿಲ್ಲ. ಈ ಯೋಜನೆಗೆ ಬೇಕಾದಷ್ಟು ಹಣವನ್ನು ತಾವು ಒದಗಿಸಿಲ್ಲ. ಆದ್ದರಿಂದ ಈ ಯೋಜನೆ ನಿಮ್ಮ ಕಡೆಯಿಂದ ಆಗುವುದಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಸ್ಕೀಮ್ ಏನಿದೆ ಇದರಲ್ಲಿ ಸುಮಾರು ೩೭ ಪೈಪ್ಡ್ ವಾಟರ್ ಸ್ಕೀಮ್‌ಗಳನ್ನು ಹಾಕಿಕೊಂಡಿದ್ದಾರೆ. ೧೯೮೬–೮೭ನೇ ಸಾಲಿನಲ್ಲಿ ಪೂರ್ಣವಾಗಿರ ತಕ್ಕಂಥಾದ್ದು ಕೇವಲ ೭, ಕಮಿಷನ್ ಆಗಿರುವುದು ಯಾವುದೂ ಇಲ್ಲ. ಅರ್ಬನ್ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಸುಮಾರು ೭೦ ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಇದರಲ್ಲಿ ಕಂಪ್ಲೀಟ್ ಆಗಿರುವುದು ೧೫, ಕಮಿಷನ್ ಆಗಿರುವುದು ಯಾವುದೂ ಇಲ್ಲ. ಅದೇ ರೀತಿ ೧೯೮೭–೮೮ನೇ ಸಾಲಿನಲ್ಲಿಯೂ ಕೂಡ ತಾವು ೬೪ ಸ್ಕೀಮ್‌ಗಳನ್ನು ಹಾಕಿ ಕೊಂಡಿದ್ದೀರಿ. ಇದಕ್ಕೆ ಸುಮಾರು ೫,೫೨೧ ಲಕ್ಷ ರೂಪಾಯಿಗಳ ಹಣ ನಿಮಗೆ ಬೇಕಾಗುತ್ತದೆ. ನೀವು ಪ್ರವೈಡ್ ಮಾಡಿರುವ ಹಣ ಕೇವಲ ೮೫೦ ಲಕ್ಷ ರೂಪಾಯಿಗಳು ಮಾತ್ರ. ಇದರಲ್ಲಿ ಸಿಬ್ಬಂದಿ ವೆಚ್ಚ ಸುಮಾರು ೧೨೫ ಲಕ್ಷ ರೂಪಾಯಿಗಳಾಗುತ್ತದೆ. ಇಷ್ಟು ಮೀಗರ್ ಅಮೌಂಟ್ ಅನ್ನು ನೀವು ಪ್ರವೈಡ್ ಮಾಡಿದ್ದೀರಿ. ಅದೇ ರೀತಿಯಲ್ಲಿ ತಾವು ೧೯೮೬–೮೭ನೇ ಸಾಲಿನಲ್ಲಿ ಪ್ರವೈಡ್ ಮಾಡಿದ್ದಂತಹ ಹಣ ೮೧೮ ಲಕ್ಷ ರೂಪಾಯಿಗಳು. ಇದರಲ್ಲಿ ಸ್ಪೆಂಟ್ ಮಾಡುವುದು ೬೪೪ ಲಕ್ಷ ರೂಪಾಯಿಗಳು. ಇದರಲ್ಲಿ ಅನ್ ಯುಟಿಲೈಜ್ಡ್ ಆಗಿರುವುದು ೮೧ ಲಕ್ಷ ರೂಪಾಯಿಗಳು ಇದೆ, ತಾವೇನು ಎಲ್ಲಾ ಕಡೆ ಹೇಳುತ್ತಿದ್ದೀರಿ ಎಂದರೆ ನಾವು ಎಲ್ಲರಿಗೂ ನೀರು ಕೊಡುತ್ತೇವೆಂದು. ನಮ್ಮ ರಾಜ್ಯದಲ್ಲಿ ನೀರಿನ ಸಮಸ್ಯೆ ಬೃಹದಾಕಾರವಾಗಿದೆ. ಈ ಎರಡು ಮೂರು ತಿಂಗಳಲ್ಲಿ ನೀರಿನ ಸಮಸ್ಯೆ ಬಹಳ ಇದೆ. ಬೋರ್‌ವೆಲ್‌ಗಳ ಮುಖಾಂತರ ನೀರನ್ನು ಯಾವ ರೀತಿ ಟ್ರಾನ್ಸ್‌ಫರ್ ಮಾಡಿ ನೀರನ್ನು ಒದಗಿಸಿ ಕೊಡುತ್ತೀರಿ ? ಇದಕ್ಕೆ ಬೇಕಾದಷ್ಟು ಹಣ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನಲ್ಲಿ ಇಲ್ಲ. ತಾವು ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ ? ಸಾಕಷ್ಟು ಕೆಲಸ ಸಕಾಲದಲ್ಲಿ ತಮ್ಮಿಂದ ಮಾಡುವುದಕ್ಕೆ ಆಗುತ್ತದೆಯೇ ? ಇವತ್ತು ತಾವು ಎಲ್ಲಾ ಕಡೆಗೂ ನೀರು ಕೊಡುತ್ತೇವೆಂದು ಹೇಳುತ್ತೀರಿ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ಸುಮಾರು ೨೪೨ ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸಿ ಕೊಡುವ ಕರ್ತವ್ಯ ಅವರದ್ದು. ಇವರಿಗೆ ತಾವು ಇಷ್ಟೊಂದು ಮೀಯಗರ್ ಅಮೌಂಟ್ ಒದಗಿಸಿ ಕೊಟ್ಟರೆ ಕೆಲಸ ಆಗುತ್ತದೆಯೇ ? ಇನ್ನು ವಾಟರ್ ಡೀಕೇಡ್ ಪ್ರೋಗ್ರಾಂ ಅನ್ನು ತಾವು ೧೯೮೧ ರಿಂದ ೧೯೯೦ರ ವರೆವಿಗೆ ೧೦ ವರ್ಷಗಳ ಒಂದು ನ್ಯಾಷನಲ್ ಪ್ರೋಗ್ರಾಂ ಅನ್ನು ಹಾಕಿಕೊಂಡು ಸುಮಾರು ೨೮೪ ಕೋಟಿ ರೂಪಾಯಿಗಳನ್ನು ಒದಗಿಸಿ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಕಳೆದ ಮೂರು ವರ್ಷಗಳಿಂದ ಈ ವಾಟರ್ ಡೀಕೇಡ್ ಪ್ರೋಗ್ರಾಂಗೆ ತಾವು ಎಷ್ಟು ಹಣ ಖರ್ಚು ಮಾಡಿದ್ದೀರಿ ? ಎಷ್ಟು ಹಣವನ್ನು ಒದಗಿಸಿದ್ದೀರಿ ? ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತಾವು ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಹೇಳಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಾಹಿತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ನಿಮ್ಮ ಸರ್ಕಾರ ಪಟ್ಟಣ ಪ್ರದೇಶಗಳ ನೀರು ಸರಬರಾಜು ಯೋಜನೆಗೆ ಹಣವನ್ನು ಕೊಡುತ್ತಿಲ್ಲ. ಆದ್ದರಿಂದ ನಾನು ಒ಼ದು ಸಲಹೆ ಮಾಡುವುದೇನೆಂದರೆ ಎಲ್. ಐ. ಸಿ. ಮುಖಾಂತರ ಅಥವಾ ಬೇರೆ ಬೇರೆ ಏಜೆನ್ಸಿಗಳ ಮುಖಾಂತರ ಡೋನರ್ಸ್ ಕಂಟ್ರಿಗಳಿಂದ ಹಣವನ್ನು ಪಡೆದುಕೊಂಡು ಎಲ್ಲಾ ಪಟ್ಟಣ ಪ್ರದೇಶಗಳ ನೀರು ಸರಬರಾಜು ಯೋಜನೆಗಳಿಗೆ ಹಣವನ್ನು ಒದಗಿಸಿಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇನ್ನು ನಮ್ಮ ಕಾಲದಲ್ಲಿ ರೀಜನಲ್ ವಾಟರ್ ಸಪ್ಲೈ ಸ್ಕೀಮ್ ಎಂದು ಮಾಡಿದ್ದೆವು. ಅದರಲ್ಲಿ ೧೧ ಹಳ್ಳಿಗಳು ಬರುತ್ತವೆ. ಆಮೇಲೆ ಕುಮಟಾ, ಹೊನ್ನಾವರ ರೀಜನಲ್ ವಾಟರ್ ಸಪ್ಲೈ ಸ್ಕೀಮ್ ಎಂದು ಮಾಡಿದ್ದೆವು. ಆಮೇಲೆ ವೀರಾಜಪೇಟೆ, ಮಡಿಕೇರಿ ಶಾಂತಿಸಾಗರ ಸ್ಕೀಮ್‌ಗಳೆಂದು ಮಾಡಿದ್ದೆವು. ಹುಕ್ಕೇರಿ ಸಂಕೇಶ್ವರ ನೀರು ಸರಬರಾಜು ಯೋಜನೆ, ಮಾನ್ಯ ಮಲ್ಲಾರಿಗೌಡ ಪಾಟೀಲ್ ರವರ ಕ್ಷೇತ್ರದಲ್ಲಿ ಬರುತ್ತದೆ. ಆ ಯೋಜನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೋಗಿ ಶಂಕು ಸ್ಥಾಪನೆ ಮಾಡಿ ಬಂದಿದ್ದಾರೆ. ಆದರೆ ಇದುವರೆವಿಗೂ ಈ ಬಗ್ಗೆ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಅದೇ ರೀತಿಯಾಗಿ ಗದಗ್, ಬೆಟಗೇರಿ ತಾಲ್ಲೂಕುಗಳಿಗೆ ತುಂಗಭದ್ರ ಕೆನಾಲ್‌ನಿಂದ ನೀರು ತರುವುದಕ್ಕೆ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಒಂದು ಸ್ಕೀಮ್ ಇರಬಹುದು. ಅದರ ಬಗ್ಗೆ ತಾವು ಏನು ಕೆಲಸ ಮಾಡಿದ್ದೀರಿ ಎಂಬ ಬಗ್ಗೆ ಸದನಕ್ಕೆ ಹೇಳಬೇಕು. ಇದೇ ರೀತಿಯಾದ ಸ್ಕೀಮ್‌ಗಳನ್ನು ಎಲ್ಲಾ ಪಟ್ಟಣ ಪ್ರದೇಶಗಳ ಏರಿಯಾಗಳಿಗೆ ನೀರು ಕೊಡುವುದಕ್ಕೆ ಇದೆ. ಆಮೇಲೆ

ಬೆಣ್ಣೆತೊರಾ ಪ್ರಾಜೆಕ್ಟ್ ಏನು ಇದೆ ಅದನ್ನು ತಾವು ಮಾಡುತ್ತಲೇ ಇಲ್ಲ. ಅದು ಏಕೆ ನಿಂತು ಹೋಗಿದೆ ಎಂಬುದು ನನಗೆ ಗೊತ್ತಾಗಲಿಲ್ಲ. ಇನ್ನು ಗುಲ್ಬರ್ಗಾ ನಗರಕ್ಕೆ ಭೀಮಾ ನದಿಯಿಂದ ನೀರು ತರುತ್ತೀರೋ ಗಂಗಾ ನದಿಯಿಂದ ನೀರು ತರುತ್ತೀರೋ ಅದು ನಿಮ್ಮ ಹಣಕಾಸಿನ ಸಾಮರ್ಥ್ಯದ ಮೇಲೆ ನಿಂತಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ರೈನ್‌ಫಾಲ್ ಕಡಿಮೆಯಾಗಿ ನೀರಿನ ತೊಂದರೆಗೆ ಜನರು ಈಡಾಗಿದ್ದಾರೆ, ಅದನ್ನು ನಿವಾರಣೆ ಮಾಡತಕ್ಕ ಕೆಲಸವನ್ನು ನೀವು ಹೇಗೆ ಮಾಡುತ್ತೀರೋ ನೋಡಬೇಕು. ೧೯೭೭ರಲ್ಲಿ ಮಾನ್ಯ ಶ್ರೀಕಂಠಯ್ಯನವರು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳಾಗಿದ್ದರು. ಅವರು ಆಗ ಗುಲ್ಬರ್ಗಾಕ್ಕೆ ಹೋದಾಗ ಜನರು ನೀರಿನ ಭವಣೆಯಿಂದ ಬಹಳ ಕಷ್ಟಪಡುತ್ತಿದ್ದರು. ಇವರು ಅಲ್ಲಿಗೆ ಹೋದಾಗ ಯಾವ ರೀತಿಯಾಗಿ ಗದ್ದಲ ಆಯಿತು ತಮಗೂ ಗೊತ್ತಿದೆ. ತಮ್ಮ ಪಕ್ಷದವರು ಹಾಗೂ ನಿಮ್ಮ ಪಕ್ಷದವರು ಕೂಡಿ ಈ ಗುಲ್ಬರ್ಗಾ ಜಿಲ್ಲೆಯ ಜನರಿಗೆ ಕುಡಿಯುವ ನೀರನ್ನು ಒದಗಿಸಿಕೊಡ ತಕ್ಕಂಥ ಏರ್ಪಾಡನ್ನು ಮಾಡಬೇಕು ಎಂದು ಕೇಳಿಕೊಂಡಿದ್ದೇವೆ. ಮಾನ್ಯ ದೇವರಾಜ ಅರಸರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಶ್ರೀಕಂಠಯ್ಯನವರು ಗುಲ್ಬರ್ಗಾಕ್ಕೆ ಬಂದಿದ್ದರು.

ಉಪಾಧ್ಯಕ್ಷರು.—ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ೪೦ ನಿಮಿಷ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಧರ್ಮಸಿಂಗ್‌ರವರು ಬಹಳ ಪ್ರಮುಖವಾದ ವಿಷಯಗಳ ಮೇಲೆ ಮಾತನಾಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ನೀರಿನ ಸಮಸ್ಯೆ ಬಗ್ಗೆ ಹೇಳುತ್ತಿದ್ದಾರೆ. ತಾವು ಈ ರೀತಿ ಒತ್ತಡ ತರಬಾರದು. ಇವರು ಹೇಳುತ್ತಿರುವ ಸಮಸ್ಯೆಗಳಲ್ಲಿ ೩೦ ಪರ್ಸೆಂಟ್ ಮುಖ್ಯ ಮಂತ್ರಿಯವರ ಮತ್ತು ಮಾನ್ಯ ಲಕ್ಷ್ಮೀಸಾಗರ್‌ರವರ ಕಾನ್ಸ್ಟಿಟ್ಯುಯೆನ್ಸಿಗೇ ಸಂಬಂಧ ಪಟ್ಟದ್ದಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಹತ್ವ ವಿಷಯದ ಬಗ್ಗೆ ಮಾತನಾಡುವವರ ಮೇಲೆ ರಿಸ್ಟ್ರಿಕ್ಷನ್ ಹಾಕಬೇಡಿ.

† ಶ್ರೀ ಧರ್ಮಸಿಂಗ್.—ಮಾನ್ಯ ಶ್ರೀಕಂಠಯ್ಯನವರು ಗುಲ್ಬರ್ಗಾಕ್ಕೆ ಬಂದಿದ್ದಾಗ ಅವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದರು. ಅವರು ಅಲ್ಲಿಗೆ ಬಂದಾಗ ನಾನು ಮತ್ತು ಮಾನ್ಯ ಖರ್ಗೆಯವರು ಅಲ್ಲೇ ಇದ್ದೆವು. ಅವರಿಗೆ ಸಾಕಷ್ಟು ಪ್ರತಿಭಟನೆಯನ್ನು ಮಾಡಿದೆವು. ಆ ಕೂಡಲೇ ಅವರು ೫೦ ಸಾವಿರವೋ ೮೦ ಸಾವಿರವೋ ಹಣವನ್ನು ಬಿಡುಗಡೆ ಮಾಡಿ ಭೀಮಾ ನದಿಯಿಂದ ನೀರನ್ನು ಟ್ಯಾಂಕರುಗಳ ಮೂಲಕ ತರಿಸಿ ಗುಲ್ಬರ್ಗಾ ಜನರಿಗೆ ಅನುಕೂಲ ಮಾಡಿಕೊಟ್ಟರು. ಈಗ ಕರ್ನಾಟಕ ನೀರು ಸರಬರಾಜು ಮಂಡಳಿಯ ಅಧ್ಯಕ್ಷರು ನಮ್ಮ ಗುಲ್ಬರ್ಗಾದವರೇ ಆಗಿದ್ದಾರೆ. ಅವರು ಕೆಲಸ ಕಾರ್ಯಗಳನ್ನು ಮಾಡ ಬೇಕಾದರೆ ಅವರಿಗೆ ದುಡ್ಡು ಕೊಡಬೇಕಾಗುತ್ತದೆ. ನೀವು ಅವರಿಗೆ ದುಡ್ಡು ಕೊಡದಿದ್ದರೆ ಅವರು ಏನು ಕೆಲಸ ಮಾಡುವುದಕ್ಕಾಗುವುದಿಲ್ಲ, ಈಗ ನಾನು ಗುಲ್ಬರ್ಗಾದ ವಿಷಯ ಉದಾಹರಣೆಗೆ ಹೇಳಿ ದ್ದೇನೆ ಅಷ್ಟೇ. ಈಗ ಬೇಸಿಗೆ ಬರುವುದರಿಂದ ಇನ್ನೂ ಮೂರು ತಿಂಗಳ ಕಾಲ ಎಲ್ಲಾ ಪಟ್ಟಣ ಪ್ರದೇಶ ಗಳಲ್ಲೂ ನೀರಿನ ತೊಂದರೆಯುಂಟಾಗುತ್ತದೆ. ಈ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ದವರು ಗ್ರ್ಯಾಂಟ್ ರೂಪದಲ್ಲಿ ಹಣವನ್ನು ಕೊಡುವುದಕ್ಕೆ ವಿಚಾರ ಮಾಡಬೇಕು. ಮ್ಯುನಿಸಿಪಾಲಿಟಿ ಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಲೋನ್ ಕೊಡುವ ತರದಲ್ಲಿ ಅಲ್ಲ. ವರ್ಷಕ್ಕೆ ಇಷ್ಟು ಗ್ರ್ಯಾಂಟ್ ಎಂದು ಕೊಟ್ಟು ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಕೊಳಚೆ ಪ್ರದೇಶ ಗಳಲ್ಲಿರತಕ್ಕ ಜನರಿಗೂ ಕೂಡ ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಪ್ರಯತ್ನ ಮಾಡಬೇಕು. ಇವತ್ತು ಅಂಥ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ನೀರಿನ ತೊಂದರೆ ಬಹಳವಾಗುತ್ತಿದೆ. ಬಡವರಿಗೆ ನೀರಿನ ತೊಂದರೆಯಿಂದ ತಪ್ಪಿಸಬೇಕು. ದೊಡ್ಡ ದೊಡ್ಡ ಬಡಾವಣೆಯಲ್ಲಿ ಬೋರ್‌ವೆಲ್‌ಗಳನ್ನು ಹಾಕು ತ್ತಿರುವಂತೆಯೇ ಬಡವರ ಓಣಿಗಳಲ್ಲೂ ಕೂಡಾ ತಾವು ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ವ್ಯವಸ್ಥೆ ಯನ್ನು ಹೆಚ್ಚಿನ ರೀತಿಯಲ್ಲಿ ಮಾಡುವುದಕ್ಕೆ ತಾವು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಹೇಳಬೇಕಾದರೆ, ಈ ಇಲಾಖೆಯಲ್ಲೂ ಸಹ ಹೆಚ್ಚು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಇದ್ದಾರೆ. ತಾವು ಅವರಿಗೆ ಉತ್ತೇಜನ ಕೊಡಬೇಕಾಗಿದೆ.

ಮಾನ್ಯ ಮುಖ್ಯ ಮಂತ್ರಿಯವರು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಮಾತನಾಡುತ್ತಾ ಪ್ರಸ್ತಾಪ ಮಾಡಿದ್ದಾರೆ. ತಮ್ಮ ಬಜೆಟ್ ಭಾಷಣದಲ್ಲಿ ೧೯೮೭-೮೮ರಲ್ಲಿ ೨,೬೧೨ ಸೈಟ್‌ಗಳನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅದೇ ವಾರ್ಷಿಕ ವರದಿಯಲ್ಲಿ ೧,೯೧೪ ಸೈಟ್‌ಗಳು ಕೊಡುತ್ತೇವೆ ಎಂದು ಇದೆ. ಬಜೆಟ್‌ಭಾಷಣದಲ್ಲಿ ಉಲ್ಲೇಖವು ಒಂದು ರೀತಿಯಲ್ಲಿ ಇದೆ. ವಾರ್ಷಿಕ ವರದಿಯಲ್ಲಿ ಈ ಬಗ್ಗೆ ಇನ್ನೊಂದು ರೀತಿಯಲ್ಲಿ ಅಂಕಿಸಂಖ್ಯೆಗಳು ಇವೆ. ಪರ್‌ಫಾರ್ಮೆನ್ಸ್ ಬಜೆಟ್ ಏನು ಇದೆ, ಅದರಲ್ಲಿ ೧೯೮೭-೮೮ರಲ್ಲಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಿಂದ ೧೧,೧೬೦ ಸೈಟ್‌ಗಳನ್ನು ಕೊಡತಕ್ಕಂಥಾದು ಇದೆ. ಇದರಲ್ಲಿ ಯಾವುದು ಸತ್ಯಾಂಶಗಳಿಂದ ಕೂಡಿದ್ದು ಎಂದು ನಮಗೆ ತಿಳಿಸಬೇಕು. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರ ಕಡೆಯಿಂದ ಹೇಳಿದಂತಹವು ಸರಿಯೋ ಅಥವಾ ಮತ್ಯಾವುದು ಸರಿ ಎಂಬುದನ್ನು ತಿಳಿಸಬೇಕು.

ಈಗಾಗಲೇ ತಾವುಗಳು ಹೇಳಿದ ಹಾಗೆ ಸೈಟ್‌ಗಳನ್ನು ಮಾಡಿ ಸೂಕ್ತ ಜನರಿಗೆ ಹಂಚತಕ್ಕಂಥ ಕೆಲಸವನ್ನು ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದೀರಿ, ಅಂಥ ಸಂದರ್ಭದಲ್ಲಿ ಬೆಂಗಳೂರು ನಗರದ ನಿವೇಶನಗಳ ಬೇಡಿಕೆ, ಕೊರತೆ, ಮತ್ತಿತರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಬಗ್ಗೆ ನಿರ್ದಿಷ್ಟವಾದಂತಹ ಒಂದು ಆದೇಶವನ್ನು ಕೊಡಬೇಕು. ೬೦ ಸಾವಿರ ಸೈಟುಗಳನ್ನು ಕೊಡಬೇಕೆಂದು ಕಾರ್ಯಕ್ರಮವನ್ನು ಇವೊತ್ತು ಹಾಕಿಕೊಂಡಿದ್ದೀರಿ, ಅದರಲ್ಲಿ ೧೩ ಸ್ಕೀಮ್‌ಗಳು ಏನು ಬಂದಿವೆ, ಅದರಲ್ಲಿ ಎಲ್ಲಾ ಪಟ್ಟಣಗಳಲ್ಲಿಯೂ ಬಹಳಷ್ಟು ಸಮಸ್ಯೆಗಳು ಇವೆ. ಈಗ ರೆವಿನ್ಯೂ ಸೈಟ್ಸ್‌ಗಳನ್ನು ರೆಗ್ಯೂಲರೈಸ್ ಮಾಡುತ್ತಿದ್ದೀರಿ, ಬೆಂಗಳೂರು ನಗರದಲ್ಲಿರುವ ಮೂಲವಾಸಿಗಳು ಏನಿದ್ದಾರೆ ಅವರನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ನಗರದ ಜನಸಂಖ್ಯೆ ೨೦೦೦ನೇ ಇಸವಿಯ ಹೊತ್ತಿಗೆ ೭೦ ಲಕ್ಷಕ್ಕಿಂತಲೂ ಹೆಚ್ಚಿಗೆ ಆಗುವ ಸಂದರ್ಭ ಇದೆ. ಕುಡಿಯುವ ನೀರಿನ ಕೊರತೆಯ ಬಗ್ಗೆಯೂ ಸಮಸ್ಯೆ ಇದೆ. ಈ ರೀತಿಯಾದ ಬೃಹದಾಕಾರವಾದ ಸಮಸ್ಯೆ ಇರುವಾಗ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಈ ರೀತಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಸರಿಯಲ್ಲ. ನಿವೇಶನಗಳ ಸಂಖ್ಯೆ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿಸಬೇಕಾಗುತ್ತದೆ ಎಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಬೆಂಗಳೂರು ಮೆಟ್ರೋಪಾಲಿಟನ್ ಅಥಾರಿಟಿ ಎಂದು ತಾವುಗಳು ಮಾಡಿದ್ದೀರಿ. ಆದರೆ ಅವರಿಗೆ ಹೆಚ್ಚಿಗೆ ಪವರ್ಸ್ ಕೊಟ್ಟಿಲ್ಲ. ಅವರಿಗೆ ಹೆಚ್ಚಿಗೆ ಅಧಿಕಾರ ಬೇಕು. ನಗರದ ವ್ಯಾಪ್ತಿಯಲ್ಲಿ ಬೇರೆ ಬೇರೆ ಬೋರ್ಡ್‌ಗಳು ಏನಿವೆ, ಉದಾಹರಣೆಗೆ, ಜಲಮಂಡಳಿ, ವಿದ್ಯುಚ್ಛಕ್ತಿಮಂಡಳಿ ಹೀಗೆ ಬೇರೆ ಬೇರೆ ಮಂಡಲಿಗಳ ಮೇಲೆ ಇವರಿಗೆ ಒಂದು ಹತೋಟಿ ಇರುವ ರೀತಿಯಲ್ಲಿ ಒಂದು ಅಧಿಕಾರವನ್ನು ಇವರಿಗೆ ಕೊಡಬೇಕು. ಯಾವ ರೀತಿಯಲ್ಲಿ ಡೆಲ್ಲಿ, ಕಲ್ಕತ್ತಾ, ಬೊಂಬಾಯಿ, ಮುಂತಾದ ಕಡೆಗಳಲ್ಲಿ ಈ ಬೋರ್ಡ್, ಅಥಾರಿಟಿ ಕೆಲಸ ಮಾಡುತ್ತಿದೆ ಮತ್ತು ಅದಕ್ಕೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ, ಹಾಗೆಯೇ ಇಲ್ಲಿಯೂ ನಮ್ಮ ಮೆಟ್ರೋಪಾಲಿಟನ್ ಅಥಾರಿಟಿ ಕೆಲಸ ಮಾಡುವಂತಾಗಬೇಕು. ಹಾಗೆ ಇರಬೇಕೇ ಹೊರತು ಅದು ಕೇವಲ ಅಡ್ವೈಸರಿ ಬೋರ್ಡ್ ಆಗಿರಬಾರದು ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಈ ಸರ್ಕಾರ ಬಂದಮೇಲೆ, ಜನತಾ ಮನೆಗಳನ್ನು ಕೊಡತಕ್ಕಂಥ ರೀತಿಯಲ್ಲಿ ಆಗಲಿ, ಪಟ್ಟಣ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಸಿಕೊಡತಕ್ಕಂಥಾದರಲ್ಲಿಯಾಗಲೀ ಕೊಳಚೆ ಪ್ರದೇಶಗಳಲ್ಲಿ ಇರತಕ್ಕಂಥ ಈ ಕುರಿತಾದ ಒಂದು ವ್ಯವಸ್ಥೆಯಾಗಲಿ, ಇವುಗಳ ಬಗ್ಗೆ ಸ್ವಲ್ಪ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಇನ್ನು ಮೇಲಾದರೂ ಹೆಚ್ಚಿನ ಗಮನ ಕೊಡಬೇಕು ಈ ದಿಸೆಯಲ್ಲಿ ಇವೊತ್ತು ಸರಕಾರದ ವತಿಯಿಂದ ಎಷ್ಟು ಕೆಲಸ ನೀವು ಮಾಡುತ್ತಾ ಇದ್ದೀರಿ ಅದು ತೃಪ್ತಿಕರವಾಗಿಲ್ಲ. ಮತ್ತು ನೀವುಗಳು ಹಾಕಿಕೊಂಡ ಕಾರ್ಯಕ್ರಮದಂತೆ ಆಗುತ್ತಿಲ್ಲ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಒಟ್ಟು ೯೬೫ ಕೊಳಚೆ ಪ್ರದೇಶಗಳು ಇವೆ. ಅವುಗಳಲ್ಲಿ ೫೮೯ ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳು ಎಂದು ಡಿಕ್ಲೇರ್ ಮಾಡಿದ್ದೀರಿ. ಅಲ್ಲಿರತಕ್ಕಂಥ ಜನಸಂಖ್ಯೆ ಮತ್ತು ಅವರ ಪರಿಸ್ಥಿತಿ ಬಗ್ಗೆ ತಮಗೆ ಗೊತ್ತಿದೆ. ಮಾನ್ಯ ಮಂತ್ರಿಯವರಿಗೂ ಗೊತ್ತಿದೆ. ಮತ್ತು ಅವರಿಗೆ ಒದಗಿಸಬೇಕಾದ ಸವಲತ್ತಿನ ಬಗ್ಗೆ ಕೇಂದ್ರ ಸರಕಾರದ ಸಹಾಯಗಳ ಬಗ್ಗೆಯೂ ಗೊತ್ತಿದೆ. Centrally sponsored incentive scheme for environmental improvement in urban areas ಇದರಲ್ಲಿ ಇವರಿಗಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತೀರೋ ಅಷ್ಟನ್ನೂ ಸಹ ಶೇಕಡಾ ೧೦೦ಕ್ಕೆ ನೂರರಷ್ಟನ್ನು ಕೇಂದ್ರ

ಸರಕಾರದವರು ಕೊಡುತ್ತಾರೆ. ಈ ಸ್ಕೀಮ್‌ನ ಬಗ್ಗೆ ಕೇಂದ್ರ ಸರಕಾರದ ಕಡೆಯಿಂದ ನಮ್ಮ ಪ್ರಧಾನ ಮಂತ್ರಿಯವರು ಕೂಡ ಹೇಳುತ್ತಾ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—೧೯೮೪-೮೫ರಲ್ಲಿ ಕೇಂದ್ರ ಸರ್ಕಾರದವರು ಇದನ್ನು ಡಿಸ್‌ಕಂಟಿನ್ಯೂ ಮಾಡಿದ್ದಾರೆ. ಇಂತಹ ಸ್ಕೀಮ್ ಅನ್ನು ರಾಜ್ಯ ಸರಕಾರದವರು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಗರಾಭಿವೃದ್ಧಿಗಳ ಸಭೆಯನ್ನು ಕೇಂದ್ರ ನಗರಾಭಿವೃದ್ಧಿ ಸಚಿವರು ಸಭೆ ಕರೆದಾಗ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಫ್ಯಾಕ್ಟ್ ಏನಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.— ಬಜೆಟ್‌ನಲ್ಲಿ ಕೇಂದ್ರ ಸರಕಾರದಿಂದ ಅಸಿಸ್ಟೆನ್ಸ್ ಬರುತ್ತಿಲ್ಲವೆಂದು ಪ್ರಸ್ತಾಪ ಮಾಡಿದ್ದರೆ ಕೇಳುತ್ತಿರಲಿಲ್ಲ ೧೯೮೫ರವರೆಗೆ ಕೇಂದ್ರ ಸರಕಾರದವರು ಕೊಡುತ್ತಿದ್ದರು. ಹಡ್ಕೋದಿಂದ ಲೋನ್ ತೆಗೆದುಕೊಳ್ಳಬಹುದು. ಕೊಳಚೆ ಪ್ರದೇಶದಲ್ಲಿ ಖರ್ಚು ಮಾಡತಕ್ಕಂತಹ ಅಲೋಕೇಷನ್ ಏನಿದೆ ಅದರಲ್ಲಿ ಯಾವ ಪರಿಹಾರವನ್ನು ಕಂಡು ಹಿಡಿದಿದ್ದೀರಿ? ಒಂದು ಕಡೆಗೆ ಬುಲ್‌ಡೋಜರ್ ತಂದು ಒಡೆಯುತ್ತೀರಿ. ಮೊನ್ನೆ ಕೂಡ ಹೇಳಿದರು ಬೆಂಗಳೂರು ನಗರದಲ್ಲಿ ಮನೆಗಳನ್ನು ಕೆಡವಿ ಹಾಕಿದ್ದಾರೆಂದು ಮಾನ್ಯ ಶ್ರೀನಿವಾಸ್‌ರವರು, ಶ್ರೀ ಕೃಷ್ಣನ್‌ರವರು ಇದನ್ನು ಪ್ರಸ್ತಾಪ ಮಾಡಿದಾಗ ಬೇರೆ ಕಡೆಯಲ್ಲಿ ಸೈಟ್ ಕೊಡುತ್ತೇವೆಂದು ವಾಗ್ದಾನ ಮಾಡಿದ್ದೀರಿ. ಹಿಂದೆ ಮಾನ್ಯ ದೇವರಾಜ್ ಅರಸ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ ತಾವೂ ಕೂಡ ಇಲ್ಲಿ ಇದ್ದು ನಂದಿನಿ ಲೇಔಟ್‌ನ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿದ್ದೀರಿ ಇಂತಹ ಜನರಿಗೆ ಪರ್ಯಾಯವಾದ ಸೈಟ್ ಕೊಡತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಎಲ್ಲಾ ಕಡೆಗಳಲ್ಲೂ ಮನೆಗಳನ್ನು ಕೆಡವತಕ್ಕಂತಹ ಕೆಲಸವನ್ನು ಮಾಡಿ ಬಡವರಿಗೆ ಈ ಮೂಲಕ ತೊಂದರೆ ಕೊಡತಕ್ಕಂತಹ, ಯಾವುದು ಪ್ರತಿಕ್ರಿಯಾವಾದಿ ಶಕ್ತಿಗಳು ಇವೆ ಅವುಗಳಿಗೆ ಬಗ್ಗಿ ಸರಕಾರ ನಡೆಯುತ್ತಿದೆ ಹಾಗೂ ಕೆಲವು ಜನರಿಗೆ ಹಿತವಾಗುವ ರೀತಿಯಲ್ಲಿ ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಈಗಾಗಲೇ ನಾನು ಮಾನ್ಯ ಮಂತ್ರಿಗಳಿಗೆ ಕೆಲವು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ. ಅದರ ಮುಖಾಂತರವಾಗಿ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಣಾಮಕಾರಿಯಾದ ರೀತಿಯಲ್ಲಿ ಬಗೆಹರಿಸಬೇಕೆಂದು ವಿನಂತಿಸುತ್ತೇನೆ. ಇಲ್ಲದಿದ್ದರೆ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ವಾಟರ್ ಸಪ್ಲೈ ಬೋರ್ಡ್‌ನಲ್ಲಾಗಲೀ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಲ್ಲಾಗಲೀ ಸ್ಥಳೀಯ ಸಂಸ್ಥೆಗಳಲ್ಲಾಗಲೀ ಏನು ಹಣದ ತೊಂದರೆ ಇದೆ ಅದರ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದೇನೆ. ಫುಡ್ ಸಪ್ಲೈಸ್ ಬಗ್ಗೆ ಹೇಳುವುದಕ್ಕೆ ನಾನು ಬಯಸುವುದಿಲ್ಲ ಅವರ ಖಾತೆಗೆ ಸಂಬಂಧಪಟ್ಟ ಇನ್ನೊಂದು ವಿಷಯ ಏನಿದೆ ಲಾ ಅಂಡ್ ಪಾರ್ಲಿಮೆಂಟರಿ ಅಫೈರ್ಸ್ ಎಂದು ಅದರ ಬಗ್ಗೆ ಸ್ವಲ್ಪ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ತಾವು ಬಂದ ಮೇಲೆ ೧೮ ಆರ್ಡಿನೆನ್ಸ್ ಅನ್ನು ಇಷ್ಯೂ ಮಾಡಿದ್ದೀರಿ, ಈ ಸರಕಾರ ಆರ್ಡಿನೆನ್ಸ್ ಸರಕಾರವೆಂದು ಆಗಿದೆ. ಸದನ ನಡೆದಾಗ ಬಿಲ್ಸ್ ಅನ್ನು ತೆಗೆದುಕೊಂಡು ಬರಬೇಕು. ಮೊನ್ನೆ ತಾನೆ ಸದನ ೧೩ನೇ ತಾರೀಖು ಮುಗಿಯಿತು ೧೪ನೇ ತಾರೀಖು ಅಮೆಂಡ್‌ಮೆಂಟ್ ತಂದರು. ನೀವು ಏನೇನು ಅಮೆಂಡ್‌ಮೆಂಟ್ಸ್ ತರಬೇಕಾದರೆ ಅದನ್ನು ಸದನದಲ್ಲಿ ತರತಕ್ಕಂಥ ಪ್ರಯತ್ನ ಮಾಡಿ. ತಾವು ಆರ್ಡಿನೆನ್ಸ್ ಹೊರಡಿಸತಕ್ಕದ್ದು ಉಚಿತ ಅಲ್ಲ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಲಾ ಗ್ರಾಜುಯೇಟ್ಸ್‌ಗಳಿಗೆ ಟ್ರೈನಿಂಗ್ ಕೊಡತಕ್ಕಂಥ ಒಂದು ಸ್ಕೀಮ್ ಇದೆ. ಇವತ್ತು ಎಸ್.ಸಿ, ಎಸ್.ಟಿ. ಬಿ.ಸಿ. ಮತ್ತು ಬಿ.ಟಿ. ಜನರಿಗೆ ಲಾ ಗ್ರಾಜುಯೇಟ್ಸ್‌ಗಳಿಗೆ ಟ್ರೈನಿಂಗ್ ಏನು ಕೊಡುತ್ತಿದ್ದೀರಿ, ಅದರಲ್ಲಿ ೪೭೪ ಅರ್ಜಿಗಳು ಬಂದರೆ ಕೇವಲ ೧೦೨ಕ್ಕೆ ಮಾತ್ರ ನೀವು ಟ್ರೈನಿಂಗ್ ಕೊಡುತ್ತಿದ್ದೀರಿ. ಅದಕ್ಕಾಗಿ ಇನ್-ಟೇಕ್ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಅನೇಕ ಕೋರ್ಟ್‌ಗಳಲ್ಲಿ ಅನೇಕ ತರಹದ ಕೇಸಸ್‌ಗಳು ಪೆಂಡಿಂಗ್ ಇವೆ. ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ೭೦ ಸಾವಿರ ಕೇಸಸ್ ಪೆಂಡಿಂಗ್ ಇದೆ. ಸಿವಿಲ್ ಜಡ್ಜ್ ಕೋರ್ಟ್‌ನಲ್ಲಿ ೧.೨೦ ಲಕ್ಷ ಕೇಸಸ್‌ಗಳು ಪೆಂಡಿಂಗ್ ಇದೆ ಮತ್ತು ಮುನ್ಸೀಫ್ ಕೋರ್ಟ್‌ನಲ್ಲಿ ೨,೮೮,೦೦೦ ಸಾವಿರ ಇವತ್ತು ಪೆಂಡಿಂಗ್ ಇದೆ. ಕ್ರಿಮಿನಲ್ ಕೇಸಸ್ ೩,೯೭,೦೦೦ ಇದೆ. ಮೋಟಾರ್ ವೆಹಿಕಲ್ಸ್‌ದು ೨,೪೬೨ ಇದೆ. ಒರಿಜಿನಲ್ ಸೂಟ್ ೮೭೭೧ ಇದೆ. ಈ ರೀತಿಯಾಗಿ ಕೇಸಸ್‌ಗಳು ಪೆಂಡಿಂಗ್ ಇದೆ. ಇದರ ಬಗ್ಗೆ ಕಾನೂನು ಮಂತ್ರಿಗಳು ಹೆಚ್ಚಿನ ಗಮನವನ್ನು ಕೊಡಬೇಕು. ಮತ್ತು ಇವತ್ತು ಲೀಗಲ್ ಏಡ್‌ನಲ್ಲಿ ಬಡವರಿಗೆ ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ೮೭-೮೮ರಲ್ಲಿ ೮೬ ಕೇಸಸ್‌ಗಳ ಬಗ್ಗೆ ತಾವು ಇದರಲ್ಲಿ ತಿಳಿಸಿದ್ದೀರಿ. ಅದರಲ್ಲಿ ನಿಕಾಲ್ ಆಗಿದ್ದು ಎಸ್.ಸಿ.ದು ೮, ಎಸ್.ಟಿ.ದು ೪,

ಇದಕ್ಕೆ ಹೆಚ್ಚಿನ ಗಮನವನ್ನು ತಾವು ಕೊಟ್ಟಿಲ್ಲ. ಟೆನೆಂಟ್ಸ್‌ಗಳಿಗೆ ಸರ್ಕಾರದ ವತಿಯಿಂದ ರಕ್ಷಣೆ ಕೊಡಬೇಕು. ಇವರಿಗೆ ರಕ್ಷಣೆ ಕೊಡುವ ಬಗ್ಗೆ ಯಾವ ರೀತಿಯಲ್ಲಿಯೂ ಕೂಡಾ ಗಮನವನ್ನು ಕೊಟ್ಟಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅದಕ್ಕಾಗಿ ಕಾನೂನು ಮಂತ್ರಿಗಳು ಹೆಚ್ಚಿನ ನ್ಯಾಯಾಧೀಶರನ್ನು ನೇಮಿಸಬೇಕು. ಪಟ್ಟಣ ಪ್ರದೇಶದಲ್ಲಿರತಕ್ಕಂಥ ಭಾಗ್ಯಮಂದಿರ ಸ್ಕೀಮ್ ಎಂದು ಇದೆ, ಅವರುಗಳಿಗೆ ಸೈಟುಗಳನ್ನು ಕೊಡತಕ್ಕಂಥದ್ದರಲ್ಲಿ ..

ಶ್ರೀ ಎ. ಲಕ್ಷ್ಮೀಸಾಗರ್.— ಭಾಗ್ಯಮಂದಿರ ಹೌಸಿಂಗ್ ಡಿಪಾರ್ಟ್‌ಮೆಂಟ್ ಕೆಳಗೆ ಬರುತ್ತದೆ. ಈಗಾಗಲೇ ಅದು ವೋಟು ಆಗಿದೆ. ತಾವು ಕೂಡಾ ಹೌಸಿಂಗ್ ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಆಗಿದ್ದವರು. ನನ್ನ ಹತ್ತಿರ ಆ ಡಿಪಾರ್ಟ್‌ಮೆಂಟ್ ಇಲ್ಲ.

ಶ್ರೀ ಆರ್. ಧರ್ಮಸಿಂಗ್.— ಸಿಟಿಯಲ್ಲಿರುವ ಬಡವರ ಬಗ್ಗೆ ನಾನು ಹೇಳಿದ್ದೇನೆ. ಮುನಿಸಿಪಲ ಏರಿಯಾ ಕೂಡಾ ಬರುತ್ತದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಅರ್ಬನ್‌ನಲ್ಲಿ ಬಡವರ ಬಗ್ಗೆ, ಹೌಸಿಂಗ್ ಬಗ್ಗೆ ನಾನು ಮಾತನಾಡಬೇಕಾಗಿತ್ತು. ಹೌಸಿಂಗ್ ಬೋರ್ಡ್ ಮತ್ತು ಜನತಾ ಮನೆಗಳ ಬಗ್ಗೆ ನಾನು ಮಾತನಾಡಿಲ್ಲ. ಸಾಕಷ್ಟು ಜನ ಮಾತನಾಡುವವರಿದ್ದಾರೆ. ಕೆಲವು ಸಲಹೆ ಸೂಚನೆಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೇನೆ. ನೇರವಾಗಿ ಸರ್ಕಾರದ ಉತ್ತರವನ್ನು, ಸರ್ಕಾರದ ಕಡೆಯಿಂದ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಲಕ್ಷ್ಮೀಸಾಗರ್ ರವರು ಇಟ್ಟಿರತಕ್ಕಂಥ ಬೇಡಿಕೆಯನ್ನು ಅನುಮೋದಿಸಿ ನಾನು ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಗರ ಪ್ರದೇಶಗಳಲ್ಲಿ ಮತ್ತು ಪಟ್ಟಣದಲ್ಲಿ ಇವತ್ತಿನ ದಿವಸ ವಾಸಿಸತಕ್ಕಂಥ ಜನರಿಗೆ ೧೦೦ ಕ್ಕೆ ೨೮ ರಿಂದ ೩೦ ರಷ್ಟು ಈ ರಾಜ್ಯ ಜನಸಂಖ್ಯೆ ಒಟ್ಟಿನಲ್ಲಿ ಆಗಿದೆ. ಇದಕ್ಕೆ ಕಾರಣವೇನೆಂದರೆ ಹಳ್ಳಿಗಳಲ್ಲಿರತಕ್ಕಂಥ ಜನರಿಗೆ ನೌಕರಿಯ ಅವಕಾಶ ಸಿಗುತ್ತಿಲ್ಲ. ಅಲ್ಲಿ ಕುಶಲಕರ್ಮಿಗಳಿಗೆ ಕೆಲಸ ಸಿಗುತ್ತಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಇವತ್ತಿನ ದಿವಸ ಜನರು ನಗರ ಪ್ರದೇಶಗಳಿಗೆ ಬರುತ್ತಿದ್ದಾರೆ. ಅವರುಗಳು ವಲಸೆ ಹೋಗುತ್ತಿದ್ದಾರೆ. ಈ ಒಂದು ಕಾರಣದಿಂದ ನಗರ ಪ್ರದೇಶಗಳಲ್ಲಿ ಹೆಚ್ಚಿನ ಕೊಳಚೆ ಪ್ರದೇಶ ವಾಗುತ್ತಿದೆ. ಇದನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ಸಾಕಷ್ಟು ಕ್ರಮಗಳನ್ನು ಹಿಂದಿನ ಸರ್ಕಾರದವರು ಮತ್ತು ಈಗಿನ ಸರ್ಕಾರ ಕೂಡಾ ಕೆಲವೊಂದು ನೀತಿನಿಯಮಗಳನ್ನು ಹಾಕಿಕೊಂಡರೂ ಕೂಡಾ ಕೆಲವು ಹಿತಾ ಶಕ್ತಿಗಳು ಗೂಂಡಾ ಆ್ಯಕ್ಟ್ ಮತ್ತು ಇತರೆ ಕಾನೂನುಗಳನ್ನು ಮಾಡಿದರೂ ಕೂಡಾ ಇವತ್ತಿನ ಪರಿಸ್ಥಿತಿಯಲ್ಲಿ ಕೊಳಚೆ ಪ್ರದೇಶವನ್ನು ಹಿಡಿತದಲ್ಲಿ ಇಡತಕ್ಕಂಥ ಅಷ್ಟು ಕೆಲಸ ಆಗುತ್ತಿಲ್ಲ ಎನ್ನತಕ್ಕಂಥ ಒಂದು ದೃಷ್ಟಿ ಇದೆ ಎಂದು ನನಗೆ ಅನಿಸುತ್ತದೆ. ಮೊಟ್ಟಮೊದಲನೆಯದಾಗಿ ನಾನು ಕೊಳಚೆ ಪ್ರದೇಶದ ಮೇಲೆ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ರಾಜ್ಯದಲ್ಲಿ ಸುಮಾರು ೯೦೦ ಕೊಳಚೆ ಪ್ರದೇಶಗಳು ಇದೆ ಎನ್ನತಕ್ಕಂಥದ್ದನ್ನು ವರದಿಯಲ್ಲಿ ಬರೆದಿದ್ದಾರೆ. ಈ ಒಂದು ೯೦೦ ಕೊಳಚೆ ಪ್ರದೇಶಗಳಲ್ಲಿ ೪೦೦ ಕೊಳಚೆ ಪ್ರದೇಶಗಳು ಬೆಂಗಳೂರು ನಗರ ಒಂದರಲ್ಲಿಯೇ ಇದೆ. ಕೊಳಚೆ ಪ್ರದೇಶಗಳಿಗೆ ತಿಳಿದಮಟ್ಟಿಗೆ ಈ ಒಂದು ವರದಿಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಇದ್ದಾರೆ ಎಂದು ಆಧಾರವಾಗಿ ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು, ವರದಿಯಲ್ಲಿ ಅದೂ ಕೊಟ್ಟಿಲ್ಲ. ಕೇವಲ ಒಂದು ಮಾತಿನಲ್ಲಿ ಹೇಳಿದ್ದಾರೆ. ೪೦೦ ಕೊಳಚೆ ಪ್ರದೇಶಗಳು ಬೆಂಗಳೂರು ನಗರ ಒಂದರಲ್ಲಿಯೇ ಇವೆ ಹೀಗೆ ರಾಜ್ಯದ ಇತರ ಪಟ್ಟಣ ಮತ್ತು ನಗರಗಳಲ್ಲಿ ೫೦೦ ಇದೆ ಎನ್ನತಕ್ಕಂಥದ್ದನ್ನು ನಾವು ಭಾವಿಸಬಹುದು.

೧೨–೩೦ ಪಿ.ಎಂ.

ಆ ಒಂದು ನಗರದಲ್ಲಿರತಕ್ಕಂಥ ಕೊಳಚೆ ಪ್ರದೇಶಗಳನ್ನು ಮತ್ತು ಒಂದು ಒಳ್ಳೆಯ ಪರಿಸರದಲ್ಲಿ ಇರತಕ್ಕ ಕೊಳಚೆ ಪ್ರದೇಶಗಳನ್ನು ಸುಧಾರಣೆಯನ್ನು ಅಂದರೆ ಪರಿಸರ ಸುಧಾರಣೆಯನ್ನು ಮಾಡತಕ್ಕ ಕೆಲಸವನ್ನು ಹಿಂದಿನ ಸರ್ಕಾರ ಹಾಕಿಕೊಂಡಿತ್ತು. ಮುಂದೆ ಬಂದಾಗ ನಮ್ಮ ಸರ್ಕಾರ ಕೂಡ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು– ಇವೊತ್ತಿನ ದಿವಸ ಕೆಲಸ ಮಾಡುತ್ತಿದೆ. ಈ ಒಂದು ಕೊಳಚೆ ಪ್ರದೇಶದ ಬಗ್ಗೆ ಮಾತನಾಡುವುದಾದರೆ ಹೋದ ವರ್ಷ ಅಂದರೆ ೧೯೮೩-೮೪ರಲ್ಲಿ ಒಂದು ವರದಿಯನ್ನು ಇಟ್ಟಾಗ ಆ ವರದಿಯಲ್ಲಿ ನಮ್ಮ ರಾಜ್ಯದ ೫೨೭ ಕೊಳಚೆ ಪ್ರದೇಶಗಳಿಗೆ, ೭೦ ೧೨,೫೨೬ ಜನಸಂಖ್ಯೆ ಉಳ್ಳ ಪ್ರದೇಶಗಳಿಗೆ ವಸತಿ ಒದಗಿಸಿದೆ ಎಂದು ಹೇಳಿದ್ದಾರೆ. ಈ ಒಂದು ಕಾರಣದಿಂದ ಇಲ್ಲಿಯವರೆಗೆ

ಕಟ್ಟಿರತಕ್ಕ ಮನೆಗಳು ೧೯೮೫-೮೬ರ ಅಂತ್ಯದಲ್ಲಿ ೭ ಸಾವಿರ ವಾಸದ ಮನೆಗಳಿಗೆ ಕೊಡಲಾಗಿದೆ ಎಂಬುದನ್ನೂ, ಹೇಳಿದ್ದಾರೆ. ಅದೇರೀತಿ ೧೯೮೬-೮೭ರ ವರದಿಯಲ್ಲಿ ಈ ಒಂದು ಕೆಲಸ ಮುಂದುವರಿದು ೬೩೮ ಕೊಳಚೆ ಪ್ರದೇಶಗಳಲ್ಲಿ ೬ ಲಕ್ಷ ೭೧ ಸಾವಿರ ಜನರಿಗೆ ಒಂದು ಸಹಾಯ ಆಗತಕ್ಕ ಕೆಲಸ ಮಾಡಿದೆ. ಈ ರೀತಿಯಾಗಿ ಈ ಒಂದು ವರದಿಯಲ್ಲಿ ಬರೆಯಲಾಗಿದೆ. ಇವೊತ್ತಿನ ದಿವಸ ನಾನು ಹೇಳತಕ್ಕಂಥದ್ದು ಇಷ್ಟೇ. ಈ ಒಂದು ಕೊಳಚೆ ಪ್ರದೇಶಗಳ ಒತ್ತಡ ಪಟ್ಟಣ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ, ಇರತಕ್ಕದ್ದನ್ನು ತಡೆ ಹಿಡಿಯತಕ್ಕ ಕೆಲಸ ಎಷ್ಟೋ ಅಧಿಕಾರಿಗಳು ಇದ್ದರೂ ಸಹ ಅಂದರೆ ಮಹಾ ನಗರ ಸಭೆ ಅಧಿಕಾರಿಗಳು ಇರತಕ್ಕದ್ದು ಅಥವಾ ನಗರದ ಯೋಜನಾ ಪ್ರಾಧಿಕಾರದಲ್ಲಿ ಇರತಕ್ಕ ಮತ್ತು ನಗರಾಭಿವೃದ್ಧಿ ಮಂಡಲಿಯವರು ಇರಬಹುದು, ಈ ಮೂವರೂ ಸೇರಿದರೂ ಒಬ್ಬರೂ ಕೆಲಸ ಮಾತ್ರ ಮಾಡುತ್ತಿಲ್ಲ. ಈ ಅಧಿಕಾರಿಗಳು ಒಂದು ರೀತಿಯ ವಿಚಾರ ಹೇಳಿ ಜನರಿಗೆ ಸಿಕ್ಕತಕ್ಕಂಥ ಸೌಲಭ್ಯಗಳನ್ನು ಸರಿಯಾದ ಸಮಯಕ್ಕೆ ಸಿಕ್ಕದ ಕಾರಣ ಕೊಳಚೆ ಪ್ರದೇಶಗಳು ನಿರ್ಮಾಣ ಆಗಿದೆ. ಇದೂ ಅಲ್ಲದೆ ಇಡೀ ರಾಜ್ಯದಲ್ಲಿ ಬೆಂಗಳೂರನ್ನೂ ಹಿಡಿದುಕೊಂಡು ಹೇಳಬೇಕಾಗಿದೆ ಅದು ಎಲ್ಲಾ ಕಡೆ ಅನ್ ಅಥೊರೈಸ್ಡ್ ಬಿಲ್ಡಿಂಗ್‌ಗಳ ನಿರ್ಮಾಣ ಆಗಿರುವುದು. ಇದರ ಬಗ್ಗೆ ಇನ್ನೂ ಯಾವ ಹಿಡಿತವೂ ಇಲ್ಲ. ಇದರ ಬಗ್ಗೆ ನಿಯಂತ್ರಣ ಮಾಡಲು ಕೇಳಿಕೊಳ್ಳುತ್ತಿದ್ದೇನೆ. ನಾವುಗಳು ಇದೇ ಸಭೆಯಲ್ಲಿ ಅಂದರೆ ಈ ಸದನದಲ್ಲಿ ಮತ್ತು ಇದರ ಬಗ್ಗೆ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರೂ ಸಹ ಹೇಳುತ್ತಿದ್ದರು. ಒಂದು ಕೊಳಚೆ ಪ್ರದೇಶದಲ್ಲಿರತಕ್ಕ ಅನಧಿಕೃತ ಕಟ್ಟಡಗಳ ನಿರ್ಮಾಣ. ಇಂತಹ ಕಡೆ ಮನೆಗಳನ್ನು ಕಟ್ಟಿದಾಗ ಅದನ್ನು ಒಡೆದು ತೆಗೆದು ಹಾಕಿರುವುದು ಈಗಾಗಲೇ ತಮ್ಮ ಗಮನಕ್ಕೂ ಬಂದಿದೆ. ಇಂತಹ ಕಾರ್ಯಗಳು ಯಾತಕ್ಕೆ ಆಗುತ್ತಿವೆ. ಅಧಿಕಾರಿಗಳು ತಮ್ಮದೇ ಆದ ಒಂದು ರೀತಿಯಿಂದ ಕೆಲಸ ಮಾಡುತ್ತಿದ್ದಾರೆ. ಉದಾಹರಣೆಗೆ ನಾನು ಹೇಳಬೇಕಾದರೆ, ಟೌನ್ ಪ್ಲಾನಿಂಗ್ ಅಂದರೆ ನಗರದ ಯೋಜನಾ ಪ್ರಾಧಿಕಾರದವರು ಒಂದು ರೀತಿಯಿಂದ ಹೇಳಿದರೆ, ನಗರಾಭಿವೃದ್ಧಿ ಮಂಡಲಿಯವರು ಒಂದು ರೀತಿಯಿಂದ ಹೇಳುತ್ತಾರೆ. ಹಾಗೆಯೇ ಮಹಾ ನಗರ ಸಭೆಯ ಆಯುಕ್ತರರು ಒಂದು ರೀತಿಯಿಂದ ಹೇಳುತ್ತಿದ್ದಾರೆ. ಈ ಮೂವರನ್ನು ಒಟ್ಟು ಗೂಡಿಸಿ ಈ ಕೆಲಸ ಮಾಡಿದರೆ, ಈ ಕೆಲಸ ಸುಗಮವಾಗಬಹುದು ಈ ಡೆವಲಪ್‌ಮೆಂಟ್ ಛಾರ್ಜ್ ಯಾರು ಕಲೆಕ್ಟ್ ಮಾಡಬೇಕು, ನಗರಾಭಿವೃದ್ಧಿ ಮಂಡಲಿ ಕಲೆಕ್ಟ್ ಮಾಡಬೇಕೋ ಅಥವಾ ಕಾರ್ಪೊರೇಷನ್‌ನವರು ಕಲೆಕ್ಟ್ ಮಾಡಬೇಕೋ ಎಂಬ ಈ ವಿಷಯದಲ್ಲಿ ಇದುವರೆವಿಗೂ ಜಗಳ ಇದೆ. ಆದರೆ ಸರ್ಕಾರದ ಒಂದು ಆಜ್ಞೆ ಕೂಡ ಇದರ ಬಗ್ಗೆ ಇದೆ. ಇದರಲ್ಲಿ ಕ್ಲಿಯರ್ ಆಗಿ ನೋಟಿಫಿಕೇಷನ್ ಇದೆ. ಯಾವುದೇ ಒಂದು ಡೆವಲಪ್‌ಮೆಂಟ್ ಲೇಔಟ್‌ಗಳು ಹೊಸದಾಗಿ ಆಗುತ್ತಿದ್ದರೆ, ಅಲ್ಲಿ ನಗರಾಭಿವೃದ್ಧಿ ಮಂಡಲಿಯವರೇ ಅಭಿವೃದ್ಧಿ ಛಾರ್ಜನ್ನು ವಸೂಲು ಮಾಡತಕ್ಕದ್ದೆಂದು ಈ ವಿಷಯದಲ್ಲಿ ಒಂದು ಸ್ಪಷ್ಟವಾದ ಸುತ್ತೋಲೆ ಇದೆ. ಆದಾಗ್ಯೂ ಇವತ್ತಿನ ದಿವಸ ಮಹಾನಗರ ಸಭೆಯಲ್ಲಿ ನಗರಾಭಿವೃದ್ಧಿ ಮಂಡಲಿಯಲ್ಲಿ ಜಗಳ ಇದೆ. ಇಂಥದನ್ನು ಹೋಗಲಾಡಿಸಲು ಸುವ್ಯವಸ್ಥಿತವಾದ ಕಾನೂನು ಮಾಡಬೇಕು. ಇದರಿಂದ ಜನರಿಗೆ ಬಹಳ ಅನಾನುಕೂಲವಾಗುತ್ತಿದೆ. ಇಂತಹ ಪರಿಸ್ಥಿತಿಯನ್ನು ನೋಡಿ ಜನರು ಅಸಹ್ಯಪಡುತ್ತಿದ್ದಾರೆ ಅದೇ ಒಂದು ಕಾರಣದಿಂದ ನಗರಪ್ರದೇಶಗಳಲ್ಲಿ ಒಂದು ದಳಾಳ್‌ಗಳು ಹುಟ್ಟಿದ್ದಾರೆ ಹುಟ್ಟುತ್ತಾರೆ. ಯಾರಾದರೂ ಒಬ್ಬರ ಭೂಮಿಯನ್ನು ಖರೀದಿ ಮಾಡಿ ಎಸ್. ಎ. ಮತ್ತು ಡೆವಲಪ್‌ಮೆಂಟ್ ಚಾರ್ಜನ್ನು ಕಟ್ಟದೆ ನಗರ ಪ್ರದೇಶಗಳಲ್ಲಿ ಅನಧಿಕೃತವಾದ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ನಾವು ದಿನನಿತ್ಯ ಮಂತ್ರಿಗಳಿಗೆ, ನಗರಯೋಜನೆ ಪ್ರಾಧಿಕಾರದವರಿಗೆ, ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಯವರಿಗೆ ಪತ್ರ ಬರೆದರೂ ಕ್ರಮ ತೆಗೆದುಕೊಂಡಿಲ್ಲ. ಯಾವ ಕಾರಣವನ್ನು ಕೊಟ್ಟಿಲ್ಲ. ಇದನ್ನು ಯಾರು ನಿಯಂತ್ರಣ ಮಾಡಬೇಕೆಂಬುದನ್ನು ಹೇಳುತ್ತಿಲ್ಲ. ಇವತ್ತು ನಗರ ಪ್ರದೇಶಗಳು ಈ ಒಂದು ಸ್ಥಿತಿಯಲ್ಲಿವೆ. ಅದಕ್ಕೋಸ್ಕರವಾಗಿ ನಾನು ಈ ಕೊಳಗೇರಿ ಪರಿಸರ ಸುಧಾರಣೆ ಮತ್ತು ನಿರ್ಮೂಲನ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತುಗಳನ್ನಾಡಲು ಬಯಸುತ್ತೇನೆ. ಮುಖ್ಯವಾದ ವಿಷಯ ಎಂದರೆ ಹೊಸದಾಗಿ ಕೊಳಚೆ ನಿರ್ಮೂಲನಾ ಮಂಡಳಿಗೆ ಅಧ್ಯಕ್ಷರು ನೇಮಕವಾದ ಮೇಲೆ ಮತ್ತು ಅವರು ಬಂದನಂತರ ಸ್ವಲ್ಪ ಮಟ್ಟಿಗೆ ಕೆಲವು ಕೆಲಸವಾಗುತ್ತಿವೆ. ಉದಾಹರಣೆಗೆ ಗುಲ್ಬರ್ಗಾದಲ್ಲಿ ೪೦-೫೦ ವರ್ಷಗಳಿಂದ ಕೊಳಚೆ ಪ್ರದೇಶವಿದ್ದು, ಅದನ್ನು ನಿರ್ಮೂಲನಾ ಮಾಡಲು ಇದುವರೆಗೂ ಕೂಡ ಏನೂ ಆಗಿರಲಿಲ್ಲ. ಹೋದ ವರ್ಷ ಮೂರು ನೂರು ಮನೆಗಳನ್ನು ಕೊಡಬೇಕೆಂದು ತೀರ್ಮಾನಿಸಿ ಇವತ್ತು ಆ ಕೆಲಸ ಪ್ರಾರಂಭವಾಗಿದೆ. ಈ ಕೆಲಸ ಅಂದರೆ ಪರಿಸರ ಸುಧಾರಣೆ ಮತ್ತು ಕೊಳಚೆ ಪ್ರದೇಶ ನಿರ್ಮೂಲನೆ ಕೆಲಸ ಇಡೀ ರಾಜ್ಯದಲ್ಲಿ ಎಲ್ಲಾ ಪ್ರದೇಶಗಳಲ್ಲಿ ಪ್ರಾರಂಭವಾಗಬೇಕು. ರಾಯಚೂರಿನ

ಲ್ಲಾಗಲೀ, ಬಳ್ಳಾರಿಯಲ್ಲಾಗಲಿ ಮತ್ತು ರಾಜ್ಯದ ಮತ್ತಿತರ ಪ್ರದೇಶದಲ್ಲಿ ಕೂಡ ಆಗಬೇಕು. ಬರೀ ಬೆಂಗಳೂರಿಗೆ ಮಾತ್ರ ಸೀಮಿತವಾಗಿರಬಾರದು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ. ಇವತ್ತು ಈ ವಿಷಯದಲ್ಲಿ ಚರ್ಚೆ ವಿಚಾರ ಮಾಡಿದಾಗ ಇನ್ನು ಕೆಲವೊಂದು ಕೊಳಚೆ ಪ್ರದೇಶಗಳು ಹೆಚ್ಚು ಆಗುತ್ತಿವೆ. ಈ ಒಂದು ಕೊಳಚೆ ಪ್ರದೇಶಗಳನ್ನು ಯಾರು ಗುರುತಿಸಬೇಕು. ಹೇಗೆ ಗುರುತಿಸಬೇಕು ಎಂಬುದು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ವಹಿಸಬೇಕು ಉದಾಹರಣೆ ಗಾಗಿ ಗುಲ್ಬರ್ಗಾದಲ್ಲಿ ಒಂದು ಕೊಳಚೆ ಪ್ರದೇಶ ಇದೆ. ಆ ಕೊಳಚೆ ಪ್ರದೇಶವನ್ನು ಪರಿಸರ ಸುಧಾರಣೆಗಾಗಿ ತೆಗೆದು, ವರ್ಷಗಳ ಪೂರ್ವದಲ್ಲಿತ್ತೆಂದು ತಿಳಿದುಕೊಂಡು ಗೆಜೆಟ್ ನೋಟಿಫಿಕೇಷನ್ ಆಗಿತ್ತು. ಅಧಿಕಾರಿಗಳು ಯಾವರೀತಿ ಮಾಡುತ್ತಾರೆಂದರೆ ಸ್ವಲ್ಪ ಹಣ ಸಿಕ್ಕಿತ್ತೆಂದರೆ ಮಾಲೀಕನಿಗೆ ಯಾವುದೇ ಗುರುತು ಸಿಗದಂತೆ ನೋಟಿಫಿಕೇಷನ್ ಮಾಡುತ್ತಾರೆ. ಆಗ ಆ ಮಾಲೀಕರು ರಿಟ್ ಮೊಕದ್ದಮೆ ಹೂಡುತ್ತಾರೆ. ೧೦–೧೫ ವರ್ಷಗಳ ಕಾಲ ಈ ಸ್ಟೇ ಹೈಕೋರ್ಟ್‌ನಲ್ಲಿ ಕೊಳೆಯುತ್ತಾ ಬಿದ್ದಿರುತ್ತದೆ. ಅಧಿಕಾರಿಗಳಿಂದಲೂ ಅದನ್ನು ವೆಕೆಟ್ ಮಾಡುವ ಪ್ರಯತ್ನ ಮಾಡುವುದಿಲ್ಲ. ಯಾವ ರೀತಿ ಬಹಿರಂಗ ಮಾಡುವುದಿಲ್ಲ. ಆದರೆ ಮೊನ್ನೆ ಹೈಕೋರ್ಟ್‌ನಲ್ಲಿ ಈ ಅಮೂಲ್ಯವಾದ ಪ್ರದೇಶ ವನ್ನು ಕೊಳಚೆ ಪ್ರದೇಶವೆಂದು ಹೊಸ ನೋಟಿಫಿಕೇಶನ್ ಮಾಡಲು ತಿಳಿಸಿದೆ ಎಂದು ತಿಳಿದು ಬಂದಿದೆ. ಒಂದು ತೀರ್ಪು ಕೊಟ್ಟಿತು. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಈ ವಿಷಯ ವನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಕಾರ್ಯದರ್ಶಿಯವರ ಗಮನಕ್ಕೆ ತಂದಾಗ ಅವರು ವಿಭಾಗಾಧಿಕಾರಿಯವರಿಗೆ ಈ ಬಗ್ಗೆ ಬರೆದರು. ಆಗ ವಿಭಾಗಾಧಿಕಾರಿಯವರು ಇದು ಕೊಳಚೆ ಪ್ರದೇಶ ಅಲ್ಲವೇ ಅಲ್ಲ ಎಂದು ಹೇಳಿಬಿಟ್ಟರು. ಸುಮಾರು ವರ್ಷಗಳಿಂದ ಕೊಳಚೆ ಪ್ರದೇಶಗಳಲ್ಲಿ ವಾಸಿಸತಕ್ಕ ಜನರ ಕಷ್ಟ ಐವಾನ್‌ಷಾಯಿಯಂತಹ ಕಟ್ಟಡದಲ್ಲಿ ವಾಸಿಸುವ ವಿಭಾಗಾಧಿಕಾರಿಗೆ ಹೇಗೆ ಗೊತ್ತು. ವಿಭಾಗಾಧಿಕಾರಿಯವರು ಈ ರೀತಿಯಾಗಿ ಬರೆದಿದ್ದಾರೆಂದು ನಾನು ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷರಿಗೆ ತಿಳಿಸಿದೆ. ಮುಖ್ಯ ಮಂತ್ರಿಯವರ ಸಚಿವಾಲಯದಿಂದ ಕೂಡ ಈ ಬಗ್ಗೆ ನಿಜವಾದ ಪರಿಸ್ಥಿತಿ ಏನು ಇದೆ ಎಂದು ಸ್ವತಃ ಪರಿಶೀಲಿಸಲು ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರಿಗೆ ಪತ್ರ ಬರೆದರು. ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರು ಗುಲ್ಬರ್ಗಾಕ್ಕೆ ಬಂದು ನಿಜವಾದ ಪರಿಸ್ಥಿತಿ ಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದರು. ಆದರೂ ಸಹ ಇದರ ಬಗ್ಗೆ ಯಾರು ನಿರ್ಣಯ ತೆಗೆದುಕೊಳ್ಳಬೇಕು. ವಿಭಾಗಾಧಿಕಾರಿಯವರು ಬರೆದಿದ್ದು ಸರಿಯೇ. ಪ್ರಜಾ ಪ್ರತಿನಿಧಿ ಗಳಾಗಿರತಕ್ಕಂಥ ನಾವು ಹೇಳತಕ್ಕಂಥ ನಿಜವಲ್ಲವೇ ? ಅಧಿಕಾರಿಗಳು ಏನೂ ಬರೆಯುತ್ತಾರೆ ಅದು ಸರಿ ಎನ್ನತಕ್ಕಂಥ ವಾದ ಇವತ್ತಿನ ದಿವಸ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ನಿರ್ಧಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ ಈ ನಗರಾಭಿವೃದ್ಧಿ ಇಲಾಖೆ ಏನು ಇದೆ ಇದರಲ್ಲಿ ಅಭಿವೃದ್ಧಿ ಕೆಲಸ ಅಷ್ಟು ಸುರಳಿತವಾಗಿ ನಡೆಯುತ್ತಿಲ್ಲ. ಬರೀ ಕೊಳಚೆ ಪ್ರದೇಶವಾಗುತ್ತಿದೆ. ಇದಕ್ಕೆ ಬಹಳಷ್ಟು ಕಾರಣಗಳು ಇವೆ. ಆ ಕಾರಣಗಳನ್ನು ಮುಂದೆ ಹೇಳುತ್ತೇನೆ. ಅಧಿಕಾರಿಗಳನ್ನು ಮತ್ತು ಕಚೇರಿಗಳ ಕೆಲಸ ಸುಧಾರಣೆ ಯನ್ನು ಜನರಿಗೆ ಸಹಾಯ ಆಗುವ ಹಾಗೆ ನಿಯಂತ್ರಿಸಲು ಸರ್ಕಾರ ಅಗತ್ಯವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಈ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ ಅಧಿಕಾರಿಗಳನ್ನು ಅಂಕುಶ ಹಾಕಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರ ಮಾತನ್ನು ಕೇಳುತ್ತಾ ನಾವು ಕೆಲಸ ಮಾಡಲು ಹೋದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲ, ಆದ್ದರಿಂದ ಅಧಿಕಾರಿಗಳ ಬಗ್ಗೆ ಜನ ತಮ್ಮ ಕೆಲಸಗಳಿಗೆ ಬಂದರೆ ಅವರ ಕೆಲಸದ ಬಗ್ಗೆ ವಿಚಾರಿಸಿ ಶಾಂತ ರೀತಿಯಿಂದ ಕೆಲಸ ಮಾಡಲು ಒಂದು ಕ್ರಮವನ್ನು ತೆಗೆದುಕೊಂಡು, ಜನಗಳಿಗೆ ಸವಲತ್ತುಗಳನ್ನು ಕೊಡತಕ್ಕ ರೀತಿಯಲ್ಲಿ ನೀವು ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಗರ ಸಭೆಗಳ ಬಗ್ಗೆ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ಈಗ ನಗರ ಸಭೆಗಳ ಪರಿಸ್ಥಿತಿ ಏನಾಗಿದೆ ? ಎಷ್ಟೋ ಮುನಿಸಿಪಾಲಿಟಿಗಳಲ್ಲಿ ನೌಕರರಿಗೆ ಸರಿಯಾಗಿ ಸಂಬಳ ವನ್ನು ಕೊಡುತ್ತಿಲ್ಲ, ಹಾಗೆಯೇ ಗ್ರಾಂಟನ್ನು ಮತ್ತು ಪ್ರಾಪರ್ಟಿ ಟ್ಯಾಕ್ಸನ್ನು ಕಾಲಕ್ಕೆ ಸರಿಯಾಗಿ ಕೊಡುತ್ತಿಲ್ಲ. ಇದರಿಂದಾಗಿ ಇಡೀ ರಾಜ್ಯದಲ್ಲಿ ಪುರಸಭೆ ಮತ್ತು ನಗರಸಭೆ ಎಲ್ಲಾ ಸಿಬ್ಬಂದಿವರ್ಗದವರು ಮುಷ್ಕರವನ್ನು ಮಾಡುತ್ತಿದ್ದಾರೆ. ಇದಕ್ಕೆ ಮೂಲಭೂತವಾದ ಕಾರಣ ಏನು ಎಂದರೆ, ಹಿಂದೆ ದೇವರಾಜ ಅರಸ್‌ರವರ ಕಾಲದಲ್ಲೇ ಶ್ರೀಮಾನ್ ಖರ್ಗೆಯವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು

ಮಾಡಿ ಆಕ್ಟ್ರಾಯಿ ತೆರಿಗೆ ರದ್ದಾಗಲಿ ಅಂತ ಒಂದು ರಿಪೋರ್ಟ್‌ನ್ನು ಕೊಟ್ಟರು. ಆ ವರದಿಯಂತೆ ರಾಜ್ಯದಲ್ಲಿ ಆಕ್ಟ್ರಾಯಿ ತೆರಿಗೆಯನ್ನು ರದ್ದು ಮಾಡಿದರು. ಆದರೆ ಈ ಆಕ್ಟ್ರಾಯಿ ತೆರಿಗೆ ರದ್ದು ಆದ ನಂತರ ಎಂಟರಿ ಟ್ಯಾಕ್ಸ್ ಮತ್ತು ಮೋಟಾರ್ ವೆಹಿಕಲ್ ಟ್ಯಾಕ್ಸ್ ಪ್ರಾರಂಭವಾಯಿತು. ಇವತ್ತು ನಮ್ಮ ರಾಜ್ಯದಲ್ಲಿ ಈ ಎಂಟರಿ ಟ್ಯಾಕ್ಸ್ ಮತ್ತು ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಿಂದ ಸಂಗ್ರಹವಾಗುತ್ತಿರುವ ಹಣವೆಷ್ಟು ? ಈ ಹಣವನ್ನು ಮುನಿಸಿಪಾಲಿಟಿ ಮತ್ತು ಮಹಾನಗರಪಾಲಿಕೆಗಳಿಗೆ ಕೊಡಬೇಕು, ಇಲ್ಲದಿದ್ದಲ್ಲಿ ನೀವು ಪುನಃ ಆಕ್ಟ್ರಾಯಿ ತೆರಿಗೆಯನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ಇವತ್ತು ನೀವು ಹೊಸದಾಗಿ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ನ್ನು ಪ್ರಾರಂಭ ಮಾಡಿ ಅವರಿಗೆ ಸಾಕಷ್ಟು ಹಣ ಕ್ರೋಢೀಕರಿಸುವ ಸೌಲಭ್ಯಗಳನ್ನು ಕೊಟ್ಟಿದ್ದೀರಿ. ಅದೇ ರೀತಿ ನಗರ ಪ್ರದೇಶಗಳಲ್ಲಿರತಕ್ಕ ಒಂದು ಲೋಕಲ್ ಬಾಡಿ ಏನು ಇವೆ ಅವರಿಗೆ ಏಕೆ ನೀವು ಹಣ ಕ್ರೋಢೀಕರಿಸಿಕೊಳ್ಳಲು ಕೊಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಏಕೆಂದರೆ ಇವತ್ತಿನದಿವಸ ಬೆಂಗಳೂರಿನಲ್ಲಿರತಕ್ಕ ಒಟ್ಟು ಬೇಡಿಕೆ ಮತ್ತು ಖರ್ಚನ್ನು ನೋಡಿದಾಗ ಸುಮಾರು ೬೧ ಕೋಟಿ ರೂಪಾಯಿ ಇದೆ. ಅದರಲ್ಲಿ ಖರ್ಚಾಗಿರುವುದು ೨೪ ಕೋಟಿ ರೂಪಾಯಿಗಳು ಮಾತ್ರ, ಬಾಕಿ ಉಳಿದಿರುವುದು ೩೭ ಕೋಟಿ ರೂಪಾಯಿಗಳು. ಆದರೆ ಆಕ್ಟ್ರಾಯಿ ತೆರಿಗೆಯನ್ನು ರದ್ದು ಮಾಡಿದಮೇಲೆ ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಕೊಟ್ಟಿರುವುದು ೧೯ ಕೋಟಿ ರೂಪಾಯಿಗಳು ಮಾತ್ರ. ಇದರಲ್ಲಿ ಕೇವಲ ೯ ಕೋಟಿ ರೂಪಾಯಿಗಳು ಮಾತ್ರ ಸರ್ಕಾರ ಕೊಟ್ಟರೆ ಇನ್ನೂ ೧೦ ಕೋಟಿ ರೂಪಾಯಿಗಳು ಬಾಕಿ ಉಳಿದಿದೆ. ಬೆಳಗಾವಿಯಲ್ಲೂ ಇದೇ ಪರಿಸ್ಥಿತಿ ಇದೆ. ಆದರೆ ಅದರಲ್ಲೂ ನನ್ನ ಕ್ಷೇತ್ರವಾದ ಗುಲ್ಬರ್ಗಾ ನಗರಕ್ಕೆ ಕೇವಲ ೫೦ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅಲ್ಲಿ ಎಲ್ಲಾ ಕಡೆಗಿಂತಲೂ ಆಕ್ಟ್ರಾಯಿ ತೆರಿಗೆಯ ಗ್ರ್ಯಾಂಟು ಕಡಿಮೆ ಇದೆ. ಇಂತಹ ಕಾರ್ಪೊರೇಷನ್‌ಗಳಿಗೆ ಹೆಚ್ಚಿಗೆ ಗ್ರ್ಯಾಂಟನ್ನು ಕೊಡಬೇಕು ಮತ್ತು ಎರಡು ತಿಂಗಳಿಗೆ ಒಂದು ಕಂತು ಆದರೂ ಕೊಟ್ಟರೆ ಕಾರ್ಪೊರೇಷನ್‌ಗಳು ಕೆಲಸ ಮಾಡಲು ಸಾಧ್ಯವಾಗುತ್ತದೆ. ಬೆಂಗಳೂರು ನಗರದ ಒಟ್ಟು ಆದಾಯ ೬೧ ಕೋಟಿ ರೂಪಾಯಿ ಆಕ್ಟ್ರಾಯಿ ಗ್ರ್ಯಾಂಟ್ ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಈಚಲಕರಂಜಿ ಅಂತ ಒಂದು ಸಣ್ಣ ಗ್ರಾಮ ಇದೆ ಅದರ ಒಟ್ಟು ಜನಸಂಖ್ಯೆ ಸುಮಾರು ೩ ಲಕ್ಷ. ಆ ನಗರದ ಒಟ್ಟು ಆದಾಯ ೧೭ ಕೋಟಿ ರೂಪಾಯಿಗಳು. ಮೂರು ಲಕ್ಷ ಜನಸಂಖ್ಯೆ ಇರುವ ನಗರದ ಒಟ್ಟು ಆದಾಯ ೧೭ ಕೋಟಿ ರೂಪಾಯಿಗಳಿದ್ದರೆ ಇನ್ನು ೩೦ ಲಕ್ಷ ಜನಸಂಖ್ಯೆ ಇರುವ ಬೆಂಗಳೂರಿನ ಒಟ್ಟು ಆದಾಯ ೧೬೦ ಅಥವಾ ೨೦೦ ಕೋಟಿ ರೂಪಾಯಿಗಳಾಗ ಬಹುದೆಂದು ನನ್ನ ಅಂದಾಜು. ಈ ತರಹ ಆದಾಯ ಇದ್ದರೆ ಸಾಕಷ್ಟು ಹಣವನ್ನು ಖರ್ಚು ಮಾಡಿ ಜನರಿಗೆ ಸೌಲಭ್ಯಗಳನ್ನು ಕೊಡಬಹುದು, ಹಾಗೂ ನೀರು ಸರಬರಾಜು ಮಾಡುವುದಕ್ಕೋಸ್ಕರ ವಿಶ್ವ ಬ್ಯಾಂಕಿನಿಂದ ಸಾಲವನ್ನು ಕೇಳತಕ್ಕಂತಹ ಪರಿಸ್ಥಿತಿ ಬರುವುದಿಲ್ಲ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ, ಹೆಚ್ಚು ಗ್ರ್ಯಾಂಟ್‌ನ್ನು ಕೊಡಬೇಕು. ಇಲ್ಲದಿದ್ದರೆ ಮತ್ತೆ ವಿಚಾರ ಮಾಡಿ ಆಕ್ಟ್ರಾಯಿ ತೆರಿಗೆಯನ್ನು ಪುನಃ ಪ್ರಾರಂಭ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಆದ್ದರಿಂದ ನಗರಸಭೆಗಳ ಪರಿಸ್ಥಿತಿಯ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇವೊತ್ತಿನ ದಿವಸ ನಗರ ಸಭೆಗಳಲ್ಲಿ ಕಮೀಷನರ್‌ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದೀರಿ. ಮತ್ತೆ ಇದರಲ್ಲಿ ಬರತಕ್ಕ ಆಕ್ಟ್‌ನಲ್ಲೂ ಕೂಡ ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೀರಿ. ಮಹಾನಗರ ಪಾಲಿಕೆ ಮತ್ತು ನಗರ ಸಭೆಗಳಲ್ಲಿ ಅವರ ಅವ್ಯವಹಾರ ಹೆಚ್ಚುತ್ತಿದೆ. ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ನಲ್ಲಿ ಮತ್ತು ಟೌನ್ ಪ್ಲಾನಿಂಗ್ ಅಥಾರಿಟಿಯವರು ಸಾಕಷ್ಟು ದುಡ್ಡನ್ನು ತಿನ್ನುತ್ತಿದ್ದಾರೆಂಬ ಬಗ್ಗೆ ಅನೇಕ ದೂರುಗಳು ಇವೆ. ನಾನು ಇದರ ಬಗ್ಗೆ ಸಾಕಷ್ಟು ಪತ್ರಗಳನ್ನು ಬರೆದಿದ್ದೇನೆ. ಈ ಟೌನ್ ಪ್ಲಾನಿಂಗ್ ಈಗ ತುಂಬಾ ಇನ್‌ಎಫಿಷಿಯಂಟಾಗಿ ಕೆಲಸ ಮಾಡುತ್ತಿದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ೧೯೮೧ರಲ್ಲಿ ಒಂದು ನ್ಯಾಷನಲ್ ಸ್ಕೂಲ್ ಬಿಲ್ಡಿಂಗ್‌ನ್ನು ಕಟ್ಟುವುದಕ್ಕೆ ಪರ್ಮಿಷನ್ ಕೊಟ್ಟರು. ಅದು ತಪ್ಪು, ಅಲ್ಲಿ ಕಟ್ಟಬಾರದೆಂದು ನಾನು ಪತ್ರ ಬರೆದೆ. ಆದರೆ ಆಗಲೇ ಕೆಲಸ ಪ್ರಾರಂಭವಾಗಿತ್ತು. ನಾನು ಟೌನ್ ಪ್ಲಾನಿಂಗ್ ಅಥಾರಿಟಿಯ ಅಸಿಸ್ಟೆಂಟ್ ಸೆಕ್ರೆಟರಿಯ ಬಳಿ ಹೋಗಿ ಕೇಳಿದೆ. ಆದರೆ ಅವರು ನನ್ನ ಬಳಿ ಅಧಿಕಾರ ಇಲ್ಲ, ಸ್ಕ್ವಾಡ್ ಇಲ್ಲ ಮತ್ತು ನನ್ನ ಬಳಿ ಜನರು ಇಲ್ಲದಿರುವಾಗ ನಾನು ಏನು ಮಾಡಲು ಸಾಧ್ಯ ಎಂದರು. ಒಬ್ಬ ಮನುಷ್ಯ ಅನಧಿಕೃತವಾಗಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವಾಗ, ಅದನ್ನು ನಿಲ್ಲಿಸಲು ಅಧಿಕಾರವಿಲ್ಲವೆಂದು ಹೇಳುವವರು, ಆದರೆ ಅದೇ ಬಡವರು

ಅನಧಿಕೃತವಾಗಿ ಮನೆಗಳನ್ನು ಕಟ್ಟುವಾಗ ಅದನ್ನು ನಿಲ್ಲಿಸುತ್ತಾರೆ. ಕೆಲವು ವೇಳೆ ಅವರು ಪೂರ್ತಿ ಕಟ್ಟಿರತಕ್ಕ ಮನೆಗಳನ್ನು ಕೂಡ ಒಡೆದುಹಾಕುತ್ತಾರೆ. ಈ ರೀತಿ ಏಕೆ ಮಾಡಬೇಕು? ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ, ಇನ್ನು ಇದೇ ರೀತಿ ಗುಲ್ಬರ್ಗದಲ್ಲಿ ಸಂಗಮ್ ಚಿತ್ರಮಂದಿರದ ಎದುರು ಒಂದು ನಾಲ್ಕು ಅಂತಸ್ತಿನ ಕಟ್ಟಡವನ್ನು ಕಟ್ಟಿದ್ದಾರೆ ನಾನು ಅದರ ಒಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ಅಲ್ಲಿನ ಅಸಿಸ್ಟೆಂಟ್ ಸೆಕ್ರೆಟರಿ ಹೇಳಿದರು. ಇದನ್ನು ಈಗಾಗಲೇ ಪೂರ್ತಿ ಕಟ್ಟಿಬಿಟ್ಟಿರುವುದರಿಂದ ನಾವೇನು ಮಾಡಲು ಸಾಧ್ಯವಿಲ್ಲ ಈ ಅಸಿಸ್ಟೆಂಟ್ ಸೆಕ್ರೆಟರಿಯವರು ದುಡ್ಡನ್ನು ತೆಗೆದುಕೊಂಡು ಪರ್ಮಿಷನ್ ಕೊಟ್ಟುಬಿಡುತ್ತಾರೆ. ನಾವೇನಾದರೂ ಅದರ ಬಗ್ಗೆ ಕೇಳಿದರೆ ನಾವು ಅದಕ್ಕೆ ಜವಾಬ್ದಾರರಲ್ಲವೆಂದು ಹೇಳುತ್ತಾರೆ. ಇಲ್ಲದಿದ್ದರೆ ನನ್ನ ಬಳಿ ಸ್ಕ್ವಾಡ್ ಇಲ್ಲ. ಜನ ಇಲ್ಲ ಎಂದು ಹೇಳುತ್ತಾರೆ. ಕೆಲವೊಮ್ಮೆ ಅವರಿಂದ ದುಡ್ಡು ತೆಗೆದುಕೊಂಡು ಬಿಟ್ಟಿರುತ್ತಾರೆ. ಆದ್ದರಿಂದ ನಾವೇನಾದರೂ ಕೇಳಿದರೆ, ಟೌನ್‌ಪ್ಲಾನಿಂಗ್ ಒಂದು ಅಟಾನಮಸ್ ಬಾಡಿ ಎಂದು ಹೇಳುತ್ತಾರೆ. ಇದೆ ರೀತಿ ಮತ್ತೊಂದು ಬಿಲ್ಡಿಂಗ್ ವೈಭವ ಲಾಡ್ಜ್ ಅಂತ ಇದೆ. ಅದನ್ನು ಕಟ್ಟುವಾಗ ಕೊಟ್ಟಿರತಕ್ಕಂಥ ಪ್ಲಾನ್‌ಗೆ ವಿರುದ್ಧವಾಗಿ ಕಟ್ಟಿದರು. ಅದರ ಬಗ್ಗೆ ಕೂಡ ಪತ್ರ ಬರೆದಿದ್ದೆ. ಅದಕ್ಕೆ ಅವರು ಆ ಬಿಲ್ಡಿಂಗ್‌ನ್ನು ಪೂರ್ತಿ ಕಟ್ಟುಬಿಟ್ಟಿದ್ದಾರೆ ಆದ್ದರಿಂದ ಈಗ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಈ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಮಾಡುವಾಗ ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್‌ನ್ನು ಕೊಡಬೇಕು. ಆದರೆ ಇಲ್ಲಿ ಬಿಲ್ಡಿಂಗ್ ಕನಸ್ಟ್ರಕ್ಷನ್‌ಗೆ ಮೊದಲು ಕೊಡುವ ಬದಲು, ಆದು ಮುಗಿದ ನಂತರ ಕೊಡುತ್ತಿದ್ದಾರೆ. ಮತ್ತೆ ಅಲ್ಲಿಯ ಅಸಿಸ್ಟೆಂಟ್ ಸೆಕ್ರೆಟರಿಯ ಬಗ್ಗೆ ಸಾಕಷ್ಟು ದೂರುಗಳು ಬಂದಿದ್ದು, ಅವರು ಈಗ ಟ್ರಾನ್ಸ್‌ಫರ್ ಆಗಿದ್ದಾರೆ. ಆದರೂ ಕೂಡ ಅವರು ಇನ್ನು ಈ ಕೆಲಸವನ್ನು ನಿಲ್ಲಿಸಿಲ್ಲ. ನಂತರ ಕೂಡ ಆರು ಲೇಔಟ್‌ಗಳನ್ನು ಪರ್ಮಿಷನ್ ಇಲ್ಲದೆ ಟೌನ್‌ಪ್ಲಾನಿಂಗ್ ಅಥಾರಿಟಿ ಕೊಟ್ಟಿದೆ. ಆದ್ದರಿಂದ ಈ ಟೌನ್‌ಪ್ಲಾನಿಂಗ್ ಅಥಾರಿಟಿಯವರು ನೇರವಾಗಿ ಅವ್ಯವಹಾರವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಒಂದು ಸರ್ಕ್ಯುಲರ್ ಇದೆ.

I will read a Circular,

"Circular No. HUD 85 MI 83, dated 14-6-83,

"It is therefore directed that the applicant applied for the approval to the private layout should first obtain approval of the Improvement Board. The Improvement Board should give approval subject to the condition that the layout is approved by the Planning Authority also. The Planning Authority should not accept any application for sanction of a private layout unless the approval of the Improvement Board is enclosed to such an application."

ಇದನ್ನು ಕಡೆಗಣಿಸಿ ಅವರು ನೇರವಾಗಿ ಕೊಟ್ಟಿದ್ದಾರೆ. ನಾನು ಈ ಬಗ್ಗೆ ಪತ್ರ ಬರೆದರೂ ಕೂಡ ಅದಕ್ಕೆ ಯಾವುದೂ ಸಹ ಉತ್ತರ ಇಲ್ಲ. ಹೆಚ್‌ಯುಡಿ ಸೆಕ್ರೆಟರಿ ಯವರನ್ನು ಕಾಣಬೇಕಾದರೆ. ನಾವು ಮಂತ್ರಿಗಳನ್ನಾದರೂ ಕಾಣಬಹುದು, ಅವರನ್ನು ಕಾಣುವುದು ಬಹಳ ಕಠಿಣ. ಅವರು ಮಾತನಾಡುವ ಪರಿಸ್ಥಿತಿಯಲ್ಲಿ ಒಳ್ಳೆಯದೂ ಇರುವುದಿಲ್ಲ. ಅಂಥಾ ಒಂದು ಪರಿಸ್ಥಿತಿ ಇದೆ. ಇನ್ನು ಜನಸಾಮಾನ್ಯರ ಕೆಲಸ ಮತ್ತು ಪಟ್ಟಣ ಪ್ರದೇಶಗಳಲ್ಲಿ ಒಳ್ಳೆಯ ರೀತಿಯಲ್ಲಿ ಅವರಿಗೆ ಸಹಾಯವಾಗುವ ರೀತಿಯಲ್ಲಿ ಕೆಲಸವಾಗುವುದನ್ನು ಕಾಣುತ್ತಾ ಇಲ್ಲ. ಇದರಿಂದ ಏನಾಗಿದೆ ಎಂದರೆ ನಡುವಣ ಇರುವವರಿಗೆ ಅಂದರೆ ದಳ್ಳಾಳಿಗಳಿಗೆ ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡುವುದಕ್ಕೆ ಅನುಕೂಲವಾಗಿದೆ. ಇದರಿಂದ ಆ ಹೊಲದವರಿಗೂ ಕೂಡ ಹಣ ಸಿಕ್ಕುತ್ತಾ ಇಲ್ಲ. ಇದಕ್ಕೆ ಮ್ಯಾಪೂ ಇಲ್ಲ, ಒಂದು ಸ್ಕೂಲ್ ಬಿಲ್ಡಿಂಗ್‌ಗೆ ಕೂಡ ಜಾಗವನ್ನೂ ಬಿಡುತ್ತಾ ಇಲ್ಲ. ಮಾನ್ಯ ಅಧ್ಯಕ್ಷರೇ. ತಮಗೆ ಗೊತ್ತಿದೆ. ನಮ್ಮ ಗುಲ್ಬರ್ಗ ನಗರದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂದು ಅಂಥಾದ್ದರಲ್ಲಿ ಅವರು ಲೇಔಟ್ಸ್‌ನ್ನೂ ಅಪ್ರೂ ಮಾಡುತ್ತಿದ್ದಾರೆ. ಅನ್ ಆಥರೈಸ್ಡ್ ಆಗಿ ರೆವಿನ್ಯೂ ಲ್ಯಾಂಡ್‌ನಲ್ಲಿ ಸಿಕ್ಕಾಪಟ್ಟೆ ಮನೆಗಳು ಆಗುತ್ತಾ ಇವೆ. ಏತಕ್ಕೆಂದರೆ ಆ ಜನರಲ್ಲಿ ಈ ಒಂದು ಭಾವನೆ ಬಂದಿದೆ. ರೆವಿನ್ಯೂ

ಲ್ಯಾಂಡ್ ಎಂದರೆ ನಾವು ಹೋಗಿ ತಹಸೀಲ್ದಾರರನ್ನು ಕೇಳಬೇಕು, ಆಮೇಲೆ ಟೌನ್ ಪ್ಲಾನಿಂಗ್ ಅಥಾರಿಟಿಯವರನ್ನು ಕೇಳಬೇಕು ಆಮೇಲೆ ಸಿ.ಐ.ಟಿ.ಬಿ. ಅವರನ್ನು ಕೇಳಬೇಕು, ಆಮೇಲೆ ಮಹಾನಗರ ಸಭೆಯವರನ್ನು ಕೇಳಬೇಕು. ಆದ್ದರಿಂದ ಈ ರೀತಿ ೪-೪ ಜನರನ್ನೂ ಕೇಳಿ ಕೇಳಿ ನಮಗೆ ಸಾಕಾಗಿ ಹೋಗುತ್ತದೆ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಇದಕ್ಕೇನಾದರೂ ಒಂದು ಹಿಡಿತ ಇದೆಯೋ, ಇದಕ್ಕೇನಾದರೂ ಒಂದು ಕಾನೂನು ಇದೆಯೋ ಎಂದು ನನಗನ್ನಿಸುತ್ತದೆ. ಈಗ ಇಂತಹ ಪರಿಸ್ಥಿತಿ ಇದೆ. ಈಗ ಇದರ ಬಗ್ಗೆ ಇನ್ನೂ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.— ಅವರು ನಮಗೆ ಹೇಳುತ್ತಿದ್ದಾರೇನು ?

ಶ್ರೀ ಎಸ್. ಕೆ. ಕಾಂತಾ.— ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ ಹಿಂದಿನ ಸರ್ಕಾರದವರು ಮಾಡಿರತಕ್ಕಂಥಾ ಕೆಲಸಗಳಿಂದ ಏನು ಅನಾಹುತವಾಗಿದೆ ಅನ್ನುವುದನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಹುಟ್ಟಿದಂಥ ಶಿಶುವಿಗೆ ೪ ವರ್ಷವಾಗಿ ಅದು ಓಡಾಡುತ್ತಾ ಇದೆ ಅದಕ್ಕೆ ಮೀಸೆಯೂ ಬಂದಿದೆ. ಅದು ಗೊತ್ತೇ ?

ಶ್ರೀ ಎಸ್. ಕೆ. ಕಾಂತಾ.—ಅವರು ಮಾಡಿದಂಥಾ ಕೆಲಸಗಳನ್ನು ನಾವು ಮಾಡದೇ ಇರುವುದ ರಿಂದ, ಈಗ ಕೆಲಸಗಳು ಸುಲಲಿತವಾಗಿ ನಡೆಯುತ್ತಾ ಇದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಅವರಿಗೆ ಒಂದು ಶಿಶುವಾಗಿ ಅದಕ್ಕೆ ಈಗಾಗಲೇ ಮೀಸೆಯೂ ಬಂದಿದೆ. ಅದಕ್ಕೆ ದೊಡ್ಡದಾಗಿ ಮೀಸೆ ಹುಟ್ಟಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಈಗ ಆ ಶಿಶು ಯುವಕನಾಗುತ್ತಿದ್ದಾನೆ. ಅದಕ್ಕೆ ೪ ವರ್ಷಕ್ಕೇನೇ ಮೀಸೆ ಬಂದುಬಿಟ್ಟಿದೆ. ೪ ವರ್ಷಕ್ಕೇನೇ ಮೀಸೆ ಇಟ್ಟುಕೊಂಡು ಆ ಶಿಶು ಯುವಕನಾಗಿದ್ದಾನೆ.

ಶ್ರೀ ಎಸ್. ಕೆ. ಕಾಂತಾ.—ಅವರೆಲ್ಲರೂ ಇನ್ನೂ ಕೂಡ ನಾವು ಟ್ರೆಜರಿ ಬೆಂಚಿನಲ್ಲಿ ಈ ಕಡೆ ಇದ್ದೇವೆಂದು ತಿಳಿದುಕೊಂಡಿದ್ದಾರೆ. ಅವರ ಕಾಲದಲ್ಲೇ ನಗರಾಭಿವೃದ್ಧಿ ಮಂಡಲಿಗಳು ಆದದ್ದು, ಅವರು ಇದ್ದಾಗ ಅದು ಯಾವ ಪರಿಸ್ಥಿತಿಯಲ್ಲಿತ್ತು ಅನ್ನುವುದನ್ನು ಯೋಚನೆ ಮಾಡಲಿ ನಾನು ಸಿ. ಐ. ಟಿ. ಬಿ. ಛೇರ್ಮನ್ ಆದಾಗ ಹೆಚ್.ಯು.ಡಿ. ಸೆಕ್ರೆಟರಿಯವರನ್ನು ಕಾಣಬೇಕಾದರೆ, ನನಗೇನೇ ಎರಡು ದಿವಸ ಹಿಡಿಯಿತು. ಇನ್ನು ಸಾರ್ವಜನಿಕರು ಯಾರಾದರೂ ಹೋದರೆ, ಬೇರೆ ಯಾರಾದರೂ ಹೋದರೆ ಅವರಿಗೆ ಹೇಗೆ ಮಾನ್ಯತೆ ಸಿಕ್ಕುತ್ತದೋ ಗೊತ್ತಿಲ್ಲ. ಈ ಮಹಾನಗರದಲ್ಲಿ ಎಲ್ಲಾದರೂ ಒಳ್ಳೆಯ ಕೆಲಸ ನಡೆದಿದ್ದರೆ ಅದು ಹುಬ್ಬಳ್ಳಿ ಮತ್ತು ಗುಲ್ಬರ್ಗಾದಲ್ಲಿ. ಗುಲ್ಬರ್ಗಾದಲ್ಲಿ ಇದರ ಬಗ್ಗೆ ಸಾಕಷ್ಟು ಕೆಲಸ ನಡೆದಿದೆ. ೧೯೮೩ರ ಪೂರ್ವದಲ್ಲಿ ತಮಗೆ ಹೇಳಬೇಕಾದರೆ ಆ ನಗರಾಭಿವೃದ್ಧಿ ಮಂಡಲಿ ಯಲ್ಲಿ ಅಲ್ಲಿಯ ಸಿಬ್ಬಂದಿಗೆ ಸಂಬಳ ಕೊಡುವ ಪರಿಸ್ಥಿತಿ ಇರಲಿಲ್ಲ. ಈ ಬಗ್ಗೆ ಮಾನ್ಯ ಧರ್ಮಸಿಂಗ್ ರವರು ಒಂದು ಯೋಜನೆ ಹಾಕಿಕೊಂಡು ಆ ಸಂದರ್ಭದಲ್ಲಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ ಅಲ್ಲಿಯ ಹರಿಜನರಿಗೆ, ಇತರೇ ಜನರಿಗೆ ಪ್ಲಾಟ್ ಹಂಚಿ ದ್ದಾರೆ. ಅಲ್ಲಿ ಲ್ಯಾಂಡ್ ಅಕ್ವೈರ್ ಮಾಡಿಕೊಂಡು ಬಹಳಷ್ಟು ಮಟ್ಟಿಗೆ ಕೆಲಸ ಮಾಡಿದ್ದಾರೆ. ತಮ್ಮ ಗಮನಕ್ಕೆ ತರಬೇಕಾದರೆ. ಬಹುಶಃ ೧೯೭೪ ಅಥವಾ ೧೯೭೫ ಅಂತ ಕಾಣುತ್ತದೆ. ಆವಾಗ ಅವರು ಒಂದು ಎಕರೆಗೆ ೨೬೦೦ ರೂಪಾಯಿನಂತೆ ಆಗ ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಂಡರು. ಇದರ ವಿರುದ್ಧ ಅವರು ಕೋರ್ಟಿಗೆ ಹೋದರು. ನಂತರ ಎಕರೆಗೆ ೪೩ ಸಾವಿರ ರೂಪಾಯಿ ಗಳಂತೆ ಕೊಡಬೇಕೆಂದು ಹೈಕೋರ್ಟಿನಿಂದ ಆರ್ಡರ್ ಆಯಿತು. ಈಗ ಈ ಹೆಚ್ಚಿನ ಹಣವನ್ನು ಯಾರು ಕೊಡಬೇಕು ? ಅದಕ್ಕೋಸ್ಕರ ಈಗಿನ ಮತ್ತು ಹಿಂದಿನ ಛೇರ್ಮನ್‌ಗಳು ಸೇರಿಕೊಂಡು ಜಮೀನನ್ನು ಮಾರುವವರ ಜೊತೆಯಲ್ಲಿ ಮಾತುಕತೆ ನಡೆಸಬೇಕು. ಈ ಬಗ್ಗೆ ಜಮೀನಿನ ಮಾಲೀಕರ ಜೊತೆ ಒಂದು ಒಪ್ಪಂದಕ್ಕೆ ಬರಬೇಕು. ಇಂತಹ ಒಂದು ಒಪ್ಪಂದ ಮಾಡಿಕೊಂಡರೆ ಮುಂದೆ ಅಲ್ಲಿ ಸೈಟ್‌ಗಳನ್ನು ಮಾಡಿ ಮಾರಾಟ ಮಾಡಲು ಅವಕಾಶ ಆಗುತ್ತದೆ. ಈಗ ಇದಕ್ಕೆ ಸಂಬಂಧಪಟ್ಟಂತೆ ೫೦ ಲಕ್ಷ ರೂಪಾಯಿಗಳಿದೆ. ಈ ಹಣ ಎರಡು ವರ್ಷಗಳಿಂದಲೂ ಎಚ್.ಯು.ಡಿ. ಯಲ್ಲಿ ಕೊಳೆಯುತ್ತಿದೆ. ಈ ಸಮಸ್ಯೆಯನ್ನು ಯಾವ ರೀತಿಯಿಂದಲಾದರೂ ಬಗೆಹರಿಸಬೇಕೆಂದುಕೊಂಡು ನಾನು ಮಾನ್ಯ ಮಂತ್ರಿಗಳ

ಹತ್ತಿರ ಹೋಗಿ ಮಾತನಾಡಿದೆ. ಈ ಬಗ್ಗೆ ಸಂಬಂಧಪಟ್ಟ ಕಾರ್ಯದರ್ಶಿ ಅವರ ಹತ್ತಿರ ಹೋದಾಗ ಅವರು ಡಿ. ಸಿ. ಅವರಿಂದ ಲೆಟರ್ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಡಿ. ಸಿ. ಅವರ ಹತ್ತಿರ ಹೋದಾಗ ಅವರು ಡಿವಿಜನಲ್ ಕಮೀಷನರ್ ಅವರ ಹತ್ತಿರದಿಂದ ಲೆಟರ್ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಈ ರೀತಿಯಿಂದ ಈ ಅಧಿಕಾರಿಗಳು ಒಂದೊಂದು ವಿಷಯಕ್ಕೂ ಹತ್ತಾರು ಕ್ವೈರಿಗಳನ್ನು ಹಾಕಿದರೆ, ಈ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್‌ಗಳು ಯಾವ ರೀತಿ ಕೆಲಸ ಮಾಡಬೇಕು ? ಈ ಹಿಂದಿನ ಸರ್ಕಾರದವರು ಈ ನಗರಾಭಿವೃದ್ಧಿ ಮಂಡಲಿಗಳನ್ನು ರಚನೆ ಮಾಡಿದರು. ಆದರೆ ಇವೊತ್ತಿನ ದಿವಸ ಈ ಮಂಡಲಿಗಳಿಂದ ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ತುಮಕೂರು ಮತ್ತು ಹಾಸನದಲ್ಲಿ ಸಹ ಇದೇ ರೀತಿ ಆಗಿದೆ. ಆದೇ ನಮ್ಮ ಗುಲ್ಬರ್ಗದಲ್ಲಿ ಸ್ವಲ್ಪ ಒಳ್ಳೆಯ ಕೆಲಸಗಳಾಗಿವೆ. ಅಲ್ಲಿನ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡಿನವರು ಹುಡ್ಕೋ ಯೋಜನೆಯ ಮೂಲಕ ಮನೆಗಳನ್ನು ಕಟ್ಟಿಸಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ ಇಂತಹವರಿಗೆ ನೀವು ಸಾಕಷ್ಟು ಪ್ರೋತ್ಸಾಹ ಕೊಡದಿದ್ದರೆ ಹೇಗೆ? ಮತ್ತೆ ಗುಲ್ಬರ್ಗ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಈ ಬಗ್ಗೆ ನಾನು ಮತ್ತು ಗುಲ್ಬರ್ಗ ನಗರ ಸಭೆಯ ಕಾರ್ಪೊರೇಟರ್‌ಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮಾತನಾಡಿದ್ದೇವೆ. ನಮ್ಮ ಭಾಗದಲ್ಲಿ ೧೯೭೨ ರಿಂದಲೂ ಸಹ ಸತತವಾಗಿ ಬರಗಾಲ ಬರುತ್ತಿದೆ. ಕಳೆದ ಎರಡು ವರ್ಷಗಳಿಂದ ಅಲ್ಲಿ ಮಳೆ ಸರಿಯಾಗಿ ಆಗಿಲ್ಲ. ಗುಲ್ಬರ್ಗ ನಗರಕ್ಕೆ ನೀರು ಸರಬರಾಜು ಆಗುತ್ತಿದ್ದ ಬೆಣ್ಣೆತೊರೆ ಮತ್ತು ಬೋಸ್ಗಾ ಯೋಜನೆಗಳ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆ ಚೆನ್ನಾಗಿ ಆಗಿಲ್ಲದ ಕಾರಣ ೩೦೦ ಕೊಳವೆ ಬಾವಿಗಳನ್ನು ತೋಡಿಸಿ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನ "ಮೇನೇಜಿಂಗ್ ಡೈರೆಕ್ಟರ್" ಅವರು ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದಾರೆ. ಏನೆಂದರೆ, ಬೆಣ್ಣೆತೊರೆ ಯೋಜನೆ ಸಮರ್ಪಕವಾಗಿಲ್ಲ, ಈ ಯೋಜನೆ ೧೯೮೩ ರಲ್ಲಿ ಮುಗಿಯಬೇಕಾಗಿತ್ತು. ಆದರೆ ಇಲ್ಲಿಯವರೆಗೆ ಮುಗಿದಿಲ್ಲ. ಈ ಕಾರಣದಿಂದ ಅಲ್ಲಿನ ಜನರು ಒಂದೊಂದು ಹನಿ ನೀರಿಗೂ ತೊಂದರೆ ಪಡುತ್ತಿದ್ದಾರೆ. ಈ ತೊಂದರೆಯನ್ನು ಹೋಗಲಾಡಿಸಲು ಒಂದೂವರೆ ಅಥವಾ ಎರಡು ವರ್ಷಗಳಲ್ಲಿ ಪೂರ್ಣವಾಗುವಂತಹ ಭೀಮಾ ನದಿಯಿಂದ ನೀರನ್ನು ಸರಬರಾಜು ಮಾಡುವಂಥ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ಪತ್ರ ಬರೆದಿದ್ದಾರೆ. ಈ ಒಂದು ಪತ್ರದ ಆಧಾರದ ಮೇಲೆ ನಾನು ಸಹ ಒಂದು ಡೆಲಿಗೇಷನ್ ಜೊತೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಬಗ್ಗೆ ವಿಚಾರ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಂಡಿದ್ದೇನೆ. ಭೀಮಾ ನದಿಯಿಂದ ನೀರನ್ನು ಸರಬರಾಜು ಮಾಡುವ ಯೋಜನೆ ಕೈಕೊಂಡರೆ ಮುಂದಿನ ೧೫-೨೦ ವರ್ಷಗಳವರೆಗೆ ಗುಲ್ಬರ್ಗ ನಗರದ ಜನರಿಗೆ ಸಾಕಷ್ಟು ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆಂದು ಮುಖ್ಯಮಂತ್ರಿಗಳಿಗೆ ತಿಳಿಸಲಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈಗಿನ ಬೆಣ್ಣೆತೊರೆ ಯೋಜನೆಯ ಕೆಲಸವನ್ನು ಕೈಬಿಟ್ಟು ಭೀಮಾ ನದಿಯಿಂದ ನೀರನ್ನು ಸರಬರಾಜು ಮಾಡುವ ಯೋಜನೆ ಕೆಲಸವನ್ನು ಕೂಡಲೇ ಕೈಕೊಂಡು ೧೯೮೮ರ ಕೊನೆಯೊಳಗೆ ಇಲ್ಲವೇ ೧೯೮೯ರ ಜನವರಿ ಹೊತ್ತಿಗೆ ಮುಗಿಸಿ ಅಲ್ಲಿನ ಜನರಿಗೆ ನೀರು ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಒಳ್ಳೆಯ ಪರಿಸರ ನಗರ, ಪಟ್ಟಣಗಳಲ್ಲಿ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಯವರಿಗೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತಾ ಇದ್ದೇನೆ. ತಾವು ಒಂದು ಆಜ್ಞೆ ಮಾಡಬೇಕು. ಗುಲ್ಬರ್ಗ ನಗರದಲ್ಲಿ ಯಾವುದೇ ರೀತಿಯಾಗಿ ಹೊಸದಾಗಿ ಕಟ್ಟಡ ಆಗಕೂಡದು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಕಟ್ಟಡಗಳನ್ನು ಕಟ್ಟತಕ್ಕಂಥ ವ್ಯವಸ್ಥೆ ನಡೆದಿದೆ. ನಾನು ಟೌನ್‌ಪ್ಲಾನಿಂಗ್ ಅಥಾರಿಟಿಯವರನ್ನು ಕೇಳಿಕೊಂಡೆ. ಯಾವುದೇ ರೀತಿಯ ಹೊಸ ಲೇಔಟ್ ಮಾಡಬೇಡಿ ಎಂದು ಕೇಳಿದರೂ ಕೆಲವು ದಿನಗಳ ಹಿಂದೆ ಹೊಸದಾಗಿ ಲೇಔಟ್ ಮಾಡಿದ್ದಾರೆ. ಇದನ್ನು ತಡೆಹಿಡಿಯಬೇಕು. ಇಲ್ಲದೇ ಹೋದರೆ ಕುಡಿಯುವ ನೀರಿನ ಯೋಜನೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೧-೦೦ ಪಿ.ಎಂ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಖಾತೆ ಏನಿದೆ ಇದು ಬಹಳ ಮುಖ್ಯವಾದುದು ಎಂದು ಈಗಾಗಲೇ ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ. ಇದು ಮುಖ್ಯ ಎಂದು ನನಗನ್ನಿಸುತ್ತದೆ. ಸುಮಾರು ೧ ಕೋಟಿ, ೧೮ ಲಕ್ಷ ಜನರಿಗೆ ಸಂಬಂಧಪಟ್ಟ

ವಿಷಯು ಇದು. ನಮ್ಮ ರಾಜ್ಯದಲ್ಲಿ ೩ ಕೋಟಿ ೫೩ ಲಕ್ಷ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗಕ್ಕೆ ಸಂಬಂಧಪಡುವಂಥ ವಿಷಯ. ಮೂರನೇ ಒಂದು ಭಾಗದ ಜನ ನಗರದಲ್ಲಿರುವಾಗ ಅದು ಸಣ್ಣ ನಗರ ಇರಬಹುದು, ದೊಡ್ಡ ನಗರ ಇರಬಹುದು, ಅದಕ್ಕೆ ಅವಶ್ಯಕವಾಗಿ ಬೇಕಾದಂಥ ಅನುಕೂಲಗಳನ್ನು ಮಾಡುವಂಥ ಜವಾಬ್ದಾರಿ ಸರ್ಕಾರದ ಮೇಲಿದೆ, ಅದಕ್ಕೆ ಸಂಬಂಧಪಟ್ಟ ಸಂಸ್ಥೆಗಳ ಮೇಲಿದೆ. ನೀರು, ಲೈಟು, ರೋಡು, ಕೊಳಚೆ ಪ್ರದೇಶ ನಿರ್ಮೂಲ ಅಥವಾ ಅದನ್ನು ಸರಿಪಡಿಸುವಂಥಾದ್ದು, ಪಾರ್ಕುಗಳು ಸರಿಯಾದಂಥ ಸಾರಿಗೆ ವ್ಯವಸ್ಥೆ ಮತ್ತಿತರ ನಾಗರೀಕ ಅನುಕೂಲಗಳನ್ನು ಕಲ್ಪಿಸಿಕೊಡುವಂಥ ಅತಿಮುಖ್ಯವಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಆದುದರಿಂದ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಕಳೆದ ವರ್ಷ ಇವರ ಕೆಲಸ ಯಾವರೀತಿ ನಡೆದಿದೆ ಎಷ್ಟುದೂರ ಮುಂದುವರೆದಿದ್ದಾರೆ ಎಂದು ನೋಡಿದರೆ, ಮಂತ್ರಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ, ಎಷ್ಟು ದೂರ ಮುಂದುವರಿಯಬೇಕಾಗಿತ್ತೋ ಅಷ್ಟು ದೂರ ಮುಂದುವರಿದಿಲ್ಲ ಮತ್ತು ಅವರ ಪರ್ಫಾರ್ಮೆನ್ಸ್ ನಿಜವಾಗಲೂ ಸಹ ಬಹಳ ಕೆಟ್ಟಿದೆ ಎನ್ನುವುದು ನನ್ನ ಅಭಿಪ್ರಾಯ ಅಂದರೆ ಇವರ ಪರ್ಫಾರ್ಮೆನ್ಸ್ ಅಷ್ಟು ಚೆನ್ನಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಈಗ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್‌ನ ಪರ್ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಹೀಗೆ ಹೇಳುತ್ತಾರೆ. I will read a portion from the Perfermance Budget of the Karnataka Urban Water Supply and Drainage Board.

"1. Piped Water Supply, On-going works during 86-87 was 32 ; Fresh works was 5 and the Total comes to 37. Works targetted for completion is 7.

2. For Urban Water Supply, On-going works-11 and Fresh Works-5 and the total during 86-87 was 16 but Works targetted for completion was only 3.

3. Board Water Supply.—On-going works-5. Fresh Works-Nil and works targetted for completion Nil.

4, Underground Drainage.—On-going works during 86-87- 12, fresh works-Nil and the works targetted for completion was 5.

Total No. of On-going works-60 freshWorks-10 and the Total during 1986-87- 70 out of which Works targetted for completion-15."

I will also read the financial achievement for 1986-87.—

Sl. No.	Name of the Scheme	Allocation during 1986-87	Amount received during 1986-87 to end of 12/86	Expenditure during 1986-87 (to end of 11/86)
			(in lakhs)	
1	Piped Water Supply	290.00	45.91	91.82
2	Urban Water Supply	200.00	79.85	42.70
3	Board Water Supply	200.00	195.00	103.78
4	Underground Drainage	118.00	73.15	78.00
	Total	808.00	393.91	313.30

This shows that we have not spent the amount and you have not achieved the performance that you ought to have been achieved as per your programme,

Coming to Scarcity Relief Works during 1986-87, it is given on page 17 of your report), I would not like to read the entire thing for want of time. I will just mention the targets fixed for 1987-88 Physical and Financial. It is as under.—

Sl. No.	Name of the Scheme	Spillover works 1986-87		Fresh work Proposed for 1987-88		Provision for 1987-88
		No. of works	Amount	No. of works	Amount	
					(in lakhs)	
1	Piped Water supply	30	1,975 61	...	...	300.00
2	Urban Water supply	13	1,616.83	...	...	200.00
3	Board Water supply	5	2,237.58	...	...	200.00
4	Underground Drainge	7	201.96	...	...	100.00
5	Low Cost Sanitation	...	...	9	390.00	50.00
	Total	55	5,131.98	9	390.00	850.00

ಇದರಲ್ಲಿ ಪ್ರಾವಿಷನ್ ತೀರಾ ಕಡಿಮೆ ಮಾಡಿದ್ದೀರಿ. ಫರ್‌ಫಾರ್ಮೆನ್ಸ್ ಏನಾಗಂತ್ತೆ ? ಕೆಲಸ ಸರಿಯಾಗಿ ನಡೆದಿಲ್ಲ. ಸ್ಲಂ ಕ್ಲಿಯರೆನ್ಸ್ ವಿಚಾರದಲ್ಲಿಯೂ ಹಾಗೆ ಆಗಿದೆ.

As regards Slum Clearance Programme, you have given the following Physical targets for 1986-87 and achievements there against under different schemes executed by the Board upto the end of December 1986.—

Sl. No.	Name of the Scheme	Physical target 1986-87	Achievement upto end of Dec. 1986
1	Environmental Improvement	66,200	30.665 (Population)
2	Construction of EWS houses	600	44 (Houses)

ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ವಿಷಯವಾಗಲೀ, ಅರ್ಬನ್ ಸೀಲಿಂಗ್ ಬಗ್ಗೆಯಾಗಲಿ, ಫರ್ಫಾರ್ಮೆನ್ಸ್ ನೋಡಿದರೆ ಬಹಳ ಲೋ ಲೆವೆಲ್‌ನಲ್ಲಿದೆ. ತಾವು ಕೊಟ್ಟಿರತಕ್ಕ ಅಂಕಿಸಂಖ್ಯೆ ಇದೆ. ಅದನ್ನು ಓದುವುದಕ್ಕೆ ಟೈಂ ಇಲ್ಲ. ಪುಟ ೧೨-೨೦-೨೧ರಲ್ಲಿ ಇದೆ. All these statements show that the performance is at a very low level.

I will just read Para 3.12 (Page 12) of your Annual Report i.e., of HUD. You have men'ioned about the Integrated Development of Small and Medium Towns.

Since there is no time, I will not read but there also, the performance is very low. ಇದರಲ್ಲಿ ಬಹಳ ಮುಖ್ಯವಾದುದೇನೆಂದರೆ, ಹರಿಜನ ಗಿರಿಜನರಿಗೆ ನಾವು ಮಾಡುತ್ತಿರುವಷ್ಟು ಕೆಲಸವನ್ನು ಯಾರೂ ಮಾಡಿಲ್ಲ, ಮಾಡುತ್ತಿಲ್ಲ, ನಮಗೆ ಅವರ ಬಗ್ಗೆ ಬಹಳ ಪ್ರೇಮ ವಿಶ್ವಾಸ ಇದೆ ಎಂದು ಹೇಳಿದ್ದೀರಿ. ೧೮ ಪರ್ಸೆಂಟ್ ಹಣದ ಖರ್ಚುಗಳ ಬಗ್ಗೆ ಹೇಳುವುದಾದರೆ, You have reserved Rs. 118.27 lakhs in Bangalore Division but the expenditure was Rs. 12.02 lakhs and the balance comes to Rs. 106.25 lakhs. Similarly in Mysore Division, the reserved amount was 51.90 lakhs and the expenditure was Rs. 4.66 lakhs and the balance amount comes to Rs. 47.24 lakhs.

There is total failure so far as the utilisation is concorned. ಬ್ಯಾಲೆನ್ಸ್ ಯುಟಿಲೈಸ್ ಮಾಡಿಲ್ಲ, ಹರಿಜನರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳುವುದು ಶುದ್ಧ ಪೊಳ್ಳು ಮಾತು.

I quote from the annual report :

> "The balance amount shown by various Local Bodies throughout the State does not give the correct picture on the state of Affairs mainly because of wrong calculations and confusion prevailing in the individual Municipalities"

Here is the Minister who says that confusion was prevailing.

ಇನ್ನು ೧೮ ಪರ್ಸೆಂಟ್ ವಿಷಯದಲ್ಲಿ ಅವರ ಪರ್ಫಾರ್ಮೆನ್ಸ್ ಬಹಳ ಕಡಿಮೆ ಇದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವೊತ್ತು ಐದು ಕಾರ್ಪೊರೇಷನ್‌ನಲ್ಲಿಯೂ ಕೂಡ ಮೈಸೂರು ಒಂದು ಬಿಟ್ಟು ಬಾಕಿ ಎಲ್ಲಾ ಕಾರ್ಪೊರೇಷನ್‌ಗಳು ಸರಪ್ಲಸ್ ಇದೆ. ಅಂಕಿಅಂಶಗಳ ಪ್ರಕಾರ, ಇದು ಬಹಳ ಸಂತೋಷ. ಅದೇ ಸಮಯಕ್ಕೆ ಡಿಮ್ಯಾಂಡ್ ಮತ್ತು ಕಲೆಕ್ಷನ್ ಇದು ಬಹಳ ಮುಖ್ಯ. ಇದನ್ನು ಹೇಳಬೇಕಾಗುತ್ತದೆ. ೧೯೮೫-೮೬, ೧೯೮೬-೮೭ಕ್ಕೆ ಡಿಮ್ಯಾಂಡ್ ಕಲೆಕ್ಷನ್ ಇಂಪ್ರೂವ್ ಆಗಿಲ್ಲ ಎಂದು ಹೇಳಬೇಕಾಗಿದೆ.

Even the Demands and the Collections made thereof are not satisfactory as could be seen from the Report.

I furnish the Demands and Collections made with regard to the various Corporations :

	Name of the Corporation	Demand	In Lakhs Collection	Balance
1.	Bangalore	2,122 38	816.27	1,306.11
2.	Belgaum	127.97	106.09	21.88
3.	Gulbarga	69.25	35.81	33.44
4.	Hubli-Dharwad	464.09	232.85	231.24
5.	Mangalore	528.69	395.10	133.68
6.	Mysore	263.68	95.44	168.24

Even if you take into consideration the physical target of the Demands, the Collections made by the various Corporations are very poor. The percentage of collections made has been furnished in Appendix-V, in page 47 of the Performance Budget of the Housing and Urban Development Department. In case of Gulbarga the percentage of Collection is 64.19 whereas in respect of Chikkamagalur it is 37.79 and in case of Kolar it is 32.96. If you take into consideration all the districts, there is no significant improvement when compared to previous year's figures.

Coming to the distribution of sites to economically weaker sections in urban areas of Karnataka State, the details are furnished in page 38. Appendix-I of the Performance Budget. Except Tumkur, Kodagu. Mandya and Chickmagalur, the achievement in the rest of the districts is very poor. In the case of Bangalore while 9,764 persons have been identified under the general category, only 2 500 have been alotted sites. In Kolar while 9081 persons have been identified, no allotment has been made. So also. in Chitradurga 1.495 persons have been identified, no allotment has been made. In the case of Shimoga while 4,468 persons have been identified, only 1,535 persons have been distributed under the general category, 36 from the S. T. and 279 from the S. C, while no persons have been identified in Tumkur, they have distributed sites to 268 persons under the general category, 31 persons from the S. T. and 83 from the S. Cs. In case of Mysore, while 15,596 persons have been identified as siteless persons, only 3.302 persons have been allotted sites. In the case of Kodagu, 1,261 persons are identified and only 770 persons have been allotted sites under

the general category 5 from the S. T. and 144 from the S. Cs., In respect of Mandya District, while 463 persons have been identified under the general category and 52 from the S·Cs., all the identified persons have been given sites.

ಇವೊತ್ತು ಹರಿಜನಗಿರಿಜನರಿಗೆ ಕೊಡುವಂಥ ಸೈಟುಗಳು ತೀರಾ ಕಡಿಮೆಯಾಗಿದೆ. ಪರ್ಫಾರಮೆನ್ಸ್ ಅವರು ಹೇಳುವ ರೀತಿಯಲ್ಲಿ ಇಲ್ಲವೇ ಇಲ್ಲ. ಮಾನ್ಯ ಅಧ್ಯಕ್ಷರೇ, ಇನ್ನು ಫೈನಾನ್ಸಸ್ ಆಫ್ ಕಾರ್ಪೊರೇಷನ್ ಬಗ್ಗೆ ಮಾತನಾಡಬೇಕೆಂದರೆ, ಡಿಮ್ಯಾಂಡ್ ಅಂಡ್ ಕಲೆಕ್ಷನ್ ತೆಗೆದುಕೊಂಡರೆ ೫೦ ಪರ್ಸೆಂಟ್ ಕಲೆಕ್ಷನ್ ಆಗುತ್ತಿಲ್ಲ. ಈಗ ಇವರು ಬೆಂಗಳೂರಿನಲ್ಲಿ ತೆರಿಗೆ ಹೊರಿಸಲಿಕ್ಕೆ ಹೋಗಿದ್ದಾರೆ. ಇದರಿಂದ ಕಾರ್ಪೊರೇಷನ್‌ನಲ್ಲಿ ಎರಡು ಭಾಗ ಆಯಿತು. ಪಾರ್ಟಿಯಲ್ಲಿ ಎರಡು ಭಾಗ ಆಯಿತು ಬೆಂಗಳೂರಿನ ಆಸ್ತಿ ತೆರಿಗೆಯ ಬಗ್ಗೆ ಏನು ಮಾಡುತ್ತಾರೆ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಈಗ ಏನೋ ಫಾರ್ಮೂಲ ಹುಡುಕಿದ್ದಾರೆ. ಚೀಫ್ ಮಿನಿಸ್ಟರ್ ಕರೆಸಿದ್ದಾರೆ, ಮಾತನಾಡಿದ್ದಾರೆ ಎನ್ನುವುದು ಪತ್ರಿಕೆಗಳಲ್ಲಿ ಬರುತ್ತಿದೆ. ಅದರ ಬಗ್ಗೆಯೂ ಸಹ ಮಾನ್ಯ ಮೇಯರ್ ಅವರು ಇಲ್ಲ, ಇಲ್ಲ, ನಾನು ಒಪ್ಪಿಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ಚೀಫ್ ಮಿನಿಸ್ಟರದು ಅವರ ವೈಯಕ್ತಿಕ ಅಭಿಪ್ರಾಯ. ಇದರ ಬಗ್ಗೆ ನಮ್ಮದೇ ಅಭಿಪ್ರಾಯ ಸ್ಪಷ್ಟವಾಗಿದೆ ಎಂದು ಇವರು ಹೇಳುತ್ತಾರೆ. ಈಗ ಮೇಯರ್ ರವರು ದೊಡ್ಡವರೋ, ಚೀಫ್ ಮಿನಿಸ್ಟರ್ ದೊಡ್ಡವರೋ, ಯಾರು ದೊಡ್ಡವರು ಎಂಬುದನ್ನು ಯಾರು ತೀರ್ಮಾನ ಮಾಡುತ್ತಾರೆ ಎಂಬುದೇ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸ್ಪಷ್ಟತೆ ಇರಬೇಕೆಂದು ಬೆಂಗಳೂರಿನ ಜನ ಕೇಳುತ್ತಿದ್ದಾರೆ. ಈಗ ತೆರಿಗೆ ಹಾಕಿರತಕ್ಕ ರೀತಿ ಸರಿಯಾದುದು ಅಲ್ಲ, ಸಮಂಜಸ ಅಲ್ಲ ಎಂದು ಹೇಳುತ್ತಿದ್ದಾರೆ, ಇದರ ಬಗ್ಗೆ ಮಾನ್ಯ ಶಾಮಣ್ಣನವರು ಹಾಗೂ ಎಲ್ಲರೂ ಸತ್ಯಾಗ್ರಹ ಕುಳಿತಿದ್ದು ತಮಗೆಲ್ಲಾ ಗೊತ್ತಿದೆ. ಇದರ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡಲಿಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸರಿಯಾದಂಥ ಫಾರ್ಮುಲ ಇಟ್ಟುಕೊಂಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಫೈನಾನಸ್ ಬಗ್ಗೆ ಜಾಕಬ್ ಕಮಿಟಿ ರೆಕಮೆಂಡೇಷನ್ಸ್ ಇದೆ. ದಾವಣಗೆರೆಯಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟ್ ಕಾನ್‌ಫರೆನ್ಸ್ ನಡೆಯಿತು. ಆ ರೆಕಮೆಂಡೇಷನ್ಸ್ ಆಧಾರದ ಮೇಲೆ ಏನು ಮಾಡಿದ್ದಾರೆ ಎನ್ನುವುದು ಮುಖ್ಯ.

ಆ ರೆಕಮೆಂಡೇಷನ್‌ನಲ್ಲಿ ಏನು ಹೇಳುತ್ತಿದ್ದಾರೆಂದರೆ, ಆಕ್ಟ್ರಾಯ್ ಹಣವನ್ನು ಪೂರ್ತಿಯಾಗಿ ಕೊಡಬೇಕು, ಆಕ್ಟ್ರಾಯ್ ಕಾಂಪೆನ್ ಸೇಷನ್ ೪೭ ಕೋಟಿ ರೂಪಾಯಿ ಏನಿದೆ ಅಷ್ಟನ್ನೂ ಒಂದೇ ಸಾರಿ ಕೊಡುವುದಕ್ಕಾಗದಿದ್ದರೆ ೩ ತಿಂಗಳಿಗೊಂದು ಸಾರಿಯಂತೆ ಕೊಡಬೇಕೆಂದು ಕೇಳುತ್ತಿದ್ದಾರೆ. ನೀವು ೬ ತಿಂಗಳಿಗೆ ಒಂದು ಸಾರಿಯಂತೆ ಕೊಡುತ್ತಿದ್ದೀರಿ. ಈ ರೀತಿ ಕೊಡುವುದರಿಂದ ತನ್ನ ನೌಕರರಿಗೆ ಸರಿಯಾಗಿ ಸಂಬಳವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ೩ ತಿಂಗಳಿಗೆ ಒಂದು ಸಾರಿಯಂತೆ ಪೂರ್ತಿ ಕಾಂಪನ್‌ಸೇಷನ್ ಹಣವನ್ನು ಕೊಡಬೇಕು. ಇಲ್ಲದಿದ್ದರೆ ನೀವು ಬೇರೆ ರೀತಿಯ ದಾರಿಯನ್ನು ಹುಡುಕಬೇಕಾಗುತ್ತದೆ. ಇನ್ನೊಂದು ವಿಚಾರ ಎಂದರೆ, ಆಕ್ಟ್ರಾಯ್ ಹಣ ಪ್ರತಿ ವರ್ಷವೂ ಜಾಸ್ತಿ ಜಾಸ್ತಿಯಾಗುತ್ತಾ ಹೋಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ. ಆದರೆ ನೀವು ಅವರಿಗೆ ಕೊಡತಕ್ಕದ್ದು ಮಾತ್ರ ಕಡಿಮೆಯಾಗುತ್ತಿದೆ ಆದ್ದರಿಂದ ನೀವು ಅವರಿಗೆ ಕೊಡಬೇಕಾದ ಆಕ್ಟ್ರಾಯ್ ಕಾಂಪೆನ್ ಸೇಷನ್ ಹಣವನ್ನು ಜಾಸ್ತಿ ಮಾಡಿ ಅದಕ್ಕೆ ಸರಿಯಾಗಿ ಹಣವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಇದರ ಜೊತೆಗೆ ಎಂಟರ್ ಟೈನ್‌ಮೆಂಟ್ ಅಥವಾ ಬೆಟ್ಟಿಂಗ್ ಟ್ಯಾಕ್ಸ್ ವಿಚಾರದಲ್ಲಿಯೂ ಕೂಡ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್, ಕಾರ್ಪೊರೇಷನ್ ಛೇರ್ಮನ್‌ಗಳು, ಮೇಯರ್‌ಗಳು ದಾವಣಗೆರೆಯಲ್ಲಿ ಕಾನ್‌ಫರೆನ್ಸ್ ಆದಾಗ ತೀರ್ಮಾನ ಮಾಡಿದ್ದಾರೆ. ಜೇಕಬ್ಸ್ ಕಮಿಟಿ ರೆಕಮೆಂಡೇಷನ್ಸ್‌ನ್ನು ಎಷ್ಟರ ಮಟ್ಟಿಗೆ ಕಾರ್ಯಗತ ಮಾಡಿದ್ದೀರೆಂದು ಕೇಳ ಬೇಕಾಗಿದೆ.

ಮಾನ್ಯ ಅಧ್ಯಕ್ಷರೆ, ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ಬಗ್ಗೆ ಮೊದಲಿನಿಂದಲೂ ನಾವು ಹೇಳುತ್ತಲೇ ಬರುತ್ತಿದ್ದೇವೆ, ಯಾವ ನಗರಕ್ಕೂ ನೀವು ಇದನ್ನು ಕೊಡುತ್ತಿಲ್ಲ. ದಯವಿಟ್ಟು ಈ ಟ್ಯಾಕ್ಸ್‌ನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಎಲ್ಲ ಟ್ಯಾಕ್ಸ್‌ನ್ನೂ ವ್ಯವಸ್ಥಿತವಾಗಿ, ದಕ್ಷತೆಯಿಂದ ವಸೂಲ್ಮಾಡಿದರೆ ಅದೇ ಸಾಕಾಗುತ್ತದೆ. ಹೊಸದಾಗಿ ಆಸ್ತಿ ತೆರಿಗೆಯನ್ನು ನೀವು ಹೆಚ್ಚು ಮಾಡಬೇಕಾಗಿಯೇ ಬರುವುದಿಲ್ಲ. ನಿಮ್ಮ ಕಾನೂನಿನಲ್ಲಿ ೫ ವರ್ಷಕ್ಕೊಮ್ಮೆ ಆಸ್ತಿ ತೆರಿಗೆಯನ್ನು ಜಾಸ್ತಿ ಮಾಡಬೇಕೆಂದು ಮಾಡಿಕೊಂಡಿದ್ದೀರಿ. ಅದನ್ನು ಮಾಡಿದರೂ ಕೂಡ ಯಾವ ಆಧಾರದ ಮೇಲೆ

ಮಾಡಬೇಕೆಂದು ಬೆಂಗಳೂರಿನ ಜನರು ಹೇಳಿದ್ದಾರೆ. ಆದರ ಬಗ್ಗೆ ತಾವು ಗಮನ ಕೊಟ್ಟು ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಇನ್ನೊಂದು ಬಹಳ ಪ್ರಮುಖವಾದ ವಿಚಾರ ಎಂದರೆ, ಬೆಂಗಳೂರು ನಗರ ಕಾರ್ಪೊರೇಷನ್‌ನ ವಿಚಾರ. ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಗಳು ಬೆಂಗಳೂರು ನಗರ ಕಾರ್ಪೊರೇಷನ್ ವಿಚಾರದಲ್ಲಿ ಬಹಳ ಕಾಳಜಿಯನ್ನು ವಹಿಸಿದ್ದಾರೆ. ಅವರು ನಗರ ಪ್ರದಕ್ಷಿಣೆ ಮಾಡುತ್ತಿದ್ದಾರೆ ಅವರು ನಗರ ಪ್ರದಕ್ಷಿಣೆ ಮಾಡತಕ್ಕ ಕಡೆಗಳಲ್ಲಿ ಬಹಳ ಚೆನ್ನಾಗಿ ಕೆಲಸ ಕಾರ್ಯಗಳಾಗುತ್ತವೆ. ಆ ಪ್ರದೇಶಗಳು ಶುದ್ಧವಾಗಿರುತ್ತವೆ, ಆದರೆ ಎಲ್ಲಿ ನಗರ ಪ್ರದಕ್ಷಿಣೆ ಮಾಡುವುದಿಲ್ಲ ಅಂಥ ಕಡೆ ಯಾವ ಕೆಲಸ ಕಾರ್ಯಗಳೂ ನಡೆಯುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದುವರೆಗೂ ನನ್ನ ಕ್ಷೇತ್ರಕ್ಕೆ ಬಂದಿಲ್ಲ ತಾವು ನನ್ನ ಕ್ಷೇತ್ರದ ನಗರ ಪ್ರದಕ್ಷಿಣೆ ಮಾಡಿ ಎಂದು ನಾನು ಕೇಳಿ ಕೊಂಡಿದ್ದೇನೆ. ಸಾಮಾನ್ಯವಾಗಿ ಯಾರಾದರೂ ಪ್ರಧಾನ ಮಂತ್ರಿಗಳು ಬಂದರೆ, ಯಾರಾದರೂ ಮುಖ್ಯ ಮಂತ್ರಿಗಳು ಬಂದರೆ, ಅವರು ಯಾವ ಜಾಗಗಳಿಗೆ ಹೋಗುತ್ತಾರೋ ಆ ಸುತ್ತ ಮುತ್ತಲ ಜಾಗಗಳು ಸ್ವಚ್ಛವಾಗುತ್ತವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮೊನ್ನೆ ನಮ್ಮ ಪ್ರಧಾನ ಮಂತ್ರಿಗಳು ಚೌಡಯ್ಯ ಮೆಮೋರಿಯಲ್ ಹಾಲ್‌ಗೆ ಬಂದಿದ್ದರು. ಆವತ್ತು ರಾತ್ರಿ ಆ ಸುತ್ತ ಮುತ್ತಲಲ್ಲೆಲ್ಲಾ ಸೋಡಿಯಂ ಲ್ಯಾಂಪ್ಸ್ ಬಂದಿದ್ದುವು. ಅವರು ಹೋದ ಮಾರನೇ ದಿವಸ ನಾನು ನೋಡಿದಾಗ ಬಹಳ ಆಶ್ಚರ್ಯವಾಯಿತು ಕಾರಣ ಆವತ್ತು ಹಾಕಿದ್ದ ಸೋಡಿಯಂ ಲ್ಯಾಂಪ್ಸ್ ಎಲ್ಲವನ್ನೂ ಅದರ ಮಾರನೇ ದಿವಸ ಕಿತ್ತು ಹಾಕಿದ್ದರು. ಪ್ರಧಾನ ಮಂತ್ರಿಗಳೂ ಬಂದು ಹೋದರು, ಅದೇ ರೀತಿ ಸೋಡಿಯಂ ಲ್ಯಾಂಪ್ಸ್ ಕೂಡ ಬಂದು ಹೋದುವು. ಈ ರೀತಿ ಇವರ ವ್ಯವಸ್ಥೆ. ನಮ್ಮ ಮನೆಯ ಮುಂದೆ ಸೋಡಿಯಂ ಲ್ಯಾಂಪ್ಸ್ ಹಾಕಿ ಎಂದು ನಾನು ಹೇಳುವುದಿಲ್ಲ ಆದರೆ ನಗರ ಪ್ರದಕ್ಷಿಣೆ ರೆಡ್ಯೂಸ್ ಆಗಕೂಡದು. ಪ್ರತಿಯೊಂದು ಸಂದರ್ಭದಲ್ಲೂ ಪ್ರಧಾನ ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳಾಗಲಿ ಎಲ್ಲ ಪ್ರದೇಶಗಳಿಗೂ ಬಂದು ಹೋಗುವುದಕ್ಕಾಗುವುದಿಲ್ಲ. ಆ ರೀತಿ ಮಾಡಬಾರದು.

ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ಆದರೆ ಕಾಲಾವಕಾಶ ಇಲ್ಲ. ಆದರೂ ಸಾಧ್ಯವಾದಷ್ಟು ಹೇಳುವುದಕ್ಕೆ ಪ್ರಯತ್ನಿಸುತ್ತೇನೆ. ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ ಈ ಬೆಂಗಳೂರು ನಗರದಲ್ಲಿ ಪಾರ್ಕ್‌ಗಳನ್ನು ಹೆಚ್ಚು ಹೆಚ್ಚು ನಿರ್ಮಾಣ ಮಾಡಬೇಕು. ಶಾಲಾ ಮಕ್ಕಳಿಗೆ ಆಟದ ಮೈದಾನಗಳಿರಬೇಕು ಎಂದು ಸ್ವಾಮಿ, ನಮ್ಮ ಬೆಂಗಳೂರಿನಲ್ಲಿರುವ ಪ್ಯಾಲೆಸ್ ಗ್ರೌಂಡ್ಸ್ ಬಗ್ಗೆ ಇನ್ನೂ ಜಿಜ್ಞಾಸೆ ಇದ್ದೇ ಇದೆ. ಇದನ್ನು ಏತಕ್ಕೆ ತಾವು ತೀರ್ಮಾನ ಮಾಡಲಿಲ್ಲ ? ಮಾನ್ಯ ದೇವರಾಜ ಅರಸ್‌ರವರ ಕಾಲದಿಂದಲೂ ಈ ಒಂದು ಜಿಜ್ಞಾಸೆ ಇದ್ದೇ ಇದೆ. ಈ ಪ್ಯಾಲೆಸ್ ಗ್ರೌಂಡ್ಸ್‌ನ್ನು ಯಾರೋ ಒಬ್ಬ ಪ್ರೈವೇಟ್‌ನವರಿಗೆ ಕೊಟ್ಟರು ಅದರಲ್ಲಿ ಯಾರ್ಯಾರು ಎಷ್ಟೆಷ್ಟು ತಗೆದುಕೊಂಡರೋ ಗೊತ್ತಿಲ್ಲ. ಏನೇನು ಮಾಡಿಕೊಂಡರೋ ಗೊತ್ತಿಲ್ಲ. ಅದನ್ನು ಇವತ್ತು ಇಂಟರ್‌ನ್ಯಾಷನಲ್ ಕಾಂಪ್ಲೆಕ್ಸ್ ಗೋಸ್ಕರ ಉಪಯೋಗಿಸಬೇಕು. ಇನ್ನೂ ಏನೇನೋ ಉದ್ದೇಶಗಳಿಗೆ ಉಪಯೋಗಿಸಬೇಕೆಂದು ಹೇಳುತ್ತಿದ್ದಾರೆ. ಇದೇ ರೀತಿ ಬೆಂಗಳೂರು ರೇಸ್ ಕೋರ್ಸ್‌ನ್ನೂ ಕೂಡ ಇಂಟರ್‌ನ್ಯಾಷನಲ್ ಕಾಂಪ್ಲೆಕ್ಸ್ ಗೋಸ್ಕರವೇ ಉಪಯೋಗಿಸಬೇಕೆಂದು ಹೇಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಇವೆರಡೂ ಜಾಗಗಳನ್ನು ಪಾರ್ಕ್‌ಗೋಸ್ಕರ ಇಡಬೇಕೆಂದು ಹೇಳುತ್ತೇನೆ. ಇದೇ ರೀತಿ ಟ್ಯಾಂಕ್‌ಗಳ ವಿಚಾರದಲ್ಲಿ ಹೇಳುವುದಾದರೆ, ಎಲ್ಲಾ ಟ್ಯಾಂಕ್‌ಗಳಲ್ಲೂ ಸಹ ನೀರು ತುಂಬಿರಬೇಕು. ನೀರು ತುಂಬಿದ್ದರೆ ಹವ ಚೆನ್ನಾಗಿರುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಆದೇಶವನ್ನು ಕೊಟ್ಟರು ಇದು ಒಳ್ಳೆಯ ಅಭಿಪ್ರಾಯ ಇದನ್ನು ನಾನು ಒಪ್ಪುತ್ತೇನೆ. ಆದರೆ ನಮ್ಮ ಬೆಂಗಳೂರು ನಗರದಲ್ಲಿ ಅಗ್ರಹಾರ ದಾಸರ ಹಳ್ಳಿ ಎಂದು ಇದೆ. ಅಲ್ಲಿ ಒಂದು ಟ್ಯಾಂಕ್ ಇದೆ. ಆ ಟ್ಯಾಂಕ್‌ಗೆ ಇವತ್ತು ಕೊಳಚೆ ನೀರನ್ನು ಬಿಡುತ್ತಿದ್ದಾರೆ. ಬಿ. ಡಬ್ಲ್ಯು. ಎಸ್. ಎಸ್. ಬಿ. ಯವರು ಈ ಕೊಳಚೆ ನೀರನ್ನು ಬಿಡುತ್ತಿದ್ದಿರೇ ಈ ನೀರು ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲ. ದುರ್ವಾಸನೆ ಬಡಿಯುತ್ತಿರುತ್ತದೆ ಹತ್ತಿರ ಯಾರೂ ಹೋಗುವುದಕ್ಕಾಗುವುದಿಲ್ಲ. ಸೊಳ್ಳೆಗಳ ಕಾಟ ಜಾಸ್ತಿ, ಹೀಗಾಗಿ ಅನೇಕ ರೀತಿಯ ರೋಗಗಳು ಬರುವುದಕ್ಕೆ ಕಾರಣವಾಗಿದೆ. ಇಷ್ಟೊಂದು ಕಷ್ಟವನ್ನು ಅಲ್ಲಿನ ಜನರು ಅನುಭವಿಸುತ್ತಿದ್ದಾರೆ. ನಾವು ಹೇಳುವುದೇನೆಂದರೆ, ಈ ಟ್ಯಾಂಕ್‌ನ್ನು ಬರಿದು ಮಾಡಿ ಆ ಜಾಗವನ್ನು ಶಾಲೆಗಳಿಗೋ, ಅಥವಾ ಪಾರ್ಕ್‌ಗೋಸ್ಕರವೋ ಉಪಯೋಗ ಮಾಡಿಕೊಳ್ಳಿ ಎಂದು ಈ ಧೈರ್ಯ ಇವರಿಗೆ ಇಲ್ಲ ಪ್ರತಿಯೊಂದು ಸಾರಿಯೂ ನಾನು ಹೇಳುತ್ತಲೇ ಬಂದರೂ ಯಾವುದೇ ಪ್ರಯೋಜನವು ಆಗಿಲ್ಲ. ಮಾನ್ಯ ಮುಖ್ಯ

ಮಂತ್ರಿಗಳು ಇದರ ಬಗ್ಗೆ ಯಾವುದೇ ಗಮನವನ್ನೂ ಹರಿಸುತ್ತಿಲ್ಲ. ಇದೇ ರೀತಿ ಸ್ಯಾಂಕಿ ಟ್ಯಾಂಕ್ ಇದೆ. ಅದು ಶ್ರೀಮಂತರ ಕೈಯಲ್ಲಿರತಕ್ಕ ಟ್ಯಾಂಕ್. ಅಲ್ಲಿ ರೋಯಿಂಗ್, ಬೋಟ್, ಮುಂತಾದ್ದೆಲ್ಲಾ ಇದೆ. ಆದರೆ ಬಡವರು ಇರತಕ್ಕ ಜಾಗದಲ್ಲಿ ಅಂಥಾದ್ದೆಲ್ಲಾ ಏತಕ್ಕೆ ? ಅವರಿಗೆ ಬೇಕಾದ ಪಾರ್ಕ್ ಅಥವಾ ಆಟದ ಮೈದಾನ ಮಾಡಿಕೊಟ್ಟು ಅಲ್ಲಿ ನಿಲ್ಲತಕ್ಕ ಕೊಳಚೆ ನೀರನ್ನು ಆಚೆಗೆ ಹೋಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ಬಿಡಿಎ. ಅವರು ಮಾಡತಕ್ಕಂಥ ಲೇಔಟ್‌ಗಳನ್ನು ಕೂಡಲೇ ಕಾರ್ಪೊರೇಷನ್‌ನವರ ಸ್ವಾಧೀನಕ್ಕೆ ಕೊಡುತ್ತಿಲ್ಲ. ತಮ್ಮ ಸ್ವಾಧೀನದಲ್ಲಿಯೇ ಇಟ್ಟುಕೊಂಡಿರುತ್ತಾರೆ. ಸಾಣೆಗುರುವನಹಳ್ಳಿ ಹಾಗೂ ಇನ್ನು ಅನೇಕ ಲೇಔಟ್‌ಗಳು ಬಿ.ಡಿ.ಎ. ಸ್ವಾಧೀನದಲ್ಲಿಯೇ ಇರುತ್ತದೆ. ಅಲ್ಲಿ ಬಿ.ಡಿ.ಎ.ಗೆ ಸಂಬಂಧಪಟ್ಟಂತೆ ಸ್ವತ್ತುಗಳು ಇರುತ್ತವೆ. ಅವರು ಅದಕ್ಕೆ ಬೇಲಿಯನ್ನು ಹಾಕಿ ಕಾಪಾಡಿಕೊಳ್ಳತಕ್ಕಂಥ ಕೆಲಸ ಮಾಡುತ್ತಿಲ್ಲ. ಬೇಲಿ ಹಾಕಿದ್ದರೂ ಅದನ್ನು ಕಿತ್ತು ಹಾಕುತ್ತಾರೆ. ಆದ್ದರಿಂದ ಅದನ್ನು ಕಾಪಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬಿಡಿಎ. ವಿಷಯದ ಬಗ್ಗೆ ಲೆಜಿಸ್ಲೇಚರ್ ವಿಷಯದ ಬಗ್ಗೆ ಮತ್ತು ಜಸ್ಟೀಸ್ ಈ ಮೂರು ವಿಷಯಗಳ ಬಗ್ಗೆ ಹೇಳಿಬಿಡುತ್ತೇನೆ. ಬಿ.ಡಿ.ಎ. ವಿಷಯದ ಬಗ್ಗೆ ಈಗಾಗಲೇ ಮಾತನಾಡಲು ಪ್ರಾರಂಭ ಮಾಡಿದ್ದೆ ಆದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಇಷ್ಟು ಮಾತ್ರ ಹೇಳಬೇಕಾಗಿದೆ. ಅದೇನೆಂದರೆ ಬಿಡಿಎ. ಅವರು ದಯವಿಟ್ಟು ಅವರ ಲೇಔಟ್‌ಗಳನ್ನು ಕಾರ್ಪೊರೇಷನ್‌ಗೆ ಹ್ಯಾಂಡ್ ಓವರ್ ಮಾಡತಕ್ಕಂಥ ಕೆಲಸವನ್ನು ಮಾಡಬೇಕು, ಏತಕ್ಕೆಂದರೆ ಅವರು ಸರಿಯಾದ ರೀತಿಯಲ್ಲಿ ಮೇನ್‌ಟೆನನ್ಸ್ ಮಾಡುತ್ತಿಲ್ಲ. ಜನರ ಹತ್ತಿರ ಬಯ್ಯಿಸಿಕೊಳ್ಳುತ್ತಿದ್ದಾರೆ. ರೋಡ್‌ಗಳಿಲ್ಲ. ನೀರಿನ ಸರಬರಾಜಿಲ್ಲ, ಸ್ಯಾನಿಟೇಷನ್‌ಇಲ್ಲ, ರೋಡ್‌ಗಳಿಗೆ ಟಾರ್ ಹಾಕಿಲ್ಲವೆಂದು ಜನರು ಬಾಯಿಗೆ ಬಂದಹಾಗೆ ಬಯ್ಯುತ್ತಿದ್ದಾರೆ ತಕ್ಷಣ ಇದೆಲ್ಲಾ ವ್ಯವಸ್ಥೆಯನ್ನು ಮಾಡಬೇಕು. ಮಂಜುನಾಥ್ ಲೇಔಟ್ ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್. ಥರ್ಡ್ ಸ್ಟೇಜ್‌ನಲ್ಲೂ ಕೂಡ ಇದೇ ಅವ್ಯವಸ್ಥೆ ಇದೆಲ್ಲವನ್ನು ಸರಿಪಡಿಸಬೇಕು.

ಇನ್ನು ಬಿಡಿಎ ಅವರು ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿಲ್ಲ. ಜನರು ಟ್ಯಾಕ್ಸನ್ನು ಕೊಡುವುದಕ್ಕೆ ತಯಾರಾಗಿದ್ದರೂ ಟ್ಯಾಕ್ಸನ್ನು ತೆಗೆದುಕೊಂಡು ಅವರಿಗೆ ಬೇಕಾದ ಸೌಕರ್ಯವನ್ನು ಕಲ್ಪಿಸಿಕೊಡುತ್ತಿಲ್ಲ. ಲೇಔಟ್ ಚಾರ್ಜನ್ನು ತೆಗೆದುಕೊಂಡು ಅವರಿಗೆ ಪಿ.ಸಿ. ಕೊಡುತ್ತಿಲ್ಲ. ಜನರು ಮನೆಗಳನ್ನು ಕಟ್ಟಿಕೊಂಡರೆ ಆದನ್ನು ಒಡೆಯಲು ಮಾತ್ರ ಹೋಗುತ್ತಾರೆ ಅದಕ್ಕೆ ಜನರಿಂದ ಪ್ರತಿಭಟನೆ. ನಾವು ಇಲ್ಲಿ ಧರಣಿ ಮಾಡುವುದು ಎಲ್ಲಾ ಪ್ರಾರಂಭವಾಗುತ್ತದೆ. ಅಲ್ಲಿ ದುಡ್ಡನ್ನು ಹೊಡೆಯುವವರಿಗೇ ಬೇರೆ ಇರುತ್ತಾರೆ. ಇಂಜಿನಿಯರುಗಳು ದುಡ್ಡನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಲು ಅವರೇ ಪರ್ಮಿಷನ್ ಕೊಟ್ಟುಬಿಡುತ್ತಾರೆ. ಈ ವಿಚಾರ ಮಾನ್ಯ ಚಂದ್ರಶೇಖರ್‌ರವರಿಗೆ ಗೊತ್ತಿಲ್ಲದೆ ಇಲ್ಲ. ಬಿಡಿಎನಲ್ಲಿ ಇರತಕ್ಕಂಥವರೆಲ್ಲರೂ ಕರೆಪ್ಟೆಡ್ ಎಂದು ಹೇಳುವುದಿಲ್ಲ, ಭ್ರಷ್ಟಾಚಾರ ಅಲ್ಲಿ ತುಂಬಿ ತುಳುಕಾಡುತ್ತಿದೆ. ಅದನ್ನು ಸರಿಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ಬಿಡಿಎ ಬಗ್ಗೆ ಮುಖ್ಯವಾದ ವಿಚಾರ ಹೇಳಬೇಕೆಂದರೆ, ಅಲ್ಲಿ ಕೆಟ್ಟ ಹುಳುಗಳು ಹುಟ್ಟಿಕೊಂಡಿವೆ. ಅವರು ಅಕ್ರಮಣ ಮಾಡುವುದಕ್ಕೆ ಹೋಗುತ್ತಾರೆ. ಅವರಿಗೆ ಹಿಂದುಗಡೆಯಿಂದ ಯಾರೋ ಸಹಾಯ ಮಾಡುತ್ತಿರುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಮುಂಜೋಗ್ ಇದು ಒಂದು ದೊಡ್ಡ ಸಂಸ್ಥೆ ಬಹಳ ದೊಡ್ಡ ಜನರು ನಡೆಸುತ್ತಿದ್ದಾರೆ. ಪಂಜಾಬ್‌ನವರು ಇಲ್ಲಿಬಂದು ನಡೆಸುತ್ತಿದ್ದಾರೆ. ಅವರು ಹಲವಾರು ವ್ಯಾಪಾರಗಳನ್ನು ಇಟ್ಟುಕೊಂಡಿದ್ದಾರೆ. ಮುಂಜೋಗ್ ಅಡ್ವರ್ಟೈಸ್‌ಮೆಂಟ್ ಕೊಡತಕ್ಕಂಥದ್ದನ್ನು ನೋಡಬೇಕು. ಎಷ್ಟು ದೂರ ಅನ್ಯಾಯ ನಡೆಯುತ್ತಿದೆ ಎನ್ನುವುದನ್ನು ತಾವು ಗಮನಿಸಬೇಕು. ಈವತ್ತಿನ ದಿವಸ ಮುಂಜೋಗ್ ಸೈಟುಗಳನ್ನು ಕೊಡುತ್ತೇವೆಂದು ಅಡ್ವರ್‌ಟೈಸ್‌ಮೆಂಟ್ ಕೊಡುತ್ತಿದ್ದಾರೆ. ಪೇಪರ್‌ನಲ್ಲಿ ಪಬ್ಲಿಷ್ ಮಾಡಿದ್ದಾರೆ. ಆಕ್ವಿಸೇಷನ್ ಪ್ರೊಸೀಡಿಂಗ್ಸ್ ಮಾಡುವುದಕ್ಕೆ ಕಾರಣ ಇಂತಹ ಜನರು ಪಾರ್ಟಿ ಒಳಗಡೆಯೂ ಇದ್ದಾರೆ. ಆಫೀಸ್ ಪರ್ಮಿಷನ್ ಕೊಟ್ಟಿಲ್ಲ. ಬಿಡಿಎ ದಿನಾಂಕ ೧೪-೭-೮೭ರಲ್ಲಿ ಒಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಅವರಿಂದ ಕೊಂಡುಕೊಳ್ಳಬೇಡಿ ಎಂದು ತಿಳಿಸಿದ್ದಾರೆ. ಅವನು ಬಿಡಿಎಗೆ ಏನು ಗೊತ್ತಿಲ್ಲ, ನನಗೆ ಗೊತ್ತಿದೆ ಎಂದು ಹೇಳಿ ಜನರಿಗೆ ಸೈಟನ್ನು ಕೊಂಡುಕೊಳ್ಳಿ ಎಂದು ಹೇಳುತ್ತಿದ್ದಾನೆ. ಇಂಥವರಿಗೆಲ್ಲಾ ಕಡಿವಾಣ ಹಾಕಬೇಕು. ಮತ್ತೆ ಇದೇರೀತಿ

ಯಲ್ಲಿ ಶ್ರೀ ಕೃಷ್ಣಭಟ್ ಎನ್ನುವವರು ಕೋಟ್ಯಾಂತರ ರೂಪಾಯಿ ಮಾಡಿಕೊಂಡಿದ್ದಾರೆ. ಇವರಿಗೂ ಕೊಡುತ್ತಾರೆಂದು ಕಾಣುತ್ತದೆ. ಇಂಥವರಿಗೆಲ್ಲಾ ಏತಕ್ಕೆ ನೀವು ಕಡಿವಾಣ ಹಾಕಿ ಜೈಲಿಗೆ ಕಳುಹಿಸ ಬಾರದು? ಅವರ ಹತ್ತಿರವೇ ಏತಕ್ಕೆ ಹೋಗುತ್ತೀರೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ವಿಷಯ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಬಿಡಿಎ ಅವರು ಸೈಟ್‌ಗಳಿಗೆ ಸಿಕ್ಕಾಪಟ್ಟೆ ರೇಟ್ ಜಾಸ್ತಿ ಮಾಡಿದ್ದಾರೆ. ಸೈಟ್ ಬೆಲೆ ಜಾಸ್ತಿ ಮಾಡಬೇಕು, ಅದನ್ನು ಒಪ್ಪಿಕೊಳ್ಳುತ್ತೇನೆ. ಏತಕ್ಕೆಂದರೆ ನಾನೂ ಕೂಡ ಆ ಪ್ರಾಧಿಕಾರದಲ್ಲಿ ಇದ್ದೆ. ಆಗ ಯಾವರೀತಿ ಜಾಸ್ತಿ ರೇಟ್ ಮಾಡಬೇಕು ಎನ್ನುವುದನ್ನು ಹೇಳಿದ್ದೆ. ಸಿಕ್ಕಾಪಟ್ಟೆ ಸೈಟಿನ ರೇಟನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಬಡವರು ಕೊಂಡುಕೊಳ್ಳುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಸಮಂಜಸವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ

ಮತ್ತೊಂದು ವಿಷಯವೇನೆಂದರೆ, ಈ ವಾಟರ್ ಸೂಯೆರೇಜ್ ಬೋರ್ಡ್‌ನವರು ವಾಟರ್ ರೇಟ್ ಜಾಸ್ತಿ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ವಾಟರ್ ರೇಟ್ ಜಾಸ್ತಿ ಮಾಡಿರುವುದನ್ನು ಬೆಂಗಳೂರು ಜನರು ಟಾಲರೇಟ್ ಮಾಡುವುದಿಲ್ಲ. ಬೋರ್ಡ್‌ನವರು ಹಾಗೂ ಕಾರ್ಪೊರೇಷನ್‌ನವರು ಕುಳಿತು ಚರ್ಚೆ ಮಾಡಿದರೆ ಒಳ್ಳೆಯದು. ಅವರು ಇಷ್ಟಬಂದಹಾಗೆ ಜಾಸ್ತಿ ಮಾಡಿಕೊಂಡರೆ ಇದರಿಂದ ಜನತೆಗೆ ತೊಂದರೆ ಉಂಟಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅನೇಕ ಕಡೆ ಸಿವಿರೇಜ್ ಇಲ್ಲ. ಸಿವಿರೇಜ್ ಹಾಕುತ್ತಾರೆ, ಔಟ್‌ಪೋಲ್ ಎಂದು ಹೇಳುತ್ತಾರೆ. ಮೇಯಿನ್ ಪೈಪ್‌ಗೆ ಕನೆಕ್ಟ್ ಮಾಡಿಲ್ಲ. ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿಯ ಮೊದಲನೇ ಮತ್ತು ಎರಡನೇ ಹಂತರ ಕಡೆ, ವಿಜಯನಗರ ಮುಂತಾದ ಕಡೆ ಹೋದರೆ ಸಿವಿರೇಜ್ ವಾಟರ್ ಎಲ್ಲಾ ಅಲ್ಲೇ ನಿಲ್ಲುತ್ತದೆ. ಇದರಿಂದ ತೀರಾ ಕೆಟ್ಟ ಪರಿಣಾಮವಾಗಿದೆ. ಇದಕ್ಕೆ ಹಣ ಖರ್ಚು ಮಾಡಬೇಕಾಗಿದೆ. ಬೇರೆ ಪೈಪುಗಳನ್ನು ಹಾಕದೆ ಎಲ್ಲ ಕಟ್ಟಿಕೊಂಡು ತೊಂದರೆಯಾಗಿದೆ. ಇದರ ಕಡೆಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ಕಾವೇರಿ ೩ನೇ ಹಂತ ಆಗುವ ಮಟ್ಟಿಗೆ ಕಾಣೆ. ಏಕೆಂದರೆ ಆಮೆ ಹೆಜ್ಜೆಯಲ್ಲಿ ಹೋಗುತ್ತಿದ್ದಾರೆ. ೪ನೇ ಹಂತದ ಬಗ್ಗೆ ಯೋಚಿಸಿ ಮುಂದುವರಿಯಬೇಕೆಂದು ಹೇಳುತ್ತೇನೆ. ಇನ್ನು ತಾವು ಒಂದು ಪತ್ರವನ್ನು ಕಳುಹಿಸಿದ್ದೀರಿ ಅದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ವಿಧಾನ ಮಂಡಲದ ಕೆಲಸ ಬಹಳ ಚೆನ್ನಾಗಿ ನಡೆದಿದೆ. ವಿಧಾನ ಮಂಡಲದ ಇತಿಹಾಸದಲ್ಲಿ ಮೊದಲ ಬಾರಿಗೆ ನೋಡಿದ ವಿಶೇಷ ಸಂಗತಿ ಎಂದರೆ ಈ ತರಹದ ಪತ್ರವನ್ನು ನನಗೆ ಅಧ್ಯಕ್ಷರು ಕಳುಹಿಸಿರುವುದು. ಇದನ್ನು ನೋಡಿದರೆ ಸಂತೋಷವಾಗುತ್ತದೆ. ನಮಗೆ ಇಲ್ಲಿ ಮಾತನಾಡಿದ ತಕ್ಷಣ ೨-೩ ದಿನಗಳಲ್ಲಿ ವರದಿ ಬರುತ್ತದೆ. ಯಾವುದೇ ರಿಪೋರ್ಟ್ ಮಾಡುವುದಕ್ಕೆ ಅನುಕೂಲವಾಗಿದೆ. ಮೊದಲು ಡಿಲೇ ಆಗುತ್ತಿತ್ತು. ತಿಂಗಳಾನುಗಟ್ಟಲೆ, ವರ್ಷಾನುಗಟ್ಟಲೆ ಮುದ್ರಣವಾಗುವುದರಲ್ಲಿ ವಿಳಂಬವಾಗುತ್ತಿದ್ದುದನ್ನು ತಾವು ಬಂದಮೇಲೆ ಹದ್ದುಬಸ್ತಿಗೆ ತರುತ್ತಿರುವುದು ಸಂತೋಷದ ವಿಷಯ. ಇದೇ ರೀತಿ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಬಡ್ತಿ ವಿಷಯ ಪ್ರಸ್ತಾಪಿಸಿದ್ದೀರಿ. ನೌಕರರ ಶಿಸ್ತು, ಅವರು ಕಛೇರಿಗೆ ಬರುವ ವೇಳೆ ಕೆಲಸ ಮಾಡುವ ಬಗ್ಗೆ ಎಲ್ಲಾ ಹೇಳಿದ್ದೀರಿ, ಕಾರುಗಳ ಬಗ್ಗೆ ಕೂಡ ಹೇಳಿದ್ದೀರಿ. ಈಗ ಇದನ್ನೆಲ್ಲಾ ಹೆಚ್ಚು ಓದುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಇಲ್ಲಿರತಕ್ಕ ನೌಕರರ ಬಗ್ಗೆ ಕೆಲಸ ಮಾಡುವುದರ ಬಗ್ಗೆ, ಪಗಾರ ಕೊಡುವುದರ ಬಗ್ಗೆ ಹೇಳಿದ್ದೀರಿ. ಅವರಿಗೆ ಓವರ್ ಟೈಂ ಅಲೋಯನ್ಸ್ ಕೊಡುವ ಬಗ್ಗೆಯೂ ಹೇಳಿದ್ದೀರಿ. ಓವರ್ ಟೈಂ ಅಲೋಯನ್ಸ್ ಅನ್ನು ಕೆಲಸ ಮಾಡಿದವರು ತೆಗೆದುಕೊಳ್ಳುವುದು ನ್ಯಾಯ. ಕೆಲಸ ಮಾಡದವರು ತೆಗೆದುಕೊಳ್ಳುವುದು ಅನ್ಯಾಯ. ಕೆಲಸ ಮಾಡದವರು ತೆಗೆದುಕೊಂಡರೆ ಲೂಸ್ ಪಂಕ್ಚನಿಂಗ್ ಆಗುತ್ತದೆ ಅದರ ಬಗ್ಗೆ ತಾವು ಗಮನ ಕೊಟ್ಟಿದ್ದೀರಿ. ಕೆಲಸ ಮಾಡಲಿ, ತೆಗೆದುಕೊಳ್ಳಲಿ. ಕೆಲಸ ಮಾಡದೆ ತೆಗೆದುಕೊಳ್ಳುವುದು ಸರಿಯಲ್ಲ. ನಾನು ಕೂಡ ಟ್ರೇಡ್ ಯೂನಿಯನ್‌ನಲ್ಲಿ ಕೆಲಸ ಮಾಡುವವನು. ಕೆಲಸ ಮಾಡದೆ ಕೊಡುವುದು ಹೇಗೆ ಆಗುತ್ತದೆ. ಅದನ್ನು ತಾವು ಗಮನಿಸಿ ಒಳ್ಳೆಯ ಕೆಲಸ ಮಾಡಿದ್ದೀರಿ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಬೇರೆ ವಿಷಯದ ಬಗ್ಗೆ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ವಿಧಾನ ಮಂಡಲದ ನೌಕರರ ಸಂಘದವರು ಏನಿದ್ದಾರೆ ಅವರೊಡನೆ ಚರ್ಚೆ ಮಾಡಬೇಕು. ನಮ್ಮಂಥ (ನಾನು ಬಹಳ ತಿಳಿದವನು ಎಂದು ಹೇಳಿಕೊಳ್ಳುವುದಿಲ್ಲ) ತಿಳಿದವರು ಏನಿದ್ದಾರೆ ಅವರನ್ನು ಕರೆಸಬೇಕು. ನಾವು ಆ ಒಂದು

ವೃತ್ತಿಯಲ್ಲಿರುವುದರಿಂದ, ನಾವು ಬರುತ್ತೇವೆ. ನಮಗೆ ತಿಳಿದ ಮಟ್ಟಿಗೆ ಸಲಹೆ ಸೂಚನೆಗಳನ್ನು ಕೊಡುತ್ತೇವೆ. ಹೀಗೆ ಮಾಡಿ ಎಂದು ಹೇಳುವಂಥ ಧೈರ್ಯವಾಗಲಿ, ಎದೆಗಾರಿಕೆಯಾಗಲಿ ನನಗೆ ಇಲ್ಲ. ಆದರೂ ಇಷ್ಟು ಮಾತ್ರ ಹೇಳುತ್ತೇನೆ. ತಾವು ಮಾಡಿರುವುದು, ಹೇಳಿರುವುದು ಒಳ್ಳೆಯದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಮ್ಮ ಬಗ್ಗೆ ಇನ್ನೊಂದು ಮಾತು ಹೇಳಬೇಕಾಗಿದೆ. ಆಹಾರ ಮತ್ತು ನಾಗರೀಕ ಸರಬರಾಜು ಬಗ್ಗೆ ತಾವು ಒಂದು ವರದಿ ಕೊಟ್ಟಿದ್ದೀರಿ ಅದರ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ ಗಿರಣಿ ಹಂತದಲ್ಲಿ ಲೆವಿ ಪ್ರಮಾಣವನ್ನು ೫೦ ರಿಂದ ೩೩ ಪರ್ಸೆಂಟ್‌ಗೆ ಇಳಿಸಿರುವುದರಿಂದ, ಗಿರಣಿ ಮಾಲೀಕರಿಗೆ ತೊಂದರೆಯಾಗಿದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿಕೆ ಕೊಟ್ಟ ಪ್ರಕಾರ ಗಿರಣಿ ಮಾಲೀಕರಿಗೆ ತೊಂದರೆಯಾಗಿದೆ. ಆದ್ದರಿಂದ ತಾವು ಗಿರಣಿ ಮಾಲೀಕರ ಮತ್ತು ರೈತರ ರಕ್ಷಣೆ ಮಾಡುತ್ತೀರಾ ಎಂದು ಕೇಳಬೇಕಾಗಿದೆ. ಲೆವಿ ಅಕ್ಕಿಯ ಬೆಲೆ ಕ್ವಿಂಟಾಲಿಗೆ ಅತ್ಯುತ್ತಮವಾದದ್ದು ೨೯೦ ರೂಪಾಯಿ, ಉತ್ತಮ ಮಟ್ಟದ್ದು ೨೩೫ ರೂಪಾಯಿ, ಸಾಮಾನ್ಯವಾದುದು ೨೨೫ ರೂಪಾಯಿ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿ ನಮಗೆ ಹೆಚ್ಚು ಸಪೋರ್ಟ್ ಪ್ರೈಸ್ ಕೊಡಿ ಎಂದು ಕೇಳುತ್ತಿದ್ದೇವೆ ಎಂದು ಮಾನ್ಯ ಹೇಗಡೆಯವರು ಹೇಳಿದ್ದಾರೆ. ಈ ಸರ್ಕಾರ ಏನು ಮಾಡಿದರೂ ಸರಿಸಮಾನವಾಗಿ ತೂಗಿಸುವುದಕ್ಕೆ ಸಾಧ್ಯವಾಗಿಲ್ಲ. ಹೇಗೆ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು ಯೋಚಿಸಿ, ನ್ಯಾಯ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಅಭಿಪ್ರಾಯವನ್ನು ಸರ್ಕಾರವು ಅಥವಾ ತಾವು ಒಪ್ಪಿಕೊಳ್ಳುವುದಿಲ್ಲವೆಂದು ಕಾಣುತ್ತದೆ, ಅದೇನೆಂದರೆ ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ಸರ್ಕಾರವೇ ತೆಗೆದುಕೊಂಡು ರೈತರಿಗೆ ನ್ಯಾಯ ಬೆಲೆ ಕೊಟ್ಟು ಮಾರಾಟ ಮಾಡಿದರೆ ಉತ್ತಮ ಬೆಲೆ ಸಿಗುತ್ತದೆ ಮತ್ತು ರೈತರಿಗೆ, ಜನಗಳಿಗೆ ನ್ಯಾಯ ಸಿಗುತ್ತದೆ ಎಂಬುದು ಎಲ್ಲಿಯವರೆಗೆ ಇದನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಫೇರ್‌ಪ್ರೈಸ್ ಷಾಪ್ಸ್ ಇರಬಹುದು; ಅಲ್ಲಿಯೂ ಹುಳುಕು ಇದೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಸಮಯ ಇಲ್ಲ.

೧–೩೦ ಪಿ.ಎಂ.

ತಮ್ಮ ಮೂಲಕ ಒಂದು ಹೇಳುತ್ತೇನೆ. ತಾವು ವರದಿ ಕೊಟ್ಟಿದ್ದೀರಿ. ಅದರ ಬಗ್ಗೆ ಸರ್ಕಾರದವರು ಏನು ಮಾಡಿದ್ದಾರೆ ಹೇಳಬೇಕು. ೧೯೮೪–೮೫ರಲ್ಲಿ ತಾವೇ ತಾವೇ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ಛೇರ್ಮನ್ ಆಗಿದ್ದಿರಿ. ಇದನ್ನು ಓದುವುದಕ್ಕೆ ಟೈಮಿಲ್ಲ.

ಅಧ್ಯಕ್ಷರು.—ಈಗಿಲ್ಲ. ಹಿಂದೆ ಆಗಿದ್ದೆ.

ಶ್ರೀ ಎಂ.ಎಸ್. ಕೃಷ್ಣನ್.—ಬಹಳ ಒಳ್ಳೆಯ ವರದಿಯನ್ನು ಕೊಟ್ಟಿದ್ದೀರಿ. ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್ ಬಗ್ಗೆ ೨೧ನೇ ವರದಿಯನ್ನು ಕೊಟ್ಟಿದ್ದೀರಿ. ಇದರಲ್ಲಿ ಎರಡು ಮಾತು ಹೇಳಿದ್ದೀರಿ. ಅದನ್ನು ಗಣನೆಗೆ ತೆಗೆದುಕೊಳ್ಳಬೇಕು. ಮೊದಲನೆಯದು ಮತ್ತು ಕಡೆಯದು ಎರಡನ್ನು ಹೇಳುತ್ತೇನೆ. ಮಧ್ಯದ್ದು ಓದುವುದಿಲ್ಲ.

"In reply to a query, the comm ttee was informed that no parameters of performance have been fixed or laid down (by the Government to judge the performance of the Corporation) either at the time it was set up or subsequently."

"It is noticed that the Corporation has relatively limited cope for independent action as the machinery of its functioning is largely influenced by the directions from Government."

"The Committee feel that the Corporation being commercial undertaking it should be made possible to assess periodically the achievements of the Corporation in the

fields set for it. Based on Government policies the Government has to set apart areas of functioning for the Corporation and fix parameters of performance so that the attainments could be periodically assessed during actual working. In this regard, position in other States/Centre may also be studied and resultant action taken intimated to the Committee."

ಇನ್ನೊಂದು ಬಹಳ ಮುಖ್ಯವಾದ ರೆಕ್‌ಮಂಡೇಷನ್ ಹೇಳಿರುವುದು ಏನೆಂದರೆ, ಅನೇಕ ಕಡೆ ಕೋಟ್ಯಾಂತರ ರೂಪಾಯಿಗಳಲ್ಲಿ ರಿಕ್‌ವರಿ ಮಾಡಿಲ್ಲ ಎಂಬುದು. ಶಂಕರ್ ರೈಸ್‌ಮಿಲ್, ಮಲೆನಾಡ್ ಟ್ರೇಡರ್ಸ್ ಹೀಗೆಲ್ಲಾ ಬಹಳ ಕೊಟ್ಟಿದ್ದೀರಿ. ೧೬ ಹೆಸರುಗಳನ್ನು ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ಅಧ್ಯಕ್ಷರಾಗಿದ್ದಾಗ ಕೊಟ್ಟಿದ್ದಾರೆ. ಏತಕ್ಕೆ ವಸೂಲು ಮಾಡಿಲ್ಲ ಎಂಬುದಕ್ಕೆ ಉತ್ತರ ಕೊಡಿ ಎಂದು ಹೇಳಿದ್ದೀರಿ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಯಾರಿಂದ ವಸೂಲಿಯಾಗಿದೆ ಏನು ಆಕ್ಷನ್ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು. ಕಡೆಯದಾಗಿ ಒಂದು ಮಾತು ಹೇಳಿದ್ದಾರೆ. ಇದು ಬಹಳ ಸ್ಪಷ್ಟ.

"If only the Government / Corporation had planned for procurement of the bumper harvest and for the items of work that follow from it properly and in a methodical way and had drafted the Agreement properly with sufficient care and caution to protect the property and interests of Government and arranged to implement the clauses in the Agreement, faithfully so that Government's / Corporation‘s interests are not jeopardised in any way, all this delay, inconvenience and loss amounting to Rs. 6 crores (Loss yet to be finally determined) could have been avoided."

"As soon from the above, the Committee is not satisfied with the working of the Corporation and the way the officers, the IAS officers, then incharge of the Corporation and Officials of the Corporation have been executing the duties entrusted to them and expected of them. It is necessary to make amends for all the past lapses in the interest of improved working of the Corporation. Steps taken/proposed to be taken may be intimated to the Committee in six months."

I don't think any step has been taken in regard to these things.

ಒಂದೇ ಒಂದು ಜಸ್ಟೀಸ್ ಬಗ್ಗೆ ಹೇಳುತ್ತೇನೆ. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಬೇರೆಯವರು ಮಾತನಾಡುತ್ತಾರೆ. ಒಂದು ವಿಷಯ ಗೊತ್ತಾಯಿತು. ಚೀಫ್ ಜಸ್ಟೀಸ್ ಅವರಿಗೆ ಬಹಳ ದೊಡ್ಡ ಮನೆ ಕೊಟ್ಟಿದ್ದಾರೆ. ಚೀಫ್ ಜಸ್ಟೀಸ್ ಅವರು ಮೊದಲು ಕೊಟ್ಟಿದ್ದನ್ನು ಅದು ಬೇಡ ಬೇರೆ ಕಡೆ ಕೊಡಿ ಎಂದು ಹೇಳಿದರು. ಮಾನ್ಯ ಬೊಮ್ಮಾಯಿಯವರು ಇರುವ ಜಾಗವನ್ನು ಕೇಳಿದರು. ಮಾನ್ಯ ಬೊಮ್ಮಾಯಿಯವರು ಒಳ್ಳೆಯವರು ಆಗಲಿ ಎಂದು ಒಪ್ಪಿಕೊಂಡರು. ನನಗೆ ತಿಳಿದುಬಂದಿರುವುದು ಅದನ್ನು ರಿನೊವೇಟ್ ಮಾಡುವುದಕ್ಕೆ ೧೫ ಲಕ್ಷ ರೂಪಾಯಿ ಆಗಿದೆಯಂತೆ. ಇದು ನ್ಯಾಯವೇ ಸ್ವಾಮಿ ? ರೋಡಿಗೆ, ಲೈಟ್‌ಗೆ ದುಡ್ಡು ಕೇಳಿದರೆ ಕೊಡುವುದಿಲ್ಲ. ಜಸ್ಟೀಸ್ ಎಂದರೆ ಅವರ ಸ್ಥಾನಮಾನಕ್ಕೆ ಅನುಕೂಲ ಮಾಡಿಕೊಡಿ. ಆದರೆ ೧೫ ಲಕ್ಷ ರೂಪಾಯಿ ಏತಕ್ಕೋ ಅರ್ಥವಾಗುವುದಿಲ್ಲ.

ಶ್ರೀ ಕೆ.ಎಸ್. ನಾಗರತ್ನಮ್ಮ.—ಮಿನಿಸ್ಟರ್ ಮನೆ ಅದು.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿರುವ ಹಳೆಯದನ್ನೆಲ್ಲಾ ತೆಗೆದು ಬೇರೆ ಮಾಡಿದ್ದಾರೆ. ಇದು ಸರಿಯಾದುದಲ್ಲ. ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಿ, ಚರ್ಚೆ ಮಾಡಿ ನಮ್ಮ ರಾಜ್ಯದ ಪರಿಸ್ಥಿತಿ ನೋಡಿ, ಎಕನಾಮಿಕ್ ಸಿಚುಯೇಷನ್ ಬ್ಯಾಡ್ ಎಂದು ಹೇಳುವಾಗ ನೋಡಿ ಮಾಡಬೇಕಾಗಿತ್ತು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೆ, ನ್ಯಾಯಾಂಗದ ಬಗ್ಗೆ ಕೆಲವು ವಿಚಾರಗಳನ್ನು ನಾನು ಮಾತನಾಡುತ್ತೇನೆ. ಮಿಕ್ಕ ವಿಷಯಗಳನ್ನು ಜಾಸ್ತಿ ಮಾತನಾಡುವುದಿಲ್ಲ. ನಮ್ಮ ಹೈಕೋರ್ಟ್ ಯಾವರೀತಿ ಕೆಲಸ ಮಾಡುತ್ತಿದೆ ಎಂಬುದು ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಗೊತ್ತು. ಸೆಕೆಂಡ್ ಅಪೀಲ್ ಹಾಕಿದರೆ ಎಂಟು ವರ್ಷವಾಗುತ್ತದೆ. ಮಿಸಲೇನಿಯಸ್ ಫಸ್ಟ್ ಅಪೀಲ್ ಹಾಕಿದರೆ ೫ ವರ್ಷವಾಗುತ್ತದೆ ಹತ್ತು ವರ್ಷದ ಮುಂಚೆ ಲಿಟಿಗೇಷನ್ ಶುರುವಾಗಿದ್ದರೆ ಇಲ್ಲಿ ಇನ್ನೂ ೧೦ ವರ್ಷವಾಗುತ್ತದೆ. ಅಂತೂ ಇಂತೂ ತೀರ್ಮಾನವಾಗುವುದರೊಳಗೆ ವಾದಿ ಪ್ರತಿವಾದಿ ಇಬ್ಬರೂ ಸ್ವರ್ಗಸ್ಥರಾಗಿರುತ್ತಾರೆ. ಅವರ ಮಕ್ಕಳು ಬರುತ್ತಾರೆ ವ್ಯಾಜ್ಯ ಮಾಡುವುದಕ್ಕೆ ಇದರಿಂದ ಅನ್ಯಾಯ ಆಗುತ್ತಿದೆ. ಆರ್.ಎಸ್.ಎ. ಮತ್ತು ಎಂ.ಎಸ್.ಎ.ಗೆ ಒಂದೊಂದು ಬೆಂಚ್ ಇದೆ. ಅದನ್ನು ಎರಡರಷ್ಟು ಮಾಡಿದರೆ ಬೇಗ ಮುಗಿಯುತ್ತದೆ. ಸಧ್ಯಕ್ಕೆ ಮಂದಿಸಬೇಕು, ಮೂರು ಜನ ಜಡ್ಜಸ್ ಕೊಟ್ಟರು. ಇನ್ನೂ ಆರೇಳು ಜನ ಅಪಾಯಿಂಟ್ ಮಾಡಬೇಕು. ಇವರು ರೆಕಮೆಂಡ್ ಮಾಡಿರುವವರಲ್ಲಿ ಸಂಬಂಧಿಕರೇ ಇರುವುದರಿಂದ ನಾನು ಒಪ್ಪುವುದಿಲ್ಲ ಎಂದು ಕೇಂದ್ರ ನ್ಯಾಯಾಂಗ ಮಂತ್ರಿಗಳು ಹೇಳಿದರು. ಅದು ಪೇಪರ್‌ನಲ್ಲಿ ಕೂಡ ಬಂದಿದೆ. ಏನಾದರೂ ಡಿಸ್‌ಪ್ಯೂಟ್ಸ್ ಇದ್ದರೆ ಅವರ ಜೊತೆಯಲ್ಲಿ ಕುಳಿತುಕೊಂಡು ಮಾತನಾಡಿ ಹೆಚ್ಚು ನ್ಯಾಯಾಧೀಶಗಳನ್ನು ನೇಮಕ ಮಾಡಿ. ಅದರಲ್ಲಿ ಸಂಬಂಧಿಗಳು, ಸ್ನೇಹಿತರು ಇಂತಹವರು ಇದ್ದರೆ ಬಿಟ್ಟುಬಿಡುವುದು ಒಳ್ಳೆಯದು. ಜಡ್ಜಸ್ ಯಾರು ಇದ್ದಾರೆ, ಅವರ ಇಂಟಿಗ್ರಿಟಿಯನ್ನು ನೋಡಿ ಮುಂದಿನ ಕ್ರಮತೆಗೆದುಕೊಳ್ಳಿ. ಒಟ್ಟಿನಲ್ಲಿ ಹೇಗಾದರೂ ಮಾಡಿ ಹೈಕೋರ್ಟಿನ ಜಡ್ಜಸ್‌ನ್ನು ಹೆಚ್ಚು ಮಾಡಬೇಕು. ಇನ್ನು ಸಿವಿಲ್ ಜಡ್ಜ್ ಕೋರ್ಟುಗಳ ಬಗ್ಗೆ ಹೇಳುವುದಾದರೆ, ಆ ಕೋರ್ಟುಗಳಲ್ಲಿರತಕ್ಕ ಪೆಂಡಿಂಗ್ ಕೇಸುಗಳ ಬಗ್ಗೆ ಅಂಕಿ ಅಂಶಗಳನ್ನು ನೋಡಿ ಭಯವಾಗುತ್ತದೆ. ಹೋದ ವರ್ಷ ೧೭ ಸಾವಿರ ಕೇಸುಗಳು ಪೆಂಡಿಂಗ್ ಇದ್ದರೆ, ಈ ವರ್ಷ ೧೮ ಸಾವಿರ ಕೇಸುಗಳು ಪೆಂಡಿಂಗ್ ಇದೆ. ಅನೇಕ ಸಲ ಲಾಯರ್ಸ್‌ಗಳೂ ಕೂಡ ಕೋರ್ಟುಗಳನ್ನು ಜಾಸ್ತಿ ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ಯಾರಾದರೂ ಏನಾದರೂ ಸಲಹೆ ಮಾಡಿದರೆ, ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಏನು ಮಾಡುತ್ತಾರೆಂದರೆ, ಅವರು ಹಾನೆಸ್ಟ್ ಇಲ್ಲ ಎಂದು ಬಿಡುತ್ತಾರೆ. ಆದರೆ ಅವರಿಗೆ ಇರತಕ್ಕ ಒಂದೇ ಒಂದು ಕಾಯಿಲೆ ಅಂದರೆ ಬಹಳ ಒರಟು. ತಾಮ್ರದ ಕಿವಿ. ಅವರು ಒಂದು ಸಾರಿ ಮೊಲಕ್ಕೆ ಮೂರು ಕಾಲು ಇರುವುದು ಅಂತ ಹೇಳಿದರೆ, ಅದನ್ನೇ ಒಪ್ಪಿಕೊಳ್ಳಬೇಕು. ಇಲ್ಲ, ಮೊಲಕ್ಕೆ ನಾಲ್ಕು ಕಾಲು ಅಂತ ಹೇಳಿದರೂ ಅವರು ಒಪ್ಪುವುದೇ ಇಲ್ಲ. ಸಿವಿಲ್ ಕೋರ್ಟುಗಳನ್ನು ಜಾಸ್ತಿ ಮಾಡಬೇಕು. ಸಿವಿಲ್ ಕೋರ್ಟುಗಳಲ್ಲಿ ಹೋದ ಸಲ ೧೭,೪೪೪ ಕೇಸುಗಳು ಪೆಂಡಿಂಗ್ ಇದ್ದರೆ ಈ ಸಾರಿ ೧೯,೭೭೧ ಕೇಸುಗಳು ಪೆಂಡಿಂಗ್‌ನಲ್ಲಿವೆ. ಅಂದರೆ ೨೩೨೭ ಕೇಸುಗಳು ಜಾಸ್ತಿಯಾದ ಹಾಗೆ ಆಯಿತು. ಅವರು ಕೊಟ್ಟಿರುವಂತಹ ವಾರ್ಷಿಕ ವರದಿಯ ಪುಟ ೨೩ರಲ್ಲಿ ನೋಡಿದ್ದೇ ಆದರೆ ಪ್ರತಿಯೊಂದರಲ್ಲೂ ಪೆಂಡಿಂಗ್ ಇರತಕ್ಕಂತಹದ್ದು ಜಾಸ್ತಿಯಾಗಿದೆ. ಕೋಲಾರದಲ್ಲಿ ಎರಡು ಕಡೆ ಕೊಡಿ ಎಂಬುದಾಗಿ ಕೇಳುತ್ತಿದ್ದಾರೆ. ಅದೇ ರೀತಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸಿವಿಲ್ ಕೋರ್ಟಿನ ಅವಶ್ಯಕತೆ ಬಹಳ ಇದೆ. ಅದನ್ನು ಈ ಸಾರಿ ಮಂಜೂರು ಮಾಡಿ ಕೊಡಬೇಕು. ಅದೇ ರೀತಿ ಪ್ರತಿ ತಾಲ್ಲೂಕಿಗೊಂದರಂತೆ ಮುನ್ಸೀಫ್ ಕೋರ್ಟುಗಳನ್ನು ಮಂಜೂರು ಮಾಡುವುದು ಒಳ್ಳೆಯದು. ಆ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಇನ್ನು ಸಬಾರ್ಡಿನೇಟ್ ಜ್ಯುಡಿಷಿಯರಿ ಆಫೀಸರ್ಸ್ ಆಗಿ ಕೆಲಸ ಮಾಡುತ್ತಿರುವವರು ಏನು ಇದ್ದಾರೆ, ಅವರಿಗೆ ಕೊಡುತ್ತಿರುವ ಸಂಬಳ ಬಹಳ ಕಡಿಮೆ. ಮುನ್ಸೀಫರಿಗೆ ಕೊಡತಕ್ಕಂತಹ ಸಂಬಳ ಕೆ.ಎಸ್.ಆರ್.ಟಿ.ಸಿ. ಕಂಡಕ್ಟರ್‌ಗೆ ಬಂದಷ್ಟು ಬರುತ್ತಿದೆ. ಕಾನೂನು ಪ್ರಕಾರ ಅವರು ೮ ಗಂಟೆಗಳ ಕಾಲ ಕೆಲಸ ಮಾಡಬೇಕಾಗಿದ್ದರೂ. ೧೨ ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಜಾಸ್ತಿ ಕೊಡಿ. ಶ್ರೀಮಾನ್ ಲಕ್ಷ್ಮೀಸಾಗರ್ ರವರಿಗೆ ಈ ವಿಚಾರವನ್ನು ಎತ್ತಿದರೆ ಕೋಪ ಬರುತ್ತದೆ. ಆ ರೀತಿಯ ಕೋಪ ಏಕೆಂದರೆ, ಅವರು ನಮಗೊಂದು ಮೆಮೊರಾಂಡಮ್ಮನ್ನೇ ಕೊಟ್ಟಿಲ್ಲ ಎಂಬುದಾಗಿ ಹೇಳುತ್ತಾರೆ. ಜ್ಯುಡಿಷಿಯಲ್

ಆಫೀಸರ್ಸ್‌ಗಳ ಮೀಟಿಂಗ್ ಕೂಡ ಆಗಿದೆ. ಹೈಕೋರ್ಟ್ ಜಡ್ಜಸ್‌ಗಳಿಗೆ ೭ ಸಾವಿರದಿಂದ ೯ ಸಾವಿರದವರೆಗೆ ಸಂಬಳವನ್ನು ಕೊಡುತ್ತಿದ್ದೀರಿ. ಅದೇ ಮುನ್ಸೀಫರಿಗೆ ೧೨೦೦ ರೂ.ಗಳನ್ನು ಕೊಡುತ್ತಿದ್ದೀರಿ. ಇದು ಏನೇನೂ ಸಾಲದು ಜಾಸ್ತಿ ಮಾಡಿ. ಅದೇ ರೀತಿ ಎ.ಪಿ.ಪಿ.ಯವರ ಬಗ್ಗೆ ಹೇಳುವುದಾದರೆ, ಎಲ್ಲೂ ಕೆಲಸ ಸಿಕ್ಕದೇ ಇರುವವರು ಅಲ್ಲಿಗೆ ಬರಬೇಕಾಗಿದೆ. ಅವರು ಕೊಡುತ್ತಿರುವ ಸಂಬಳ ತಹಸೀಲ್ದಾರ್‌ರವರಿಗೆ ಕೊಟ್ಟಷ್ಟೇ ಕೊಡುತ್ತಿದ್ದೀರಿ. ಅವರಿಗೆ ಸಂಬಳವನ್ನು ಜಾಸ್ತಿ ಮಾಡದಿದ್ದರೆ, ಬಂದಂತಹವರಿಂದ ದುಡ್ಡನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಹಾನೆಸ್ಟಿ ಇರತಕ್ಕಂತದ್ದು ಇದೊಂದೇ ಇಲಾಖೆಯಲ್ಲಿ. ಇಂತಹ ಇಲಾಖೆಯಲ್ಲಿ ಕೆಲಸ ಮಾಡುತ್ತಿರತಕ್ಕಂತಹವರಿಗೆ ದಯವಿಟ್ಟು ಸಂಬಳವನ್ನು ಜಾಸ್ತಿ ಮಾಡಿ.

ಶ್ರೀ ಬಿ. ಸ್ವಾಮಿರಾವ್.—ಇದೊಂದೇ ಒಳ್ಳೆಯ ಇಲಾಖೆ ಎಂಬುದಾಗಿ ನೀವು ತಿಳಿದುಕೊಂಡಿರುವುದು ತಪ್ಪು.

ಶ್ರೀ ಆರ್. ವೆಂಕಟರಾಮಯ್ಯ.—ಈ ಇಲಾಖೆ ಒಳ್ಳೆಯ ಇಲಾಖೆ ಅಂತ ನಾನು ತಿಳಿದುಕೊಂಡಿದ್ದೇನೆ. ಬೇರೆ ಇಲಾಖೆಯಲ್ಲಿದ್ದಾಗ ಇಲ್ಲಿ ಇಲ್ಲ. ಅವರ ಶ್ರೇಷ್ಟತೆ ಏನು ಇದೆಯೋ ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಉದ್ದೇಶದಿಂದ ನಾನು ಅವರನ್ನು ಕೇಳಿಕೊಳ್ಳುವುದೇನೆಂದರೆ, ಅವರ ಸಂಬಳ ಸಾರಿಗೆಯನ್ನು ಜಾಸ್ತಿ ಮಾಡಿ ಎ. ಪಿ. ಪಿ. ಪೋಸ್ಟುಗಳು ವಿಪರೀತ ಖಾಲಿ ಇವೆ. ಅವುಗಳನ್ನು ಕೂಡಲೇ ತುಂಬಿಸಿರಿ. ನ್ಯಾಯಾಂಗದ ಬಗ್ಗೆ ಹೇಳುವುದಾದರೆ, ''ಗೆದ್ದವನು ಸೋತ—ಸೋತವನು ಸತ್ತ'' ಎನ್ನುವ ಗಾದೆಯಂತೆ ಕೋರ್ಟಿಗೆ ಹೋದರೆ ಮುಗಿಯಿತು. ಏನೇನು ಆಗಬೇಕೋ ಈ ಪ್ರಪಂಚದಲ್ಲಿ ಅವೆಲ್ಲಾ ಅಲ್ಲೇ ನೆಲಸಮ ಆಗಿ ಹೋಗುತ್ತದೆ. ಅಂತಹ ಒಂದು ಪರಿಸ್ಥಿತಿ ಬಂದಿದೆ. ಆದ್ದರಿಂದ ನ್ಯಾಯಾಂಗದ ವಿಚಾರದಲ್ಲಿ ನಿಜವಾಗಿಯೂ ಅನುಕೂಲವನ್ನು ಮಾಡಿಕೊಡಬೇಕು. ಈ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್‌ರವರು ಹೆಚ್ಚು ಗಮನ ಕೊಡಬೇಕೆಂದು ನ್ಯಾಯಾಂಗದ ವಿಚಾರದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ.

ಸಂಸದೀಯ ವ್ಯವಹಾರಗಳ ಬಗ್ಗೆ ಯೋಚನೆ ಮಾಡುವುದಾದರೆ, ನೀವು ಬರೆದಂತಹ ಪತ್ರವನ್ನು ನಾನೂ ಓದಿದ್ದೇನೆ. ನಿಜವಾಗಿಯೂ ಬಹಳ ಚೆನ್ನಾಗಿ ಬರೆದಿದ್ದೀರಿ.

ಈ ಪ್ರಮೋಷನ್ ಬಗ್ಗೆ ಹತ್ತಾರು ಸಾರಿ ನನ್ನ ಹತ್ತಿರವೂ ಬಂದಿದ್ದರು. ಅದರಲ್ಲಿ ಒಂದು ಪ್ಯಾರಾ ಮಾತ್ರ ನಾನು ಓದುತ್ತೇನೆ. ನಿಜವಾಗಿಯೂ ನಿಮಗೆ ಕಾಂಪ್ಲಿಮೆಂಟ್ ಮಾಡಬೇಕಾಗುತ್ತದೆ. ನಾವು ಇಲ್ಲಿ ಚರ್ಚೆಯಲ್ಲಿ ಭಾಗವಹಿಸಿದರೆ ಅದರ ಪ್ರತಿ ನಮಗೆ ಮೂರು—ಆರು ತಿಂಗಳಿಗೆ ನಮ್ಮ ಮನೆಗೆ ಬರುತ್ತಿತ್ತು. ಈಗ ಅದು ೮ ದಿವಸಕ್ಕೆ ಬರುತ್ತಿದೆ. ಅದರಲ್ಲಿ ತಪ್ಪು ಒಪ್ಪು ಇದ್ದರೆ ಅದನ್ನು ನಾವು ತಿದ್ದಿಕೊಡಬಹುದು, ೩ ತಿಂಗಳಿಗೆ ಅದು ಬಂದಾಗ ನಾವು ಏನು ಮಾತನಾಡಿದ್ದೇವೋ ಎಂಬುದೇ ಗೊತ್ತಿರುತ್ತಿರಲಿಲ್ಲ. ನಿಜವಾಗಿಯೂ ಈ ಬಗ್ಗೆ ನಿಮಗೆ ವಂದಿಸಬೇಕಾಗಿದೆ. ಹಾಗೂ ಇಲ್ಲಿ ಗುಂಪು ಇದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇಲ್ಲಿ ಮೂರು ಗುಂಪು ಇದೆ, ಆದುದರಿಂದ ಪ್ರಮೋಷನ್ ವಿತ್‌ಹೋಲ್ಡ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇವತ್ತು ಅಲ್ಲಿ ಒಂದು ಮನಸ್ತಾಪ ಬರುವುದು ಬೇಡ. ತಾವು ಅವರನ್ನು ಕರೆಸಿ ಮಾತನಾಡಿ.

> ''ನಮ್ಮ ಕಾರ್ಯಾಲಯದಲ್ಲಿ (೧) ಅಂಡರ್ ಸೆಕ್ರೆಟರಿ (ಲೆಜಿಸ್ಲೇಷನ್ ಮತ್ತು ಕಮಿಟಿ), (೨) ಅಂಡರ್ ಸೆಕ್ರೆಟರಿ (ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ) (೩) ಅಂಡರ್ ಸೆಕ್ರೆಟರಿ ...... ಮೊದಲಿನ ಎರಡು ಸ್ಥಾನಗಳಿಗೆ ಕಾನೂನು ಪದವೀಧರರನ್ನೇ ತುಂಬಬೇಕೆಂದು ನಿಯಮಗಳಲ್ಲಿದೆ......''

ಮಿಕ್ಕಿದ್ದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಹೀಗೆ ಹೀಗೆ ತುಂಬಿ ಎಂದು ವಾದವನ್ನು ಅವರು ಇಟ್ಟಿದ್ದಾರೆ ಎಂದು ಹೇಳಿದ್ದೀರಿ. ಎಲ್ಲಾ ಗುಂಪುಗಳನ್ನು ಕರೆಸಿ ತೀರ್ಮಾನ ಮಾಡಿ. ಒಂದು ವರ್ಷದಿಂದ ತಡೆಹಿಡಿದಿದ್ದು ಇದನ್ನು ಬೇಗನೆ ತೀರ್ಮಾನ ಮಾಡಿದರೆ ಒಳ್ಳೆಯದು. ಇನ್ನೊಂದು ವಿಷಯ ಸ್ವಾಮಿ. ನಾನು ಹೇಳಬಾರದು, ಆದರೂ ಹೇಳುತ್ತಿದ್ದೇನೆ, ಲೆಜಿಸ್ಲೇಚರ್ ಹೋಮ್‌ನಲ್ಲಿ, ತಮಗೆ ಗೊತ್ತಿದೆಯೋ ಇಲ್ಲವೋ, ನಮ್ಮ ಸ್ನೇಹಿತರು ೩ ಜನ ಹಾಸ್ಪಿಟಲ್ ಸೇರಿದ್ದಾರೆ. ಮಾನ್ಯ ರಾಮಪ್ಪನವರು ಅಲ್ಲಿ ಬಿದ್ದರು, ಸರಿಯಾಗಿ ರಿಪೇರಿ ಆಗಿಲ್ಲದ ಕಡೆ ಕಾಲು ಇಟ್ಟರು, ಅವರ ಕೈ ಮುರಿಯಿತು. ಮಾನ್ಯ ಹೆಮ್ಮಿಗೆಯವರೂ ಕೂಡಾ ಅಲ್ಲಿ ಕಾಲು ಮುರಿದುಕೊಂಡು ಆಸ್ಪತ್ರೆ

ಸೇರಿದರು. ಮಾನ್ಯ ಅಪ್ಪಾಜಿಗೌಡರು ಬೇರೆ ಆಸ್ಪತ್ರೆ ಸೇರಿದ್ದಾರೆ. ಹೀಗೆ ೩ ಜನ ಆಸ್ಪತ್ರೆ ಸೇರ ಬೇಕಾಯಿತು. ಈ ಬಗ್ಗೆ ತಾವು ಗಮನ ಕೊಡಬೇಕು. ಇವತ್ತು ಅಲ್ಲಿ ಸ್ವಲ್ಪ ಯೋಚನೆ ಮಾಡಿ ಕೊಂಡು ಎಂ.ಎಲ್.ಎ. ಆ ಕಡೆ ಕಾಲು ಇಟ್ಟ ತಕ್ಷಣ ಬಿದ್ದರೆ ಏನಾಗುತ್ತದೆಂಬುದನ್ನು ಸ್ವಲ್ಪ ಯೋಚನೆ ಮಾಡಿ. ಈ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಮತ್ತೆ ಎಂ.ಎಲ್.ಎ ಗಳಿಗೆ ಟ್ರಂಕಾಲ್ ರೇಟ್ಸನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು: ಇವತ್ತು ಒಬ್ಬ ಎಂ.ಎಲ್.ಎ.ಯ ಟ್ರಂಕಾಲ್ ಚಾರ್ಜಸ್ ೨ ಸಾವಿರ ರೂ.ನಷ್ಟು ಆಗುತ್ತದೆ. ಅದರಲ್ಲಿ ಕಾಲು ಭಾಗದಷ್ಟು ಆದರೂ ವಾಪಸ್ಸು ಎಂದರೆ ೫೦೦ ರೂಪಾಯಿಯನ್ನಾದರೂ ಕೊಡಿಸುವ ವ್ಯವಸ್ಥೆಯಾಗಬೇಕು, ಪಂಜಾಬಿನಲ್ಲಿ ಒಂದು ಸಿಸ್ಟಮ್ ಇದೆ, ಸೆಷನ್ ಟೈಮ್‌ನಲ್ಲಿ ೧೦ ಜನ ಎಂ.ಎಲ್.ಎ.ಗಳಿಗೆ ಒಬ್ಬ ಸ್ಟೆನೋ ಪ್ರೊವೈಡ್ ಮಾಡುವ ವ್ಯವಸ್ಥೆ ಅಲ್ಲಿದೆ. ಈ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಕೇಳಿದರೆ, ಏಕದೃಷ್ಟಿಯ ಉಂಡಾದಿ ಎಂದು ತೆಲುಗಿನಲ್ಲಿ ಭಾಷಣವನ್ನೇ ಮಾಡುತ್ತಾರೆ. ಇವತ್ತು ೧೦ ಜನರಿಗೆ ಒಬ್ಬರನ್ನು ಕೊಟ್ಟರೆ ಎಲ್ಲರೂ ಉಪಯೋಗ ಮಾಡಿಕೊಳ್ಳುವುದಿಲ್ಲ. ಎಲ್ಲೋ ಕೆಲವರು ಉಪಯೋಗ ಪಡೆಯುವುದಕ್ಕಾಗುತ್ತದೆ. ಇದರಿಂದ ಸದನ ನಡೆಯುವ ವೇಳೆಯಲ್ಲಿ ಇವರನ್ನು ಉಪಯೋಗಿಸಿ ಕೊಂಡು ಒಂದು ಗಂಟೆ, ಎರಡು ಗಂಟೆ — ಬರೆಯುವ ಕಷ್ಟ ಕೂಡಾ ನಮಗೆ ತಪ್ಪಿ ಆ ಸಮಯದಲ್ಲಿ ಬೇರೆ ವಿಷಯಗಳ ಕಡೆ ಗಮನ ಕೊಡಬಹುದಾಗಿದೆ. ಈ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್ ಅವರು ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ನಗರಾಭಿವೃದ್ಧಿ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆ ಬಗ್ಗೆ ನನ್ನ ಸ್ನೇಹಿತರು ಮಾತನಾಡಿದ್ದಾರೆ. ಸೈಟ್‌ಗಳನ್ನು ಹಂಚುವ ಬಗ್ಗೆ ಈಗ ಕಂಪ್ಯೂಟರ್ ಸಿಸ್ಟಮ್ ಬಂದಿದೆ. ಕಂಪ್ಯೂಟರ್ ಸಿಸ್ಟಮ್ ಬರುವುದಕ್ಕಿಂತಾ ಮುಂಚೆ ಅವ್ಯವಹಾರ ಜಾಸ್ತಿ ಇತ್ತು. ಈಗ ಅದು ಸ್ವಲ್ಪ ಕಡಿಮೆ ಆಗಿದೆ. ಡಿಸ್ಕ್ರಿಷನರಿ ಎಂದರೆ ಒಂದು ೧೦೦ ಸೈಟ್‌ಗಳಲ್ಲಿ ೧೦ ಸೈಟ್‌ಗಳನ್ನು ತಮಗೆ ಬೇಕಾದವರಿಗೆ ಅವರು ಕೊಟ್ಟರು ೯೦ ಸೈಟ್‌ಗಳು ಯಾರಿಗೆ ಸಿಗಬೇಕೋ ಅವರಿಗೆ ಸಿಗುತ್ತದೆ. ಕಂಪ್ಯೂಟರ್ ಬಂದಿರುವುದರಿಂದ ಅಲ್ಲಿ ಲಂಚಕ್ಕೆ ಅವಕಾಶ ಇಲ್ಲ. ಇನ್ನು ಕಾರ್ಪೊರೇಷನ್ ಮತ್ತು ಬಿ.ಡಿ.ಎ.ನಲ್ಲಿ ಎಂಜಿನಿಯರ್ಸ್ ಎಂಬ ಮಹಾನುಭಾವರು ಇದ್ದಾರೆ. ಅವರು ಕೋಟ್ಯಾಧೀಶ್ವರರಾಗಿದ್ದಾರೆ. ಇವರ ಬಗ್ಗೆ ಎಷ್ಟು ಹೇಳಿದರೂ ಪ್ರಯೋಜನ ಇಲ್ಲ. ಯಾರಾದರೂ ಇವರ — ಕಿವಿಯಲ್ಲಿ ಏನೋ ಹೇಳಿ ಉಬ್ಬಿಸಿದರೆ, ಇವರು ಅವರೆಲ್ಲಾ ಬಹಳ ಒಳ್ಳೆಯವರು ಹೋಗಯ್ಯ ಎಂದು ನಮಗೆ ಹೇಳುತ್ತಾರೆ. ನಾನು ಒಂದು ಸಾರಿ ಕಾರ್ಪೊರೇಷನ್ ಆಫೀಸಿಗೆ ಹೋಗಿದ್ದೆ. ಅಲ್ಲಿ ನನಗೆ ಒಬ್ಬರು, ಅಲ್ಲಿ ನೋಡಿ ಅವರು ಯಾರು ಗೊತ್ತೇ, ಅವರು ಸೂಪರಿಂಟೆಂಡಿಂಗ್ ಎಂಜಿನಿಯರ್ ಎಂದು ಹೇಳಿದರು. ಆತನಿಗೆ ದಿನಕ್ಕೆ ೧೦ ಸಾವಿರ ರೂಪಾಯಿಗಿಂತ ಜಾಸ್ತಿ ಲಾಭ ಇಲ್ಲ ಎಂದರು. ಇವರೆಲ್ಲಾ ಲೆಂಟ್ ಆಫೀಸರ್ಸ್. ಇವರನ್ನೆಲ್ಲಾ ಆ ಕಡೆ ಕಳುಹಿಸಬೇಕು. ಇನ್ನು ಸುರಂಗ ಮಾರ್ಗಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ಇವತ್ತು ದಯವಿಟ್ಟು ಬೆಂಗಳೂರಿನಲ್ಲಿ ಫ್ಲೈಓವರ್‌ಗಳನ್ನು ಕಟ್ಟಿ ಸ್ವಾಮಿ. ಇವತ್ತು ರೈಲ್ವೇಸ್ಟೇಷನ್ ಹತ್ತಿರ, ಮೆಜೆಸ್ಟಿಕ್ ಹತ್ತಿರ ಫ್ಲೈಓವರ್‌ಗಳನ್ನು ಕಟ್ಟಿಸಬೇಕಾಗಿದೆ. ಮೆಜೆಸ್ಟಿಕ್ ಹತ್ತಿರ ಹಳೇ ಕಾಲದಲ್ಲಿ ಕಟ್ಟಿದ ಒಂದು ಫ್ಲೈಓವರ್ ಇದೆ. ನಗರದ ಜನದಟ್ಟಣೆ ಹಾಗೂ ಮುಂದೆ ಇನ್ನೂ ಹೆಚ್ಚು ಆಗಬಹುದಾದ ಜನದಟ್ಟಣೆ ಗಮನಿಸಿ ಸೂಕ್ತ ಸ್ಥಳಗಳಲ್ಲಿ ಫ್ಲೈಓವರ್‌ಗಳನ್ನು ಕಟ್ಟಿಸುವ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಮನ್‌ಜೋಗ್‌ನವರು, ಅಡ್ವರ್‌ಟೈಸ್‌ಮೆಂಟ್ ಕೊಟ್ಟು ೮ ಸಾವಿರ ಸೈಟುಗಳನ್ನು ಕೊಡುತ್ತೇವೆಂದು ಜನರನ್ನು ಮಾಗಡಿ ರಸ್ತೆಯಲ್ಲಿ ಬಹಳ ದೂರ ಕರೆದುಕೊಂಡು ಹೋಗಿ ಯಾವುದೋ ಜಾಗವನ್ನು ತೋರಿಸಿ ಇದೆಲ್ಲಾ ನಮ್ಮದೇ, ಇಲ್ಲೇ ಸೈಟ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿಯ ರೈತರನ್ನು ಕೇಳಿದರೆ ಈ ಜಾಗ ನಮ್ಮದು ಇಲ್ಲಿಗೆ ನಮ್ಮದು ಎಂದು ಯಾರಾದರೂ ಬಂದರೆ ಹಿಡಿದುಕೊಂಡು ಹೊಡೆಯುತ್ತೇವೆಂದು ಹೇಳಿದ್ದಾರೆ. ಬಡ ಜನರು ನಿವೇಶನ ಬೇಕೆಂದು ಹಣವನ್ನು ಕೊಡುತ್ತಿದ್ದಾರೆ. ಮನ್‌ಜೋಗ್‌ನವರು ೪೨೦ ಕೆಲಸ ಮಾಡುತ್ತಿದ್ದಾರೆಯೋ ಏನು ಎಂಬುದನ್ನು ಕಂಡು ಹಿಡಿಯಬೇಕು. ಈಗಾಗಲೇ ಅವರು ಏಳೆಂಟು ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆಂದು ಗೊತ್ತಾಗಿದೆ. ಅದನ್ನು ಕಂಟ್ರೋಲ್ ಮಾಡಬೇಕು. ಇಲ್ಲದಿದ್ದರೆ ಬಡವರಿಗೆ ತೊಂದರೆಯಾಗುತ್ತದೆ. ಇನ್ನು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಬಗ್ಗೆ ಹೇಳುವುದಾದರೆ, ೨ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ, ಒಂದು ರೂಪಾಯಿಗೆ ಒಂದು ಕೆ.ಜಿ. ರಾಗಿಯನ್ನು ಕೊಡುತ್ತಿದ್ದಾರೆ. ಇದು ಬಹಳ ಒಳ್ಳೆಯದು. ಆ ರೀತಿ ಪಟ್ಟಣ ಪ್ರದೇಶಗಳಲ್ಲಿ ವಾಸವಾಗಿರುವ ಬಡವರಿಗೂ ಕೊಡಬೇಕೆಂದು ಹೇಳುತ್ತಿದ್ದೇನೆ. ಗ್ರಾಮಾಂತರ

ಪ್ರದೇಶಗಳಲ್ಲಿ ಬಡ ಜನರಿಗಾಗಿ ಶರ್ಟು, ರವಿಕೆ, ಪಂಚೆ, ಸೀರೆಗಳನ್ನು ಕೊಡುತ್ತಿದ್ದಾರೆ. ಸೀರೆ ಮಾತ್ರ ಟ್ರಾನ್ಸ್‌ಪರೆಂಟ್, ಅದನ್ನು ಮೊದಲು ಸರಿಮಾಡಿಸಿ. ಅದನ್ನು ಕಟ್ಟಿಕೊಂಡು ಬಿಟ್ಟರೆ ಒಳಗಡೆ ಏನಾದರೂ ಹಾಕಿಕೊಳ್ಳಲೇಬೇಕು. ಅಂತಹ ಸೀರೆಯನ್ನು ಕೊಡುವುದು ಬೇಡ. ಅಂತಹ ಸೀರೆಯನ್ನು ಕೊಟ್ಟು ಹೆಣ್ಣುಮಕ್ಕಳಿಗೆ ಅವಮಾನ ಮಾಡಿದಂತಾಗುತ್ತದೆ. ಹಸಿರು ಕಾರ್ಡುಗಳನ್ನು ಹಂಚುವುದು ಏನಿದೆ, ಅದು ಇನ್ನೂ ಶೇಕಡ ೫೦ರಷ್ಟು ಕಾರ್ಡ್‌ಗಳನ್ನು ಹಂಚಿಲ್ಲ. ಹಸಿರು ಕಾರ್ಡ್‌ಗಳನ್ನು ಹಂಚುವ ಅಧಿಕಾರವನ್ನು ಜಿಲ್ಲಾಧಿಕಾರಿಗಳವರಿಗೆ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳವರ ಹತ್ತಿರ ಹೋಗಿ ಹಸಿರು ಕಾರ್ಡ್ ಪಡೆಯುವುದು ಬಹಳ ಕಷ್ಟ. ಆ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಕೊಡಬೇಕು. ಗ್ರಾಮಾಂತರ ಪ್ರದೇಶಗಳ ಬಗ್ಗೆ ನಮ್ಮ ಸರ್ಕಾರ ಮಲತಾಯಿ ಧೋರಣೆಯನ್ನು ತಾಳಿದೆ. ಹಳ್ಳಿಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಒಂದು ಕಾರ್ಡಿಗೆ ಒಂದು ಕೆ. ಜಿ. ಸಕ್ಕರೆ ಮಾತ್ರ ಕೊಡುತ್ತಿದ್ದಾರೆ. ಅದರ ರೇಟು ಕೂಡ ಜಾಸ್ತಿ ಇದೆ. ಪಟ್ಟಣ ಪ್ರದೇಶಗಳಲ್ಲಿ ಒಂದು ರೇಟು, ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ರೇಟು. ಒಂದು ಕಾರ್ಡಿಗೆ ಒಂದು ಕೆ.ಜಿ. ಸಕ್ಕರೆ ಕೊಟ್ಟರೆ ಅವರಿಗೆ ಸಾಕಾಗುತ್ತದೆಯೇ? ಇವರ ತಾತನ ಮನೆಯಿಂದ ಕೊಡುತ್ತಿದ್ದಾರೆಯೇ? ಒಂದು ಕೆ.ಜಿ. ಕೊಡುವಾಗಲೂ ಬಹಳ ಸಂಕಟದಿಂದ ಕೊಡುತ್ತಿದ್ದಾರೆ. ಹಳ್ಳಿಗಳಲ್ಲಿಯೂ ಸಾಕಷ್ಟು ಸಕ್ಕರೆಯನ್ನು ಜನರು ಉಪಯೋಗ ಮಾಡುತ್ತಿದ್ದಾರೆ. ಅದರ ಬಗ್ಗೆ ಯೋಚನೆ ಮಾಡಬೇಕು, ಸೀಮೆಎಣ್ಣೆಯನ್ನು ಸಹ ಜಾಸ್ತಿ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) —ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಾನು ಒಂದೆರಡು ಅಭಿಪ್ರಾಯಗಳನ್ನು ಹೇಳುತ್ತೇನೆ. ವಿಶೇಷವಾಗಿ ಪೌರಾಡಳಿತ ಸಚಿವರು ತಮ್ಮ ಇಲಾಖೆಯ ಬಗ್ಗೆ ಗಂಭೀರವಾಗಿ ಇದುವರೆಗೆ ಯೋಚನೆ ಮಾಡಿಲ್ಲ. ಇನ್ನು ಮುಂದೆ ಯೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ೨೪೨ ನಗರ ಸಭೆಗಳು ಮತ್ತು ಪುರಸಭೆಗಳು ಇವೆ. ಮಾನ್ಯಮಂತ್ರಿಗಳು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನಾನು ಹೇಳುತ್ತಿದ್ದೇನೆ. ಮಂತ್ರಿಗಳು ಆಕ್ಟ್ರಾಯಿ ಬದಲು ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ೧೯೮೬-೮೭ನೇ ಸಾಲಿನಲ್ಲಿ ಇಡೀ ರಾಜ್ಯದಲ್ಲಿರುವ ಪುರಸಭೆಗಳು ಮತ್ತು ನಗರಸಭೆಗಳಿಗೆ ೨೯ ಕೋಟಿ ೩೭ ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡತಕ್ಕದ್ದು ಇದೆ, ಅದರಲ್ಲಿ ಈಗ ೧೪ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಅಂದರೆ ಅರ್ಧಭಾಗ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ನಿಮಗೆ ನಗರಸಭೆಗಳು ಮತ್ತು ಪುರಸಭೆಗಳು ಸರಿಯಾಗಿ ನಡೆಯಬೇಕೆನ್ನುವ ಅಪೇಕ್ಷೆ ಇದ್ದರೆ, ನೀವು ಈಗ ಕೊಡುತ್ತಿರುವ ಹಣ ಏನೇನು ಸಾಲದು. ತೆರಿಗೆಗಳನ್ನು ವಸೂಲಿ ಮಾಡಿಯೆಂದು ತಾವು ಹೇಳುತ್ತೀರಿ. ನೀವು ಕೊಡತಕ್ಕ ಹಣದಲ್ಲಿ ಅಲ್ಲಿರತಕ್ಕ ನೌಕರರಿಗೆ ಸಂಬಳ ಕೊಡುವುದಕ್ಕೆ ಸಾಕಾಗುವುದಿಲ್ಲ. ಸರಿಯಾದ ಉತ್ಪಾದನೆ ಬರುವ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ನಗರಸಭೆಗಳು ಮತ್ತು ಪುರಸಭೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಈಗ ನೀವು ಅಧಿಕಾರ ವಿಕೇಂದ್ರೀಕರಣ ಮಾಡಲಿಕ್ಕೆ ಹೊರಟಿದ್ದೀರಿ, ಈಗಿರುವ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ನಗರದ ಜನಜೀವನ ಅವ್ಯವಸ್ಥೆಯಾಗುವುದು ಬೇಡ ಚುನಾವಣೆಗಳನ್ನು ರದ್ದುಮಾಡಿ ನಗರಸಭೆ ಮತ್ತು ಪುರಸಭೆಗಳನ್ನು ಸರ್ಕಾರವೇ ವಹಿಸಿಕೊಂಡು ನೀವೆ ನಡೆಸುವಂತಹ ಕೆಲಸವನ್ನು ಮಾಡಿ. ಹಾಗೆ ಮಾಡಿದರೆ ಆ ಭಾಗದ ಜನರಿಗೆ ನೆಮ್ಮದಿ ಸಿಗುತ್ತದೆ. ಇಲ್ಲದಿದ್ದರೆ ಅಲ್ಲಿರತಕ್ಕ ಚುನಾಯಿತ ಪ್ರತಿನಿಧಿಗಳು ಅವಾಚ್ಯ ಶಬ್ದಗಳನ್ನು ಜನರಿಂದ ಕೇಳುವುದು, ತಲೆತಗ್ಗಿಸುವುದು ನಿಲ್ಲುವುದಿಲ್ಲ. ಆ ರೀತಿ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕಾರಣ ಇಷ್ಟೆ, ಇವತ್ತು ಶಿಕಾರಿಪುರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಎಲ್ಲಿ ಆಗಿದೆ ? ಅದಕ್ಕೆ ಬೇಕಾದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತಿಂಗಳಿಗೆ ಒಂದು ಸಲ ಕೆಮಿಕಲ್ಸ್ ಖರೀದಿ ಮಾಡಿ ಶುದ್ಧ ನೀರನ್ನು ಜನರಿಗೆ ಕೊಡುವ ಸ್ಥಿತಿ ಶಿಕಾರಿಪುರದಲ್ಲಿ ಇಲ್ಲ. ಇಡೀ ರಾಜ್ಯದಲ್ಲಿ ಈ ಸ್ಥಿತಿ ಇದೆ. ಇದಕ್ಕೆ ಕಾರಣ ಏನು ? ನಮಗೆ ಆಕ್ಟ್ರಾಯಿ ಬದಲು ಕೊಡಬೇಕಾದ ೨೯ ಕೋಟಿ ೩೭ ಲಕ್ಷ ರೂಪಾಯಿಗಳನ್ನು ಇದುವರೆಗೂ ವಿತರಣೆ ಮಾಡದೆ ಅರ್ಧಭಾಗ ಮಾತ್ರ ವಿತರಣೆ ಮಾಡುವ ಉದ್ದೇಶ ಏನು ? ಇದನ್ನು ನಾನು ಪ್ರಶ್ನೆ ಮಾಡುತ್ತೇನೆ. ದಯಮಾಡಿ ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು.

ಈಗಾಗಲೇ ಇಡೀ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಒಂದೇ ಸಮ ಇರಬೇಕೆಂದು ನಾಲ್ಕು ವರ್ಷ ಇದ್ದುದನ್ನು ಐದು ವರ್ಷ ಮಾಡಿದ್ದಾರೆ. ರಾಜ್ಯದಲ್ಲಿ ಎ. ಪಿ. ಎಂ. ಸಿ.ಯಲ್ಲಿ ನಾಲ್ಕು ವರ್ಷ ಇದ್ದುದನ್ನು ಐದು ವರ್ಷ ಮಾಡಿದ್ದೀರಿ. ಇರುವಂಥ ನಗರಸಭೆಗಳಿಗೆ ಕೂಡ ಐದು ವರ್ಷ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ ಎಂದು ಕೇಳಿದೆ. ಇದೆಲ್ಲಾ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳು ಒಂದೇ ರೀತಿಯಲ್ಲಿ ಇರತಕ್ಕ ದೃಷ್ಟಿಯಿಂದ ತಕ್ಷಣ ತಾವು ನಗರಸಭೆ ಮತ್ತು ಪುರಸಭೆಗಳ ಅವಧಿ ನಾಲ್ಕು ವರ್ಷ ಇರುವುದನ್ನು ಐದು ವರ್ಷಗಳಿಗೆ ವಿಸ್ತರಿಸಬೇಕೆಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಸಾಮಾನ್ಯವಾಗಿ ನಗರಸಭೆ, ಪುರಸಭೆಗಳಲ್ಲಿ ಅಲ್ಲಿರುವಂಥ ಬಡವರಿಗೆ ಸೈಟು ಹಂಚುವುದಕ್ಕೋಸ್ಕರ ಅಲ್ಲಿರುವಂಥ ಪುರಸಭೆಗಳು ಜಮೀನು ಅಕ್ವೈರ್ ಮಾಡಬೇಕೆಂದು ಕಳಿಸಿಕೊಟ್ಟರೂ ಸಹ ಒಂದೆರಡು ವರ್ಷಗಳು ನಿಧಾನವಾಗಿ ಗೆಜೆಟ್ ನೋಟಿಫಿಕೇಷನ್ ಆಗದೆ ಬೇರೆ ಬೇರೆ ಕಾರಣಗಳಿಗೋಸ್ಕರ ಸಂಬಂಧಪಟ್ಟ ಅಧಿಕಾರಿಗಳು ಆಸಕ್ತಿ ವಹಿಸದೆ ಈ ನಗರಗಳಲ್ಲಿ ಸರಿಯಾದ ರೀತಿಯಲ್ಲಿ ಸೈಟುಗಳನ್ನು ಹಂಚುವುದಕ್ಕೆ ಆಗುತ್ತಿಲ್ಲ. ಮತ್ತೆ ಜಮೀನು ಅಕ್ವೈರ್ ಮಾಡಿದರೂ ಸರಿಯಾಗಿ ದುಡ್ಡು ಕೊಡುವ ಸ್ಥಿತಿಯಲ್ಲಿ ಇವತ್ತು ನಗರಸಭೆ–ಪುರಸಭೆಗಳು ಇಲ್ಲ. ಆದಕ್ಕೋಸ್ಕರ ಜಮೀನು ಅಕ್ವೈರ್ ಮಾಡಿಕೊಂಡು ಬಡವರಿಗೆ ಸೈಟು ಹಂಚುವುದಕ್ಕೆ ಪುರಸಭೆಯವರು ಏನು ಹಣ ಕೊಡಬೇಕಾಗಿದೆ, ಆ ಹಣವನ್ನು ಸರ್ಕಾರವೇ ಕೊಟ್ಟು, ದುಡ್ಡು ಬಂದಮೇಲೆ ಅದನ್ನು ಅವರು ವಾಪಸ್ಸು ಕೊಡುವ ಹೊಸ ವ್ಯವಸ್ಥೆಯನ್ನು ಮಾಡಬೇಕು ಇನ್ನು ಹುಡ್ಕೋ ಜನತಾ ಮನೆಗಳು ತಮಗೆ ಬರುವುದಿಲ್ಲವೆಂದು ಹೇಳಿದ್ದಾರೆ ೧೯೮೫–೮೬ರಲ್ಲಿ ಇದುವರೆಗೆ ಒಂದು ಮನೆಗೆ ಕೊಟ್ಟಿರುವುದು ೨,೮೦೦ ರೂಪಾಯಿ ಮಾತ್ರ. ೧೯೮೬–೮೭ರಲ್ಲಿ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ನನಗೆ ಬರುವುದಿಲ್ಲ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಭಾಗ್ಯಮಂದಿರಗಳು ತಮಗೆ ಬರುತ್ತವೆಯೋ ?

ಶ್ರೀ ಎ. ಲಕ್ಷ್ಮೀಸಾಗರ್.—ಅದೂ ಇಲ್ಲ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಮತ್ತೆ ಇಲ್ಲಿ ಏಕೆ ಪ್ರಿಂಟ್ ಮಾಡಿಕೊಂಡಿದ್ದೀರಿ ? ಸರ್ಕಾರದ ಕಿವಿಗಾದರೂ ಬೀಳಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದುವರೆಗೂ ೧೯೮೬–೮೭ರಲ್ಲಿ ಹಿಂದೆ ಬಾಕಿ ಉಳಿದಿರುವ ಮನೆಗಳನ್ನೂ ಸೇರಿಸಿ ೪,೦೫೦ ಹೊಸ ಮನೆಗಳನ್ನು ಕಟ್ಟಿಸಿದ್ದಾರೆ. ಹೊಸದಾಗಿ ೨೧೦೦ ಮನೆಗಳನ್ನು ಮಾತ್ರ ಕೊಟ್ಟಿದ್ದಾರೆ. ಅಂದರೆ ಒಂದು ಪುರಸಭೆಗೆ ೯ ಮನೆ ಆಯಿತು. ರಿಪೇರಿ ಮನೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಒಂದು ಪುರಸಭೆಗೆ ಮೂರುವರೆ ಮನೆಯಾಯಿತು. ಇದನ್ನು ಏತಕ್ಕೆ ಹೀಗೆ ಮಾಡುತ್ತಿದ್ದಾರೋ ಎಂದು ಅರ್ಥವಾಗುತ್ತಿಲ್ಲ. ಈಗಾಗಲೇ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ಮೀಸಲಾಗಿಟ್ಟ ೧೮ ಪರ್ಸೆಂಟ್ ಹಣದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ೧೯೮೬ ಡಿಸೆಂಬರ್ ಅಂತ್ಯಕ್ಕೆ ಒಟ್ಟು ೨೭೮.೧೫ ಲಕ್ಷ ಹಣ ಕೊಡುವುದರಲ್ಲಿ ಕೇವಲ ೩೨ ಲಕ್ಷ ಹಣ ಬಿಡುಗಡೆ ಮಾಡಿದ್ದೀರಿ. ಅಂದರೆ ಇದು ನೆಪ ಮಾತ್ರಕ್ಕೆ, ಹರಿಜನ ಗಿರಿಜನರಿಗೆ ಉದ್ಧಾರ ಎಂದು ಹೇಳಿದ ಹಾಗೆ ಇದೆ. ಆದ್ದರಿಂದ ನಿಮ್ಮ ಕಾಲದಲ್ಲಿಯಾದರೂ ಸೀರಿಯಸ್ಸಾಗಿ ೧೮ ಪರ್ಸೆಂಟ್ ಹಣ ಹಣ ಏನಿದೆ. ಅದನ್ನು ಪೂರ್ತಿಯಾಗಿ ಖರ್ಚು ಮಾಡುವ ಕಡೆಗೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಬೆಂಗಳೂರು ನಗರದ ಆಸ್ತಿ ತೆರಿಗೆ ಪರಿಷ್ಕರಣದ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುವುದು ಏನೆಂದರೆ, ಸರ್ಕಾರ ಹೇಳಿಕೆಯನ್ನು ಕೊಡುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಹತ್ತಿರ ಫೈಲು ಪೆಂಡಿಂಗ್ ಇದ್ದು ತೀರ್ಮಾನ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಅಧಿಕೃತವಾಗಿ ಹೇಳಿಕೆ ಕೊಟ್ಟರು. ಆ ಸಂದರ್ಭದಲ್ಲಿ ಜನತಾಪಕ್ಷ ಇಭ್ಭಾಗವಾಗುವ ಪರಿಸ್ಥಿತಿ ಬಂತು. ಆಗ ಅವರು ಮಾತನಾಡಿ ಬೇಕಾದರೆ ಅಪೀಲ್ ಹಾಕಿಕೊಳ್ಳಿ ಎಂದರು. ಸಾವಿರಾರು ಜನ ಅಪೀಲ್ ಹಾಕಿಕೊಳ್ಳುವುದಕ್ಕೆ ಹೇಗೆ ಸಾಧ್ಯ ಐವತ್ತು–ನೂರಾದರೆ ಅಪೀಲ್ ಮಾಡುವುದಕ್ಕೆ ಸಾಧ್ಯವಾದೀತು. ಹಿರಿಯ ಸದಸ್ಯರಾದ

ಶ್ರೀ ಟಿ. ಆರ್. ಶಾಮಣ್ಣನವರು ವಿಧಾನಸೌಧದ ಬಾಗಿಲಲ್ಲಿ ಉಪವಾಸ ಸತ್ಯಾಗ್ರಹ ಮಾಡುವ ಸಂದರ್ಭ ಕೂಡ ಬಂತು. ಈ ರೀತಿಯ ಹೇಳಿಕೆಯನ್ನು ಕೊಡುತ್ತಿದ್ದಾರೆ. ಇವರ ಸರ್ಕಾರ ಹೆಚ್ಚು ದಿವಸ ಉಳಿಯುವುದಿಲ್ಲ. ಬೇಜವಾಬ್ದಾರಿಯಿಂದ ಮಾತನಾಡದೆ ಜವಾಬ್ದಾರಿಯಿಂದ ಮಾತನಾಡಿ ಎಂದು ಹೇಳಬೇಕಾಗಿದೆ. ಆಮೇಲೆ ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರು ನಂದಿನಿ ಲೇಔಟ್ ಬಗ್ಗೆ ಮಾತನಾಡಿದರು. ಆಗ ನಾವು ವೆಲ್‌ನಲ್ಲಿ ಬಂದು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂತು. ಅವರು ಕೇಳಿದ್ದೇನು ? ಅಲ್ಲಿ ಅನ್ಯಾಯವಾಗಿದೆ ಇದನ್ನು ಸರಿಪಡಿಸಿ ಎಂದು ಹೇಳಿದರೆ ಏನು ಮಾಡಿದಿರಿ ?

ತಾವು ಯಾವುದೋ ಸೆಲ್ಫ್ ಪ್ರೆಸ್ಟೀಜ್ ಇಟ್ಟುಕೊಂಡು, ಇವತ್ತು ಸರಿಯಾದ ರೀತಿ ಉತ್ತರ ಕೊಡದೇ ಇದ್ದರೆ, ನಾವು ಈ ಸದನದಲ್ಲಿ ಬರುವಂತಹ ಅಗತ್ಯ ಏನು ? ಹಿರಿಯ ಸದಸ್ಯರು, ವಿರೋಧ ಪಕ್ಷದವರು ಎಲ್ಲರೂ ಒಕ್ಕೊರಲಿನಿಂದ, ಬಡವರಿಗೆ ಅನ್ಯಾಯವಾಗಿದೆ, ಮನೆ ಕೆಡವಿದ್ದಾರೆ ಎಂದು ಹೇಳಿದಾಗ, ಆಯಿತು ಬನ್ನಿ ಸರಿಪಡಿಸುತ್ತೇನೆಂದು ಹೇಳದೆ, ನಮ್ಮ ಅಧಿಕಾರಿಗಳು ತಪ್ಪಾಗಿದ್ದರೆ ನೋಡೋಣ ಎಂದು ಹೇಳದೆ, ನೀವು ಇದನ್ನು ಡಿಫೆಂಡ್ ಮಾಡಿಕೊಳ್ಳುವ ಪ್ರಯತ್ನ ಮಾಡಿದರೆ, ಇಲ್ಲದ ಹಗರಣಕ್ಕೆ ಕಾರಣವಾಯಿತು. ಚುನಾಯಿತ ಪ್ರತಿನಿಧಿಗಳು ನಾವು ಇಲ್ಲಿ ಬಂದು ಯಾವುದನ್ನು ಪ್ರಸ್ತಾಪ ಮಾಡುವುದು ? ನಡೆದಂಥ ಕೆಲವು ಸಂಗತಿಗಳನ್ನು ನೇರವಾಗಿ ತಿಳಿಸಿದರೂ ಕೂಡ, ನೀವು ಇಂತಹವುಗಳನ್ನು ಸೀರಿಯಸ್ಸಾಗಿ ತೆಗೆದುಕೊಳ್ಳದೆ ಹೋದರೆ ಹೇಗೆ ? ಎಷ್ಟೋ ಜನ ತಮ್ಮ ಕುಂದು ಕೊರತೆಗಳ ಬಗ್ಗೆ ತಮ್ಮ ಹತ್ತಿರ ಅರ್ಜಿಗಳನ್ನು ಕೊಡುತ್ತಾರೆ. ನನಗೆ ನಿಮ್ಮ ಬಗ್ಗೆ ತುಂಬಾ ಗೌರವ ಇದೆ. ಏಕೆಂದರೆ ತಾವು ವಿರೋಧಪಕ್ಷದಲ್ಲಿದ್ದು ಹೋರಾಟ ಮಾಡಿದಂತಹವರು. ಈ ರೀತಿ ಬಂದವರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತೀರೆಂದು ತಿಳಿದಿದ್ದೆ. ಆದರೆ ಈ ರೀತಿ ಹಗುರವಾಗಿ ಹೇಳಿ ಕಳುಹಿಸಿದಂತಹ ನೂರಾರು ಉದಾಹರಣೆಗಳು ನನಗೆ ಕಂಡುಬಂದಿದೆ. ದಯಮಾಡಿ ಬಂದವರ ಜೊತೆ ಸಜ್ಜನಿಕೆಯಿಂದ, ಅವರ ಸಮಸ್ಯೆಗಳನ್ನು ಕೇಳಿ ಬಗೆಹರಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ತಮ್ಮ ಮೂಲಕ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇತ್ತೀಚೆಗೆ ನಡೆದಂತಾದ್ದು. ಶಿವಮೊಗ್ಗ ನಗರಸಭೆ ಚುನಾವಣೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷರು ರಾಜೀನಾಮೆ ಕೊಟ್ಟರು. ರಾಜೀನಾಮೆ ಕೊಟ್ಟಮೇಲೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೇಲ್ಕಂಡ ರಾಜಿನಾಮೆಯನ್ನು ಒಪ್ಪಿಕೊಂಡು ೨೩–೨–೮೭ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಿರುತ್ತದೆ. ನಗರ ಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎರಡು ಸ್ಥಾನಗಳು ತೆರವಾಗಿರುವುದರಿಂದ ಚುನಾವಣೆ ನಡೆದು ಹೊಸ ಅಧ್ಯಕ್ಷರು ಅಧಿಕಾರ ವಹಿಸಿಕೊಳ್ಳುವವರೆಗೆ, ಕರ್ನಾಟಕ ಪುರಸಭೆಯ ಕಾಯಿದೆ ೧೯೬೪ ೪೨–ರ ಪ್ರಕಾರ ಶಿವಮೊಗ್ಗ ಅಧ್ಯಕ್ಷರ ಕಾರ್ಯವನ್ನು ವಿಶೇಷ ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಾರೆಂದು ಹೇಳಿದರು. ಅಕ್ಸೆಪ್ಟ್ ಆಯಿತು, ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಬೇಕಾಗಿತ್ತು. ಕೊನೆಯ ಘಳಿಗೆಯಲ್ಲಿ ಇವರು ಒಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.

> "I have been directed by the Government to avoid further instruction by order No. HUD. SMG. 66/87, dated 6th March 1987."

ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ, ಇವತ್ತು ತುರ್ತುಪರಿಸ್ಥಿತಿಯಲ್ಲಿ ಹೋರಾಟ ಮಾಡಿರತಕ್ಕ ಜನ ನೀವು. ಜನಕ್ಕೆ ಸ್ವಾತಂತ್ರ್ಯ ಬೇಕು, ಸ್ವಾತಂತ್ರ್ಯ ಹರಣವಾಗುತ್ತಿದೆ ಎಂದು ಕೂಗಿದಂಥ ಜನ ನೀವು. ಚುನಾಯಿತ ಪ್ರತಿನಿಧಿಗಳು ಅಲ್ಲಿದ್ದಾರೆ. ಅಧ್ಯಕ್ಷ ಉಪಾಧ್ಯಕ್ಷ ರಾಜೀನಾಮೆ ಅಕ್ಸೆಪ್ಟ್ ಮಾಡಿಕೊಂಡಿದ್ದಾರೆ. ಇನ್ನೂ ನಾಲ್ಕೈದು ತಿಂಗಳು ಅವಧಿ ಇದೆ. ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ, ಪುರಸಭೆಗಳಿಗೆ ಶಿಕಾರಿಪುರದಲ್ಲಿ ನಡೆಯುತ್ತಾ ಇವೆ. ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಿದ್ದಾರೆ. ೨೦ನೇ ತಾರೀಖು ಚುನಾವಣೆ ನಡೆಯುತ್ತಿದೆ, ಕೇವಲ ೪ ತಿಂಗಳ ಅವಧಿ ಇದೆ. ಆದರೆ ಇಲ್ಲಿ ಮಾತ್ರ ಈ ರೀತಿ ಸೂಚನೆ ಕೊಟ್ಟ ಉದ್ದೇಶ ಏನು ? ಜನತಾ ಪಕ್ಷದ ಅಧ್ಯಕ್ಷರು ಅಲ್ಲಿದ್ದರು, ಅವರು ರಾಜೀನಾಮೆ ಕೊಡಬೇಕಾಯಿತು. ಮಾನ್ಯ ಜೆ. ಹೆಚ್. ಪಟೇಲರಂಥ ಹಿರಿಯ ಸಚಿವರೂ ಕೂಡ ಅವತ್ತು ಹೇಳಿಕೊಟ್ಟರು. ಇದನ್ನು ಸೂಪರ್‌ಸೀಡ್ ಮಾಡಬೇಕಾಗುವಂಥ ಸಂದರ್ಭ ಬರುತ್ತದೆಂದು ಹೇಳಿದರು. ವೇದಾಂತ ಹೇಳುವಂಥ ತಾವು ಆ ಸ್ಥಾನದಲ್ಲಿ ಕುಳಿತು, ಯಾವರೀತಿ ಅಧಿಕಾರ ದುರುಪಯೋಗ ಮಾಡಿಕೊಂಡು, ಡೆಪ್ಯೂಟಿ ಕಮಿಷನರ್ ಅವರಿಗೆ ಡೈರಕ್ಷನ್ ಕೊಟ್ಟಿದ್ದೀರಿ ? ನಮಗೆಲ್ಲಾ ಅಧಿಕಾರ ಇದೆ, ನಾವು ಹೇಳಬಹುದು, ಸರ್ಕಾರ ಏನು ಬೇಕಾದರೂ ಮಾಡಬಹುದು ಎಂದು ನೀವು ತಿಳಿದಿದ್ದರೆ ಇದನ್ನು ಬಹಳ ಜನ

ಒಪ್ಪುವುದಿಲ್ಲ. ಅವರು ಹೈಕೋರ್ಟಿಗೆ ಹೋಗಿದ್ದಾರೆ. ಯಾವ ಪ್ರಜಾಪ್ರಭುತ್ವದ ಪದ್ಧತಿ ಬಗ್ಗೆ.........

ಶ್ರೀ ಎ. ಲಕ್ಷ್ಮೀಸಾಗರ್.—ಹೈಕೋರ್ಟಿನಲ್ಲಿರುವ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದು ಉಚಿತವಲ್ಲವೆಂದು ತಮ್ಮ ಮೂಲಕ ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೌದು, ಹೌದು. ಬೆಂಗಳೂರು ನಗರ ಸಭೆಯ ವಿರೋಧ ಪಕ್ಷದ ನಾಯಕರ ಬಗ್ಗೆ ಹೈಕೋರ್ಟಿನಲ್ಲಿ, ನೀವು ಮಾಡಿರುವಂಥ ಕೆಲಸಕ್ಕೆ ನಿಮಗೆ ಛೀಮಾರಿ ಹಾಕಿದ್ದಾರೆ, ಕೋರ್ಟಿನವರು ರೀ ಇನ್‌ಸ್ಟೇಟ್ ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೈಕೋರ್ಟಿನಲ್ಲಿ ನಡೆಯುತ್ತಿರತಕ್ಕ ಚರ್ಚೆ ಬಗ್ಗೆ ಮಾತನಾಡುತ್ತಿಲ್ಲ.........

ಅಧ್ಯಕ್ಷರು.—ಹೈಕೋರ್ಟಿನಲ್ಲಿದೆ, ಅದರ ಬಗ್ಗೆ ಚರ್ಚೆ ಮಾಡುವುದು ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪ್ರಜಾಪ್ರಭುತ್ವದ ವ್ಯವಸ್ಥೆ ಬಗ್ಗೆ ಮಾತನಾಡುವಂಥ ನೀವು, ಕಾಂಗ್ರೆಸ್‌ನವರು ಅಧ್ಯಕ್ಷರಾಗುತ್ತಾರೆ, ಬಿ.ಜೆ.ಪಿ. ನವರು ಅಧ್ಯಕ್ಷರಾಗುತ್ತಾರೆ ಎಂಬ ಒಂದೇ ಒಂದು ಕಾರಣಕ್ಕೋಸ್ಕರ ಡೆಪ್ಯೂಟಿ ಕಮಿಷನರ್ ಅವರಿಗೆ ಡೈರಕ್ಷನ್ ಕೊಡುವಂಥ ಅಧಿಕಾರ ಯಾವ ಕಾನೂನಿನಲ್ಲಿದೆ ? ನೀವು ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಾ ಇಲ್ಲವೇ ? ಕಾಂಗ್ರೆಸ್‌ನ್ನು ದೂರುವಂಥ ನೀವು ಈ ರೀತಿ ಅಧಿಕಾರವನ್ನು ನಡೆಸುವಂಥ ಜನ ನೀವು, ನಿಮ್ಮ ಮನಸ್ಸಿಗೆ, ಆತ್ಮಕ್ಕೆ ವಿರುದ್ಧವಾಗಿ ಮಾಡಿದಂಥ ಸಂದರ್ಭ ಬಂದರೆ ನೀವು ರಾಜೀನಾಮೆ ಕೊಡಿ. ಈ ಸ್ಥಾನದಲ್ಲಿ ಒಂದು ಘಳಿಗೆ ಉಳಿಯುವುದಿಲ್ಲವೆಂದು ಹೇಳಿ. ಈ ರೀತಿ ನಿಮ್ಮ ಕಾಲದಲ್ಲಿ ಜನಕ್ಕೆ ಅನ್ಯಾಯ, ಕುತಂತ್ರ ನಡೆಯುತ್ತಾ ಇದೆ. ಇದನ್ನು ನಿಲ್ಲಿಸಬೇಕು. ಇಂತಹದ್ದಕ್ಕೆ ಅವಕಾಶ ಮಾಡಿ ಕೊಡಬಾರದು. ಜನ ಇದನ್ನು ಸಹಿಸುವುದಿಲ್ಲ. ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಈಗಲಾದರೂ ತಾವು ಏನು ಆದೇಶ ಕೊಟ್ಟಿದ್ದೀರಿ. ಅದನ್ನು ವಾಪಸ್ ತೆಗೆದುಕೊಳ್ಳ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಸೂಕ್ಷ್ಮವಾದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಜಯನಗರ ಬಸ್‌ಸ್ಟ್ಯಾಂಡಿನ ಹತ್ತಿರ ೧೯೬೭ರಲ್ಲಿ ೬ ಎಕರೆ ಜಮೀನನ್ನು ಗೋಬರ್ ಸ್ಥಾವರಕ್ಕೆ ಸರ್ಕಾರ ಕೊಂಡುಕೊಂಡಿತು. ನಾನು ವಿವರಕ್ಕೆ ಹೋಗುವುದಿಲ್ಲ. ಕೋರ್ಟಿನಲ್ಲಿರುವುದನ್ನು ಪ್ರಸ್ತಾಪ ಮಾಡುವುದಕ್ಕೂ ಹೋಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರ ಸಿವಿಲ್ ಕೋರ್ಟಿನಲ್ಲಿದೆ. ಇದರ ಬಗ್ಗೆ ಅವರು ಮಾತನಾಡುತ್ತಾರೆ ಎಂದು ಹೇಳಿದರೆ, ಅವರು ಒಂದು ಹೇಳುವುದು, ನಾನೂ ಏನಾದರೂ ಒಂದು ಉತ್ತರ ಹೇಳುವುದು, ಆಮೇಲೆ ಅದು ಸಬ್‌ಜ್ಯುಡೀಸ್ ಆಗುವುದು, ಅದು ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜನತಾ ಸರ್ಕಾರ ಬಂದ ಮೇಲೆ ಇವರು ಮಾಡುವಂತಹ ಪ್ರತಿಯೊಂದು ವ್ಯವಹಾರವೂ ಕೋರ್ಟಿಗೆ ಹೋಗಿದೆ. ಈ ರೀತಿ ಆದರೆ ವಿಧಾನ ಸಭೆಯ ಕಾರ್ಯ ಕಲಾಪಗಳನ್ನೇ ಸ್ಥಗಿತಗೊಳಿಸಬೇಕಾಗುತ್ತದೆ. ನಾನು ಇದರ ಬಗ್ಗೆ ಡೀಟೇಲ್ಸ್‌ಗೆ ಹೋಗುವುದಿಲ್ಲ.

ಅಧ್ಯಕ್ಷರು.—ಈ ವಿಚಾರ ಕೋರ್ಟಿನಲ್ಲಿ ಇದ್ದ ಮೇಲೆ ಅದರ ಮೇಲೆ ಡಿಸ್ಕಷನ್ ಬೇಡಿ. ಕೋರ್ಟಿನಲ್ಲಿ ಏನು ಜಡ್ಜ್‌ಮೆಂಟ್ ಕೊಡುತ್ತಾರೋ ನೋಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ೧೯೬೭ರಲ್ಲೇ ಇದಕ್ಕೆ ಬದಲಾಗಿ ಬೇರೆ ಜಾಗ ಕೊಡಲಾಗಿದೆ. ಈ ಜಾಗದಲ್ಲಿ ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟುವ ಅಗತ್ಯ ಇಲ್ಲ. ಯಾರನ್ನೋ ತೃಪ್ತಿ ಪಡಿಸುವಂತಹದ್ದಕ್ಕೆ ಇವರು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಬೇರೆ ವಿಷಯ ತೆಗೆದುಕೊಳ್ಳಿ.

ಶ್ರೀ ಬಿ. ಎಸ್. ಯೆಡಿಯೂರಪ್ಪ.—ಇವರು ಶಿವಮೊಗ್ಗ ನಗರಸಭೆ ಚುನಾವಣೆ ಬಗ್ಗೆ ಹೇಳಿದರೆ ಅದು ಕೋರ್ಟಿನಲ್ಲಿದೆ ಎಂದು ಹೇಳಿದರು. ಈಗ ಇಲ್ಲಿ ಅನ್ಯಾಯ ಆಗಿದೆ ಎಂದು ಅದರ ಬಗ್ಗೆ ಡೀಟೈಲ್ಸ್ ಹೇಳಿದರೂ ಅದಕ್ಕೂ ಕೋರ್ಟ್ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಕೋರ್ಟಿನಲ್ಲಿರುವ ವಿಷಯ ಬೇಡ. ಬೇರೆ ಬೇಕಾದಷ್ಟು ವಿಷಯಗಳಿವೆ, ಅದನ್ನು ತೆಗೆದುಕೊಳ್ಳಿ.

ಶ್ರೀ ಬಿ. ಎಸ್. ಯೆಡಿಯೂರಪ್ಪ.—ಅವರಿಗೆ ಬೇರೆ ಜಮೀನು ಕೊಟ್ಟಾಗಿರುವುದರಿಂದ, ಅಲ್ಲಿ ಇರತಕ್ಕಂಥ ಜಮೀನನ್ನು ಉಳಿಸಿಕೊಂಡು, ಅಲ್ಲಿ ಒಳ್ಳೆಯ ಮರಗಿಡಗಳನ್ನು ಬೆಳೆಸಿ, ಪಾರ್ಕ್ ಮಾಡಿ, ಜನಗಳಿಗೆ ಅನುಕೂಲ ಆಗುವ ಕೆಲಸ ಮಾಡಿ, ತಮ್ಮ ಕಾಲದಲ್ಲಿ ಅನ್ಯಾಯ ಆಗಬಾರದು ಎಂಬುದಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದೆ.

೨-೦೦ ಪಿ.ಎಂ.

ಇನ್ನು ಆಹಾರ ಇಲಾಖೆಯ ಬಗ್ಗೆ ಹಾಗೂ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಹೇಳಬೇಕೆಂದರೆ ಸ್ವಾಮಿ ಈ ನ್ಯಾಯ ಬೆಲೆ ಅಂಗಡಿಗಳು ಅನ್ಯಾಯ ಬೆಲೆ ಅಂಗಡಿಗಳಾಗಿವೆ. ಖುಷಿ ಬಂದಂಥವರಿಗೆ ಈ ನ್ಯಾಯಬೆಲೆ ಅಂಗಡಿಗಳನ್ನು ವಹಿಸಿಕೊಟ್ಟಿದ್ದೀರಿ. ಅವರಿಗೆ ಹಣಕಾಸಿನ ಅನುಕೂಲತೆ ಇಲ್ಲದೇ ಇರುವುದರಿಂದ, ಒಂದೇ ಸಾರಿ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯ ಇದೆಯೋ ? ಇದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿದ್ದೀರಾ ಎಂದು ಕೇಳುತ್ತೇನೆ. ಇನ್ನು ಸರಿಯಾದ ರೀತಿಯಲ್ಲಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಿಲ್ಲ ಎಂದು ಹೇಳಿ, ಅವ್ಯವಹಾರ ನಡೆದಿದೆ ಎಂದು ಹೇಳಿ ನಮ್ಮ ರಾಜ್ಯದಲ್ಲಿ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ನೀವು ರದ್ದು ಮಾಡಿದ್ದೀರಿ ? ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲೇ ಸುಮಾರು ೧೫ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಲಾಗಿದೆ. ಕಳೆದ ಐದಾರು ತಿಂಗಳಿಂದ ಇಷ್ಟು ರದ್ದಾಗಿವೆ. ಇದಕ್ಕೆ ಆಲ್ಟರ್‌ನೇಟೀವ್ ವ್ಯವಸ್ಥೆಯನ್ನು ನಿಮ್ಮ ತಹಸೀಲ್ದಾರರು ಮಾಡಿಲ್ಲ. ಅವರನ್ನು ಕೇಳಿದರೆ, ಅಲ್ಲಿರುವಂತಹ ಆಯಿಲ್ ಮಾರಿಕೊಂಡರು, ಅಕ್ಕಿ ಮಾರಿಕೊಂಡರು ಅದಕ್ಕೆ ರದ್ದು ಮಾಡಿದ್ದೇವೆ ಎಂದು ಹೇಳುತ್ತಾರೆ. ಈ ರೀತಿ ರದ್ದು ಮಾಡಿದಮೇಲೆ ರೆವಿನ್ಯೂ ಇನ್‌ಸ್ಪೆಕ್ಟರ್‌ನ್ನು ಕಳುಹಿಸಿ ಜನರಿಗೆ ವಿತರಣೆ ಮಾಡುವ ವ್ಯವಸ್ಥೆ ಮಾಡಬೇಕು. ರದ್ದು ಮಾಡಿದ ತಕ್ಷಣ ವಿತರಣಾ ವ್ಯವಸ್ಥೆ ಮಾಡದೇ ಹೋದರೆ, ಎರಡು ಮೂರು ತಿಂಗಳ ಕಾಲ ಬಡವರು ಏನು ಮಾಡಬೇಕು. ಈ ರೀತಿ ನ್ಯಾಯ ಬೆಲೆ ಅಂಗಡಿಗಳು ಇದ್ದು ರದ್ದಾಗಿ, ಅಕ್ಕಿ ಸಕ್ಕರೆ ಮುಂತಾದವುಗಳು ವಿತರಣೆ ಆಗದಿರುವಂತಹ ಅಂಗಡಿಗಳ ಸಂಖ್ಯೆ ಎಷ್ಟು ಎಂಬುದರ ಬಗ್ಗೆ ವಿವರ ಕೊಡಬೇಕು. ಅಕಸ್ಮಾತ್ ನ್ಯಾಯ ಬೆಲೆ ಅಂಗಡಿಗಳಲ್ಲಿ ಭ್ರಷ್ಟಾಚಾರ ನಡೆದರೆ ರದ್ದು ಮಾಡಬೇಕಾದುದು ನಿಮ್ಮ ಕರ್ತವ್ಯ. ಈ ರೀತಿ ರದ್ದು ಮಾಡಿದಮೇಲೆ, ಅದರ ನೆಕ್ಸ್ಟ್ ಮಂಥ್ ಅಲ್ಲಿನ ಜನರಿಗೆ ಅಕ್ಕಿ, ಸಕ್ಕರೆ ಮುಂತಾದವುಗಳನ್ನು ವಿತರಣೆ ಮಾಡುವುದಕ್ಕೆ ಏರ್ಪಾಡು ಮಾಡುವುದು ಸರಕಾರದ ಕರ್ತವ್ಯ. ಯಾರೋ ಭ್ರಷ್ಟಾಚಾರ ಮಾಡಿದರೆ ಬಡವರು ಏನು ಮಾಡಬೇಕು ? ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ವಾರ್ಷಿಕ ವರದಿಯ ೧೭ನೇ ಪುಟದಲ್ಲಿ ನೋಡಿದರೆ ಇವರು ಒಂದು ಅಂಶವನ್ನು ಹೇಳಿದ್ದಾರೆ. ಗೋಧಿ ಮತ್ತು ಸಕ್ಕರೆಯ ವಿತರಣೆ ಬಗ್ಗೆ ಹೇಳಬೇಕೆಂದರೆ, ಸರಿಯಾದ ರೀತಿಯಲ್ಲಿ, ಇವರು ತೆಗೆದುಕೊಂಡ ಸ್ಟಾಕ್ ಏನಿದೆ ಅದನ್ನು ಜನಗಳಿಗೆ ಸರಿಯಾಗಿ ವಿತರಣೆ ಮಾಡಿಲ್ಲ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೀಮೆ ಎಣ್ಣೆ ಇರಬಹುದು, ಗೋಧಿ ಇರಬಹುದು, ಸಕ್ಕರೆ ಇರಬಹುದು, ಇವರು ತೆಗೆದುಕೊಂಡಿರುವ ಸ್ಟಾಕ್ ಏನಿದೆ ಅಷ್ಟು ಸರಿಯಾದ ರೀತಿಯಲ್ಲಿ ವಿತರಣೆಯಾಗಿಲ್ಲ ಎಂಬುದು ಅಂಕಿ ಅಂಶಗಳನ್ನು ನೋಡಿದಾಗ ಗೊತ್ತಾಗುತ್ತದೆ. ಈ ರೀತಿ ಸ್ಟಾಕ್ ಇದ್ದೂ ಸಹ ವಿತರಣೆ ಆಗದೆರುವುದಕ್ಕೆ ಕಾರಣ ಏನು ? ನಿಮ್ಮ ವರದಿಯ ೧೭ನೇ ಪುಟದಲ್ಲಿ ನೋಡಿ. ಐ.ಡಿ.ಟಿ.ಪಿ ಗೋಧಿ ೭ ಸಾವಿರ ಟನ್ ಸ್ಟಾಕ್ ಇದ್ದರೆ ೭೨೦ ಟನ್ ಮಾತ್ರ ವಿತರಣೆಯಾಗಿದೆ, ಇದು ಏಪ್ರಿಲ್ ತಿಂಗಳಲ್ಲಿ ಮತ್ತೆ ಮೇ ತಿಂಗಳಲ್ಲಿ ೮೮೦ ಮಾತ್ರ ವಿತರಣೆಯಾಗಿದೆ, ಸಾಮಾನ್ಯ ಗೋಧಿ ಕೇಂದ್ರದವರು ೨೫ ಸಾವಿರ ಟನ್ ಕೊಟ್ಟಿದ್ದರೂ ನೀವು ೧೯೭೦ ಟನ್ ವಿತರಣೆ ಮಾಡಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಗೋಧಿ ತಿನ್ನತಕ್ಕಂಥ ಅಭ್ಯಾಸ ನಮ್ಮ ಜನಗಳಿಗೆ ಕಡಿಮೆ ಇದೆ. ಆದಷ್ಟೂ ಗೋಧಿಯನ್ನು ತಿನ್ನತಕ್ಕಂಥ ಅಭ್ಯಾಸವನ್ನು ಜನಗಳಲ್ಲಿ ಬೆಳೆಸತಕ್ಕಂಥ ಪ್ರಯತ್ನವನ್ನು ನಮ್ಮ

ಇಲಾಖೆಯವರು ಮಾಡುತ್ತಿದ್ದಾರೆ. ಕೇಂದ್ರದವರು ಕೊಡುತ್ತಾರೆ ನಿಜ, ಅವರು ಎಷ್ಟು ಗೋಧಿ ಕೊಡುತ್ತಾರೆ, ಅಷ್ಟನ್ನೂ ಕೂಡಾ ತೆಗೆದುಕೊಳ್ಳುವುದಕ್ಕೆ ಜನ ಸಿದ್ಧರಿಲ್ಲ. ಮಿಕ್ಕಿದ್ದು ನೋಡಿ, ಸೀಮೆ ಎಣ್ಣೆ, ಪಾಮ್ ಆಯಿಲ್, ಸಕ್ಕರೆ, ಅಕ್ಕಿ ಇದನ್ನೆಲ್ಲಾ ನೋಡಿ, ಹೇಗೆ ವಿತರಣೆಯಾಗಿದೆ ಎಂದು ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೇಳುತ್ತಿರುವುದು, ತಮ್ಮ ಅಧಿಕಾರಿಗಳು ಕೊಟ್ಟ ಮಾಹಿತಿಯನ್ನು ತಾವು ಹೇಳಬೇಡಿ ಎಲ್ಲರೂ ಗೋಧಿಯನ್ನು ತಿನ್ನುವುದಕ್ಕೆ ಸಿದ್ಧರಿದ್ದಾರೆ. ಸೊಸೈಟಿಗಳಲ್ಲಿ ಅದು ಸಿಗುತ್ತಿಲ್ಲ. ನಾನು ಇಡೀ ರಾಜ್ಯದ ವಿಷಯ ಹೇಳುತ್ತಿಲ್ಲ, ಶಿವಮೊಗ್ಗ ಜಿಲ್ಲೆಯ ವಿಚಾರ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಟೈಮ್ ಆಯಿತು ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಮಧ್ಯದಲ್ಲಿ ಬೇರೆಯವರು ಮಾತನಾಡಿದ್ದಾರೆ, ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡಿದರು.

ಅಧ್ಯಕ್ಷರು.—ಆಯಿತು ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪಾಮ್ ಆಯಿಲ್ ಏಪ್ರಿಲ್ ತಿಂಗಳಲ್ಲಿ ೩೩೦೨ ಕಿಲೋ ಲೀಟರ್ ತೆಗೆದುಕೊಂಡಿದ್ದೀರಿ, ಅದರಲ್ಲಿ ೨೫೬೭ ಕಿಲೋ ಲೀಟರ್ ಹಂಚಿದ್ದೀರಿ. ಮೇ ತಿಂಗಳಲ್ಲಿ ೪೩೦೦ ತೆಗೆದುಕೊಂಡು ೨೪೫೦ ವಿತರಣೆ ಮಾಡಿದ್ದೀರಿ, ಪಾಮ್ ಆಯಿಲ್ ತಾವು ಬಿಡುಗಡೆ ಮಾಡಿರತಕ್ಕಂಥಾದ್ದು ಕಡಿಮೆ ಇದೆ, ಜನಗಳಿಗೆ ಎಣ್ಣೆ ಬೇಕು, ಹೊರಗಡೆ ಎಣ್ಣೆ ರೇಟ್ ಜಾಸ್ತಿ ಇದೆ, ಕೇಂದ್ರ ಸರಕಾರದವರೂ ಇನ್ನೂ ಹೆಚ್ಚು ಪಾಮ್ ಆಯಿಲ್ ಬಿಡುಗಡೆ ಮಾಡುವಂತೆ ತಾವು ತಿಳಿಸಬೇಕು. ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಜಾಸ್ತಿ ಬಿಡುಗಡೆ ಮಾಡಿದ್ದಾರೆ. ಹಾಗೂ ಜಾಸ್ತಿ ಮಾರಾಟವಾಗಿದೆ. ಆದರೂ ಸಹ ಇದು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಮಾರಾಟವಾಗಿರತಕ್ಕಂಥದ್ದು. ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡವರಿಗೆ ಇದು ಸಿಗುತ್ತಿಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡವರಿಗೆ ಅಕ್ಕಿ ಸೀಮೆಎಣ್ಣೆ ಪಾಮಾಯಿಲ್ ಸಿಗುತ್ತಿಲ್ಲ. ಇದನ್ನು ಸರ್ಕಾರದವರು ಗಮನಿಸಬೇಕು ಜೊತೆಗೆ ನಗರಗಳಿಗೂ ಮತ್ತು ಗ್ರಾಮಗಳಿಗೂ ವ್ಯತ್ಯಾಸವನ್ನು ತಾವು ಗಮನಿಸಿ ಸೂಕ್ತ ಬದಲಾವಣೆಯನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳು ವಿನಂತಿ ಮಾಡಿಕೊಳ್ಳುತ್ತೇನೆ......

ಅಧ್ಯಕ್ಷರು.— ಈಗಾಗಲೇ ತಾವು ೧೭ ನಿಮಿಷ ಮಾತನಾಡಿದ್ದೀರಿ, ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಗರಪ್ರದೇಶಗಳಿಗೆ ತಾವು ಒಂದು ನೀತಿಯನ್ನು ಅನುಸರಿಸುತ್ತಿದ್ದೀರಿ, ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧ ಪಟ್ಟ ಹಾಗೆ ಒಂದು ನೀತಿಯನ್ನು ಈ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದರಲ್ಲಿ ಅನುಸರಿಸುತ್ತಿದ್ದೀರಿ. ನಿಮ್ಮ ಲೆಕ್ಕದ ಪ್ರಕಾರ ಹಳ್ಳಿಯಲ್ಲಿ ವಾಸ ಮಾಡುವವರು ಯಾರೂ ಸಕ್ಕರೆ, ಪಾಮಾಯಿಲ್ ಉಪಯೋಗಿಸುವುದಿಲ್ಲವೇನು ? ಇವತ್ತಿನ ಪರಿಸ್ಥಿತಿಯಲ್ಲಿ ಹಳ್ಳಿಗಾಡು ಪ್ರದೇಶಗಳಲ್ಲಿ ವಾಸ ಮಾಡುವಂತಹ ಜನ ಕೂಡ ಎಣ್ಣೆ ಸಕ್ಕರೆಯನ್ನು ಉಪಯೋಗ ಮಾಡುತ್ತಾರೆ. ಆದ್ದರಿಂದ ಹಳ್ಳಿಗಳಿಗೂ ಕೂಡ ತಾವು ಸಾಕಷ್ಟು ಸಕ್ಕರೆ ಮತ್ತು ಎಣ್ಣೆಯನ್ನು ಕೊಡುವ ಪ್ರಯತ್ನ ಮಾಡಬೇಕು. ಇದು ನಿಮ್ಮ ಕರ್ತವ್ಯ. ಈ ವ್ಯತ್ಯಾಸವನ್ನು ತಾವೇತಕ್ಕೆ ಮಾಡುತ್ತೀರಿ ? ಇವತ್ತು ತಾವು ಮಾತೆತ್ತಿದರೆ ಅಧಿಕಾರ ವಿಕೇಂದ್ರಿಕರಣ ಮಾಡಿದ್ದೇವೆಂದು ಹೇಳುತ್ತೀರಿ, ಹಳ್ಳಿಗಾಡು ಪ್ರದೇಶಗಳಲ್ಲಿ ಹಸಿರು ಕಾರ್ಡು ವಿತರಣೆಯನ್ನು ಮಾಡಿದ್ದೀರಿ, ಇದೊಂದು ಒಳ್ಳೆಯ ಯೋಜನೆ. ಆದರೆ ತಾವು ಅಧಿಕಾರ ವಿಕೇಂದ್ರಿಕರಣ ಮಾಡಿರುವಂತಹ ಕಾಲದಲ್ಲಿ ಯಾರಾದರೂ ಒಬ್ಬ ಬಡವನಿಗೆ ಹಸಿರು ಕಾರ್ಡು ದೊರೆಯಲಿಲ್ಲವೆಂದರೆ ಆತ ತಹಶೀಲ್ದಾರರ ಕಛೇರಿಗೆ ಹಲವಾರು ಭಾರಿ ಸುತ್ತಾಡಬೇಕಾಗುತ್ತದೆ. ಇಷ್ಟಾಗಿ ಕೊನೆಗೆ ರವಿನ್ಯೂ ಇನ್ಸ್‌ಪೆಕ್ಟರ ಅಥವಾ ವಿಲೇಜ್ ಅಕೌಂಟೆಂಟ್ ಆ ಬಡವನ ಮನೆಗೆ ಬಂದಾಗ ಆ ಬಡವ ಎಲ್ಲಿಯಾದರೂ ಪಕ್ಕದ ಹಳ್ಳಿಯ ಬಳಿ ಕೂಲಿ ಕೆಲಸಕ್ಕೆ ಹೋಗಿದ್ದರೆ, ಅವನಿಗೆ ಹಸಿರು ಕಾರ್ಡು ದೊರೆಯುವುದಿಲ್ಲ. ಅದೇ ಅವನ ಪಕ್ಕದ ಮನೆಯಲ್ಲಿ ಹಸಿರು ಕಾರ್ಡಿನಲ್ಲಿ ಅಕ್ಕಿಯನ್ನು ತೆಗೆದುಕೊಂಡು ಬರುತ್ತಿದ್ದರೆ, ಇವನ ಮನೆಯಲ್ಲಿ ಒಂದು ', ಕೆ. ಜಿ. ಅಕ್ಕಿಗೆ ೫ ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡು

ಬಂದು ತಿನ್ನುವಂತಹ ಪರಿಸ್ಥಿತಿ ಇರುತ್ತದೆ. ಆದ್ದರಿಂದ ನಿಜವಾಗಿ ಯಾರು ಬಡವರಿದ್ದಾರೋ ಅವರೆಲ್ಲರಿಗೂ ಹಸಿರು ಕಾರ್ಡು ಕೊಡುವಂತಹ ವ್ಯವಸ್ಥೆಯಾಗಬೇಕು. ಇನ್ನು ನಮ್ಮ ಮಾನ್ಯ ಮಂತ್ರಿಗಳು ಎಲ್ಲಾ ಕಡೆ ನ್ಯಾಯ ಬೆಲೆ ಅಂಗಡಿಗಳ ಮೇಲೆ ನಿಗಾ ಇಟ್ಟಿರಲು ಒಂದೊಂದು ಜಾಗ್ರತಾ ಸಮಿತಿಯನ್ನು ಮಾಡಿದ್ದಾರೆ. ಈ ಜಾಗ್ರತಾ ಸಮಿತಿಯಲ್ಲಿ ಒಬ್ಬ ಮಹಿಳೆ, ಒಬ್ಬ ಪರಿಶಿಷ್ಟ ಜಾತಿಯವರನ್ನು ಸೇರಿಸಿ ಒಟ್ಟು ನಾಲ್ಕು ಜನ ಸದಸ್ಯರಿರುತ್ತಾರೆಂದು ಹೇಳಿದರು. ಆದರೆ ಇಂತಹ ಜಾಗ್ರತಾ ಸಮಿತಿಯನ್ನು ನಾನು ಇದುವರೆವಿಗೂ ನೋಡಲಿಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಪ್ರಾಮಾಣಿಕವಾದ ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ. ನಿಮ್ಮ ಕಾಲದಲ್ಲಿ ಪುರಸಭೆಗಳು ನಗರಸಭೆಗಳ ಆಡಳಿತ ಚೆನ್ನಾಗಿ ನಡೆಯುತ್ತಿಲ್ಲ. ನಾವು ಯಾವುದಾದರೊಂದು ಸಮಸ್ಯೆಯನ್ನು ನಿಮ್ಮ ಮುಂದೆ ತಂದರೆ ನೀವು ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಗಮನವೇ ಕೊಡುವುದಿಲ್ಲ.

ಅಧ್ಯಕ್ಷರು.— ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಒಂದೇ ಮಾತು ಹೇಳಿ ಮುಗಿಸುತ್ತೇನೆ. ಇನ್ನು ನಮ್ಮ ಶಿಕಾರಿಪುರ ತಾಲ್ಲೂಕಿನ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಸುಮಾರು ೫ ಲಕ್ಷ ರೂಪಾಯಿಗಳ ಒಂದು ಶಾಪಿಂಗ್ ಕಾಂಪ್ಲೆಕ್ಸ್ ಅನ್ನು ತಾವು ಉದ್ಘಾಟನೆ ಮಾಡಿ ಬಂದಿರಿ. ಆ ಸಂಬಂಧವಾಗಿ ನಾವು ಸುಮಾರು ಮೂರುವರೆ ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಟ್ಟೆವು. ಆದರೆ ಈ ಶಾಪಿಂಗ್ ಕಾಂಪ್ಲೆಕ್ಸನ್ನು ಲ್ಯಾಂಡ್ ಆರ್ಮಿಯವರಿಗೆ ತಾವು ಒಪ್ಪಿಸಿದಿರಿ. ಅವರು ಇದು ೧೨ ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್, ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿ ಬಿಟ್ಟರು. ತಾವು ಹಾಕಿದ ಫೌಂಡೇಷನ್ ಕಲ್ಲು ಇನ್ನೂ ಹಾಗೆಯೇ ಇದೆ. ಆದರೆ ನೀವು ಸ್ವಲ್ಪ ಮನಸ್ಸು ಮಾಡಿದರೆ ಈ ೫ ಲಕ್ಷ ರೂಪಾಯಿಗಳ ಒಂದು ಶಾಪಿಂಗ್ ಕಾಂಪ್ಲೆಕ್ಸ್ ಮುಗಿದು ಆ ಪುರಸಭೆಗೆ ಆದಾಯ ಬರುತ್ತಿತ್ತು, ಆ ಬಗ್ಗೆ ತಮ್ಮ ಪ್ರಯತ್ನವನ್ನು ಮಾಡಲಿಲ್ಲ. ಅದೇ ರೀತಿಯಲ್ಲಿ ಶಿಕಾರಿಪುರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಈ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಿ ಎಂದು ನಾನು ತಮಗೆ ಹಲವಾರು ಸಾರಿ ಬಂದು ಬೇಡಿಕೊಂಡರೂ ಸಹ ಯಾವ ವ್ಯವಸ್ಥೆಯನ್ನು ಸಹ ಮಾಡಲಿಲ್ಲ. ಶಿಕಾರಿ ಪುರದ ಜನ ಕುಡಿಯುವ ನೀರಿಲ್ಲದೆ ಸಾಯುತ್ತಿದ್ದಾರೆ. ಆ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಗರಸಭೆಗಳಾಗಲಿ, ಪುರಸಭೆಗಳಾಗಲಿ ನಿಮ್ಮ ಹತೋಟಿಯಲ್ಲಿ ಇಲ್ಲ. ಈ ಬಗ್ಗೆ ತಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ. ಅವರಿಗೆ ಬೇಕಾದಂಥ ಅನುಕೂಲವನ್ನು ತಾವು ಮಾಡಿಲ್ಲ ತಾವು ಈ ಇಲಾಖೆಗಳ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಆದ್ದರಿಂದ ದಯಮಾಡಿ ರಾಜೀನಾಮೆಯನ್ನು ಕೊಟ್ಟು ಜನತಾ ಸರ್ಕಾರಕ್ಕೆ ಮಾದರಿಯಾಗಿ ಎನ್ನುವ ಮಾತನ್ನು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಉಸ್ತಾದರವರೇ ತಾವು ಮಾತನಾಡಿ.

ಶ್ರೀ ಡಿ. ಟಿ. ಜಯಕುಮಾರ್.— ಮಾನ್ಯ ಅಧ್ಯಕ್ಷರೇ, ಆ ಕಡೆಯವರಿಗೆ ಅವಕಾಶ ಕೊಡುತ್ತಿದ್ದೀರಿ.

ಅಧ್ಯಕ್ಷರು.— ರೂಲ್ಸ್ ರೆಗ್ಯುಲೇಶನ್ಸ್ ನನಗೆ ಗೊತ್ತಿದೆ. ತಾವು ನನಗೆ ಹೇಳಿಕೊಡಬೇಕಾಗಿಲ್ಲ, ದಯಮಾಡಿ ಕುಳಿತುಕೊಳ್ಳಿ. ಇಲ್ಲಿ ನೋಡಿ ಮೊದಲು ಮಾನ್ಯ ಧರ್ಮಸಿಂಗ್ ಮಾತನಾಡಿದರು, ಆಮೇಲೆ ಎಸ್. ಕೆ. ಕಾಂತರವರು ಮಾತನಾಡಿದರು, ಈಗ ಸಿ. ಪಿ. ಐ., ಸಿ. ಪಿ. ಎಂ., ಬಿ. ಜೆ. ಪಿ ಸದಸ್ಯರು ಮಾತನಾಡಿದ ಮೇಲೆ ಈಗ ನಾನು ಇವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ನಿಮ್ಮ ಹೆಸರು ಕೂಡ ಲಿಸ್ಟ್‌ನಲ್ಲಿದೆ. ದಯಮಾಡಿ ಕುಳಿತುಕೊಳ್ಳಿ ನಾನು ಯಾರಿಗೂ ಪಕ್ಷಪಾತ ಮಾಡುವುದಿಲ್ಲ.

ಶ್ರೀ ಎಂ. ಎಲ್. ಉಸ್ತಾದ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು ಮಂಡಿಸಿರುವ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಬಿಜಾಪುರ ನಗರದಲ್ಲಿ ಜನತಾ ಸರ್ಕಾರ ಬಂದ ಮೇಲೆ ವೀಕರ್ ಸೆಕ್ಷನ್ಸ್‌ಗೆ ಒಂದು ಸೈಟ್ ಸಹ ವಿತರಣೆ ಮಾಡಿಲ್ಲ. ಶ್ರೀಮಾನ್ ದೇವರಾಜ ಅರಸುರವರು ಮುಖ್ಯ ಮಂತ್ರಿಗಳಾಗಿದ್ದಾಗ ಬಿಜಾಪುರದಲ್ಲಿ ಜುಮ್ಮಾ ಮಸೀದಿ ರಸ್ತೆಯಲ್ಲಿ ಇಂದಿರಾಗಾಂಧಿ ಕಾಲೋನಿ ಎಂದು ಮಾಡಿ ಎಷ್ಟೋ ಜನರಿಗೆ ಸೈಟ್‌ಗಳನ್ನು ಹಂಚಿಕೆ ಮಾಡಿದ್ದಾರೆ. ಆದರೆ ನಿಮ್ಮ ಸರ್ಕಾರ ಬಂದ ಮೇಲೆ ಒಂದು

ಸೈಟ್ ಸಹ ಹಂಚಿಕೆ ಮಾಡಿಲ್ಲ ಇನ್ನು ರೂರಲ್ ಹೌಸ್ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ಕಾಂಗ್ರೆಸ್ಸ್ ಪಕ್ಷ ಅಧಿಕಾರದಲ್ಲಿದ್ದಾಗ ಒಂದೊಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕೊಟ್ಟಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.— ಆ ಇಲಾಖಾ ಡಿಮ್ಯಾಂಡ್ ಮುಗಿದಿದೆ.

ಶ್ರೀ ಎಂ. ಎಲ್. ಉಸ್ತಾದ್.— ಆಯಿತು. ಆದು ಬಿಟ್ಟರೆ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಪ್ರಸ್ತಾಪ ಮಾಡುವುದಾದರೆ ತಾವು ಸ್ಲಮ್ ಕ್ಲಿಯರೆನ್ಸ್ ಮಾಡುವುದಕ್ಕೆ ಹೊರಟು ಅಲ್ಲಿನ ನಿವಾಸಿಗಳನ್ನೆಲ್ಲಾ ಬೀದಿ ಪಾಲು ಮಾಡಿದಿರಿ,

ಏಕೆಂದರೆ, ಇಡೀ ನಮ್ಮ ರಾಜ್ಯದಲ್ಲಿ, ಬೆಂಗಳೂರು, ಮೈಸೂರು, ನಮ್ಮ ಬಿಜಾಪುರದಲ್ಲೂ ಸಹ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳು ನಡೆಯುವ ಸಮಯದಲ್ಲಿ ಬಡವರ ಮನೆಗಳನ್ನು ಕಿತ್ತು ಹಾಕಿದ್ದಾರೆ. ಸುಮಾರು ೩೦_೩೫ ವರ್ಷಗಳಲಾಗಾಯಿತು ಮುನಿಸಿಪಾಲಿಟಿ ಸೈಟುಗಳ ಮೇಲೆ ಬಡವರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು. ಇವರುಗಳಿಗೆ ಯಾವ ನೋಟೀಸ್ ಗಳನ್ನು ಕೊಡದೆ. ಮುನ್ಸೂಚನೆಯನ್ನು ಸಹ ಕೊಡದೆ ಮನೆಗಳನ್ನು ಕಿತ್ತುಹಾಕಿದ್ದಾರೆ. ಬಿಜಾಪುರದ ನಗರದ ಬಸವೇಶ್ವರ ರಸ್ತೆಯಲ್ಲಿ ಹಾಗೂ ಜುಮ್ಮಾ ಮಸೀದಿ ರೋಡ್‌ನಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದರು. ನಾವುಗಳು ಆಗ ಎಲೆಕ್ಷನ್ ಬಿಜಿಯಲ್ಲಿ ಇದ್ದೆವು, ಈ ಕಡೆ ಡಿ.ಸಿ.ಯವರು ಮತ್ತು ಇತರ ಆಫೀಸರ್‌ಗಳು ಎಲ್ಲಾ ಕೂಡಿ ಮುಂಜಾನೆ ಆಗುವುದರೊಳಗೆ ರಾತ್ರಿ ಹೊತ್ತು ಹೋಗಿ ಆ ಮನೆಗಳನ್ನು ಫಿನಿಷ್ ಮಾಡಿ ಅವರುಗಳನ್ನು ಬೀದಿಪಾಲು ಮಾಡಿದರು, ಇವರುಗಳನ್ನು ಇಲ್ಲಿಂದ ತೆಗೆಯಬಾರದೆಂದು ಗೌರ್ನಮೆಂಟ್ ಆದೇಶ ಕೂಡ ಇತ್ತು. ಈ ಆದೇಶ ಇದ್ದರೂ ಸಹ ಅವರುಗಳನ್ನು ಬೀದಿಪಾಲು ಮಾಡಿಬಿಟ್ಟರು, ಸೈಟುಗಳನ್ನು ಹಂಚುವುದರ ಬಗ್ಗೆ ಹೇಳಬೇಕಾದರೆ. ನಮ್ಮ ಎಂ.ಎಲ್.ಎ ಗಳ ಗತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ, ಎಂ.ಎಲ್.ಎ.ಗಳಿಗೆ ಸೈಟುಗಳನ್ನು ಹಂಚುವುದಕ್ಕೆ ನಮ್ಮ ಒಂದು ಸೊಸೈಟಿ ಇದೆ. ಆ ಸೊಸೈಟಿಯು ಇದುವರೆಗೂ ಸಿಂಗಲ್ ಸೈಟನ್ನೂ ಇವತ್ತಿನವರೆಗೂ ಯಾರಿಗೂ ಕೊಟ್ಟಿಲ್ಲ. ನಮಗೇ ಹೀಗೆ ಮಾಡಿರಬೇಕಾದರೆ, ಬಡವರಿಗೆ ಯಾವ ರೀತಿ ಸೈಟುಗಳನ್ನು ಇವರು ಕೊಡುತ್ತಾರೆ ? ಜನರ ಪ್ರತಿನಿಧಿಗಳಾದ ನಮಗೆ ನೀವು ಸೈಟು ಕೊಟ್ಟಿಲ್ಲ. ಇವತ್ತು ನಮ್ಮ ನಾಯಕರು ಹಾಗೂ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಇವತ್ತಿನ ದಿನಗಳಲ್ಲಿ ೩೦ಪರ್‌ಸೆಂಟ್‌ನಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ೧೯೫೧ರ ಸೆನ್ಸಸ್ ಪ್ರಕಾರ ಕೇವಲ ೨೩ ಪರ್‌ಸೆಂಟ್ ಮಾತ್ರ ನಗರ ಪ್ರದೇಶಗಳಲ್ಲಿ ವಾಸವಾಗಿದ್ದರು ಆದರೆ ಇವತ್ತು ೩೦ ಪರ್‌ಸೆಂಟ್‌ನಷ್ಟು ಜನ ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ನಗರ ಪ್ರದೇಶಗಳಲ್ಲಿರುವ ಜನರಿಗೆ ನೀರಿನ ಸಮಸ್ಯೆ ಬಹಳ ಇದೆ, ಬಿಜಾಪುರದಲ್ಲಿ ವಾಸಿಸುವಂಥ ಜನಗಳಿಗೆ ನೀರನ್ನು ಒದಗಿಸಲು ೧೯೮೦-೮೧ರಲ್ಲ ಒಂದು ಪ್ಲಾನ್ ಎಸ್ಟಿಮೇಟ್ ಮಾಡಲಾಗಿತ್ತು, ಆ ಪ್ಲಾನ್ ಎಸ್ಟಿಮೇಟ್ ಪ್ರಕಾರ ೮೬ ಲಕ್ಷ ರೂಪಾಯಿಗಳು ಖರ್ಚಾಗುತ್ತಿತ್ತು. ಆವಾಗ ನಮ್ಮ ಮಾನ್ಯ ಧರ್ಮಸಿಂಗ್‌ರವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದರು. ಅವರು ಅಲ್ಲಿಗೆ ಬಂದಿದ್ದಾಗ ಈ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಆಶ್ವಾಸನೆಯನ್ನು ಕೊಟ್ಟಿದ್ದರು. ಇನ್ನು ಎರಡು ತಿಂಗಳಿನಲ್ಲಿ ಕೆಲಸವನ್ನು ಪ್ರಾರಂಭ ಮಾಡಿಸುವುದಾಗಿಯೂ ಸಹ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಕೆಲಸ ಆಗಲಿಲ್ಲ ೧೯೮೩ನೇ ಇಸವಿಗೆ ನಿಮ್ಮ ಸರ್ಕಾರ ಬಂತು. ನಿಮ್ಮ ಸರ್ಕಾರ ಬಂದ ಮೇಲೆ ಇವತ್ತಿನವರೆಗೂ ಒಂದು ಕೆಲಸ ಸಹ ನಮ್ಮ ನಗರ ಪ್ರದೇಶದಲ್ಲಿ ಆಗಿಲ್ಲ. ಮತ್ತೆ ಮೊದಲು ಮಾಡಿದ ಯೋಜನೆಯನ್ನು ಮಾಡಬೇಕೆಂದು ಎಸ್ಟಿಮೇಟ್ ಮಾಡಿದಾಗ ೧೯೮೪-೮೫ರಲ್ಲಿ ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳು ಆಗುತ್ತವೆಂದು ಗೊತ್ತಾಗಿತ್ತು. ಪುನಃ ಮೊನ್ನೆ ವಿಚಾರ ಮಾಡಿದಾಗ, ಒಂದು ಕೋಟಿ ತೊಂಬತ್ತು ಲಕ್ಷ ರೂಪಾಯಿ ಆಗುತ್ತದೆಂದು ಗೊತ್ತಾಯಿತು, ಈ ಯೋಜನೆಯನ್ನು ಮಾಡಿ ಎಂದು ಸರ್ಕಾರಕ್ಕೆ ಕೇಳಿಕೊಂಡರೆ, ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ಇಡುತ್ತೇವೆಂದು ಹೇಳಲಾಯಿತು. ಮಾನ್ಯ ಲಕ್ಷ್ಮೀಸಾಗರ್‌ರವರು ಎಷ್ಟೋ ಸಲ ಬಿಜಾಪುರಕ್ಕೆ ಬಂದಿದ್ದಾರೆ, ಅಲ್ಲಿನ ಮುನಿಸಿಪಲ್ ಅಧ್ಯಕ್ಷರು ಮತ್ತು ಶಾಸಕರು ನೀರಿನ ಸಮಸ್ಯೆ ಬಗ್ಗೆ ಸವಿಸ್ತಾರವಾಗಿ ಹೇಳಿದ್ದೇವೆ. ಅವರು ನಾವು ಕೂಡಿ ಭೂತನಾಳ ಕೆರೆಗೆ ಹೋಗಿ ನೋಡಿಕೊಂಡು ಬಂದಿದ್ದೇವೆ. ೧೯೧೧ನೇ ಇಸವಿಯಲ್ಲಿ ಈ ಭೂತನಾಳ ಕೆರೆಯನ್ನು ಮಾನ್ಯ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಕಟ್ಟಲಾಗಿತ್ತು. ಆವಾಗ ಬಿಜಾಪುರದಲ್ಲಿದ್ದ ಜನಸಂಖ್ಯೆ ಸುಮಾರು ೩೦ ಸಾವಿರ ಮಾತ್ರ. ಈಗ ಸದ್ಯದ ಜನಸಂಖ್ಯೆ ಕನಿಷ್ಟ ಎರಡು ಲಕ್ಷಕ್ಕೂ ಮಿಕ್ಕಿದೆ. ೧೯೧೧ನೇ ಇಸವಿಯಲ್ಲಿ ಕಟ್ಟಿರುವ ಈ ಕೆರೆಗೆ ಬಿಜಾಪುರ

ಕ್ಕೆಲ್ಲಾ ನೀರು ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. ಆ ವಿಷಯ ಇವರಿಗೂ ಗೊತ್ತಿದೆ. ಸ್ವತಃ ಅವರೇ ಕಣ್ಣಾರೆ ನೋಡಿದ್ದಾರೆ ಬಿಜಾಪುರದಲ್ಲಿ ಆದಿಲ್‌ಶಾಹಿ ಕಾಲದಲ್ಲಿ ಬೇಗಮ್‌ತಾಲ ಮತ್ತು ರಾಮಲಿಂಗಮ್ ಎಂದು ಎರಡು ಕೆರೆಗಳಿದ್ದವು. ಆವಾಗ ಜನಸಂಖ್ಯೆ ಸುಮಾರು ೨೦ ಲಕ್ಷದಷ್ಟಿತ್ತು. ಆಗಿನ ಕಾಲದಲ್ಲಿ ಮಿಷನ್ ಇರಲಿಲ್ಲ, ಮಿಷನ್‌ಗಳಿಂದ ಲಿಫ್ಟ್ ಮಾಡುತ್ತಿರಲಿಲ್ಲ. ಆದರೂ, ಅಷ್ಟು ಜನರಿಗೂ ನೀರನ್ನು ಆ ಕೆರೆಗಳಿಂದ ಒದಗಿಸಲಾಗುತ್ತಿತ್ತು, ಈಗ ಎರಡು ಲಕ್ಷ ಜನರಿದ್ದರೂ ಅವರುಗಳಿಗೆ ನೀರನ್ನು ಸರಬರಾಜು ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ, ಬಿಜಾಪುರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ರಿಪೋರ್ಟನ್ನು ತರಿಸಿಕೊಂಡು ಆದಷ್ಟು ಬೇಗ ಜನಗಳಿಗೆ ನೀರು ಕೊಡುವುದಕ್ಕೆ ಕಾಳಜಿ ವಹಿಸಬೇಕೆಂದು ಕಳಕಳಿಯಿಂದ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇವರು ಕರ್ನಾಟಕದ ಜನತೆಗೆ ಬಟ್ಟೆ ಕೊಡುತ್ತೇವೆ, ಸೀರೆ ಕೊಡುತ್ತೇವೆ, ಪಂಚೆ ಕೊಡುತ್ತೇವೆ, ತಾಳಿಕೊಡುತ್ತೇವೆ, ಎಂದೆಲ್ಲಾ ಹೇಳುತ್ತಾ ಇದ್ದಾರೆ. ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ನೀವು ಹೇಳಿದ ಯಾವುದನ್ನೇ ನಮ್ಮ ಬಿಜಾಪುರದ ಜನರಿಗೆ ಕೊಡದಿದ್ದರೂ ಅಡ್ಡಿ ಇಲ್ಲ. ನಮ್ಮ ಜನರಿಗೆ ಕುಡಿಯಲಿಕ್ಕೆ ನೀರನ್ನು ಮಾತ್ರ ದಯಮಾಡಿ ಕೊಡಿಸಿ ಎಂದು ಕೇಳುತ್ತಿದ್ದೇನೆ. ಅಧ್ಯಕ್ಷರೇ, ಇವರು ನಮ್ಮ ಜನರಿಗೆ ನೀರನ್ನು ಕೊಡುವುದರ ಬದಲಾಗಿ ಬೀರನ್ನು ಕೊಡುತ್ತಿದ್ದಾರೆ. ನೀರಿನ ಬಗ್ಗೆ ಕಾಳಜಿ ವಹಿಸದ ಇವರು, ಬೀರಿನ ಬಗ್ಗೆ ಯಥೇಚ್ಛವಾಗಿ ಲೈಸನ್ಸ್‌ಗಳನ್ನು ಕೊಡುತ್ತಿದ್ದಾರೆ. ದಯವಿಟ್ಟು ನೀರನ್ನು ಕೊಡುವ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕಾಗಿ ಕೇಳಿಕೊಳ್ಳುತ್ತೇನೆ, ಕಳೆದ ಸಾರಿಯಿಂದ ಬಿಜಾಪುರಕ್ಕೆ ನೀರನ್ನು ಬಳೂತಿಯಿಂದ ಲಿಫ್ಟ್ ಮಾಡುತ್ತಿದ್ದಾರೆ, ಈಗ ೧೦ ಪರ್ಸೆಂಟ್ ನೀರು ಮಾತ್ರ ಲಿಫ್ಟ್‌ಮಾಡುತ್ತಾರೆ, ೯೦ ಪರ್ಸೆಂಟ್ ವೇಸ್ಟ್ ಆಗುತ್ತದೆ, ನೀರು ಸರಬರಾಜಿಗಾಗಿ ಜಲಮಂಡಳಿಯವರು ಒಂದು ಪ್ಲಾನ್‌ನನ್ನು ಮಾಡಿದರು. ಆ ಯೋಜನೆಗೆ ೧೫ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆದರೆ ಅದು ಇನ್ನೂ ಪೆಂಡಿಂಗ್‌ನಲ್ಲಿ ಇದೆ. ಹಿಂದೆ ರಾಜ್ಯಪಾಲರ ಭಾಷಣ ಮುಗಿದ ಮೇಲೆ ನಾವು ನನ್ನ ಮಿತ್ರರಾದ ಮಾನ್ಯ ತುಂಗಳ್‌ರವರು ಸೇರಿ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಅವರಲ್ಲಿ ನಮ್ಮ ವ್ಯಥೆಯನ್ನು ನಮ್ಮ ತೊಂದರೆಯನ್ನು ನೀರಿನ ಬಗ್ಗೆ ಹೇಳಿದೆ, ಕುಡಿಯುವ ನೀರಿನ ಸರಬರಾಜಿಗಾಗಿ ಮಾಡಿದ ೧೪ ಲಕ್ಷ ರೂಪಾಯಿಗಳು ಇನ್ನೂ ಬಿಡುಗಡೆಯಾಗಿಲ್ಲ ದಯಮಾಡಿ ಬಿಡುಗಡೆ ಮಾಡಿ ಎಂದು ಕೇಳಿದ್ದಕ್ಕೆ ಆಯಿತು ಮಾಡುತ್ತೇವೆ ಎಂದು ಹೇಳಿದರು ಆದರೆ ಇಲ್ಲಿಯ ತನಕ ದುಡ್ಡು ಬಂದಿಲ್ಲ, ಅಧ್ಯಕ್ಷರೇ, ನಾವು ಜನರ ಪ್ರತಿನಿಧಿಗಳು ಜನರಿಗೆ ನಾವುಗಳು ಮುಖ ತೋರಿಸಬೇಕಾಗುತ್ತದೆ, ಅವರ ಅವಶ್ಯಕತೆಗಳನ್ನು ಗಮನಿಸಬೇಕಾಗುತ್ತದೆ. ಸರಕಾರದವರು ಕೊಡುತ್ತೇವೆ ಎಂದು ಹೇಳಿ ನಂಬಿಸಿ, ನಮ್ಮನ್ನು ಸುಳ್ಳು, ವಂಚನೆ, ಮೋಸ, ಮಾಡುತ್ತಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ನಮ್ಮ ಬಿಜಾಪುರ ನಗರದ ಜನರ ಒಂದು ಸಮಸ್ಯೆಯ ತೀವ್ರತೆಯನ್ನು ತಿಳಿದುಕೊಂಡು, ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ೧೪ ಲಕ್ಷ ರೂಪಾಯಿಗಳನ್ನು ತಮ್ಮ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಸಿ.ಐ.ಟಿ.ಬಿ. ಬಗ್ಗೆ ಹೇಳಬೇಕಾದರೆ, ಅವರ ವಾರ್ಷಿಕ ವರದಿಯ ಪ್ರಕಾರ ಬಿಜಾಪುರದಲ್ಲಿ ಯಾರಿಗೂ ಒಂದು ಸೈಟನ್ನು ಕೂಡ ಹಂಚಿಲ್ಲ. ಹಾಗಿದ್ದ ಮೇಲೆ ಸುಮ್ಮನೇ ಈ ಮಂಡಳಿಯಾದರೂ ನಮಗೆ ಏತಕ್ಕೆ ಬೇಕು? ಸುಮ್ಮನೇ ಆ ಮಂಡಳಿಯ ವೆಚ್ಚವನ್ನು ಜನರ ಮೇಲೆ ಹೊರಿಸುವುದರಲ್ಲಿ ಏನು ಅರ್ಥವಿದೆ ? ಆ ಮಂಡಳಿಗೆ ಏತಕ್ಕಾಗಿ ಒಬ್ಬ ಅಧ್ಯಕ್ಷರು ಇರಬೇಕು ! ಒಂದು ವೇಳೆ ನಿಮಗೆ ಸದುದ್ದೇಶವಿದ್ದಲ್ಲಿ ಆ ಮಂಡಳಿಗೆ ಹಣವನ್ನು ಬಿಡುಗಡೆ ಮಾಡಿ. ಆಗ ಮಾತ್ರ ಅವರು ಏನಾದರೂ ಸ್ವಲ್ಪ ಕಾರ್ಯನಿರ್ವಹಣೆ ಮಾಡುವುದಕ್ಕೆ ಸಾಧ್ಯವಾದೀತು. ಅದು ಸಾಧ್ಯವಿಲ್ಲದಿದ್ದರೆ ದಯವಿಟ್ಟು ಅದನ್ನು ರದ್ದುಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮುನಿಸಿಪಾಲಿಟಿ ಗ್ರ್ಯಾಂಟ್ಸ್ ಬಗ್ಗೆ ಹೇಳುವುದಾದರೆ, ಮೊದಲು ಆಕ್ಟ್ರಾಯ್ ಏನು ಇತ್ತು ಅದನ್ನು ೧-೪-೧೯೭೪ರಲ್ಲಿ ತೆಗೆದುಹಾಕಲಾಯಿತು. ಅದರಿಂದಾಗಿ ಮುನಿಸಿಪಾಲಿಟಿಯವರ ಒಂದು ಸಂಪನ್ಮೂಲ ಹೋದಂತಾಯಿತು. ಅದನ್ನು ಪುನಃ ಹೊಸದಾಗಿ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಇನ್ನು ನಮ್ಮ ಬಿಜಾಪುರದಲ್ಲಿ ಕೋರ್ಟ್ ಬಿಲ್ಡಿಂಗ್ ಸ್ವಂತದ್ದು ಇಲ್ಲ. ಆ ಕಟ್ಟಡವನ್ನು ಕಟ್ಟುವ ಸಲುವಾಗಿ ಬಾಗಲಕೋಟೆ ರಸ್ತೆಯಲ್ಲಿ ಕೆ. ಇ. ಬಿ. ಆವರಣದ ಪಕ್ಕದ ಸೈಟ್ ಕೊಟ್ಟಿದ್ದಾರೆ, ಆದರೆ ವಕೀಲರ ಸಂಘದ ಅಧ್ಯಕ್ಷರು ಕಟ್ಟಡ ಕಟ್ಟಲು ಗ್ರ್ಯಾಂಟ್ ರಿಲೀಸ್ ಮಾಡಿ ಎಂದು ಪದೇ ಪದೇ ಕೇಳುತ್ತಿದ್ದಾರೆ. ಅದನ್ನು ಯಾವಾಗ ಮಾಡುತ್ತೀರಿ ಎಂದು ದಯಮಾಡಿ ಹೇಳಬೇಕು.

ಇನ್ನು ನಮ್ಮ ಸರ್ಕಾರದ ಚೀಫ್ ವಿಪ್‌ರವರಿಗೆ ಏನು ಸವಲತ್ತುಗಳನ್ನು ಕೊಡುತ್ತಾ ಇದ್ದೀರಿ, ಹಾಗೆ ವಿರೋಧಪಕ್ಷದ ಚೀಫ್ ವಿಪ್‌ರವರಿಗೂ ಸವಲತ್ತುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಿಮ್ಲಾದಲ್ಲಿ ನಡೆದ ಆಲ್ ಇಂಡಿಯಾ ಚೀಫ್ ವಿಪ್ಸ್ ಕಾನ್‌ಫರೆನ್ಸ್‌ನಲ್ಲಿ ಕೂಡ ಈ ಬಗ್ಗೆ ಒಂದು ನಿರ್ಣಯವನ್ನು ಮಾಡಿದ್ದಾರೆ, ಆ ವಿಷಯದಲ್ಲಿ ತಾವು ಒಂದು ನಿರ್ಧಾರಕ್ಕೆ ಬರಬೇಕು. ಅದೇ ರೀತಿ ಕೆಲವು ರಾಜ್ಯಗಳಲ್ಲಿ ಎಂ. ಎಲ್. ಎ.ಗಳಿಗೆ ಪಿ. ಎಸ್.ಗಳನ್ನು ಕೊಡುವ ಹಾಗೆ ನಮ್ಮಲ್ಲಿಯೂ ಆ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅವರು ಕೊಟ್ಟಂತಹ ವಾರ್ಷಿಕ ವರದಿಯಲ್ಲಿ ೫೦,೦೦೦ ಟನ್ ಅಕ್ಕಿ ಪ್ರತಿ ತಿಂಗಳೂ ಬಿಡುಗಡೆಯಾಗುತ್ತಿದೆ. ೨೫,೦೦೦ ಮೆಟ್ರಿಕ್ ಟನ್ ಗೋಧಿ ಬಿಡುಗಡೆಯಾಗುತ್ತಿದೆ. ಅದೇ ರೀತಿ ಸಕ್ಕರೆ ಹಾಗೂ ಕೆರೋಸಿನ್ ಬಿಡುಗಡೆಯಾಗುತ್ತಿದೆ. ನಮ್ಮ ಸ್ಟೇಟ್ ಕಾಂಟ್ರಿಬ್ಯೂಷನ್ ಎಷ್ಟು ಎಂದು ಹೇಳಬೇಕು. ಬಿಜಾಪುರದಲ್ಲಿ ಎರಡು ದಿವಸಕ್ಕೊಮ್ಮೆ ನೀರು ಬರುತ್ತಿದೆ. ಸರಿಯಾಗಿ ನೀರು ಪೂರೈಕೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆ ಕೊಟ್ಟರು. ಆದರೆ ಇವತ್ತಿನವರೆಗೂ ಆಗಿಲ್ಲ. ಈ ಸರಕಾರದಲ್ಲಿ ಬೊಬ್ಬೆ ಹೊಡೆಯುವುದನ್ನು ಬಿಟ್ಟರೆ ಬೇರೆ ಏನೂ ಆಗುತ್ತಿಲ್ಲ. ಕೊನೆಯಲ್ಲಿ ಬೊಬ್ಬೆ ಹೊಡೆದು ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಹತ್ತು ನಿಮಿಷಗಳ ಅವಧಿಯನ್ನು ತಾವು ದಯಪಾಲಿಸಿದ್ದೀರಿ. ಆದರೆ ಇದು ಸಾಕಾಗುವುದಿಲ್ಲ. ಗಣಪತಿಯು ಈಶ್ವರ ಪಾರ್ವತಿಯರನ್ನು ಪ್ರದಕ್ಷಿಣೆ ಮಾಡಿ ಬಂದು ಪ್ರಪಂಚವನ್ನೇ ಸುತ್ತಿದೆ ಎಂದು ಹೇಳಿದ ಹಾಗೆ ಮಾನ್ಯ ಲಕ್ಷ್ಮೀಸಾಗರ್‌ರವರನ್ನು ನಾವು ಒಂದು ರೌಂಡ್ ಹಾಕಿದರೆ ಎಲ್ಲಾ ವಿಷಯಗಳನ್ನು ಮಾತನಾಡಿದ ಹಾಗೇ ಎಂದು ನನ್ನ ಭಾವನೆ. ಪ್ರಾಮುಖ್ಯವಾದ ವಿಷಯಗಳ ಬಗ್ಗೆ ನಮಗೆ ಹೆಚ್ಚು ಅವಕಾಶ ಕೊಡಬೇಕು. ಮೊದಲನೆಯದಾಗಿ, ಆಹಾರದ ವಿಷಯವನ್ನು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಉಡುಪಿ, ಮಂಗಳೂರು, ಬೆಂಗಳೂರು ಇನ್ನೂ ಮುಂತಾದ ಕಡೆಗಳಲ್ಲಿ ವಿತರಣಾ ವ್ಯವಸ್ಥೆ ಸರಿಯಾಗಿದೆ. ಮೈಸೂರು ನಗರ ಬಹಳ ಪ್ರಮುಖವಾದ ನಗರ ಕರ್ನಾಟಕದಲ್ಲೇ ಸುಂದರವಾದ ನಗರ ಹಾಗೂ ಮೊದಲು ನಮ್ಮ ರಾಜ್ಯಕ್ಕೆ ರಾಜಧಾನಿಯಾಗಿದ್ದ ನಗರ ಅಲ್ಲಿ ಸರಿಯಾದ ವಿತರಣೆಯಾಗುತ್ತಿಲ್ಲ. ಬೆಂಗಳೂರಿನಲ್ಲಿ ಒಂದು ತಲೆಗೆ ಮೂರು ಕೆ. ಜಿ. ಅಕ್ಕಿಯನ್ನು ಕೊಡುತ್ತಿದ್ದೀರಿ. ಒಂದು ಮನೆಯಲ್ಲಿ ೧೫ ಜನರಿದ್ದರೆ ಒಟ್ಟು ೪೫ ಕೆ. ಜಿ. ಅಕ್ಕಿ ಸಿಗುತ್ತದೆ ಆದರೆ ಅದೇ ಮೈಸೂರು ನಗರದಲ್ಲಿ ಒಂದು ಸಂಸಾರದಲ್ಲಿ ೧೫ ಜನರಿದ್ದರೂ ಒಂದು ಕಾರ್ಡಿಗೆ ೭ ರಿಂದ ೯ ಕೆ. ಜಿ. ಕೊಡುತ್ತಿದ್ದೀರಿ ಕೊನೇ ಪಕ್ಷ ಒಂದು ಸಂಸಾರಕ್ಕೆ ಒಂದು ತಲೆಗೆ ಮೂರು ಕೆ. ಜಿ. ಕೊಡದಿದ್ದರೂ ಕೂಡ ೧೫ ಕೆ. ಜಿ. ಕೊಡಿ ಎಂದು ಹಿಂದೆ ಆಹಾರ ಸಚಿವರಾಗಿದ್ದ ಮಾನ್ಯ ಬಸವಣ್ಣಪ್ಪನವರನ್ನು ಕೇಳಿಕೊಂಡೆ ಅವರು ಕೂಡ ಮಾಡುತ್ತೇವೆಂದು ಹೇಳಿದರು. ಇನ್ನೂ ಆಗಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಕೆಲಸವನ್ನು ಮಾಡಿ, ತಮ್ಮ ಕೃಪಾಕಟಾಕ್ಷ ಮೈಸೂರು ನಗರದ ಜನತೆಯ ಮೇಲೆ ಬೀಳಲಿ ಎಂದು ಅವರನ್ನು ಕೇಳಿಕೊಳ್ಳುತ್ತೇನೆ. ಕೊಡತಕ್ಕಂತಹ ಅಕ್ಕಿಯನ್ನೂ ಕೂಡ ಜನರು ಊಟ ಮಾಡುವುದಕ್ಕಾಗುವುದಿಲ್ಲ. ಜನರು ಕೇಳಿದರೆ ಕೇಂದ್ರದಿಂದ ಬಂದಿದೆ ಏನುಮಾಡುವುದು ಎಂದು ಹೇಳುತ್ತಾರೆ. ಮೈಸೂರಿನ ಜನರಿಗಾಗಲೀ, ಬೆಂಗಳೂರಿನ ಜನರಿಗಾಗಲೀ, ಇಲ್ಲವೇ ಯಾವ ಪ್ರದೇಶದ ಜನರಿಗೇ ಆಗಲೀ ಒಳ್ಳೆಯ ಅಕ್ಕಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಪುರಸಭೆಗಳು, ನಗರಪಾಲಿಕೆಗಳು ಏನಿವೆ ಅವುಗಳಿಗೆ ಪ್ರಮುಖವಾದ ಆದಾಯ ಬರುವಂತಹ ಮೂಲ ಯಾವುವು ಎಂದರೆ, ಮನೆಗಳ ಮೇಲಿನ ವಿವಿಧ

ರೀತಿಯ ತೆರಿಗೆಗಳು ಮತ್ತು ಆಕ್ಟ್ರಾಯ್‌ನಿಂದ. ಈಗ ಆಕ್ಟ್ರಾಯ್ ಇಲ್ಲ ಮೈಸೂರು ನಗರದಲ್ಲಿ ನಡೆದಂಥ ಒಂದು ಘಟನೆಯನ್ನು ಹೇಳುತ್ತೇನೆ. ಸುಮಾರು ೪೦೫ ಮನೆಗಳ ಬಹುತರದ ತೆರಿಗೆಗಳನ್ನು ಹೇಗೆ ಕಳಕೊಂಡಿದೆ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೈಸೂರು ನಗರದಲ್ಲಿ ಬೆಳವಟ್ಟದಲ್ಲಿ ೧೯೮೨ರಲ್ಲಿ ೪೦೫ ಮನೆಗಳಿಗೆ ಅರ್ಜಿ ಕರೆದರು. ಅದರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ೨೧೫, ಅಲ್ಪ ಆದಾಯದವರಿಗೆ ೧೨೮, ಮಧ್ಯಮ ವರ್ಗದವರಿಗೆ ೬೨, ಈ ೪೦೫ ಮನೆಗಳಿಗೆ ಒಟ್ಟು ೬೦ ಲಕ್ಷ ರೂಪಾಯಿಗಳು ವೆಚ್ಚವಾಗಿವೆ ೨೦-೨-೧೯೮೭ಕ್ಕೆ ಈ ಮನೆಗಳನ್ನು ಕಟ್ಟಿ ಐದು ವರ್ಷಗಳು ಆಗುತ್ತವೆ. ಆದರೆ ಇಲ್ಲಿಯವರೆಗೂ ಆ ಮನೆಗಳನ್ನು ಹಂಚಿಕೆ ಮಾಡಿಲ್ಲ, ನಗರ ಪಾಲಿಕೆ ಈ ಮನೆಗಳ ಮೇಲೆ ಕಂದಾಯವನ್ನೂ ಹಾಕಿಲ್ಲ. ಇವರಿಗೆ ದುಡ್ಡು ಬರುತ್ತಿಲ್ಲ. ಈ ಮನೆಗಳ ಹಂಚಿಕೆಗಾಗಿ ದಿನಾಂಕ ೧೧-೩-೧೯೮೮ರಲ್ಲಿ ಒಂದು ಲಾಟರಿ ಎತ್ತಿದರು.

ಈ ಮನೆಗಳಿಗೆ ಯಾರು ಅರ್ಜಿಯನ್ನು ಹಾಕಿಕೊಂಡಿದ್ದರೋ, ಅವರಿಗೆ ೭-೧೦-೧೯೮೮ರಲ್ಲಿ ಮಂಜೂರಾತಿ ಪತ್ರ ಕೊಟ್ಟರು. ಅವರುಗಳು ಹಣವನ್ನು ಕೂಡಾ ಕಟ್ಟಿದ್ದಾರೆ. ಇದುವರೆಗೂ ಆ ಮನೆಗಳನ್ನು ಅವರಿಗೆ ಕೊಟ್ಟಿಲ್ಲ. ಈ ಫೋಟೋಗಳನ್ನು ತಂದಿದ್ದೇನೆ ನೋಡಿ. ಅದಕ್ಕೆ ಕಿಟಕಿ ಇಲ್ಲ, ಬಾಗಿಲು ಇಲ್ಲ, ೪೦೫ ಮನೆಗಳು ಈ ರೀತಿಯ ಸ್ಥಿತಿಯಲ್ಲಿವೆ. ಈ ೪೦೫ ಮನೆಗಳ ಮಹೋತರ್ಪ ತೆರಿಗೆಯನ್ನು ಮೈಸೂರು ನಗರ ಪಾಲಿಕೆ ಕಳೆದು ಕೊಂಡಿದೆ. ಈ ರೀತಿ ಆದರೆ, ನಗರಪಾಲಿಕೆಗೆ ಯಾವ ರೀತಿ ಆದಾಯ ಬರಬೇಕು ? ಇವತ್ತು ನೀರಿನ ಹಣವನ್ನು ವಾಟರ್ ಬೋರ್ಡ್‌ಗೆ ಕಟ್ಟದೇ ಇದ್ದರೆ ೨೪ ಗಂಟೆಯಲ್ಲಿ ನೋಟೀಸನ್ನು ಜಾರಿ ಮಾಡುತ್ತೀರಿ. ಮೈಸೂರು ನಗರಕ್ಕೆ ನೀರನ್ನು ನಿಲ್ಲಿಸುತ್ತೇವೆ. ಹಣ ಅಲ್ಲಿಂದ ಬಂದಿಲ್ಲ ಹಾಗೆ ಹೀಗೆ ಎಂದು ನೋಟೀಸನ್ನು ಜಾರಿ ಮಾಡುತ್ತೀರಿ. ಈ ಸಂದರ್ಭದಲ್ಲಿ ನಾನು ಪ್ರಶ್ನೆಯನ್ನು ಹಾಕುತ್ತಿದ್ದೇನೆ. ದಯವಿಟ್ಟು ಈ ಫೋಟೋಗಳನ್ನು ಸಚಿವರು ನೋಡಬೇಕು. ಯುಗಾದಿ ಹಬ್ಬ ಹತ್ತಿರ ಬರುತ್ತಿದೆ. ಈ ಯುಗಾದಿ ಹಬ್ಬದೊಳಗಾಗಿ ಉಡುಗೊರೆಯಾಗಿ ಅವರುಗಳಿಗೆ ೪೦೫ ಮನೆಗಳನ್ನು ಹೌಸಿಂಗ್ ಬೋರ್ಡ್‌ನಿಂದ ಕೊಡಿಸಬೇಕು ಎಂದು ಹೇಳುತ್ತೇನೆ.

ಆಕ್ಟ್ರಾಯ್ ತೆರಿಗೆ ನಗರಸಭೆಯಲ್ಲಾಗಲೀ, ಪುರಸಭೆಯಲ್ಲಾಗಲೀ ಬಂದರೆ ಅದು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳತಕ್ಕಂಥ ಸ್ಥಿತಿಗೆ ಬರುತ್ತದೆ. ಅದು ಒಂದು ರೀತಿಯಲ್ಲಿ ಶಕ್ತಿಯನ್ನು ಕೊಡತಕ್ಕಂಥ ವ್ಯವಸ್ಥೆ. ೧೯೮೫ರಲ್ಲಿ ಕೇಂದ್ರ ಸರ್ಕಾರದವರು ಸಭೆಯನ್ನು ಕರೆದರು ಆ ಸಭೆಗೆ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹೋಗಿದ್ದರು. ಆ ಸಭೆಯಲ್ಲಿ ಆಕ್ಟ್ರಾಯ್ ಬಗ್ಗೆ ಚರ್ಚೆ ಆಯಿತು. ೧೯೮೬ರಲ್ಲಿ ಆಲ್ ಇಂಡಿಯಾ ಮೇಯರ್ ಕೌನ್ಸಿಲ್ ಮೀಟಿಂಗ್ ಆಯಿತು. ಅಲ್ಲಿ ಒಂದು ರೆಸಲ್ಯೂಷನ್ ಮಾಡಿದರು. ಅಖಿಲಭಾರತ ಮಟ್ಟದಲ್ಲಿ ಎಲ್ಲಾ ನಗರಸಭೆಗಳೂ ಕೂಡಾ, ಆಕ್ಟ್ರಾಯ್‌ನ್ನು ಜಾರಿಗೆ ತರಬೇಕು. ಆಕ್ಟ್ರಾಯ್‌ನ್ನು ಜಾರಿಗೆ ತರುವುದರಿಂದ ಅಲ್ಲಿನ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ ಮತ್ತು ನಾಗರೀಕ ಸೌಲಭ್ಯಗಳನ್ನು ಕೊಡಲಿಕ್ಕೆ ಆಗುತ್ತದೆ ಎಂದು. ಈ ಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಕ್ಟ್ರಾಯ್‌ನ್ನು ಜಾರಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಾದರೆ ನಾವು ಮೈಸೂರು ನಗರ ಒಂದರಲ್ಲಿಯೇ ನಿಮಗೆ ಆರು ಕೋಟಿ ರೂಪಾಯಿಯಿಂದ ಏಳು ಕೋಟಿ ರೂಪಾಯಿ ಒಂದು ವರ್ಷಕ್ಕೆ ಆದಾಯ ಬರುತ್ತದೆ. ಅನಂದಾನ ನಮಗೆ ಕೊಡುತ್ತಿದ್ದೀರಿ. ಆಕ್ಟ್ರಾಯ್ ತೆಗೆದ ಮೇಲೆ ಈ ರೀತಿ ಮಾಡುತ್ತೀದ್ದೀರಿ. ನಿಮ್ಮ ಸರ್ಕಾರಕ್ಕೆ ಸಾಲ ಬೇಕಾಗಿದ್ದರೆ ವರ್ಷಕ್ಕೆ ಒಂದು ಕೋಟಿ ರೂಪಾಯಿ ನಾವು ಕೊಡುತ್ತೇವೆ. ಕರ್ನಾಟಕದಲ್ಲಿ ಯಾವ ಯಾವ ನಗರಸಭೆ ಇದೆ, ಯಾವ ಯಾವ ಪುರಸಭೆ ಇದೆ, ಅವುಗಳು ತಮ್ಮ ಕೃಪಾಕಟಾಕ್ಷಕ್ಕೆ ಬೆಳಿಗ್ಗೆಯಿಂದ ಸಂಜೆಯವರೆಗೂ ಇಲ್ಲಿ ಬಂದು ಬಾಗಿಲು ಕಾಯತಕ್ಕಂಥ ಪರಿಸ್ಥಿತಿಯನ್ನು ನೋಡಿದ್ದೀರಿ. ಅವರಿಗೆ ಆಕ್ಟ್ರಾಯ್ ಹಾಕತಕ್ಕಂಥ ಹಕ್ಕನ್ನು ಕೊಡಿ. ನಾಗರೀಕರಿಗೆ ಏನು ಬೇಕೋ, ನೀರಿನ ಅನುಕೂಲ ಬೇಕೋ, ಚರಂಡಿ ಅನುಕೂಲ ಬೇಕೋ, ರಸ್ತೆ ಅನುಕೂಲ ಬೇಕೋ, ಆ ಅನುಕೂಲಗಳನ್ನು ಮಾಡಿಕೊಳ್ಳಲಿಕ್ಕೆ ತಕ್ಕಂಥ ಶಕ್ತಿ ಸ್ವಾವಲಂಬನೆಯನ್ನು ನೀವು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ಆಕ್ಟ್ರಾಯ್‌ನ್ನು ಈ ಕರ್ನಾಟಕದಲ್ಲಿ ಜಾರಿಗೆ ತರತಕ್ಕಂಥ ವ್ಯವಸ್ಥೆಯನ್ನು ಕೂಡಲೇ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ಕಾನೂನನ್ನು ಜಾರಿ ಮಾಡಬೇಕು ಎಂದು ಹೇಳುತ್ತೇನೆ. ಪುಟ ೧೧ ರಲ್ಲಿ ಶಾಸಕರಿಗೆ ವೇತನ, ನಿವೃತ್ತಿ ವೇತನ, ವೇತನಗಳ ಅಧಿನಿಯಮ ಎಂದು ಇದೆ. ಇವತ್ತು ಐದು ವರ್ಷಗಳ ಅವಧಿಯಲ್ಲಿ ಯಾರು ಶಾಸಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೋ, ಅವರಿಗೆ ೩೦೦ ರೂಪಾಯಿ ನಿವೃತ್ತಿ ಭತ್ಯವನ್ನು ಕೊಡುತ್ತಿದ್ದೀರಿ ಪಾರ್ಲಿಮೆಂಟ್‌ನಲ್ಲೂ ಕೂಡಾ ಮೊದಲು ಅದೇ ರೀತಿ ಕೊಡುತ್ತಿದ್ದರು. ಆದರೆ

ಈಗ ಪಾರ್ಲಿಮೆಂಟಿನಲ್ಲಿ ಏನು ಮಾಡಿದ್ದಾರೆ ಎಂದರೆ ೩೦೦ ರಿಂದ ೫೦೦ ರೂಪಾಯಿ ಮಾಡಿದ್ದಾರೆ. ಯಾರು ಶಾಸಕರಾಗಿ ಎರಡನೇ ಅವಧಿಯಲ್ಲಿ ಬರುತ್ತಾರೋ ಅಂಥವರಿಗೆ ಪ್ರತಿ ವರ್ಷವೂ ಕೂಡಾ ೫೦ ರೂಪಾಯಿಯಂತೆ ಸೇರಿಸುತ್ತಾ ನಿವೃತ್ತಿ ವೇತನವನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಅಲ್ಲಿ ಮೊದಲ ಅವಧಿಯಲ್ಲಿ ೫೦೦ ರೂಪಾಯಿ ನಿವೃತ್ತಿ ವೇತನವನ್ನು ಪಡೆಯುತ್ತಿರುತ್ತಾರೆ. ಮತ್ತೆ ಎರಡನೇ ಅವಧಿಯಲ್ಲಿ ಯಾರು ಬರುತ್ತಾರೆ, ಅವರಿಗೆ ಪ್ರತಿವರ್ಷವೂ ಐವತ್ತು ರೂಪಾಯಿಯಂತೆ ಎಷ್ಟು ವರ್ಷ ಸೇವೆಯನ್ನು ಸಲ್ಲಿಸಿರುತ್ತಾರೋ ಅಷ್ಟು ವರ್ಷವೂ ಕೂಡಾ ಸೇರಿಸಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ತಾವು ದಯವಿಟ್ಟು ಇಲ್ಲಿಯೂ ಕೂಡಾ ಅದನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕಾನೂನು ನೆರವು ಮಂಡಳಿ ಎಂದು ಇದೆ. ಈ ಕಾನೂನು ನೆರವು ಮಂಡಳಿಯಲ್ಲಿ ತಾವು ಯಾವ ವ್ಯವಸ್ಥೆಯನ್ನು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ತಮ್ಮಲ್ಲಿ ಕಳಕಳಿಯಿಂದ ಈ ವಿಷಯದಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

೨–೩೦ ಪಿ. ಎಂ.

ಯಾವ ರೈತ ಈ ದೇಶದಲ್ಲಿ ಶ್ರೀಮಂತರಿಂದ ಶೋಷಣೆಗೆ ಒಳಗಾಗಿದ್ದಾನೆ ಅವನು ಸಾಲ ಸೋಲಗಳನ್ನು ಮಾಡಿ ಅವರ ಶೋಷಣೆಗೆ ಒಳಗಾಗಿದ್ದಾನೆ. ಅವನು ತಿಳುವಳಿಕೆ ಇಲ್ಲದೆ ಈ ಒಂದು ಶೋಷಣೆಗೆ ಒಳಗಾಗಿದ್ದಾನೆ ಅಂತ ಹೇಳಬಹುದು. ನಿಜವಾಗಿಯೂ ಹೇಳುವುದಾದರೆ, ಯಾವ ರೈತನನ್ನು ದೇಶದ ಬೆನ್ನೆಲುಬು ಎಂದು ಹೇಳುತ್ತಿದ್ದೀರೋ, ಅವನಿಗೆ ನ್ಯಾಯವಾಗಿ ರಕ್ಷಣೆ ಸಿಗಬೇಕು.

ಇನ್ನು ತಾವು ಬಡವನಿಗೆ ಕಾನೂನು ನೆರವು ಮಂಡಲಿ ಮಾಡಿದ್ದೀರಿ. ಇದರ ಬಗ್ಗೆ ಹಳ್ಳಿಗಳಲ್ಲಿ ಎಷ್ಟರಮಟ್ಟಿಗೆ ಪ್ರಚಾರ ಸಿಕ್ಕಿದೆ. ಈ ಪ್ರಚಾರ ಒಂದು ವ್ಯವಸ್ಥಿತವಾದ ಮಟ್ಟದಲ್ಲಿ ಆಗುತ್ತಾ ಇದೆಯೋ ಎನ್ನುವುದನ್ನು ನಾವು ನೋಡಿದರೆ ಹಳ್ಳಿಗಳಲ್ಲಿ ಇದು ಸಾಕಷ್ಟು ಮಟ್ಟಿಗೆ ಪ್ರಚಾರವಾಗಿಲ್ಲ ಎನ್ನುವುದು ನನ್ನ ಭಾವನೆ. ಆದುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಬಡವನಿಗೆ ಕಾನೂನು ನೆರವು ಕೊಡುವುದರಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಇನ್ನೂ ಒಳ್ಳೆಯ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಬಡ ರೈತರನ್ನು, ಬಡವರನ್ನು, ದೀನದಲಿತರನ್ನು ಹಿಂದುಳಿದ ವರ್ಗಕ್ಕೆ ಸೇರಿದವರನ್ನು ಯಾರು ಶೋಷಣೆ ಮಾಡುತ್ತಿದ್ದರೋ, ಅಂತಹ ಜನಕ್ಕೆ ಕಾನೂನು ನೆರವು ಸಿಗಬೇಕಾದರೆ ಅವರ ಕಿವಿ ಮುಟ್ಟುವ ಹಾಗೆ ಪ್ರಚಾರ ಮಾಡಿದರೆ ಅವರಿಗೆ ಹೆಚ್ಚು ಸಹಾಯ ಸಿಕ್ಕಿದಂತಾಗುತ್ತದೆ. ಅವರಿಗೆ ಇದರ ಬಗ್ಗೆ ಅರಿವು ಉಂಟು ಮಾಡತಕ್ಕಂಥಾ ಕೆಲಸವನ್ನು ಮಾಡಬೇಕು. ಇದರ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರ ಪ್ರಚಾರ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದೇನೆಂದರೆ, ನಮ್ಮ ಸರ್ಕಾರದವರು ಈವೊತ್ತಿನ ದಿವಸ ಆ ಬಡಜನರಿಗೆ ಅಕ್ಕಿ, ಹಸಿರುಕಾರ್ಡ್, ಬಟ್ಟೆ ಮುಂತಾದವುಗಳನ್ನೆಲ್ಲಾ ಆ ಜನರಿಗೆ ಏನು ವಿತರಣೆ ಮಾಡುತ್ತಿದ್ದಾರೆ, ಈ ವಿತರಣೆ ಕಾರ್ಯ ಮತ್ತಷ್ಟು ವ್ಯಾಪಕವಾಗಿ ಚೆನ್ನಾಗಿ ಆಗಬೇಕು ಎಂದು ಹೇಳುತ್ತೇನೆ. ಈವೊತ್ತು ಈ ವಿತರಣಾ ಕಾರ್ಯ ಹಳ್ಳಿಗಾಡಿನಲ್ಲಿ ಅಷ್ಟಾಗಿ ಆಗಿಲ್ಲ. ಹಳ್ಳಿ ಹಳ್ಳಿಯಲ್ಲಿರ ತಕ್ಕಂಥಾ ವಿಲೇಜ್ ಅಕೌಂಟೆಂಟ್‌ರು ಆಗಲಿ ಅಥವಾ ಇನ್ನು ಇತರೇ ಯಾವ ಅಧಿಕಾರಿಗಳೇ ಇರಲಿ ಆ ಅಧಿಕಾರಿಗಳು ಕೊಡತಕ್ಕಂಥ ಅಂಕಿಅಂಶದ ಮೇಲೆ, ಅದನ್ನು ಈವೊತ್ತು ಇವರು ಆಧಾರವನ್ನಾಗಿ ಇಟ್ಟುಕೊಂಡು ಇಲ್ಲಿ ತಿಳಿಸಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಹಸಿರು ಕಾರ್ಡುಗಳನ್ನು ಹಂಚುವಾಗ ವಿಧಾನ ಸಭಾ ಸದಸ್ಯರು, ಇಲ್ಲವೇ ವಿಧಾನ ಪರಿಷತ್ತಿನ ಸದಸ್ಯರು ಅಥವಾ ಮಂಡಲ್ ಪಂಚಾಯತ್ ಸದಸ್ಯರ ಮೂಲಕ ಅವರವರ ಹಳ್ಳಿಗಳಲ್ಲಿ ಒಂದು ಸಮೀಕ್ಷೆ ನಡೆಸಿದರೆ ಮಾತ್ರ ಎಲ್ಲಾ ಕಡುಬಡವನಿಗೂ ಕೂಡ ಈ ಹಸಿರುಕಾರ್ಡ್ ಸಿಕ್ಕುವ ವ್ಯವಸ್ಥೆಯಾಗುತ್ತದೆ; ಹಾಗೆಯೇ ಸೀರೆಯಾಗಲಿ ಇನ್ನು ಇತರೇ ಸೌಲಭ್ಯಗಳಾಗಲಿ ಸಿಗುವಂತಾಗುತ್ತದೆ. ಇಂತಹ ಒಂದು ವ್ಯವಸ್ಥಿತವಾದ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ. ಮಾನ್ಯ ಸಚಿವರು ಈಗ ನಮ್ಮ ಮುಂದೆ ಬೇಡಿಕೆಗಳನ್ನು ಏನು ಇಟ್ಟಿದ್ದಾರೆ ಆ ಬೇಡಿಕೆಗಳನ್ನು ನಾನು ಸಮರ್ಥನೆ ಮಾಡುವುದಲ್ಲದೆ, ಈ ನಗರ ಪಾಲಿಕೆಗಳು ಏನು ಇವೆ ಅವು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವ ಹಾಗೆ, ಅದನ್ನು ಸಾರ್ಥಕಪಡಿಸಿಕೊಳ್ಳುವ ಹಾಗೆ ಮಾಡುವುದಲ್ಲದೆ ಆ ನಗರದ ಜನರಿಗೆ ಏನೆಲ್ಲಾ ರೀತಿಯ ಸೌಲಭ್ಯಗಳು ಸಿಗಬೇಕೋ ಅದು ಸಿಗುವ ಹಾಗೆ ಮಾಡಬೇಕು. ಹಾಗೆ ಮಾಡಬೇಕಾದರೆ ತಾವು ಈ

ಆಕ್ಟ್ರಾಯಿಯನ್ನು ಮತ್ತೊಮ್ಮೆ ಜಾರಿಗೆ ತರಲಿಕ್ಕೆ ಸರ್ಕಾರ ಕೂಡಲೇ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

SRI BLASIUS D'SOUZA (Mangalore).—Mr. Speakar, To-day. we are speaking on Urban Development Demands and I should say that this is a very important portfolio, where in 1/3rd of the population reside in Cities and Municipalities. In Karnataka, out of the total population of 353,63,230, 101,89,697 reside in areas under Corporations and Municipalities. If the Minister is alert and effective, these Cities and Corporations will be able to give the basic amenties to the Citizens like water, lighting, drainage,roads which are the basic necessities for the citizens of these areas. I should say, the most important thing for any development is Finance. Here, we find that the proper compensation is not given to the Corporations and earlier speakers have said that this Government has become bankrupt and and to prove this, I should say, that two instalments of actroi compensation and development grants for the year 1986-87 have not been released sofar. I think for the Mangalore Corporation, alone the due itself is Rs. 85 lakhs. You can just imagine what the Corporation can do without Rs. 85 lakhs. It is a big amount and as you know,Mangalore Corporation has got only 5-6 months of working season. From May upto October, rainy season and no development work can be taken but unfortunately, the Octroi compensation and development grants are not being paid to the Mangalore Corporation and other Corporations and Municipalities I request the Hon'ble Minister to see that these amounts are paid itime.

Some Hon'ble Members spoke about re-introduction of Octori. I should say that the collection in lien of Octroi is not only sufficient to pay the componsation but also it is 3 times than that. In this budget, Rs. 47 Crores 23 lakhs was earmarked. As you know, the projected Sales Tax collection this year will be to the tune of Rs 649 Crores and 10% of this will be about Rs. 65 Crores. The turnover tax which was introduced inlieu of Octroi is about Rs. 40 Crores.The Entry Tax which was introduced in lieu of Octroi is Rs. 35 Crores and this year the Hon'ble Chief Minister has increased the Entry Tax from 1% to 2% and also the turnover tax which was earlier for turnover of Rs. 15 lakhs and above has been reduced to the turnover of Rs. 5 lakhs and added to this, there is a surcharge on Motor Vehicles which was introduced in lieu of Octroi. This total comes to Rs. 170 Crores. I would request the Hon'ble Minister to let me know whether my figures are correct or not and let him say whether it will be more than this or not. But, unfortunately, the compensation for 1987-88 is Rs. 47 Crores 23 Lakhs. This goes to show that

our Hon'ble Minister has no interest in the Corporations and Municipalities. He is happy only about the Bangalore City Corporation because he is residing here and thanks to SAARC and other International meets in Bangalore, lot of money has poured so that they need not compensate Bangalore City Corporation to a big amount, regarding Profession Tax, I would say that in 1975. this profession Tax was being collected by the Municipalities and Corporations and it was abolished with the clear understanding that the Government will profession tax and hand it over to the Corporations but from 1984, not a single paise has been given as compensation for the profession Tax. To-day, the collection is about Rs. 10-15 Crores and I would urge upon the Hon'ble Minister to see that the share of the Municipalities and the Corporations are properly given. There is no need of any tax and absolutely there is no need of any increase of tax if they take action to collect the money proporly. After the Janata came to power, we have seen that the taxes are going up Every year. This year from the Sales Tax alone, they will get Rs.105 Crores and 10 of it as surcharge will be not less than Rs. 10 Crores.

Regarding Motor Vehiclec Tax, every Corporation, and every Municipality have been asking to increase the share of Motor-Vehicles Tax whenever the Ministers go to various Cities or Towns, one of the demands is to increase the share of Motor Vahicles Tax and in Mangalore City Corporation, the tax was fixed in 1937 when the toll gates were and the total amount was Rs. 22,429 and then the budget of the Bangalore Municipality was Rs. 56,000. Nearly 35% accounted from the Motor Vehicles compensation and to-day when the collection is Rs. 10 Crores and the budget of the Mangalore Corporation is about Rs. 3·5 Crores, we are still getting Rs. 22,429. This is not enough even to whitewash one Km of Parafits of foot-path. I would therefore request the Hon'ble Minister to see that this is increased. He is also the Law Minister and he can amend the Motor Vehicles Act in this regard. Even our sacred Constitution was amended several times and therefore, he can amend this Act. Whenever we ask, the Government will say that the Motor Vehicles Act has to be amended and now atleast I hope that this will be done by the Hon'ble Minister.

Regarding Karnataka Urban Water Supply and Drainage Board, less we speak about this board it is better because we find everywhere there is strike by the staff. The temporary staff working from 10-15 years have not buen made permanent. Most of the staff are Class IV and they have not been given the facilities just because they happened to go on strike on 25-9-1986, Their leave had not been sanctioned and they have got many genuine grievances and I am

sure the Hon'ble Minister will see that the staff who have been working for more than 5-6 years have to be made permanent. As you know, just the other day. the Hon'ble Minister said that the Municipalities and Corporations have to give Rs. 23.47 Crores to the Karnataka Urban Water Supply and Arainge Board, and when it comes to the Mangalore City Corpoation. from the last 3 years, the Hon'ble Minister has been promising Vented Dam would be constructed. Even after the commissioning of the 18 million gallons of water supply scheme, there is no sufficient water during the month of April and May unless there is a vented Dam and unless water is collected, the Board is not able to pump 18 million gallons and they require Rs. 1.35 Crores. I am sure the Hon'ble Minister will definitely sanction the estimate and provide necessary funds. I know the Board has approached the Corporation, the Now Mangalore Harbour but unfortunately no concrete proposals have come and I would say that the Board has to collect Rs. 24 Crores from the local bodies and if they are able to collect atleast 50% of it, they will be able to construct the vented dams by their own funds. As you know, the Board is not a social service organisation. It is a commercial organisation and it charges for every work. It charges 15% ETP forevery work done for the Corporation or for the Municipality and this 15% is not only charged on the actual work but on the materials also, In water supply, 80% of the cost goes to the material and when 80% of the cost goes to the materials, they charge 15% plus 15% on the work. This is too much and I should say that the Board is charging very high rate to the citizens of Mangalore and they are charging 0-85 paise for 1000 gallons in Mysore and they are charging0 -45 to 0-50 paise for 1000 litres in Mangalore. This is a great injustice done to the citizens of Mangalore. I therefore request the Hon'ble Minister to see that the rates are reduced in Mangalore Corporation area. As you know, the Karnataka Urban Water Supply and Drainage Board has the cheapest water supply scheme in Mangalore. I would like to say that 18 million gallons has cost only Rs. 3 Crores as against 60 Million gallons costing Rs. 240 Crores to the Bangalore Water Supply and Sewerage Board. I would request the Hon'ble Minister to see that Vented dam is sonctioned at the earliest.

As regards Karpura Nala at Sankeswara, last time the Hon'ble Chief Minister has promised Rs 2 Crores and it is in Mr. Mallarigowda's Constituency. Because some people had approaehcd me, and asked me to speak about it. The Hon'ble Minister was also in good mood to sanction Rs. Two Crores. The population is more than 25.000 in that area and actually there is no water. The Board is

thinking of another programme of an estimate of Rs. 40 lakhs to have a borewell and pump water. Sir, this will not work. This will be really a waste. I therefore request you to take up the Karapura Nala Water Supply scheme and if the Hon'ble Minister will not take interest to ssnctions this scheme, Mr. Mallarigowda Patil might have to go on hunger strike before the close of the session. I am sure the Hon'ble Minister will not allow him to do so and with sanction the above Scheme.

Regarding drainage in Mangalore, as you know, it has not been properly maintained inspite of having a lakh of rupees spent on it every monthly the Board is not properly maintaining it also. I would request the Hon'ble Minister to direct the Board to complete the repairs of the pumps as well as the treatment plants in Mangalore for the underground drainage schem

Lastly, regarding BDA, I want to tell something. Because of paucity of time, I don't like to dwell at great lengthy. We have been reading in the newspapers about the corruption in B.D.A. and recently I heard that in the acquisition of land and all that, there is corruption. The BDA has allotted some land to an apartment in Rajamahal Vilas Extension instead of forming sites and allotting them to the applicants who have deposited huge amount with the BDA. I understand that this particular apartment has also been allowed te sell the flats and one more land which hasbeen notified in the same area has been denotified. This is an Year of Shel ter to Homeless. I would request the Hon'ble Ministe to see that through BDA maximum work is done during this year. This work can also be done through Slum Clearance Board. This Slum Clearance Board is not acquiring the slums and it has to give alternate and proper accommodation to the slum dwellers. Atleast during this year, please take steps to construct more houses and make an effort to distribute more sites from BDA to the siteiess and houseless people instead of giving it to multi millionaires. Thank you very much for giving me an opportunity to speak on these demands for grants.

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದಂಥ ಲಕ್ಷ್ಮೀಸಾಗರ್ ರವರು ತಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇದು ದೊಡ್ಡ ಇಲಾಖೆಯಾಗಿದ್ದು ಮಾತನಾಡತಕ್ಕಂಥದ್ದು ಬಹಳ ಇದೆ, ತಾವು ಅವಕಾಶ ಕಡಿಮೆ ಕೊಟ್ಟಿರುವುದರಿಂದ ನನ್ನ ಮನಸ್ಸಿಗೆ ಮುಖ್ಯವೆನಿಸಿದ ವಿಚಾರಗಳನ್ನು ಮಾತ್ರ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರದಲ್ಲಿ ಬೆಂಗಳೂರು ನಗರ ತನ್ನದೇ ಆದ ಖ್ಯಾತಿಯನ್ನು ಪಡೆದಿದೆ. ಈ ನಗರಕ್ಕೆ ಗಾರ್ಡನ್ ಸಿಟಿ ಎಂದು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಹವಾ ನಿಯಂತ್ರಣದಿಂದ ಕೂಡಿದಂಥ ನಗರ, ಉದ್ಯಾನವನ ನಗರ ಎಂದು ಹೇಳತಕ್ಕ ಕೀರ್ತಿಯನ್ನು ನಾವು ಪಡೆದಿದ್ದೇವೆ. ಇವೊತ್ತು ನಾನು ಬಹಳ ದುಃಖದಿಂದ ಹೇಳಬೇಕು ಎಂದರೆ, ಬೆಂಗಳೂರು ನಗರದಲ್ಲಿ ಸಾರ್ಕ್ ಸಮ್ಮೇಳನ ನಡೆಯದೇ ಹೋಗಿದ್ದರೆ, ಬೆಂಗಳೂರು ನಗರವನ್ನು ಇನ್ನು ಯಾವ ಮಟ್ಟದಲ್ಲಿ

ಕರೆಯುತ್ತಿದ್ದರೋ ಏನೋ. ಈಗಿನ ನಗರವನ್ನು ಪಾರ್ಥೇನಿಯಂ ನಗರ ಎಂದು ಕರೆದರೆ ಅದು ಸುಳ್ಳು ಆಗುವುದಿಲ್ಲ. ಮಾನ್ಯ ಗುಂಡೂರಾವ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಪಾರ್ಥೇನಿಯಂ ತೆಗೆಯಬೇಕೆಂದು ವಿಚಾರ ಮಾಡಿ ಬಹಳ ಯೋಜನೆಗಳನ್ನು ಮಾಡಿದರು ಆ ಯೋಜನೆಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಆಯಿತು. ಆದರೆ ಲಕ್ಷಾಂತರ ರೂಪಾಯಿ ಪ್ರಚಾರಕ್ಕೋಸ್ಕರ ಖರ್ಚು ಆಯಿತೇ ವಿನಹ ಸಂಪೂರ್ಣವಾಗಿ ಪಾರ್ಥೇನಿಯಂ ಗಿಡಗಳನ್ನು ಬುಡಸಮೇತ ಕಿತ್ತುಹಾಕ ತಕ್ಕದ್ದು ಆಗಲಿಲ್ಲ. ಆ ಒಂದು ಹಂತದಲ್ಲಿಯೇ ಪಾರ್ಥೇನಿಯಂ ಸಂಪೂರ್ಣವಾಗಿ ಕಿತ್ತುಹಾಕಿದ್ದರೆ. ಈ ಬೆಂಗಳೂರು ನಗರಕ್ಕೆ ಇನ್ನೂ ಹೆಚ್ಚಿನ ಸೌಂದರ್ಯ ಬರುತ್ತಿತ್ತು. ಇವೊತ್ತು ಮಾನ್ಯ ಸಾಗರ್ ಅವರ ಬಗ್ಗೆ ಮಾನ್ಯ ವಿರೋಧ ಪಕ್ಷದವರು ಒಪ್ಪಿಕೊಳ್ಳುತ್ತಾರೆ. ಇವೊತ್ತು ಅವರ ಪ್ರಾಮಾಣಿಕತೆಯ ಬಗ್ಗೆ ದಕ್ಷತೆಯ ಬಗ್ಗೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಒಂದೇ ಒಂದು ಕಂಪ್ಲೇಂಟ್ ಏನೆಂದರೆ ಅವರು ಸಿಡುಕಿ ಸ್ವಭಾವದವರು ಎನ್ನುವುದು ಅದನ್ನು ಬಿಟ್ಟರೆ ಬೇರೆ ಎಲ್ಲಾ ಕೆಲಸಗಳನ್ನು ಬಹಳ ಉತ್ತಮವಾಗಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಮಾನ್ಯ ಸಾಗರ್ ಅವರಿಗೆ ಪಾರ್ಥೇನಿಯಂ ತೆಗೆಸುವ ಬಗ್ಗೆ ಒಂದು ಸಣ್ಣ ವಿಚಾರವನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಇದು ನಿಮಗೂ ಸಹ ಗೊತ್ತಿರಬಹುದು. ಯಾವುದೇ ತಿಪ್ಪೆಗುಂಡಿಯ ಹತ್ತಿರದಲ್ಲಿ ಆಗಲಿ, ಹಾದಿಬೀದಿಯ ಕಸದ ತೊಟ್ಟಿಯ ಹತ್ತಿರದಲ್ಲಿ ಒಂದು ಗೋಣಿಚೀಲ ಹಿಡಿದುಕೊಂಡು ಒಂದು ಕಡ್ಡಿಯಲ್ಲಿ ಕೆದಕಿ, ಕೆದಕಿ ಎತ್ತಿ ತೆಗೆಯುತ್ತಿರುತ್ತಾರೆ. ಇದನ್ನು ನಾವು ರಸ್ತೆಯಲ್ಲಿ ಓಡಾಡುವಾಗ ನೋಡುತ್ತಿದ್ದೇವೆ. ಅವರಿಗೆ ನೀವು ಏನು ಹುಡುಕಿ ತೆಗೆಯುತ್ತಿದ್ದೀರಿ ಎಂದು ಕೇಳಿದರೆ, ಪ್ಲಾಸ್ಟಿಕ್ ಪೇಪರ್ ಹರಿದು ಹೋಗಿದ್ದು ಹುಡುಕಿ ತೆಗೆದುಕೊಂಡು ಹೋಗುತ್ತೇವೆ ಅದನ್ನು ಮಾರಾಟ ಮಾಡಿದರೆ ಒಂದು ಕೆ.ಜಿ.ಗೆ ೬೦ ಪೈಸೆ ಸಂಪಾದನೆ ಆಗುತ್ತದೆ ಎಂದು ಹೇಳುತ್ತಾರೆ. ಈಗ ಬೆಂಗಳೂರು ನಗರದಲ್ಲಿ ಬೆಳೆಯುತ್ತಿರುವ ಪಾರ್ಥೇನಿಯಂಗೆ ಗೊಬ್ಬರ ನೀರು ಏನು ಬೇಕಾಗಿಲ್ಲ. ಇದು ಬೆಂಗಳೂರು ನಗರದ ಸೌಂದರ್ಯ ಮತ್ತು ಆರೋಗ್ಯವನ್ನು ಹಾಳು ಮಾಡುತ್ತಿದೆ. ಆದ್ದರಿಂದ, ಅದನ್ನು ಹೋಗಲಾಡಿಸಲಿಕ್ಕೆ ತಾವು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಬೆಂಗಳೂರು ನಗರದ ನಾಲ್ಕು ಭಾಗಗಳಲ್ಲಿ ಒಂದು ಕೆ. ಜಿ. ಪಾರ್ಥೇನಿಯಂ ಇಷ್ಟು ಬೆಲೆಗೆ ತೆಗೆದುಕೊಳ್ಳುತ್ತೇವೆ ಎಂದು ನಿಗದಿ ಮಾಡಬೇಕು. ಒಬ್ಬ ವ್ಯಕ್ತಿ ಬೆಳಿಗ್ಗೆಯಿಂದ ಸಂಜೆಯವರೆಗೆ ಎಷ್ಟು ಗಿಡ ಕೀಳುತ್ತಾನೆ ಅದನ್ನು ಲೆಕ್ಕಾಚಾರ ಹಾಕಿ, ಇಷ್ಟು ಬೆಲೆಗೆ ಕೊಂಡುಕೊಳ್ಳುತ್ತೇವೆ ಎಂದು ಕಾರ್ಪೊರೇಷನ್‌ನವರು ಏನಾದರೂ ಮಾಡಿದರೆ, ಒಂದು ತಿಂಗಳಲ್ಲಿ ಬೆಂಗಳೂರಿನಲ್ಲಿ ಎಲ್ಲಿಯಾದರೂ ಒಂದು ಗಿಡ ಇದ್ದರೆ ಆಗ ನನಗೆ ಕೇಳಿ. ನಿಮ್ಮ ಮನೆ ಕಾಂಪೌಂಡ್‌ನಲ್ಲಿ ಏನಾದರೂ ಇದ್ದರೂ ಸಹ ಆ ಕಾಂಪೌಂಡ್ ನೆಗೆದು ಕದ್ದು ಕಿತ್ತುಕೊಂಡು ಬರುತ್ತಾರೆ. ಬಹಳ ಕಡಿಮೆ ವೆಚ್ಚದಲ್ಲಿ ಪಾರ್ಥೇನಿಯಂ ಗಿಡಗಳನ್ನು ನಾಶ ಮಾಡುವ ಬಗ್ಗೆ ಈ ಸಲಹೆಯನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಈ ಪಾರ್ಥೇನಿಯಂ ತೆಗೆಸಿ ನಗರವನ್ನು ಸೌಂದರ್ಯವಾಗಿಡುವುದಕ್ಕೆ ಪ್ರಯತ್ನ ಮಾಡಲಿ ಎಂದು ಈ ಸಲಹೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಬೆಂಗಳೂರು ನಗರ ಬರು ಬರುತ್ತಾ ಸಮಸ್ಯೆಯ ನಗರವಾಗುತ್ತಿದೆ. ದರೋಡೆ ನಗರವಾಗಿದೆ, ಪಾರ್ಥೇನಿಯಂ ನಗರವಾಗಿದೆ. ಇದರ ಬಗ್ಗೆ ಪತ್ರಿಕಾಕರ್ತರು ಬಹಳ ವಿಚಾರ ಬರೆಯುತ್ತಿದ್ದಾರೆ. ನಾವು ಡೆಲ್ಲಿಗೆ ಹೋದಾಗ ಹಳೆಯ ಡೆಲ್ಲಿ, ನ್ಯೂಡೆಲ್ಲಿ ನೋಡುತ್ತೇವೆ. ನ್ಯೂಡೆಲ್ಲಿ ನೋಡಲಿಕ್ಕೆ ಚೆನ್ನಾಗಿದೆ, ಹಳೆಯ ಡೆಲ್ಲಿಗೆ ಹೋದರೆ ಚಿಕ್ಕಪೇಟೆಯ ಸಂದಿಗೆ ಹೋದಂತೆ ಆಗುತ್ತದೆ. ಇವೊತ್ತು ಜನತಾ ಸರ್ಕಾರ ವರ್ಲ್ಡ್ ಬ್ಯಾಂಕ್ ನೆರವಿನಿಂದ ಒಂದು ಮಾಸ್ಟರ್‌ಪ್ಲಾನ್ ತಯಾರು ಮಾಡಿ ಬೆಂಗಳೂರು ಸುತ್ತಮುತ್ತ ಸಾವಿರಾರು ಎಕರೆ ಜಮೀನು ತೆಗೆದುಕೊಂಡು ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಒದಗಿಸಿಕೊಂಡು ಚಂಡೀಘರ್ ಗುಜರಾತ್‌ನ ಗಾಂಧಿನಗರದತರಹ ಒಂದು ಉನ್ನತ ಮಾದರಿಯಲ್ಲಿ, ಇಡೀ ರಾಷ್ಟ್ರಕ್ಕೆ ಮಾದರಿಯಾಗತಕ್ಕಂಥ ಒಂದು ಯೋಜನೆಯನ್ನು ತಯಾರಿಸಿ ಅದರಂತೆ ಮಾಡಬೇಕು. ಈ ಕೆಲಸ ಇವೊತ್ತು ಆಗದೇ ಇದ್ದರೂ ಮುಂದಿನ ಪೀಳಿಗೆಯ ಜನರಿಗಾದರೂ ಈ ನಗರದ ಕಲ್ಪನೆ ಬರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬಿ.ಡಿ.ಎ. ಬಗ್ಗೆ ಎಲ್ಲರೂ ಕೂಡ ಹೇಳುತ್ತಾರೆ, ಇವೊತ್ತಿನ ದಿವಸ ಯಾರಿಗೆ ಮನೆ ಬೇಕಾಗಿಲ್ಲ ? ಯಾರಿಗೆ ಸೈಟು ಬೇಕಾಗಿಲ್ಲ ? ಈ ರಾಜ್ಯದಲ್ಲಿ ಎಲ್ಲರಿಗೂ ಸೈಟು, ಮನೆ ಬೇಕು, ಎಲ್ಲರಿಗೂ ಆಸೆ ಇರುತ್ತದೆ, ಸುಖವಾಗಿ ಜೀವನ ನಡೆಸಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಬಿ.ಡಿ.ಎ. ಅವರು ಸಮರ್ಪಕವಾಗಿ ಕಳೆದ ೨೦-೩೦ ವರ್ಷಗಳಿಂದ ಸೈಟುಗಳನ್ನು ಹಂಚಿಕೊಂಡು ಬಂದಿದ್ದರೆ, ಈ ಸಮಸ್ಯೆ ಬರುತ್ತಾ ಇರಲಿಲ್ಲ. ಮಾನ್ಯ ಬಂಗಾರಪ್ಪನವರದು ಒಂದು ಕಮಿಟಿ ಇತ್ತು ಅದು ಈ ರೆವಿನ್ಯೂ ಸೈಟುಗಳನ್ನು ರೆಗ್ಯುಲರೈಸ್ ಮಾಡುವುದರ ಬಗ್ಗೆ ಮೊನ್ನೆ ಕೆ.ಹೆಚ್.ಶ್ರೀನಿವಾಸ್ ಅವರು ಒಂದು ದೊಡ್ಡ ಧರಣಿ ಮಾಡಿದರು. ಮೊನ್ನೆ ನಾವು ಬಿ.ಡಿ.ಎನ ಕೆಲವು

ಭಾಗಗಳಿಗೆ ಹೋಗಿ ನೋಡಿದೆವು. ಅವರೇ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದರು. ಇವತ್ತು ಅಲ್ಲಿ ಬಿ.ಡಿ.ಎ ನವರು ಹೋಗಿ ಮನೆಗಳನ್ನು ಕಿತ್ತುಹಾಕುತ್ತಾರೆ. ಆದರೆ ಇವರು ಇಲ್ಲಿ ಕಿತ್ತುಹಾಕಿ ಬಂದರೆ ಅವರು ನಾಳೆ ಶನಿವಾರ, ಭಾನುವಾರ ಮತ್ತೆ ಅದೇ ಜಾಗದಲ್ಲಿ ಮನೆಗಳನ್ನು ಕಟ್ಟುತ್ತಾರೆ. ಕಾನೂನು ರೀತಿಯಲ್ಲಿ ನಿಯಮಾನುಸಾರ ಮನೆಗಳನ್ನು ಕಟ್ಟಿಕೊಂಡರೆ, ಬೆಂಗಳೂರು ಒಂದು ಸುಂದರ ನಗರವಾಗುತ್ತದೆ. ಇಲ್ಲದಿದ್ದರೆ ಚಿಕ್ಕಪೇಟೆ, ಬಳೇಪೇಟೆ, ಅವಿನ್ಯೂ ರಸ್ತೆ ರೀತಿಯಲ್ಲಿ ಆಗುತ್ತದೆ. ಸರಿಯಾದ ರಸ್ತೆಗಳಿಲ್ಲ, ಸರಿಯಾದ ಬೀದಿಗಳಿಲ್ಲ, ದೀಪದ ವ್ಯವಸ್ಥೆ ಇಲ್ಲ, ಎನ್ನುವಂತಾಗುತ್ತದೆ. ಚರಂಡಿ ಕೂಡ ಇಲ್ಲದಂತಾಗುತ್ತದೆ. ಯಾರಿಗಾದರೂ ಲಂಚ ಕೊಟ್ಟು ದೀಪ ಹಾಕಿಸಿಕೊಳ್ಳುತ್ತಾರೆ. ಮನೆಗಳನ್ನು ಕಟ್ಟಿಕೊಳ್ಳಬೇಕಾದರೆ ಬಹಳ ಸುಲಭ ಮಾಡಿಕೊಂಡಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ. ನನ್ನ ಮನೆಯ ಹತ್ತಿರ ಒಂದು ಟೆಂಟ್ ಬಂತು. ಅದು ಯಾವರೀತಿ ಬಂತು ಎಂದರೆ, ಅದರ ಮಾಲೀಕ ಆ ಜಾಗವನ್ನು ಒಂದು ದಿವಸ ಬಂದು ನೋಡಿಕೊಂಡು ಹೋದ, ಮಾರನೇ ದಿವಸ ಅಲ್ಲಿ ಕಲ್ಲು ಇಟ್ಟ. ಕಾರ್ಪೊರೇಷನ್ ಅಧಿಕಾರಿಗಳು ಬಂದು ನೋಡಿ ಅವನನ್ನು ಗಲಾಟೆ ಮಾಡಿದರು. ಅವರು ಆ ಕಡೆ ಹೋದಕೂಡಲೇ ಈತ ನಾಳೆ ಶನಿವಾರ ಭಾನುವಾರಗಳನ್ನು ಸೇರಿಸಿ ಕೊಂಡು ಕೇವಲ ಒಂದೆರಡು ದಿವಸಗಳಲ್ಲಿ ಪೂರ್ತಿ ಕಟ್ಟಡವನ್ನೇ ಕಟ್ಟಿ ಮುಗಿಸಿದ. ಅಧಿಕಾರಿಗಳು ಇದನ್ನು ಕೇಳುವುದಕ್ಕೆ ಹೋದಾಗ ಅವನು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದ ಸ್ವಾಮಿ. ಈ ಬಿ.ಡಿ.ಎ.ನಲ್ಲಿ ತನ್ನದೇ ಆದ ಪೋಲೀಸ್ ಇಲಾಖೆ ಇದೆ. ಮನಸ್ಸು ಮಾಡಿದರೆ ಇಂಥ ಅನಧಿಕೃತ ಕಟ್ಟಡಗಳನ್ನು ಕಟ್ಟುವುದನ್ನು ತಡೆಗಟ್ಟಬಹುದು. ಬಡವರು ನ್ಯಾಯಬದ್ಧವಾಗಿ ಕಟ್ಟಿಕೊಂಡಿರತಕ್ಕ ಮನೆಗಳನ್ನು ಒಡೆದು ಹಾಕಿ ಎಂದು ನಾನು ಹೇಳುವುದಿಲ್ಲ. ಅತಿಕ್ರಮಣ ರೀತಿಯಿಂದ ಕಟ್ಟಿಕೊಂಡಂಥ ಮನೆಗಳ ವಿರುದ್ಧ ಕ್ರಮ ಕೈಗೊಳ್ಳದೇ ಹೋದರೆ ಮುಂದೆ ಬಹಳ ಕಷ್ಟವಾಗುತ್ತದೆಂದು ಮಾತ್ರ ಹೇಳಬಯಸುತ್ತೇನೆ.

ಇನ್ನು ಕಾವೇರಿ ಯೋಜನೆಯ ಬಗ್ಗೆ ಹೇಳುವುದಾದರೆ, ಮಂಡ್ಯ, ಮದ್ದೂರು, ಚನ್ನಪಟ್ಟಣ ರಾಮನಗರಗಳಿಗೆ ನೀರನ್ನು ತರುವುದಕ್ಕೆ ಒಂದು ಮಾಸ್ಟರ್ ಪ್ಲಾನ್‌ನ್ನು ತಯಾರು ಮಾಡತಕ್ಕ ಚಿಂತನೆಯನ್ನು ತಾವು ಇವತ್ತು ಇಟ್ಟುಕೊಂಡರೆ, ಅದು ಇವತ್ತಲ್ಲ ನಾಳೆ ಬಹಳ ಅನುಕೂಲ ಆಗುತ್ತದೆ, ಆದ್ದರಿಂದ ತಾವು ಒಂದು ಮಾಸ್ಟರ್ ಪ್ಲಾನ್‌ನ್ನು ತಯಾರಿಸಬೇಕು.

ಇನ್ನು ಆಹಾರ ಇಲಾಖೆಯ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಸಿರು ಕಾರ್ಡ್‌ಗಳನ್ನು ಕೊಡತಕ್ಕ ವಿಚಾರದಲ್ಲಿ ತಾರತಮ್ಯವಾಗಿದೆ. ಇಲ್ಲಿ ಹಳ್ಳಿಯ ಬಡವರು, ಪಟ್ಟಣದ ಬಡವರು ಎಂಬ ತಾರತಮ್ಯ ಇದೆ. ಇದು ಏತಕ್ಕೆ? ಬಡವರು ಎಂದರೆ ಎಲ್ಲರೂ ಬಡವರೇ, ಇದರಲ್ಲಿ ತಾರತಮ್ಯ ಏತಕ್ಕೆ ? ಎಲ್ಲರೂ ಹೊಟ್ಟೆಗಾಗಿ ದುಡಿಯುವವರು. ಸರ್ಕಾರದವರು ಈರೀತಿ ಮಾಡಬಾರದು. ಹಳ್ಳಿಯಲ್ಲಿರತಕ್ಕ ಬಡವರನ್ನಾಗಲಿ ಪಟ್ಟಣದಲ್ಲಿರತಕ್ಕ ಬಡವರನ್ನಾಗಲಿ ತಾರತಮ್ಯವಿಲ್ಲದೇ ನೋಡಬೇಕು. ಹಸಿರು ಕಾರ್ಡ್ ಪಟ್ಟಣದಲ್ಲಿರತಕ್ಕ ಬಡವರಿಗೂ ಸಿಕ್ಕಬೇಕು. ಒಂದು ಕೆ.ಜಿ.ಗೆ 2 ರೂ.ನಂತೆ ಏನು ಅಕ್ಕಿಯನ್ನು ಕೊಡುತ್ತೀರಿ, ಅದು ಪಟ್ಟಣದ ಬಡವರಿಗೂ ಸಿಕ್ಕಬೇಕು. ಇದರಲ್ಲಿ ಅಧಿಕಾರಿಗಳ ವರ್ತನೆ ಬಗ್ಗೆ ಹೇಳುವುದಾದರೆ, ನಂಜನಗೂಡಿನಲ್ಲಿರುವವರು ಸಕ್ಕರೆಯನ್ನು ತರಬೇಕಾದರೆ ಪಕ್ಕದಲ್ಲಿರುವ ಪಾಂಡವಪುರದಲ್ಲಿ ಅಥವಾ ಮಂಡ್ಯದಲ್ಲಿ ಹೋಗಿ ತರಬಹುದು. ಆದರೆ ಈ ಸಕ್ಕರೆಯನ್ನು ಸಂಕೇಶ್ವರದಿಂದ ತರುವಂತೆ ನಿಮ್ಮ ಅಧಿಕಾರಿಗಳು ಅಲಾಟ್‌ಮೆಂಟ್ ಮಾಡುತ್ತಾರೆ. ಅದೇರೀತಿ ಧಾರವಾಡದಲ್ಲಿರುವವರು ಸಕ್ಕರೆಯನ್ನು ತೆಗೆದುಕೊಂಡು ಹೋಗಬೇಕಾದರೆ ಮಂಡ್ಯಕ್ಕೋ, ಪಾಂಡವಪುರಕ್ಕೋ ಬಂದು ತೆಗೆದುಕೊಂಡು ಹೋಗಬೇಕಾಗುತ್ತದೆ. ಪಕ್ಕದಲ್ಲೇ ಇರತಕ್ಕ ಕಾರ್ಖಾನೆಯನ್ನು ಬಿಟ್ಟು ಅಷ್ಟೊಂದು ದೂರದಲ್ಲಿರತಕ್ಕ ಕಾರ್ಖಾನೆಗಳಿಗೆ ಅಲಾಟ್‌ಮೆಂಟ್ ಕೊಡುವುದಾದರೆ ಅದನ್ನು ಅಲ್ಲಿಂದ ಲಾರಿಗಳಲ್ಲಿ ತೆಗೆದುಕೊಂಡು ಬರಬೇಕಾದರೆ ಸರ್ಕಾರಕ್ಕೆ ಎಷ್ಟು ಖರ್ಚು ಬೀಳುತ್ತದೆ ? ಇಲ್ಲಿಯವರು ಅಲ್ಲಿಂದ ತರಬೇಕಾದರೆ ಎಷ್ಟು ಖರ್ಚು ಬರುತ್ತದೆ, ಅದನ್ನು ಯಾರ ಮೇಲೆ ಹಾಕಬೇಕು ? ಸರ್ಕಾರದ ಖರ್ಚಿನಲ್ಲಿ ಸಾಗಣಿಕೆ ಮಾಡಬೇಕಾದರೆ ಲಕ್ಷಾಂತರ ರೂಪಾಯಿ ವೃಥಾ ಖರ್ಚು ಬೀಳುವುದಿಲ್ಲವೇ ? ಆದ್ದರಿಂದ ಇದನ್ನೆಲ್ಲಾ ತಾವು ಗಮನದಲ್ಲಿ ಇಟ್ಟುಕೊಂಡು ಇನ್ನು ಮುಂದೆ ಸಕ್ಕರೆ ತರುವುದಕ್ಕೆ ಪರವಾನಗಿಯನ್ನು ಕೊಡುವ ಸಂದರ್ಭದಲ್ಲಿ ಅತಿ ಹತ್ತಿರದಲ್ಲೇ ಇರತಕ್ಕ ಸಕ್ಕರೆ ಕಾರ್ಖಾನೆಗಳಿಗೆ ಅಲಾಟ್‌ಮೆಂಟ್ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಟೌನ್ ಪ್ಲಾನಿಂಗ್‌ನ ಬಗ್ಗೆ, ಕೋರ್ಟುಗಳಲ್ಲಿ ಕೊಳೆಯುತ್ತಾ ಬಿದ್ದಿರತಕ್ಕ ಲಕ್ಷಾಂತರ ಕೇಸುಗಳ ಬಗ್ಗೆ, ಇನ್ನೂ ಹಲವಾರು ವಿಚಾರಗಳ ಬಗ್ಗೆ ಮಾತನಾಡಬೇಕಾದುದು ಬಹಳಷ್ಟು ಇತ್ತು. ಆದರೆ ಕಾಲಾವಕಾಶ ಹೆಚ್ಚು ಇಲ್ಲದಿರುವುದರಿಂದ ಇಷ್ಟಕ್ಕೆ ನನ್ನ ಭಾಷಣವನ್ನು ನಿಲ್ಲಿಸಿ ದೇವರು ನಿಮಗೆ ಹೆಚ್ಚಿನ ಆಯುರಾರೋಗ್ಯವನ್ನು ನೀಡಲೆಂದು ಪ್ರಾರ್ಥಿಸಿ ಇಷ್ಟು ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಸಿ. ಕಣ್ಣನ್ (ಶಾಂತಿನಗರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ೧೯೭೫–೭೬ ಮತ್ತು ೧೯೭೬–೭೭ರಲ್ಲಿ ಇಲಾಖೆಯ ಬಗ್ಗೆ ಏನು ಬೇಡಿಕೆಗಳನ್ನು ಮಂಡಿಸಿದ್ದರು, ಅದಕ್ಕೂ ಮತ್ತು ಇವತ್ತಿನ ಬೇಡಿಕೆಗೂ ಯಾವುದೇ ವ್ಯತ್ಯಾಸವೂ ಇಲ್ಲ. ಕರ್ನಾಟಕದಲ್ಲಿ ಇರತಕ್ಕಂತಹ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಏನೂ ಕೆಲಸ ಆಗಿಲ್ಲವೆಂದು ಕಾಣುತ್ತದೆ.

ಉದಾಹರಣೆ.—ಬೆಂಗಳೂರು ನಗರ ಪಾಲಿಕೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ. ಮುನಿಸಿಪಾಲಿಟಿ ಮತ್ತು ನಗರಸಭೆಗಳಿಗೆ ನಾವು ಸಾಕಷ್ಟು ಹಣವನ್ನು ಕೊಡುತ್ತೇವೆ ಆದರೆ ಅಲ್ಲಿ ಯಾವುದೇ ಕೆಲಸವೂ ಆಗಿಲ್ಲವೆಂದು ಮಾನ್ಯ ಸಚಿವರು ಹೇಳಿದರು ನಮ್ಮ ಬೆಂಗಳೂರು ನಗರ ಸಭೆಯವರು ಏನು ಮಾಡುತ್ತಾರೆಂದರೆ, ತಮ್ಮಲ್ಲಿರತಕ್ಕ ಹಣವನ್ನು ಯಾವರೀತಿ ಖರ್ಚು ಮಾಡುತ್ತಾರೆಂದರೆ ಯಾವುದೇ ಕೆಲಸಕ್ಕಾಗಲಿ ೧೦ ಸಾವಿರ ರೂಪಾಯಿಗಳವರೆಗೂ ಟೆಂಡರ್‌ಗಳನ್ನು ಕರೆಯುವುದಿಲ್ಲ, ಒಂದೊಂದು ಡಿವಿಜನ್‌ಗೆ ೨–೩ ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇಷ್ಟು ಹಣವನ್ನೂ ೧೦–೧೦ ಸಾವಿರದಂತೆ ವಿಭಾಗ ಮಾಡಿ ಫುಟ್‌ಪಾತ್‌ಮೇಲೆ ಕಲ್ಲು ಹಾಕುವುದಕ್ಕೆ ಕೊಡುತ್ತಾರೆ. ಅದಕ್ಕೆ ಸಿಮೆಂಟ್ ಹಾಕಿಲ್ಲ ಏನು ಮಾಡಿಲ್ಲ. ಇದರಿಂದಾಗಿ ಅಲ್ಲಿ ಕೆಲವು ಇಂಜಿನೀಯರ್ಸ್ ಮತ್ತು ಕಂಟ್ರಾಕ್ಟರುಗಳಿಗೆ ಲಾಭವಾಗಿದಿಯೇ ಹೊರತು ಬೆಂಗಳೂರು ನಗರದ ನಾಗರೀಕರಿಗೆ ಏನು ಲಾಭವಾಗಿಲ್ಲ.

ಎರಡನೆಯದಾಗಿ, ನಮ್ಮ ಬೆಂಗಳೂರು ಮಹಾನಗರ ಪಾಲಿಕೆ ಅವರಿಗೆ ಹೆಚ್ಚಿನ ರೆವಿನ್ಯೂ ಬೇಕಾಗಿರುತ್ತದೆ. ಆದ್ದರಿಂದ ಅವರು ಪ್ರಾಪರ್ಟಿ ಟ್ಯಾಕ್ಸ್‌ನ್ನು ಹೆಚ್ಚು ಮಾಡಿದ್ದಾರೆ. ಅವರು ಹೆಚ್ಚು ಮಾಡಿರುವುದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ನಾವು ಸುಮಾರು ಒಂದೂವರೆ ವರ್ಷದಿಂದ ನಾವು ನಮ್ಮ ಕಾಂಗ್ರೆಸ್ ಪಾರ್ಟಿಯವರು ಅದನ್ನು ವಿರೋಧ ಮಾಡಿದೆವು. ಅದು ಒಂದು ಸಿಸ್ಟಮ್ಯಾಟಿಕ್ ಆಗಿ ಇಲ್ಲ. ಅಸೆಸ್ ಮಾಡತಕ್ಕಂಥವರು ಆರನೂರು ರೂಪಾಯಿ ಮಾಡತಕ್ಕಂಥ ಮನೆಗೆ ಎರಡು ಸಾವಿರ ರೂಪಾಯಿಗಳನ್ನು ಅಸೆಸ್ ಮಾಡಿದ್ದಾರೆ. ೪೦೦ ನಾಲ್ಕು ನೂರು ರೂಪಾಯಿಗಳನ್ನು ಅಸೆಸ್ ಮಾಡತಕ್ಕಂಥ ಮನೆಗೆ ಒಂದೂವರೆ ಸಾವಿರ ರೂಪಾಯಿ ಅಸೆಸ್ ಮಾಡಿರುತ್ತಾರೆ. ಅಸೆಸ್ ಮಾಡಿರತಕ್ಕಂಥ ಸರಿಯಾದ ರೀತಿಯಲ್ಲಿ ಮಾಡಿಲ್ಲವೆಂದು ಇದನ್ನು ನಾನು ವಿರೋಧ ಮಾಡುತ್ತಿದ್ದೇನೆ.

ಇನ್ನು ನಮ್ಮ ಬೆಂಗಳೂರಿನಲ್ಲಿ ಅರ್ಧ ಭಾಗ ಆರ್ಮಿ ಅಥಾರಿಟೀಸ್ ಕೈಯಲ್ಲಿ ಇದೆ. ಅವರಿಗೆ ಬೇಕಾಗಿರುವ ರೋಡ್ಸ್, ಸ್ಟ್ರೀಟ್ ಲೈಟ್ಸ್‌ಗಳನ್ನು ನಮ್ಮ ಕಾರ್ಪೊರೇಷನ್‌ನವರೇ ಮೇನ್‌ಟೈನ್ ಮಾಡುತ್ತಿರುತ್ತಾರೆ. ಅದಕ್ಕೆ ಕಾಂಪನ್‌ಸೇಷನ್ ಆಗಿ ಆರ್ಮಿಯವರು ವರ್ಷಕ್ಕೆ ೨೫ ಸಾವಿರ ರೂಪಾಯಿಗಳನ್ನು ಕೊಡುತ್ತಿರುತ್ತಾರೆ. ಇದು ಯಾವತ್ತಿನ ರೇಟ್ ಗೊತ್ತಿಲ್ಲ. ಈವತ್ತಿನ ಮಾರ್ಕೆಟ್ ರೇಟ್ ಪ್ರಕಾರ ಅವರಿಗೆ ಕರವನ್ನು ವಿಧಿಸಿ ವಸೂಲು ಮಾಡಿದರೆ ನಮ್ಮ ಕಾರ್ಪೊರೇಷನ್ನಿನ ರೆವಿನ್ಯೂ ಸ್ವಲ್ಪ ಮಟ್ಟಿಗೆ ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇನ್ನು ನಮ್ಮ ಬೆಂಗಳೂರಿನಲ್ಲಿರತಕ್ಕಂಥ ಎಲ್ಲ ರಸ್ತೆಗಳನ್ನೂ ನಮ್ಮ ಕಾರ್ಪೊರೇಷನ್‌ನವರೇ ಮೈನ್‌ಟೈನ್ ಮಾಡುತ್ತಿರುತ್ತಾರೆ. ಬೆಂಗಳೂರು ನಗರದಿಂದ ಆರ್. ಟಿ.ಓ.ಗೆ ಬಹಳಷ್ಟು ಹಣ ರೋಡ್ ಟ್ಯಾಕ್ಸ್ ಮುಖಾಂತರವಾಗಿ ಹೋಗುತ್ತಿದೆ. ಆ ಹಣದಲ್ಲಿ ಕೊನೆಪಕ್ಷ ೫೦ ಪರ್ಸೆಂಟ್ ಹಣವನ್ನು ನಮ್ಮ ಕಾರ್ಪೊರೇಷನ್ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಆರ್ಮಿಯವರ ಇಂಟರ್‌ಫೀಯರೆನ್ಸ್ ಜಾಸ್ತಿಯಾಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಲೈಬ್ರರಿಯನ್ನು ಕಟ್ಟಿಸಿದರು. ಮಾನ್ಯ ಮುಖ್ಯಮಂತ್ರಿಗಳವರೇ ಅದನ್ನು ಇನಾಗುರೇಟ್ ಮಾಡಿರುತ್ತಾರೆ. ಅವರು ಇನಾಗುರೇಟ್

ಮಾಡಿದ ಮೂರನೆಯ ದಿವಸವೇ ಅಲ್ಲಿಗೆ ಒಬ್ಬ ಮಿಲಿಟರಿ ಜವಾನನನ್ನು ಹಾಕಿ ಅಲ್ಲಿಗೆ ಯಾರು ಹೋಗದಂತೆ ತಮ್ಮದಾಗಿ ಮಾಡಿಕೊಂಡಿದ್ದಾರೆ. ಇದರಿಂದ ಯಾರಿಗೂ ಸಾರ್ವಜನಿಕರಿಗೆ ಪ್ರಯೋಜನವಾಗಲಿಲ್ಲ, ಮತ್ತು ಆ ಲೈಬ್ರರಿ ಕೆಲಸವನ್ನೂ ಸಹ ಮಾಡುತ್ತಿಲ್ಲ.

೩-೦೦ ಪಿ.ಎಂ.

ಇನ್ನು ಬೆಂಗಳೂರಿನಲ್ಲಿ ಒಂದು ಕಲ್ಯಾಣ ಮಂಟಪವನ್ನು ಕಟ್ಟಿದ್ದಾರೆ. ಅರ್ಧ ಭಾಗ ಕಟ್ಟಡದ ನಿರ್ಮಾಣವಾಗಿ ನಿಂತುಹೋಗಿದೆ. ಆರ್ಮಿಯವರು ಎರಡು ಅಡಿ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದಾರೆಂದು ಆ ಕೆಲಸ ಸ್ಟಾಪ್ ಮಾಡಿದ್ದಾರೆ,

ಮೂರನೆಯದಾಗಿ, ನನ್ನ ಕ್ಷೇತ್ರದಲ್ಲಿ ಸುಮಾರು ೧೬೦೦ ಮನೆಗಳು ಸೆಕೆಂಡ್ ಇನ್‌ಫೆಂಟರಿ ಬ್ಯಾಟಾಲಿಯನ್ ಎಂದು ಹೇಳಿ ಇರುತ್ತದೆ. ಸುಮಾರು ೮೦ ವರ್ಷಗಳಿಂದಲೂ ಅಲ್ಲಿರತಕ್ಕಂಥ ಮನೆಗಳಲ್ಲಿ ವಾಸವಾಗಿರುತ್ತಾರೆ. ಮಳೆ ಬಂದು ಬಿದ್ದು ಹೋದರೂ ಅವುಗಳ ರಿಪೇರಿ ಕೆಲಸ ಮಾಡಿಸುತ್ತಿಲ್ಲ. ಅದರ ಬಗ್ಗೆ ರಿಪೋರ್ಟನ್ನು ಸಹ ಕೊಡಲಾಗಿರುತ್ತದೆ. ಕರ್ನಾಟಕ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸಿವಿಕ್ ಅಮಿನ್‌ಟೀಸ್‌ನ್ನು ಕೂಡ ಮಾಡಿಕೊಟ್ಟಿರುತ್ತಾರೆ ನಮ್ಮ ಕಾರ್ಪೊರೇಷನ್‌ನವರು ಆರ್ಮಿ ಅಥಾರಿಟಿಯವರ ಜೊತೆಯಲ್ಲಿ ಕೂಡ ಮಾತನಾಡಲಿಲ್ಲ. ಅವರು ಅದು ನಮ್ಮ ಜಾಗವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರಿಗೂ ಮತ್ತು ಮಾನ್ಯ ಸಚಿವರಿಗೂ ಕಾಗದ ಬರೆದಿರುತ್ತೇವೆ. ಕಾಗದಕ್ಕೆ ಉತ್ತರ ಬಂದಿಲ್ಲ.

ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಹೇಳುವುದಾದರೆ, ಬಡಜನರಿಗೆ ಮನೆಗಳನ್ನು ಉಚಿತವಾಗಿ ಕಟ್ಟಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ. ದೇವರಾಜ ಅರಸ್‌ರವರು ಅವತ್ತು ಮಾಡಿದ್ದರು ಮಾನ್ಯ ಸಚಿವರ ರಿಪೋರ್ಟ್ ಪ್ರಕಾರ ೯೬೩ ಕೊಳಚೆ ಪ್ರದೇಶಗಳು ಇಡೀ ಕರ್ನಾಟಕದಲ್ಲಿ ಇದೆ ಎಂದು ಹೇಳಿರುತ್ತಾರೆ. ಬೆಂಗಳೂರಿನಲ್ಲಿಯೇ ಸುಮಾರು ೪೦೦ ಕೊಳಚೆ ಪ್ರದೇಶಗಳು ಇದೆ. ಇದು ಬಿ.ಡಿ.ಎ. ಮತ್ತು ಕಾರ್ಪೊರೇಷನ್ ವಶದಲ್ಲಿ ಇರುತ್ತವೆ. ಸ್ಲಂ ಕ್ಲಿಯರೆನ್ಸ್ ಬೋರ್ಡ್ ಎಂದು ಇದಕ್ಕಾಗಿಯೇ ಒಂದು ಬೋರ್ಡ್ ಇದ್ದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ರೋಡ್ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮತ್ತು ಲೈಟ್ ಮುಂತಾದ ಎಲ್ಲಾ ಅನುಕೂಲತೆಯನ್ನು ಒದಗಿಸಿ ಕೊಟ್ಟಿರುತ್ತಾರೆ. ಈ ವ್ಯವಸ್ಥೆಯಾದ ಮೇಲೆ ಕೆಲವು ಸ್ಲಂಗಳಲ್ಲಿ ಯಾವ ನೋಟೀಸ್ ಇಲ್ಲದೆ ಅಲ್ಲಿ ಇರತಕ್ಕಂಥ ಮನೆಗಳನ್ನು ಒಡೆದು ಹಾಕಿದ್ದಾರೆ. ಇದೆಲ್ಲಾ ಪ್ರೈವೇಟ್ ಲ್ಯಾಂಡ್ ಆಗಿರುತ್ತದೆ ಕಾರ್ಪೊರೇಷನ್ನವರು ಮತ್ತು ಬಿ.ಡಿ.ಎ.ರವರು ಪೋಲೀಸ್ ಸಿಬ್ಬಂದಿಯನ್ನು ಇಟ್ಟುಕೊಂಡು ಮನೆಗಳನ್ನು ಒಡೆಸಿ ಪ್ರೈವೇಟ್ ಓನರ್ಸ್‌ಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ;

ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಎರಡು ವರ್ಷಗಳಿಂದ ಕುಡಿಯುವ ನೀರಿನ ಸರಬರಾಜಿಗೆ ತೊಂದರೆಯುಂಟಾದ್ದರಿಂದ ಉತ್ತಮ ರೀತಿಯಲ್ಲಿ ಬೋರ್‌ವೆಲ್‌ಗಳನ್ನು ತೆಗೆಸಿ ನೀರಿನ ಬವಣೆಯನ್ನು ಸರ್ಕಾರದವರು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿರುತ್ತಾರೆ. ಈಗ ಈ ಕೆಲಸವನ್ನು ನಿಲ್ಲಿಸಿರುತ್ತಾರೆ. ಮತ್ತೆ ಬೆಂಗಳೂರು ನಗರದಲ್ಲಿ ಅವಶ್ಯಕತೆ ಇರುವ ಕಡೆ ಬೋರ್‌ವೆಲ್‌ಗಳನ್ನು ತೆಗೆಸಬೇಕೆಂದು ಹೇಳುತ್ತೇನೆ. ಈವರೆಗೆ ನಗರದಲ್ಲಿ ೨೪೦೦ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಪುನಃ ನೀರಿಗೆ ಕಷ್ಟ ಬರದಂತೆ ಮಾಡಲು ೬೦೦ ಕೊಳವೆ ಬಾವಿಗೆ ಹಣ ಮಂಜೂರು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಬಿ.ಡಿ.ಎ.ನಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿದ್ದೆ. ಬಿ.ಡಿ.ಎ. ಬೋರ್ಡ್‌ನಲ್ಲಿ ಯಾವುದೇ ಒಂದು ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಮತ್ತೆ ಅದೇ ಸಬ್ಜೆಕ್ಟ್‌ನ್ನು ಮತ್ತೆ ಬೋರ್ಡ್‌ಗೆ ರೆಫರ್ ಮಾಡುತ್ತಾರೆ. ಎರಡು ವರ್ಷವಾದ ಮೇಲೆ ಅದನ್ನು ಮತ್ತೆ ಪುನರ್ ಪರಿಶೀಲನೆಗೆ ಬೋರ್ಡ್‌ಗೆ ರೆಫರ್ ಮಾಡತಕ್ಕಂಥದ್ದು ಕಾನೂನಿಗೆ ವಿರುದ್ಧವಾಗಿರುತ್ತದೆ. ಮಾನ್ಯ ಸಚಿವರು ಅದನ್ನು ಎನ್‌ಕ್ವೈಯರಿ ಮಾಡಬೇಕೆಂದು ಹೇಳುತ್ತೇನೆ. ೧೯೮೦ರಿಂದ ೧೯೮೩ರವರೆಗೆ ೩ ಸಾವಿರ ಮಂದಿ ಬಡವರಿಗೆ ಉಚಿತ ನಿವೇಶನಗಳನ್ನು ಬಿ.ಡಿ.ಎ. ಅವರು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ನಿಜವಾಗಿ ಬಡವರಿಗೆ ಸಿಕ್ಕಿದೆಯೋ ಎಂದು ವಿಚಾರಣೆ ಮಾಡಬೇಕು. ಹಳೇ ಅಲಾಟ್‌ಮೆಂಟ್ ಪತ್ರ ಇಟ್ಟುಕೊಂಡು ಈವಾಗ ೧೦-೧೫ ಸಾವಿರದವರೆಗೆ ಮಾರುತ್ತಿದ್ದಾರೆಂಬುದು ತಿಳಿದುಬಂದಿದೆ. ಸೈಟ್

ಅಲಾಟ್‌ಮೆಂಟ್ ಮಾಡುವಾಗ ೧೦–೧೫ ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿಕೊಂಡು ಕೊಡುತ್ತಿದ್ದಾರೆಂದು ತಿಳಿದು ಬಂದಿದೆ. ಅದರ ಬಗ್ಗೆ ಸಚಿವರು ವಿಚಾರಣೆ ನಡೆಸಬೇಕು. ಇನ್ನೊಂದು ವಿಚಾರವನ್ನು ಸಚಿವರ ಗಮನಕ್ಕೆ ತರಬಯಸುತ್ತೇನೆ. ೧೯೮೦ರಲ್ಲಿ ಚುನಾವಣೆ ಆದ ತಕ್ಷಣ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಆಗ ಮಾನ್ಯ ಸಚಿವರು ಪೌರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ದಿ॥ ಟಿ. ಸುಬ್ರಹ್ಮಣ್ಯರವರು, ಮಾಜಿ ವಿರೋಧ ಪಕ್ಷದ ನಾಯಕರಾದ ಶಿವಪ್ಪನವರು, ಎಂ.ಎಸ್. ಕೃಷ್ಣನ್‌ನವರು, ಶಾಮಣ್ಣನವರು ಎಲ್ಲ ಸೇರಿ ವಿಧಾನಸೌಧ ಚಲೋ ಅಜಿಟೇಷನ್ ಮಾಡಿದರು. ಹೆಗಡೆಯವರನ್ನು ಘೇರಾವು ಮಾಡುತ್ತೇವೆಂದರು. ಆಗ ಎಲ್ಲಾ ವಿರೋಧ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಅರೆಸ್ಟ್ ಆದರು. ನಾನು ಆಗ ಯೂತ್ ಕಾಂಗ್ರೆಸಿನ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ನಾವು ಅರೆಸ್ಟ್ ಆದೆವು. ಬೆಂಗಳೂರು ನಗರದ ನಾಗರೀಕರ ಸಲುವಾಗಿ ಹೋರಾಟ ಮಾಡಿದ ಮಾನ್ಯ ಲಕ್ಷ್ಮೀಸಾಗರ್‌ರವರು ಬೆಂಗಳೂರು ನಗರದಲ್ಲಿ ಶಾಸಕರಾಗಿ ಆಯ್ಕೆಯಾಗಿ ಈ ಬೆಂಗಳೂರು ನಗರದ ನಾಗರೀಕರಿಗೆ ಈಗ ಏನೂ ಮಾಡಲಿಲ್ಲವೆಂದು ಅವರ ಬೇಡಿಕೆಗಳನ್ನು ವಿರೋಧಿಸಿ, ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಬಾಳಿಕಾಯಿ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೆ, ನಾನು ೧೯೮೭–೮೮ನೇ ಸಾಲಿಗೆ ಸಂಬಂಧಿಸಿದ ೨೧, ೩೨, ೩೩, ೩೬ ಮತ್ತು ೩೭ನೇ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಮುಖ್ಯವಾಗಿ ನ್ಯಾಯ ಪರಿಪಾಲನೆಯ ಬಗ್ಗೆ ಮಂತ್ರಿಗಳ ಗಮನಕ್ಕೆ ಕೆಲವು ವಿಷಯಗಳನ್ನು ತರಬಯಸುತ್ತಿದ್ದೇನೆ. ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ ಇವು ಮೂರೂ ಪ್ರಜಾಪ್ರಭುತ್ವದಲ್ಲಿ ಬಹಳ ಮಹತ್ವದ ಪಾತ್ರವನ್ನು ಹೊಂದಿರತಕ್ಕ ಅಂಗಗಳು. ಅದರಲ್ಲೂ ನ್ಯಾಯಾಂಗ ಭಾರತ ದೇಶದಲ್ಲೇ ಸಂವಿಧಾನಾತ್ಮಕವಾಗಿ ಒಳ್ಳೆಯ ಪ್ರವೃತ್ತಿಯನ್ನು, ಒಳ್ಳೆಯ ಪರಂಪರೆಯನ್ನು ಕಾಯ್ದುಕೊಂಡು ಬಂದಂತಹ ದೃಷ್ಟಾಂತಗಳಿವೆ. ನಮ್ಮ ದೇಶದಲ್ಲಿ ಉಚ್ಚ ನ್ಯಾಯಾಲಯ, ಶ್ರೇಷ್ಠ ನ್ಯಾಯಾಲಯ, ಸಿವಿಲ್ ನ್ಯಾಯಾಲಯ ಮತ್ತು ಮುನ್ಸೀಫ್ ನ್ಯಾಯಾಲಯ ಎಂದು ನಾಲ್ಕು ಪ್ರಕಾರದ ನ್ಯಾಯಾಲಯಗಳಿವೆ. ಅವು ಅನೇಕ ಕಕ್ಷಿಕಾರರ ಕೇಸುಗಳನ್ನು ನ್ಯಾಯವಾಗಿ, ನಿಷ್ಪಕ್ಷಪಾತವಾಗಿ ಕಾನೂನುಬದ್ಧವಾಗಿ ನಿರ್ವಹಿಸುತ್ತಾ ಬಂದಿವೆ. ತಾಲ್ಲೂಕು ಮಟ್ಟದಲ್ಲಿ ಹೇಳುವುದಾದರೆ, ಜನತಾ ಸರ್ಕಾರ ಬಂದಮೇಲೆ ಅನೇಕ ಸಾಧನೆಗಳನ್ನು ನ್ಯಾಯಾಂಗ ಖಾತೆಯಲ್ಲಿ ಮಾಡಿದೆ. ಅನೇಕ ಸುಧಾರಣೆಗಳನ್ನು ಮಾಡಿದೆ. ಪ್ರತಿ ತಾಲ್ಲೂಕಿಗೆ ಒಂದೊಂದು ನ್ಯಾಯಾಲಯಗಳನ್ನು ಸ್ಥಾಪಿಸುವ ಭರವಸೆ ಕೊಟ್ಟಿದೆ. ಅದೇ ಪ್ರಕಾರ ಅನೇಕ ತಾಲ್ಲೂಕುಗಳಲ್ಲಿ ಕೊಟ್ಟಿದೆ. ಧಾರವಾಡ ಜಿಲ್ಲೆಯ ಬಗ್ಗೆ ಹೇಳುವುದಾದರೆ, ನರಗುಂದ, ಮುಂಡರಗಿ, ಕಲಘಟಗಿಗೆ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸುವ ಅಗತ್ಯತೆ ಇದೆ. ತಾವು ಕೂಡ ನ್ಯಾಯವಾದಿಗಳು. ನಾವು ನ್ಯಾಯಾಂಗಗಳಿಗೆ ಪ್ರತ್ಯೇಕವಾಗಿ, ಪ್ರಾಮಾಣಿಕವಾಗಿ, ನಿಷ್ಪಕ್ಷಪಾತವಾಗಿ, ಸಂವಿಧಾನಾತ್ಮಕವಾಗಿ ಕಾರ್ಯ ನಿರ್ವಹಿಸುವ ಜವಾಬ್ದಾರಿ ಕೊಟ್ಟಿದ್ದೇವೆ. ಆ ದೃಷ್ಟಿಯಲ್ಲಿ ನ್ಯಾಯಾಧೀಶರಿಗೆ ಕೊಡುವ ಸಂಭಾವನೆ ನೋಡಿದರೆ ತೀರಾ ಅಲ್ಪ. ಅದನ್ನು ಹೆಚ್ಚು ಮಾಡಬೇಕು. ಮತ್ತು ಪ್ರತಿಯೊಂದು ನ್ಯಾಯಾಲಯಗಳಿಗೂ ಸ್ವಂತ ಕಟ್ಟಡ ಒದಗಿಸಿಕೊಡತಕ್ಕ ವ್ಯವಸ್ಥೆ ಆಗಬೇಕು. ಅನೇಕ ತಾಲ್ಲೂಕು ಮಟ್ಟದ ನ್ಯಾಯಾಲಯಗಳಲ್ಲಿ ಕಕ್ಷಿದಾರ ಬಂದರೆ ಕೂಡಲಿಕ್ಕೆ ಸ್ಥಳ ಇರುವುದಿಲ್ಲ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಮಾಡುತ್ತಾರೆಂದು ಭಾವಿಸಿದ್ದೇನೆ. ಮುಖ್ಯವಾಗಿ ಮುನ್ಸೀಫ್ ನ್ಯಾಯಾಲಯಗಳ ಜೂರಿಸ್‌ಡಿಕ್ಷನ್ ಬಗ್ಗೆ ಹೇಳುವುದಾದರೆ, ಹತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೇಸ್ ಆದರೆ ಸಿವಿಲ್ ಜಡ್ಜ್ ಕೋರ್ಟಿಗೆ ಹೋಗಬೇಕಾಗುತ್ತದೆ. ಇವತ್ತಿನ ದಿವಸ ಒಂದು ಎಕರೆ ಜಮೀನಿನ ಬೆಲೆ ೧೦–೧೨ ಸಾವಿರ ರೂಪಾಯಿ ಇದೆ. ಬಡ ರೈತ, ಸಾಮಾನ್ಯ ಮನುಷ್ಯ ಆಸ್ತಿಯ ಬಗ್ಗೆ ಮುನ್ಸಿಫ್ ಕೋರ್ಟಿಗೆ ಹೋಗುತ್ತಾನೆ. ಒಂದು ಪಕ್ಷ ಅವನಿಗೆ ೨–೩ ಎಕರೆ ಇದ್ದರೆ ಸಿವಿಲ್ ಕೋರ್ಟಿಗೆ ಹೋಗಬೇಕಾಗುತ್ತದೆ. ಈ ಬಗ್ಗೆ ಅನೇಕ ನ್ಯಾಯವಾದಿಗಳು ಮತ್ತು ನ್ಯಾಯಾಂಗ ಇಲಾಖೆ ಅನೇಕ ಬೇಡಿಕೆಗಳನ್ನು ಇಟ್ಟಾಗ್ಯೂ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಮುನ್ಸೀಫ್ ನ್ಯಾಯಾಲಯಗಳಲ್ಲಿ ೫೦ ಸಾವಿರ ರೂಪಾಯಿಗಳವರೆಗಿನ ಆಸ್ತಿಯ ಮೊಕದ್ದಮೆಗಳು ಬರುವಂತೆ ಮಾಡಬೇಕು. ಕ್ರಿಮಿನಲ್ ಪ್ರೊಸೀಜರ್ ಸೆಕ್ಷನ್ ೩೨೦ರ ಕೆಳಗೆ ಕಾಂಪ್ರಮೈಸ್ ಆಗಬೇಕಾದರೆ, ಸ್ಟೋಲನ್ ಪ್ರಾಪರ್ಟಿಗೆ ೨೫೦ ರೂಪಾಯಿ ಬೆಲೆ ಕಟ್ಟಿದರೆ ಮಾತ್ರ ಕಾಂಪ್ರಮೈಸ್ ಮಾಡುತ್ತಾರೆ. ಈಗ ಸಮಾಜ ಬದಲಾಗುತ್ತಿದೆ.

ಓಬೆರಾಯರ ಕಾಲದ ಅಂಕಿಗಳನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದನ್ನು ಸರ್ಕಾರ ಪರಿಗಣಿಸಬೇಕೆಂದು ಹೇಳುತ್ತೇನೆ. ನ್ಯಾಯಾಂಗ ಇಲಾಖೆಯಲ್ಲಿ ಪ್ರಾಮಾಣಿಕ ಮತ್ತು ದಕ್ಷ ನ್ಯಾಯಾಧೀಶರನ್ನು ನೇಮಿಸಲು ಪ್ರಯತ್ನಿಸಬೇಕು.

ನಾವು ಕೇಳುತ್ತಿರುವುದು, ನ್ಯಾಯಾಂಗ ಇಲಾಖೆಯಲ್ಲಿ ನ್ಯಾಯಾಧೀಶರ ಬಗ್ಗೆ ಏನೊಂದು ಒಳ್ಳೆಯ ಅಭಿಪ್ರಾಯ ಇತ್ತು ಅದು ಕ್ರಮೇಣ ನಶಿಸುತ್ತಿದೆ. ಈ ಪ್ರಾಮಾಣಿಕತವನ್ನು ಕಾಯ್ದುಕೊಂಡು ಹೋಗಬೇಕಾದರೆ, ವೈಯಕ್ತಿಕವಾದ ಅನುಕೂಲಗಳನ್ನು ಅವರಿಗೆ ಮಾಡಿಕೊಡಬೇಕಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್ ಅವರು ಇದನ್ನು ತಮ್ಮ ಲಕ್ಷ್ಯದಲ್ಲಿ ತೆಗೆದುಕೊಳ್ಳುತ್ತಾರೆಂದು ಅಂದುಕೊಂಡಿದ್ದೇನೆ. ಅದೂ ಅಲ್ಲದೆ ಕಾನೂನು ನೆರವು ಸಮಿತಿ ಕೂಡ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆದರೆ ಕೆಲವೊಂದು ತಾಲ್ಲೂಕುಗಳಲ್ಲಿ ಅದು ನಿಷ್ಕ್ರಿಯವಾಗಿದೆ. ಹಣದ ಅಡಚಣೆ ಕೂಡ ಇದೆ. ಆದ್ದರಿಂದ ದಯವಿಟ್ಟು ಸ್ವಲ್ಪಮಟ್ಟಿಗೆ ಹಣವನ್ನು ಅವರಿಗೆ ಕೊಡಬೇಕು. ತಮಗೆ ಗೊತ್ತಿದ್ದಂತೆ ಕೆಳದರ್ಜೆ ನ್ಯಾಯಾಲಯಗಳಲ್ಲಿ ನ್ಯಾಯವಾದಿಗಳಿಗೆ ಪುಸ್ತಕಗಳ ಅವಶ್ಯಕತೆ ಇದೆ. ನ್ಯಾಯವಾದಿ ಸಂಘಗಳಿಗೆ ಈಗ ಏನು ಅನುದಾನ ನೀಡಲಾಗುತ್ತಿದೆ ಅದು ಸಾಕಾಗುವುದಿಲ್ಲ. ೩೦೦ ರೂಪಾಯಿ ೫೦೦ ರೂಪಾಯಿ ಕೊಟ್ಟರೆ ಸಾಕಾಗುವುದಿಲ್ಲ. ಆದ್ದರಿಂದ ಕನಿಷ್ಠಪಕ್ಷ ಎರಡರಿಂದ ಎರಡೂವರೆ ಸಾವಿರ ರೂಪಾಯಿ ಅನುದಾನವನ್ನು ಬಾರ್ ಅಸೋಸಿಯೇಷನ್‌ಗಳಿಗೆ ಕೊಟ್ಟರೆ ಕೆಳಕೋರ್ಟಿನ ನ್ಯಾಯವಾದಿಗಳು ಆ ಹಣದಿಂದ ಪುಸ್ತಕವನ್ನು ಪಡೆದು ನ್ಯಾಯ ದೊರಕಿಸಿಕೊಡಲು ಪ್ರಯತ್ನ ಮಾಡುತ್ತಾರೆ. ಅದೇ ಪ್ರಕಾರವಾಗಿ ನ್ಯಾಯಾಲಯಗಳಲ್ಲಿ ಮುಖ್ಯವಾಗಿ ಕನ್ನಡದಲ್ಲಿ ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಪ್ರತಿಯೊಂದು ನ್ಯಾಯಾಲಯಗಳಲ್ಲಿ ಕನ್ನಡ ಟೈಪ್‌ರೈಟರ್ ಅವಶ್ಯಕತೆ ಇದೆ. ಅದನ್ನು ಸರ್ಕಾರದವರು ಕಳುಹಿಸಿಕೊಡಬೇಕು. ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಜನತಾ ಸರ್ಕಾರ ಬಂದಮೇಲೆ ಅನೇಕ ಸಾಧನೆಗಳನ್ನು ಮಾಡಿದೆ. ಮಳೆಯ ಅಭಾವದಿಂದ ಭೂಮಿಯಲ್ಲಿರತಕ್ಕ ನೀರು ಕಡಿಮೆಯಾಗಿದೆ, ನಾಗರೀಕ ಸೌಲಭ್ಯ ಬೆಳೆಯುತ್ತಿದೆ. ಆದ್ದರಿಂದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಂಪನ್ಮೂಲ ಕ್ರೋಢೀಕರಿಸುವುದು ಮುಖ್ಯ. ಧಾರವಾಡ ಜಿಲ್ಲೆಯಲ್ಲಿ ನಗರಗಳಿಗೆ ನೀರಿನ ಅನಾನುಕೂಲತೆ ಬಹಳ ಇದೆ. ನನ್ನ ಮತಕ್ಷೇತ್ರ ಲಕ್ಷ್ಮೇಶ್ವರ ೩೦ ಸಾವಿರ ಜನಸಂಖ್ಯೆಯನ್ನು ಹೊಂದಿರುವ ಕ್ಷೇತ್ರ ಅಲ್ಲಿರುವ ಪುರಸಭೆ ನಿಷ್ಕ್ರಿಯವಾಗಿದೆ. ಅಲ್ಲಿಗೆ ಕೊಡುವ ಗ್ರ್ಯಾಂಟ್ ಕೂಡ ಸಾಕಾಗುವುದಿಲ್ಲ. ಅಲ್ಲಿನ ಪುರಸಭೆ ನೌಕರರಿಗೆ ಪಗಾರ ಕೊಡುವುದಕ್ಕೂ ಸಾಕಾಗದಷ್ಟು ಗ್ರ್ಯಾಂಟ್ ಕೊಡುತ್ತಿದ್ದಾರೆ. ಆದ್ದರಿಂದ ಲಕ್ಷ್ಮೇಶ್ವರ ಪಟ್ಟಣದ ಅನೇಕ ಸುಧಾರಣೆಗಳು ಆಗದೆ ನಿಂತಿವೆ. ಆದ್ದರಿಂದ ಅಲ್ಲಿಗೆ ದಯವಿಟ್ಟು ಹೆಚ್ಚು ಅನುದಾನವನ್ನು ಕೊಡಬೇಕು. ಲಕ್ಷ್ಮೇಶ್ವರ ಒಂದು ಐತಿಹಾಸಿಕ ಪ್ರಸಿದ್ಧ ಸ್ಥಳ. ಇದಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಮಾಡಿಕೊಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಹಿಂಡಸಗೇರಿಯವರು ಮಾತನಾಡಬೇಕು. ದಯವಿಟ್ಟು ಹತ್ತು ನಿಮಿಷದೊಳಗೆ ಮುಗಿಸಿ.—

ಶ್ರೀ ಹಿಂಡಸಗೇರಿ ಅಬ್ದುಲ್ ಹಕೀಂ ಮಹಮದ್ ಗೌಸ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಮಾನ್ಯ ಮಂತ್ರಿಯವರು ಮಂಡಿಸಿದ ಬೇಡಿಕೆಗಳನ್ನು ವಿರೋಧ ಮಾಡುತ್ತಾ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆ ಪಡುತ್ತೇನೆ. ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಹಿರಿಯ ಸದಸ್ಯರು ಹಾಗೂ ಇತರ ಸದಸ್ಯರು ವಿಶೇಷವಾಗಿ ನಗರಾಭಿವೃದ್ಧಿ ಸಲುವಾಗಿ ಮಾತನಾಡಿದ್ದಾರೆ. ಈ ಸರ್ಕಾರ ಬಂದನಂತರ ನಾಲ್ಕು ವರ್ಷಗಳಲ್ಲಿ ಎಲ್ಲ ನಗರ ಪಟ್ಟಣದ ಪರಿಸ್ಥಿತಿ ಏನಾಗಿದೆ ಎಂಬುದು ತಮಗೆ ಗುರುತಿರುವ ಸಂಗತಿ. ಏಕೆಂದರೆ ತಾವೂ ಸಹ ನಮ್ಮ ಜಿಲ್ಲೆ ಪೈಕಿ ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯ ವಿಶೇಷವಾದ ಪರಿಸ್ಥಿತಿ ಏನು ಎಂಬುದನ್ನು ತಿಳಿದುಕೊಂಡಿದ್ದೀರಿ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಒಟ್ಟು ಆದಾಯ ಸುಮಾರು ೮ ಕೋಟಿ ರೂಪಾಯಿ ಇದೆ. ಅದರಲ್ಲಿ ಸುಮಾರು ೫ ಕೋಟಿಗಿಂತ ಜಾಸ್ತಿ ಎಸ್ಟಾಬ್ಲಿಷ್‌ಮೆಂಟಿಗೆ ಹೋಗುತ್ತದೆ. ಒಂದು ಕೋಟಿ ರೂಪಾಯಿ ಸಾಲ, ಬಡ್ಡಿ ಮರುಪಾವತಿ ಮಾಡುವ ಸಲುವಾಗಿ ಹೋಗುತ್ತದೆ. ಉಳಿದ ಒಂದು, ದೀಡ್ ಕೋಟಿಯಲ್ಲಿ ಡೆವಲಪ್‌ಮೆಂಟ್ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆ ನಮ್ಮ ರಾಜ್ಯದಲ್ಲಿ ಎರಡನೇ ನಂಬರ್ ಮಹಾ ನಗರಸಭೆ. ಧಾರವಾಡ ಮಹಾನಗರ ಸಭೆಗೆ ಒಂದು ದಿವಸ ಮುಂಜಾವೆಯೋ ಅಥವಾ ಸಂಜೆಯೋ ಹೋಗಿ ಸ್ವತಃ

ಅಲ್ಲಿ ತಿರುಗಾಡಿದರೆ ಪರಿಸ್ಥಿತಿ ಗೊತ್ತಾಗುತ್ತದೆ. ಮೊನ್ನೆ ನಾನೊಂದು ಗಮನ ಸೆಳೆಯುವ ಸೂಚನೆಯನ್ನು ಹಾಕಿದಾಗ...

ಶ್ರೀ ಎ. ಲಕ್ಷ್ಮೀಸಾಗರ್.—ವರ್ಷಕ್ಕೆ ಮೂರು ಸಾರಿಗಿಂತ ಕಡಿಮೆ ಇಲ್ಲದೆ, ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಓಣಿಯಲ್ಲಿ ಅಡ್ಡಾಡಿದ್ದೇನೆ.

ಶ್ರೀ ಹಿಂಡಸ್‌ಗೇರಿ.—ಯಾವಾಗ ಅಡ್ಡಾಡಿದರೋ ಗೊತ್ತಿಲ್ಲ. ಮುಂಜಾನೆ ಅಡಾಡಿದ್ದೀರೋ ಅಥವಾ ರಾತ್ರಿ ಸಮಯದಲ್ಲಿ ಅಡಾಡಿದ್ದೀರೋ ಎಂಬುದು ನನಗೆ ಗೊತ್ತಿಲ್ಲ. ನಾನು ಆ ಕ್ಷೇತ್ರದ ಶಾಸಕ ನನ್ನನ್ನೂ ಅವರ ಜೊತೆಯಲ್ಲಿ ಕರೆದುಕೊಂಡು ಅಡ್ಡಾಡಿದ್ದರೆ ಗೊತ್ತಾಗುತ್ತಿತ್ತು. ನನಗೂ ತಿಳಿಯದೇ ಯಾವ ಸಮಯದಲ್ಲಿ ಬಂದಿದ್ದರೋ ಎಂಬುದು ಗೊತ್ತಿಲ್ಲ.

ಶ್ರೀ ಕೆ. ಮಲ್ಲಪ್ಪ.—ಹೇಳಿ ಹೋದರೆ ಎಲ್ಲವನ್ನೂ ಸರಿ ಮಾಡಿರುತ್ತಾರೆ. ಹೇಳದೆ ಹೋದಾಗ ಅಲ್ಲಿ ಏನು ಲೋಪದೋಷಗಳಿವೆ ಅವುಗಳನ್ನು ಸರಿಪಡಿಸುವುದಕ್ಕೆ ಸಹಾಯಕವಾಗುತ್ತದೆ. ಆ ದೃಷ್ಟಿಯಿಂದ ಅವರು ಯಾರಿಗೂ ಹೇಳದೆ ಭೇಟಿ ನೀಡಿರಬಹುದು.

ಶ್ರೀ ಹಿಂಡಸ್‌ಗೇರಿ.—ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಅಲ್ಲಿಯ ಸದಸ್ಯರು ಹೇಳಿದ ಹಾಗೆ ಇಡೀ ರಾಜ್ಯದಲ್ಲಿ ವಿಶೇಷವಾಗಿ ನಮ್ಮ ಮಹಾನಗರ ಸಭೆಯಲ್ಲಿರತಕ್ಕ ನೀರಿನ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಅಕ್ಟ್ರಾಯಿಯನ್ನು ತೆಗೆದು ಹಾಕಿದ ನಂತರ ಲೋಕಲ್ ಸಂಸ್ಥೆಗಳ ಏನು ಇವೆ. ಅವು ನಗರ ಸಭೆಗಳಾಗಿರಬಹುದು, ಪುರಸಭೆಗಳು ಆಗಿರಬಹುದು, ಆದರೆ ಅವುಗಳ ಆರ್ಥಿಕ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿದೆ. ಎಂಟ್ರಿ ಟ್ಯಾಕ್ಸ್, ಸರ್‌ಚಾರ್ಜ್, ವಹಿಕಲ್ ಟ್ಯಾಕ್ಸ್ ಈ ಮೂರು ಸೇರಿ ೧೭೦ ಕೋಟಿ ರೂಪಾಯಿಗಳು ಬರುತ್ತವೆ. ಅದರಲ್ಲಿ ೧೦ ಪರ್ಸೆಂಟ್ ಜಾಸ್ತಿ ಕೊಟ್ಟರೂ ಸಾಕಷ್ಟು ಹಣ ಸರ್ಕಾರದಿಂದ ಗ್ರಾಂಟ್ ರೂಪದಲ್ಲಿ ಬರುತ್ತಿದೆ. ಇಲ್ಲದಿದ್ದರೆ ಆಕ್ಟ್ರಾಯಿಯನ್ನು ಪುನಃ ಚಾಲೂ ಮಾಡಬೇಕು. ಅಕ್ಟ್ರಾಯಿಯನ್ನು ಚಾಲು ಮಾಡಿದರೆ ಪ್ರತಿ ದಿವಸ ಹಣ ಸಿಕ್ಕುತ್ತದೆ. ಆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಇನ್ನಿತರೇ ಕೆಲಸ ಕಾರ್ಯಗಳಿಗೆ ಖರ್ಚು ಮಾಡುವುದಕ್ಕೆ ಸಹಾಯವಾಗುತ್ತದೆ. ಆಕ್ಟ್ರಾಯಿ ಪರಿಹಾರದ ೩೫೦ ಕೋಟಿಯಲ್ಲಿ ಇನ್ನೂ ೧೭೦ ಲಕ್ಷ ರೂಪಾಯಿಗಳು ಬಾಕಿ ಉಳಿದಿದೆ. ಮಾನ್ಯ ಮಂತ್ರಿಗಳು ಒಂದು ಮೀಟಿಂಗ್‌ನ್ನು ಮಾಡಿ ನಮಗೆ ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ಏನು ಹಣವನ್ನು ಕೊಟ್ಟಿದ್ದಾರೆ, ಆ ಹಣವನ್ನು ಸಾಲದ ರೂಪವಾಗಿ ಕೊಡುವುದಕ್ಕಿಂತ ಸರ್ಕಾರದಿಂದ ಬಾಕಿ ಬರಬೇಕಾಗಿದ್ದಂತಹ ಅಕ್ಟ್ರಾಯಿ ಹಣವನ್ನು ಬಿಡುಗಡೆ ಮಾಡಿದ್ದರೆ ನಮಗೆ ಬಹಳಷ್ಟು ಮಟ್ಟಿಗೆ ಉಪಯೋಗವಾಗುತ್ತಿತ್ತು. ಅದು ಸಲುವಾಗಿ ನೀರಿನ ಸಮಸ್ಯೆಯನ್ನು ಅರಿತುಕೊಂಡು ಕಾಂಗ್ರೆಸ್ ಸರ್ಕಾರ ಇದ್ದಾಗ ಮುಂಜಾಗ್ರತೆಯ ಕ್ರಮವಾಗಿ ಮಲಪ್ರಭಾ ಕುಡಿಯುವ ನೀರಿನ ಯೋಜನೆಯನ್ನು ಮಾಡಿದ್ದರಿಂದ, ಇವತ್ತು ಪ್ರತಿ ನಿತ್ಯ ೬೦-೭೦ ಲಕ್ಷ ಗ್ಯಾಲನ್ ನೀರು ಪ್ರತಿ ದಿವಸ ಆ ನಗರಕ್ಕೆ ಬರುತ್ತಾ ಇದೆ. ಅಲ್ಲಿ ಆ ನೀರ ಸಾಗರವೇ ಒಣಗಿ ಹೋಗಿದೆ ಅದರ ಸಲುವಾಗಿ ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ವಿಶೇಷ ಗ್ರಾಂಟನ್ನು ಕೊಟ್ಟು ಮಲಪ್ರಭಾ ಯೋಜನೆಯ ಎರಡನೇ ಹಂತವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಲ್ಯಾಮಿಂಗ್‌ಟನ್ ರೋಡಿನಲ್ಲಿ ಕಮರ್ಷಿಯಲ್ ಶಾಪ್ಸ್‌ಗಳು ಇವೆ ಅಲ್ಲಿ ಮತ್ತೊಂದು ಕಾಂಪ್ಲೆಕ್ಸ್ ಕಟ್ಟುವುದಕ್ಕೆ ಅವಕಾಶವನ್ನು ಮಾಡಬೇಕು. ಮತ್ತೊಂದು ವಿಷಯವನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಜಿಲ್ಲಾ ಪರಿಷತ್ತಿನ ಆಕ್ಟನ್ನು ಬೇಗ ಮಾಡಿ ಅವರಿಗೆ ಸಾಕಷ್ಟು ಅಧಿಕಾರವನ್ನು ಆ ಕಾನೂನಿನಲ್ಲಿ ಮಾಡಿ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಕರ್ನಾಟಕ ಪುರಸಭಾ ಕಾನೂನನ್ನು ಕೂಡ ತಿದ್ದುಪಡಿ ಮಾಡಬೇಕಾದುದು ಬಹಳ ಅವಶ್ಯಕ ಇದೆ. ತಾವೂ ಕೂಡ ವಕೀಲರಾಗಿದ್ದವರು (ಅಧ್ಯಕ್ಷರನ್ನು ಕುರಿತು) ಬಾಂಬೆ ಮುನಿಸಿಪಲ್ ಆಕ್ಟ್ ಏನು ಇತ್ತು ಅದರಲ್ಲಿ ಬಹಳಷ್ಟು ಅಧಿಕಾರವನ್ನು ಕೊಟ್ಟಿತ್ತು. ಕಮಿಟೀಸ್‌ಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಅದರಲ್ಲಿ ಬಹಳಷ್ಟು ಅಧಿಕಾರ ಇತ್ತು. ಆದರೆ ಈಗ ಇರುವಂತಹ ಕಾನೂನಿನಲ್ಲಿ ಅಂತಹದ್ದು ಯಾವುದು ಇಲ್ಲ. ಆದ್ದರಿಂದ ಇದನ್ನು ಕೂಡಲೇ ತಿದ್ದುಪಡಿಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ, ವಿಶೇಷವಾಗಿ ನಾನು ಮಲಪ್ರಭಾ ಯೋಜನೆಯ ಬಗ್ಗೆ ಹೇಳುವುದಾದರೆ, ಎರಡನೇ ಹಂತವನ್ನು ಪ್ರಾರಂಭ ಮಾಡುವುದಕ್ಕೆ ೫ ಕೋಟಿ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಮತ್ತೆ ತಮಗೆ ಇನ್ನೊಂದು ವಿಚಾರವನ್ನು ಹೇಳುವುದಾದರೆ, ೭ ಲಕ್ಷ ಜನಸಂಖ್ಯೆ ಇರತಕ್ಕಂತಹ

ಗುಲ್ಬರ್ಗದಲ್ಲಿ ೩೦೦ ಕೊಳವೆ ಬಾವಿಗಳಿವೆ. ಅದೇ ೮ ಲಕ್ಷ ಜನಸಂಖ್ಯೆ ಇರತಕ್ಕಂತಹ ನಮ್ಮ ಹುಬ್ಬಳ್ಳಿ ಧಾರವಾಡ ಮಹಾ ನಗರಸಭೆಯಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ೧೦೦ ಕೊಳವೆ ಬಾವಿಗಳನ್ನು ತೆಗೆಸಿದ್ದಾರೆ. ಆದರೆ ಇನ್ನೂ ಜಾಸ್ತಿ ಕೊಳವೆ ಬಾವಿಗಳನ್ನು ತೆಗೆಯಬೇಕಾಗಿದೆ. ದಯಮಾಡಿ ಇನ್ನೂ ೩೦೦ ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಬೇಕು. ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಕೇಳಿರತಕ್ಕ ಬೇಡಿಕೆಯಗಳನ್ನು ಸ್ವಾಗತಿಸುತ್ತಾ ನಮ್ಮ ಮೈಸೂರು ಮಹಾ ನಗರ ಪಾಲಿಕೆ ವಿಷಯವಾಗಿ ಒಂದೆರಡು ಸಂಗತಿಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ವರ್ಷ ನಮ್ಮ ಸರ್ಕಾರ ಬಹಳ ಆತುರ ಮತ್ತು ಉತ್ಸಾಹದಿಂದ ಗ್ರಾಮ ಸ್ವರಾಜ್ಯ ಕಲ್ಪಿಸುವುದರಿಂದ ಹೊರಟಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೇ. ಗ್ರಾಮ ಸ್ವರಾಜ್ಯ ತಂದು ಕೊಡುವ ಸಂದರ್ಭದಲ್ಲಿ ನಗರಗಳನ್ನು ಕಡೆಗಾಣಿಸುವುದು ಸರಿಯಲ್ಲ. ಅದು ನ್ಯಾಯವಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಾಸ್ತವಿಕವಾಗಿ ನಗರಗಳು ಅನಾಥ ಸಂಸ್ಥೆಗಳಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದರೂ ಮೈಸೂರು ನಗರ ಪಾಲಿಕೆ ಸುಮಾರು ೮–೧೦ ವರ್ಷಗಳ ಕಾಲ ನೀರಿನ ಕಂದಾಯವನ್ನು ಪಾವತಿ ಮಾಡದೇ ವಾಟರ್ ಬೋರ್ಡ್‌ನವರು ೧೪ ಕೋಟಿ ರೂಪಾಯಿ ಸಾಲ ಕೊಡಬೇಕೆಂದು ಒಂದು ಬೇಡಿಕೆಯನ್ನು ಇಟ್ಟರು. ನಗರಪಾಲಿಕೆಗೆ ಚುನಾಯಿತರಾದ ಸದಸ್ಯರು ಬಂದ ನಂತರ ಪ್ರಾರಂಭದಲ್ಲಿ ೧೪ ಕೋಟಿ ಸಾಲ ಕೊಡಬೇಕು ಎನ್ನುವ ಬಾಕಿ ಇಟ್ಟಿದ್ದನ್ನು ನೋಡಿ ಗಾಬರಿಯಾದರು. ಈ ಬಗ್ಗೆ ಅವರು ಸರ್ಕಾರಕ್ಕೆ ಮೊರೆಹೊಕ್ಕರು. ಆದರೆ ದುರ್ದೈವವಶಾತ್ ಸರ್ಕಾರದಿಂದ ಆಶ್ರಯ ದೊರೆಯಲಿಲ್ಲ. ಆದರೂ ಕೂಡಾ ಈಗ್ಯೆ ಸುಮಾರು ೪ ಕೋಟಿ ರೂಪಾಯಿ ಸಾಲವನ್ನು ತೀರಿಸಿದ್ದು ಇನ್ನು ೧೦ ಕೋಟಿ ರೂಪಾಯಿ ತೀರಿಸಬೇಕಾಗಿದೆ. ನಗರಗಳಿಗೆ ಇರುವ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಿದರೆ ನಿಜವಾಗಿಯೂ ಅದು ಚಿಂತಾಜನಕ ವಿಷಯವೇ ಸರಿ. ನನಗೆ ಗೊತ್ತಾದ ಮಟ್ಟಿಗೆ ಹೋದ ವಾರ ಮೈಸೂರು ನಗರ ಪಾಲಿಕೆಯ ಅಧಿಕಾರಿಗಳು ಮತ್ತು ಮೇಯರ್‌ರವರು ಅಲ್ಲಿ ಸಾಕಾದಷ್ಟು ಹಣ ಇಲ್ಲದೇ ಇರುವುದರಿಂದ ಅನೇಕ ಕಾಂಟ್ರಾಕ್ಟರುಗಳ ಬಿಲ್ ಪಾವತಿ ಮಾಡುವುದಕ್ಕೆ ಆಗದೇ ಬೆಂಗಳೂರು ನಗರಕ್ಕೆ ಬಂದು ಮಾನ್ಯ ಮಂತ್ರಿಗಳ ಮೊರೆಹೊಕ್ಕರು. ಆದರೆ ಅವರಿಗೆ ದೊರೆತ ಫಲಿತಾಂಶ ಆಶ್ವಾಸನೆ ಅಷ್ಟೇ ಹಣ ಮಾತ್ರ ಅವರಿಗೆ ದೊರೆಯಲಿಲ್ಲ. ಈಗಲೂ ಅದೇ ಪರಿಸ್ಥಿತಿಯಲ್ಲಿ ಅದು ಇದೆ. ಇದರ ಜೊತೆ ಮೈಸೂರು ನಗರದಲ್ಲಿ ಅನೇಕ ಹಳ್ಳಿಗಳು ಸಹಾ ಸೇರಿವೆ. ನಮ್ಮ ಸರ್ಕಾರದ ದೃಷ್ಟಿಯಲ್ಲಿ ಮುಕ್ಕಾಲು ಭಾಗ ನಗರದಲ್ಲಿರುವ ಪ್ರತಿಯೊಬ್ಬರೂ ಕೂಡಾ ಸಾರ್ವಜನಿಕ ಸೌಲಭ್ಯಗಳನ್ನು ಮತ್ತು ನಾಗರೀಕ ಸೌಕರ್ಯಗಳನ್ನು ಹೊಂದುತ್ತಿದ್ದಾರೆನ್ನುವ ಭಾವನೆಯಲ್ಲಿದೆಯೆಂದು ಕಾಣುತ್ತದೆ. ಆದುದರಿಂದ ನಗರಗಳಿಗೆ ಯಾವ ರೀತಿಯಾದ ಆರ್ಥಿಕ ಸೌಕರ್ಯವನ್ನು ನೀಡುತ್ತಿಲ್ಲ. ಅವರು ಸ್ವಾವಲಂಬಿಗಳಾಗಬೇಕೆನ್ನುವುದು ವಾಸ್ತವಿಕ ವಿಷಯ. ಅದು ಒಳ್ಳೆಯ ನೀತಿ. ಆದರೆ ನಗರದಿಂದ ಬರತಕ್ಕ ಪ್ರತಿಯೊಂದು ಉತ್ಪತ್ತಿಯನ್ನೂ ಕೂಡಾ ಸರ್ಕಾರ ತನ್ನ ಬೊಕ್ಕಸಕ್ಕೆ ತೆಗೆದುಕೊಂಡು ಅವರಿಗೆ ಯಾವ ರೀತಿಯಾಗಿ ಸಲ್ಲಬೇಕಾದ ನ್ಯಾಯ ಸಲ್ಲಬೇಕೋ, ಧರ್ಮವಾಗಿ ಸಲ್ಲಬೇಕಾದ ಷೇರನ್ನು ಕೊಡದೇ ಇದ್ದರೆ ಆ ನಗರಪಾಲಿಕೆ ಯಾವ ರೀತಿ ಕಾರ್ಯ ಚಟುವಟಿಕೆ ನಡೆಸುವುದು? ನಗರದ ಒಂದು ಸೌಕರ್ಯಗಳನ್ನು ಆ ನಗರಕ್ಕೆ, ಆ ನಗರದ ಜನರಿಗೆ ಒದಗಿಸುವುದೇ ದುರ್ಲಭವಾಗುತ್ತಿದೆ. ಮೈಸೂರು ನಗರದಲ್ಲಿ ಸುಮಾರು ೧೫ ಹಳ್ಳಿಗಳು ಇವೆ. ಆ ಹಳ್ಳಿಗಳು ನಗರ ಚೌಕಟ್ಟಿನಲ್ಲಿ ಸೇರಿವೆ. ಆ ೧೫ ಕೂಡಾ ಸುಮಾರು ೫೦ ವರ್ಷಗಳಿಂದಲೂ ನಗರ ಚೌಕಟ್ಟಿನ ಒಳಗೇ ಇವೆ. ಅವುಗಳು ಇಂದಿಗೂ ಕೂಡಾ ಹಳ್ಳಿಗಳಾಗಿಯೇ ಉಳಿದಿವೆ. ಆ ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಜನರಿಗೆ ಯಾವ ರೀತಿಯ ನಾಗರೀಕ ಸೌಲಭ್ಯ ದೊರೆಯುತ್ತಾ ಇಲ್ಲ. ಇದು ನಿಜವಾಗಿಯೂ ದುರ್ದೈವದ ಸಂಗತಿ. ಆ ಹಳ್ಳಿಗಳಲ್ಲಿ ವಾಸ ಮಾಡತಕ್ಕ ಜನ, ಮುಕ್ಕಾಲು ಭಾಗದ ಜನ ರೈತರಾಗಿರುವರು. ರೈತರ ಭೂಮಿಯನ್ನು ಅಗ್ಗದ ದರದಲ್ಲಿ ಅಕ್ವೈರ್ ಮಾಡಿಕೊಂಡು, ಅವರಿಗೆ ಒಂದಿಷ್ಟು ಪರಿಹಾರ ರೂಪದಲ್ಲಿ ಹಣವನ್ನು ಕೊಟ್ಟಿದ್ದಾರೆ. ನಗರದ ಬಡಾವಣೆಗೋಸ್ಕರ ಬೇಸಾಯ ಮಾಡತಕ್ಕ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಅವರು ಕೊಟ್ಟಂತಹ ಪರಿಹಾರದ ಹಣವನ್ನು ರೈತರು ಮಗನ ಮಗಳ ಮದುವೆ ಮಾಡುವುದಕ್ಕೆ ಬೇರೆ

ಇನ್ನಾವುದೋ ಕಾರ್ಯಕ್ಕೆ ಉಪಯೋಗಿಸಿಕೊಂಡು ಹಣವನ್ನು ಖರ್ಚು ಮಾಡಿದ್ದಾರೆ. ಇವತ್ತು ರೈತ ಮತ್ತು ರೈತನ ಮಕ್ಕಳು ನಿರ್ಗತಿಕರಾಗಿದ್ದಾರೆ. ಜೀತ ಪದ್ಧತಿಯನ್ನು ತಪ್ಪಿಸುವ ಸಲುವಾಗಿ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಂಡು ಜೀತ ಮಾಡತಕ್ಕವರನ್ನು ಬಿಡಿಸಿ ಅವರಿಗೆ ಬೇಕಾದ ಸವಲತ್ತುಗಳನ್ನು ಕೊಟ್ಟು ಹಣ ಸಹಾಯ ಮಾಡಿ ಸಕಲ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದೇವೆ ಜಮೀನನ್ನು ಕಳೆದುಕೊಂಡಂತಹ ರೈತನಿಗಾಗಲೀ ರೈತನ ಮಕ್ಕಳಿಗಾಗಲೀ ಮೈಸೂರು ನಗರದ ಸುತ್ತಮುತ್ತ ಸ್ಥಾಪನೆಯಾಗತಕ್ಕ ಕಾರ್ಖಾನೆಗಳಲ್ಲಿ ಒಂದು ಜವಾನನ ಕೆಲಸವೂ ಕೂಡ ದೊರೆಯುತ್ತಿಲ್ಲ. ಇವತ್ತು ಮುಕ್ಕಾಲು ಭಾಗ ರೈತರ ಮಕ್ಕಳು ಕೂಲಿಕಾರರಾಗಿ ಬಾಳಬೇಕಾದ ಪರಿಸ್ಥಿತಿ ಬಂದಿದೆ. ಅವರಿಗೆ ಯಾವುದೇ ರೀತಿಯಾದ ಅನುಕೂಲವು ಮೈಸೂರು ನಗರಪಾಲಿಕೆಯ ವತಿಯಿಂದ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಈಗಾಗಲೇ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮೈಸೂರು ನಗರ ಪಾಲಿಕೆಯವರು ಸಾಕಷ್ಟು ಹಣವಿಲ್ಲದೆ ತೊಂದರೆ ಪಡುತ್ತಿದ್ದಾರೆ. ಇಂತಹ ಕಲಸಕಾರ್ಯಗಳನ್ನು ಕೈಗೆತ್ತಿಕೊಂಡು ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಿಗಾಗಿ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಅವರಿಗೆ ಅನುಕೂಲವಿಲ್ಲ. ಸರ್ಕಾರ ಇದೆಲ್ಲವನ್ನೂ ಮನಗಂಡು ನಿಜವಾಗಿಯೂ ರೈತ ಮತ್ತು ರೈತನ ಮಕ್ಕಳ ಬಗ್ಗೆ ಯಾವುದೇ ರೀತಿಯಾದ ಅನುಕೂಲವನ್ನು ದೊರಕಿಸಿ ಕೊಡುವುದು ಸರ್ಕಾರದ ಕರ್ತವ್ಯವೆಂದು ನಾನಾದರೂ ನಂಬಿದ್ದೇನೆ. ಈಗಿರತಕ್ಕ ನಗರಾಭಿವೃದ್ಧಿ ಛೇರ್ಮನ್‌ರವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದಾಗ್ಯೂ ಕೂಡ ಸರ್ಕಾರದ ಧೋರಣೆ ಮತ್ತು ನಿಲುವು ಏನೆಂಬುದು ಖಚಿತವಾಗಬೇಕು. ಲೈಸೆನ್ಸ್ ಇಲ್ಲದೆ ಕಟ್ಟತಕ್ಕ ಕಟ್ಟಡಗಳು ವಿಪರೀತವಾಗಿ ಬೆಳೆಯುತ್ತಿವೆ. ಮೈಸೂರು ನಗರದಲ್ಲಿ ನಾಲ್ಕು ಸಾವಿರ ಕಟ್ಟಡಗಳು ನಗಗದ ಸುತ್ತಮುತ್ತ ಬಂದಿವೆ. ಅಂತಹ ಕಟ್ಟಡಗಳನ್ನು ಒಡೆಯಲಿಕ್ಕೆ ಪ್ರಾರಂಭ ಮಾಡಿದರು. ಏತಕ್ಕೋ ಈ ಮಧ್ಯೆ ನಿಲ್ಲಿಸಿದ್ದಾರೆ. ಅದರ ಜೊತೆಗೆ ಮೈಸೂರು ನಗರದ ಸುತ್ತಮುತ್ತ ಕಾರ್ಖಾನೆಗಳು ಹೆಚ್ಚಾಗಿ ಬಂದಿವೆ. ಹಳ್ಳಿಗಾಡಿನಲ್ಲಿರತಕ್ಕ ರೈತರು ಬಡತನದ ಬೇಗೆಯನ್ನು ನಿವಾರಿಸಿಕೊಳ್ಳಲು ಮೈಸೂರು ನಗರಕ್ಕೆ ಕೂಲಿಗಾಗಿ ಬಂದು ಸೇರುತ್ತಿದ್ದಾರೆ. ಅವರು ಸೇರುವ ಕಡೆಗಳಲ್ಲಿ ಕೊಳಚೆ ಪ್ರದೇಶಗಳು ನಿರ್ಮಾಣವಾಗುತ್ತಿವೆ. ಕೊಳಚೆ ಪ್ರದೇಶಗಳನ್ನು ತಡೆಗಟ್ಟಲಿಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ಅಥವಾ ಕೊಳಚೆಪ್ರದೇಶಗಳಲ್ಲಿ ವಾಸ ಮಾಡತಕ್ಕವರಿಗೆ ಅನುಕೂಲಗಳನ್ನು ದೊರಕಿಸಿ ಕೊಡಲಿಕ್ಕೆ ಏರ್ಪಾಡು ಮಾಡದಿದ್ದ ಪಕ್ಷದಲ್ಲಿ, ಮೈಸೂರು ಸುಂದರ ನಗರವಾಗಿ ಉಳಿಯುವುದಿಲ್ಲ. ಅದು ಕೊಳಚೆ ಪ್ರದೇಶವಾಗಿ ಉಳಿಯುತ್ತದೆ. ಸಮಯದ ಅಭಾವವಿರುವುದರಿಂದ ನಾನು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3–30 P.M.

SRI MOHAMMED LIAQUDDIN BURANUDDIN (Bidar).—Mr. Speaker Sir, I take this opportunity to speak a few words on these demands I speak first on the judicial system of our State. By the 54th Constitutional amendment, the High Courts and Supreme Court Judges, salaries have been increased. By virtue of this amendment the salary of the Supreme Court Judges as well as the High Court Judges is doubled now. The Chief Justice of India is getting Rs. 10,000 while the Chief Justice of High Court will be getting Rs. 9,000 per month and the High Court Judges get Rs. 8,000 per month and the Supreme Court Jndges get Rs. 9,000 per month. This salary is in addition to the conveyance allowance and other things. We have to look into the plight and the conditions of the lower cadre of the judiciary, because judiciary is the back-bone of the administration of justice. Unless the service condition of the lower cadre of the judiciary is improved, we cannot expect better administration of

justice in all parts of India including our Sate. So, I would like to say that most of the litigations will be at the level of lower judiciary. This lower judiciary consists of Trial Judges. Magistrates, Munsiffs, Civil Judges and the Sessions and District Judges. They form the back-bone of the judiciary at the lower stage. They come across thousands and lakhs of litigation before them and there will be direct contact between the litigants and the Judges. As a last resort, the people go to the court of law. If the service conditions of these judges are not improved, then there will be no interest in discharging their duties. We are seeing in our day to day experience that without salaries, if the judgments are passed mechanically, they will be having no effect on the people. If the lower grade persons of the judicial cadre apply their mind and pass their considered judgment, then there will be real justice to the poorman because only the poor people will get the justice at the lower level. The persons who are affluent, wealthy and those leading luxurious life, will go to second tier of justice i.e. High Court or third tier of justice i.e., Supreme Court, whereas the poor people will get justice at the lower level only. My request will be that a proper environment should be provided to the judges of the lower cadre and their service conditions should be improved. It is seen that the person who is appointed as Munsiff or the Civil Judge will remain in the same cadre just as Munsiff and the Civil Judge and on the same cadre of the appointment, they will retire. This is the bad luck of the judicial persons. When they are seeking the employment they have to go through Five years' practice as Advocate. Thereafter, they will be eligible for the Munsiff's or the Magistrate's examination. In this regard they are losing Five years when they are appointed as judges. Their age of retirement will be equal to the other Officers. There is no concession for these judges. therefore, their service condition have to be improved and without improvement in the service conditions, the judicial officer at the level cannot function properly. In addition to that, we are seeing that in a single Court Hall, many persons have to sit. It will be over-crowded. There will be no proper seating arrangement and no sanitation. In the Court Halls also, there are no fans and no lighting arrangements. In such condition, these persons have to work In addition to that, in the taluk places, they have to go and function and thereby their children's education and their families have to suffer a lot. They have to get a rented house. It always brings influence from outsiders. The private person will have influence on the lower cadre of the judiciary. In this way,

fair justice cannot be expected from such judges. Not only it is necessary that their salaries should be enhanced, but also they should be provided all facilities like housing and conveyance. At Bangalore, there are so many judicial officers. They have to travel 10 to 20 kms. in order to attend the Court. In this way, they are losing their time in travel only. They should be provided vehicles and the conveyance allowance allowance should be given to these persons. Without that, they cannot give proper judgments and they will not be finding time also. This is the fate of the lower cadre of the judiciary and it is quite necessary to improve their service conditions. This matter was represented by the Munsiff and the Civil Judges to their own higher officers i.e , High Court judges. But, High Court judges are exploiting their own cause They are busy in enhancing their own salary. in this way they are totally neglected. In this way, this is cadre leading a miserable life inspite of the onerous duties which they have to shoulder in passing the judgment.

ಅಧ್ಯಕ್ಷರು.—ಬೇಗ ಮುಗಿಸಿ. ಟೈಮ್ ಆಯಿತು...

SRI MOHAMMED LIAQUDDIN BURAN DDIN.—Regarding Urban Development also, I want to say a few words. For the urban development, there should be a systematic arrangement so that there should not be influx from the villages and rural areas to the City. Unless this influx from the rural areas to the urban areas is curtailed, there will be day to day increase in the urban population. Now, what I learn is that in Bangalore City itself, there are 125 slums. In the entire country, there are 26 million people who are residing in slums. In proper Bangalore, nearly 5 lakh people are living in slum areas. Why they are having thatched roof ? There 's no roof of zinc sheets even. They are putting some leaves on their shelters. This is the condition prevailing. Unless there is a proper check, unless the rural condition is improved, the urbancondition cannot be improved. If action is not taken in this regard then in all the Municipalities in our State, there will be big slums because there will be no proper sanitation, drainage, water supply, lighting and other facilities available. So, it is quite necessary that in order to check the growth of the cities' population, there should be proper amenities provided to the villages townships and the taluka places as well as the district headquarters, city municipalities etc. Coming to my area, all the Municipalities are not having roads at all. They are not having proper building to run their Offices. Except in one or two municipalities, in proper Bidar, there are no roads and hardly we are getting 10 to 15 gallons of water per day. Within that, they have to satisfy their needs for drinking, cooking,

washing and all that. They have to do all these things within the limited quantity of water. Government of Karnataka has declared a Schema for water supply from Manjra river to Bidar town. The cost of this Scheme is Rs. 25 lakhs. But, that Scheme is not implemented, It is learnt that 10 bore-wells are going to be sunk at proper Bidar for supply of water. We are passing days of acute scarcity of water in Bidar. Unless that scheme is implemented. there will be no proper supply of water to the city dwellers.

ಅಧ್ಯಕ್ಷರು.—ಆಯಿತು, ಮುಗಿಸಿ ನಿಮಗೆ ಕೊಟ್ಟ ಟೈಮ್ ಆಯಿತು.

SRI MOHAMMED LIAQUDDIN BURANDDIN.—Regarding housing in municipal areas, it is also an important factor that should be taken into consideration. without houses, we cannot imagine how the city dwellers will pass their life. Unless there is a proper planning and proper provision for the construction of the houses, the needs of the people cannot be met. In this connection, I would like to suggest that the bank people should be made to agree for the advancement of the loan, not only to the government officials, judicial officials, co operative officers, but also for the common citizens. All the common citizens should be given an opportunity to obtain loans from all the banks including co-operative banks They should extend loan for the construction of houses to all the citizens. Unless this housing problem is not settled what will be the fruit of the independence ?

ಅಧ್ಯಕ್ಷರು.—ಸಾಕು ಮುಗಿಸಿ. ಟೈಮ್ ಆಯಿತು ತಾವು ಕುಳಿತುಕೊಳ್ಳಿ, ನೆಕ್ಸ್ಟ ಮಾನ್ಯ ಮಹಮದ್ ಮೊಯಿನುದ್ದೀನ್ ಅವರೇ ನೀವು ಪ್ರಾರಂಭ ಮಾಡಿ,

SRI MOHAMMAD MOIENUDDIN (Chamarajpet).—Mr. Speaker Sir, I thank you very much for having given me an opportunity to speak on the Demands of the Urban Development Department demand Nos. 21, 32, 33, 36 and 37. I wholeheartedly support these demands and straightaway give suggestions which have their own background. There is no time for explaining these backgrounds and justify my suggestions.

Now, I straightaway come to the Urban growth. In Karnataka, population growth is very rapid. The rapidity is so much that the infrastructural facilities provided by the Government are very scanty. If you see the growth of urban Population in 1921, it was 17% and in 1951 it was 61%. From 1921 it has gradually increased form 18%, 21%, 22%, 61% 18%, 35% and 50%. This indicates that urban growth was never contained by the previous rules, either by the British Government or by the Congress Government and now the position is, it is giving a lot of problem. How to contain this ? I would request the Government to see that a suitable policy is

formulated to check this urban growth. As I just pointed out, in 1951 the urban population growth was 61%, which was mainly due to the introduction of industrialisation by the previous Government. Had these industries been dispersed and suitable locations provided, I don't think urban growth would have been 61%. There was absolutely no planning in development of urban areas. Now atleast our Government should do well and formulate definite plans to contain urban growth. rathe than encorage urban growth. I request the Government to check this growth rate and apply a squeeze to this growing urban population and urban development. The Government would do well if it announces incentives and deterent action for keeping the urban growth under control. The other point is, we have to locate new growth centres and develop them on modern scientific lines, so that they should be of manageable magnitude. If there is no proper management of the policies laid down, the people come to the cities for everything. If satellite towns are not provided with all basic facilities then the people come to the City for everything and as a result, lot of pressure is built on transport and other things. Therefore, there should be small manageable towns located around the city and they should be given all the facilities. Especially in Bangalore, big wholesale business places are coming in the centre of the City. They should be shifted immediately to the outskirts so that pressure on the City is relieved, pressure on transport is relieved and pressure is relieved on other facilities also.

The other imporatnt point is throughout the State the Government should identify the potential growth-centres and then formulate plans and policies as to how the growth should be regulated. Unless we have a scientific approach to the urban development, I don't think we can create good conditions. It will only lead us to creation of more slums, causing socio-economic disparity and increasing crime rates. Ultimately, the responsibility will rest on the Government whether present or future and they will have to be blamed rather than the people.

Coming to urban poverty, the Government is fully aware of the problem of the poor and poor do exist in urban areas. But the provisions which are made for the allegation of rural poverty and the money spent, indicates as though the poverty in urban areas does not exist at all. Just to quote few examples; there are nine schemes for rural development. They are alliviation of rural poverty, rural roads, elementary education, adult education, rural health, water supply and rural housing. In the 5th Five Year Plan the amount spent on these programmes was Rs. 46 Crores; in the 6th Five Year

Plan, the amount spent was Rs. 30 Crores and now in the 7th Plan the, outlay is Rs. 48 crores for alleviation of rural poverty. There is only one programme for alleviation of urban poverty i.e., environmental improvement to slums. I would like to bring to the notice of the Government that the amount provided in the Fifth plan was hardly Rs. 1.85 crores, in the sixth plan hardly Rs. 12 lakhs and in the seventh plan, it is Rs. 18 lakhs. Where is Rs. 18 lakhs and where is Rs. 48 crores, for the alluviation of urban poverty? I don't grudge. Of course, poverty should be eliminated. It is the established principle of the Government and the efforts of the Governments also. But, simultaneously, the Government should be fully aware that urban poor also exist and sufficient measures should taken. But that has not been done. Therefore, I suggest that a scientific survey be conducted by appointing social scientists or entrust the same to the Institute for Social and Economic Change or some Institutes so that a scientific plan would be developed by the Government to alleviate the rural poverty. In this connection, I was told that Charles Correa has submitted a report. I would like to draw the attention of the Government that Charles Correa, who is the world famous architect, is not a social scientist. I don't know how far he has successfully projected this urban poverty in his report. I have not gone through the report. But he is not the right person to conduct such a survey. This survey should be conducted scientifically by social scientists of repute, so that Government could lay down proper guidelines and policy in future for urban development.

Sir, adult education and child welfare programmes should be implemented with the same vigour for the urban poor as is being done in the case of rural poor.

Now I come to the Bangalore Water Supply and Sewerage Board. Sir, any amount of water bringing from Cauvery or Hemavathy or from any corner of the world would not be sufficient to meet the requirements of Bangalore by 2000 A. D. Now the Government should pay more attention to conservation methods alongside bringing water from elsewhere. We should formulate policies how we can conserve water. I have two suggestions to make Firstly, in old areas of Bangalore City, the water distribution lines laid, dates back to fifty years. All these choked distribution lines should be removed and new lines should be laid. Secondly, the sewerage water should be recycled. We have got about 50,000 modern houses and each house has got two flush latrines and it is calculated that about 10 lakhs litres of water per day is being used for flushing purpose. This could be curtailed by the Corporation if

houses are allowed to have only one modern lavatory and the rest should be Indian style instead of having many attached bathrooms. By this also water could be conserved, Also the re-cycled water could beused for other purpose, other than drinking. About Bangalore City Corporation, Sir, the S.K R. Market construction work is pending since many years. Due to demolition, small petty traders have been uprooted, but still no construction work has been taken up. Whatever is uprooted, they have now become latrines. I suggested to the Corporation long back to remove the doors and windows and allow the open space to be used by the petty traders. I don't know why this suggestion is not taken care of. Sir. the Public Works Department has allotted sums to every ward, but no work is taken up. I don't know why ? Further. public sanitation is not satisfactory. Then, there is no coordination among P and T, Electricity Board and the City Corporation. What happens, the City Corporation lays down the roads. The P and T or the Electricity people cut the roads for laying the cables and again for laying the roads lakhs of rupees are spent. This should be avoided. Pollution control is also very important. I don't want to say any thing about BDA. With these few words, I thank you very much.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ, ಈವರೆಗೆ ಮಾತನಾಡಿದ ವಿಷಯಗಳೆಲ್ಲವನ್ನೂ ಬಿಟ್ಟು ಮಾತನಾಡದಿರುವ ವಿಷಯವನ್ನು ಮಾತ್ರ ಮಾತನಾಡಿ ತಮ್ಮ ಅಪ್ಪಣೆಗೆ ಅರ್ಹನಾಗುತ್ತೇನೆ. ಇವತ್ತಿನ ದಿವಸ ಕನ್ನಡದಲ್ಲಿ ಒಂದು ಗಾದೆ ಮಾತು ಇದೆ. "ಹೇಸಿ ಮಾಡಿದ ಪಾಪ ಸನ್ಯಾಸಿಗೆ" ಎಂದು. ಹಾಗೆ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಬ್ರಹ್ಮಚಾರಿಗಳಾಂಥವರು ಈ ಲಕ್ಷ್ಮೀಸಾಗರ್‌ರವರಿಗೆ ಆಹಾರ ಖಾತೆಯನ್ನು ಕೊಟ್ಟು ಏಕೆ ಇವರನ್ನು ಪಾಪಕ್ಕೆ ಗುರಿ ಮಾಡಿದ್ದಾರೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್,—ಏನು ಗಾದೆ ನೀವು ಹೇಳಿದ್ದು ?

ಶ್ರೀ ಕೆ. ಹೆಚ್. ಪಾಟೀಲ್.—"ಹೇಸಿ ಮಾಡಿದ ಪಾಪ ಸನ್ಯಾಸಿಗೆ" ಸನ್ಯಾಸಿ ಪವಿತ್ರವಾಗಿರುತ್ತಾನೆ. ಹೇಸಿ ಮಾಡಿದಂಥ ಪಾಪ ಸನ್ಯಾಸಿಗೆ ಬರುತ್ತದೆ ಎಂದು ಇದರ ಅರ್ಥ.

ಅಧ್ಯಕ್ಷರು.—ನಮ್ಮ ಕಡೆ ಅದನ್ನು ಸುಳಿ ಇಲ್ಲದ ಸನ್ಯಾಸಿಗೆ ಎಂದು ಹೇಳುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದನ್ನು ಹೇಗೆ ಹೇಳುವುದೆಂದು ಈ ರೀತಿ ನಾನು ಹೇಳಿದೆ. ಫುಡ್ ಅಂಡ್ ಸಿವಿಲ್ ಸಪ್ಲೈ ಡಿಪಾರ್ಟ್‌ಮೆಂಟ್ ಬಹಳ ದೊಡ್ಡ ಡಿಪಾರ್ಟ್‌ಮೆಂಟ್ ಆದರೂ ಸಹ ಸಮಯದ ಅಭಾವದಿಂದ ಹೆಚ್ಚು ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕಾಗಲಿಲ್ಲ. ಮಾನ್ಯ ಸಭಾಧ್ಯಕ್ಷರೇ, ಇವತ್ತು ನಮ್ಮ ರಾಜ್ಯದಲ್ಲಿ ಕರ್ನಾಟಕ ಫುಡ್ ಕಾರ್ಪೊರೇಷನ್ ಎಂಬುದು ಇದೆ. ಇದು ೧೯೭೩ನೇ ಇಸವಿಯಲ್ಲಿ ಅಮಲಿನಲ್ಲಿ ಬಂತು. ಇದು ಏತಕ್ಕೆ ಆಯಿತು ? ಸೆಂಟ್ರಲ್ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಮೊದಲು ನೇರವಾಗಿ ಆಹಾರವನ್ನು ಜನರಿಗೆ ಸರಬರಾಜು ಮಾಡುತ್ತಿತ್ತು. ವಿತರಣೆ ಮಾಡುವಲ್ಲಿ ಸರಿಯಾದ ನೀತಿಯನ್ನು ಅನುಸರಿಸುವುದಕ್ಕೆ ಅನುಕೂಲವಾಗಲಿ ಎಂದು ರಾಜ್ಯ ಮಟ್ಟದಲ್ಲಿ ಫುಡ್ ಕಾರ್ಪೊರೇಷನ್ ಸ್ಥಾಪನೆ ಆಯಿತು. ನಾನು ಆಹಾರ ಸಚಿವನಾಗಿದ್ದಾಗ, ಈ ಫುಡ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂತು. ಈ ಕಾರ್ಪೊರೇಷನ್‌ನಿಂದ ಜನರಿಗೆ ಸರಿಯಾಗಿ ಆಹಾರವನ್ನು ಸಪ್ಲೈ ಮಾಡುವುದೇ ಉದ್ದೇಶವಾಗಿತ್ತು. ಈ ಫುಡ್ ಕಾರ್ಪೊರೇಷನ್‌ಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಒಬ್ಬ ಐ. ಎ. ಎಸ್. ಅಧಿಕಾರಿಯನ್ನು ಹಾಕಿದ್ದಾರೆ, ಜನರಲ್ ಮ್ಯಾನೇಜರ್ ಆಗಿ ಕೆ.ಎ.ಎಸ್. ಮಾಡಿಕೊಂಡಿರುವ ಅಧಿಕಾರಿಯನ್ನು ಹಾಕಿದ್ದಾರೆ. ಇವರ ಪಕ್ಷದವರೇ ಒಬ್ಬರನ್ನು

ಥೇವರ್ಮನ್‌ರಾಗಿಯೂ ಸಹ ಇಟ್ಟಿದ್ದಾರೆ. ಇದು ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ಅಂಕಿ ಸಂಖ್ಯೆಗಳನ್ನು ನೋಡಿದರೆ, ಅಲ್ಲಿ ಏನೂ ಕೆಲಸ ಆಗುತ್ತಿಲ್ಲ. ಕರ್ನಾಟಕ ಸ್ಟೇಟ್ ಫುಡ್ ಕಾರ್ಪೊರೇಷನ್‌ನ್ನು ಪ್ರಾರಂಭದಲ್ಲಿ ಮಾಡಿದಾಗ ೨ ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿ ಬಂಡವಾಳವನ್ನು ಹಾಕಲಾಗಿತ್ತು. ಇವತ್ತಿಗೂ ಸಹ ಅಷ್ಟೇ ಬಂಡವಾಳ ಇದೆ. ಅಂದು ರಿಸರ್ವ್‌ಬ್ಯಾಂಕಿನಿಂದ ತಂದಿದ್ದಂಥ ಸಾಲ ಮಾತ್ರ ಕಡಿಮೆಯಾಗಿದೆ. ಅವತ್ತು ನಾವು ಖರೀದಿ ಮಾಡುತ್ತಿದ್ದ ಪ್ರಮಾಣದಲ್ಲಿ ದವಸ ಧಾನ್ಯಗಳನ್ನು ಇವತ್ತು ಇವರು ಖರೀದಿ ಮಾಡುತ್ತಿಲ್ಲ. ಅದರ ಬಗ್ಗೆ ತಮ್ಮದೇ ಆದ ಸ್ಟೇಟ್‌ಮೆಂಟಿನಲ್ಲಿ ಎಲ್ಲಾ ವಿವರಗಳು ಇವೆ. ಇದರ ಬಗ್ಗೆ ತಾವು ಗಮನ ಹರಿಸಬೇಕು. ನಿಮ್ಮ ರಿಪೋರ್ಟ್‌ನ ಪೇಜ್ ೮ರಲ್ಲಿ ತಾವು ನೋಡಿದರೆ ಯಾವ ಯಾವ ಆಹಾರ ಧಾನ್ಯಗಳನ್ನು ಎಷ್ಟೆಷ್ಟರಮಟ್ಟಿಗೆ ಖರೀದಿ ಮಾಡುತ್ತಿದ್ದೀರಿ ಎಂದು ಗೊತ್ತಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿದ್ದ ಹಾಗೆ ೧೯೭೩–೭೪ ರಲ್ಲಿ ಬರಗಾಲದ ದಿವಸಗಳು ಇದ್ದವು. ಆ ಬರಗಾಲ ದಿವಸಗಳಲ್ಲಿ ನಾವು ಎರಡೂವರೆ ಲಕ್ಷ ಟನ್‌ನಷ್ಟು ಭತ್ತವನ್ನು ಖರೀದಿ ಮಾಡಿದ್ದೆವು. ಮಾನ್ಯ ಲಕ್ಷ್ಮೀಸಾಗರ್‌ರವರ ಮೇಲೆ ತಪ್ಪು ಹೊರಿಸುವುದಕ್ಕೆ ನಾನು ಈ ವಿಷಯವನ್ನು ಹೇಳುತ್ತಿಲ್ಲ. ತಮ್ಮ ನಜರಿಗೆ ಮಾತ್ರ ಈ ವಿಷಯವನ್ನು ತರುತ್ತಿದ್ದೇನೆ. ನೀವು ಅಧಿಕಾರಕ್ಕೆ ಬಂದ ಮೇಲೆ ೧೯೮೩–೮೪, ೧೯೮೪–೮೫, ೧೯೮೫–೮೬ ರಲ್ಲಿ ನೀವು ಆಹಾರಧಾನ್ಯಗಳನ್ನು ಕೊಳ್ಳುವ ಬಗ್ಗೆ ಟಾರ್ಗೆಟ್‌ನ್ನು ನಿಗಧಿ ಮಾಡಿಕೊಂಡಿಲ್ಲ. ಟಾರ್ಗೆಟ್‌ನ್ನೇ ಫಿಕ್ಸ್ ಮಾಡಿಕೊಳ್ಳದೇ ಹೋದರೆ ಹೇಗೆ ? ಲಂಗು ಲಗಾಮು ಇಲ್ಲದೆ ಮುಂದೆ ಸಾಗಿದರೆ, ಗೊತ್ತುಗುರಿ ಇಲ್ಲದೆ ಬಿಟ್ಟ ಕುದುರೆ ಎಲ್ಲಿಗೆ ಹೋಗುತ್ತದೆಂದು ತಿಳಿಯುವುದಕ್ಕಾಗುತ್ತದೆ ಎಂದು ಪ್ರಶ್ನೆ ಮಾಡಿ ಕೇಳುತ್ತೇನೆ. ನಮ್ಮ ರಾಜ್ಯಕ್ಕೆ ಆಹಾರ ಧಾನ್ಯಗಳು ಎಷ್ಟು ಬೇಕು, ಎಷ್ಟು ಧಾನ್ಯಗಳನ್ನು ಕೊಂಡುಕೊಳ್ಳಬೇಕು, ಎಷ್ಟು ಆಹಾರ ಧಾನ್ಯಗಳನ್ನು ವಿತರಣೆ ಮಾಡಬೇಕಾಗುತ್ತದೆ ಎಂಬ ಬಗ್ಗೆ ಟಾರ್ಗೆಟ್‌ನ್ನು ಇಟ್ಟುಕೊಳ್ಳಬೇಕು. ಆ ಟಾರ್ಗೆಟ್ ಮೇಲೆ ಎಷ್ಟು ಅಚೀವ್‌ಮೆಂಟ್ ಮಾಡಿಸಲಾಗಿದೆ ಎಂಬುದನ್ನು ತಿಳಿಸಬೇಕು. ಆಹಾರ ಧಾನ್ಯಗಳನ್ನು ಎಷ್ಟು ಕಲೆಕ್ಷನ್ ಮಾಡಿದ್ದೀರಿ ಎಂದರೆ. ೧೯೮೨–೮೩ ರಲ್ಲಿ ೭೨ ಲಕ್ಷ ಟನ್ ಮಾತ್ರ, ೧೯೮೩–೮೪ ರಲ್ಲಿ ಒಂದು ಲಕ್ಷ ನಲ್ವತ್ತೆರಡು ಸಾವಿರ ಟನ್ ಮಾತ್ರ, ೧೯೮೪–೮೫ ರಲ್ಲಿ ನಲ್ವತ್ತನಾಲ್ಕು ಸಾವಿರದ ಏಳುನೂರ ಐವತ್ತೊಂದು ಟನ್ ಮಾತ್ರ.

ಅಂದು ಬತ್ತದ ಉತ್ಪಾದನೆ ಎಷ್ಟಿತ್ತು ಮತ್ತು ಇವೊತ್ತು ಬತ್ತದ ಉತ್ಪಾದನೆ ಎಷ್ಟಿದೆ ಎಂಬುದನ್ನು ನೋಡಬೇಕು. ಅಗ್ರಿಕಲ್ಚರ್ ಮಂತ್ರಿಯವರನ್ನು ಕೇಳಿದರೆ, ಡಬಲ್ ಆಗಿದೆ, ಥ್ರಿಬಲ್ ಆಗಿದೆ, ಎರಡರಷ್ಟಾಗಿದೆ ಎಂದೆಲ್ಲಾ ಹೇಳುತ್ತಾರೆ. ನಮ್ಮ ಏರಿಯಾ ಹೆಚ್ಚಿಗಿ ಆಗಿದೆ ಎಂದು ಹೇಳುತ್ತಾರೆ. ಮಾನ್ಯ ದೇವೇಗೌಡರನ್ನು ಕೇಳಿದರೆ ನಮ್ಮ ಇರಿಗೇಷನ್ ಬಹಳಷ್ಟು ಬೆಳೆದಿದೆ ಎಂದು ಹೇಳುತ್ತಾರೆ. ಅಲ್ಟಿಮೇಟ್ ರಿಸಲ್ಟ್‌ಗೆ ಬಂದರೆ ಏನಾಗುತ್ತದೆ ? ಅಂದರೆ ರಿಸಲ್ಟ್‌ಗೆ ಬಂದಾಗ ಅದು ಶೂನ್ಯವಾಗುತ್ತದೆ. ಈ ದೃಷ್ಟಿಯಿಂದ ನೀವು ಆಹಾರ ಸರಬರಾಜು ಮಾಡುತ್ತಾ ಇದ್ದರೆ ನಿಜವಾಗಿಯೂ ಹೇಗೆ ಸಾಧ್ಯವಾಗುತ್ತದೆ ? ಅದರ ಕಡೆಗೆ ನಿಮ್ಮ ನಿಗಾ ಇಡಬೇಕು. ಇನ್ನೂ ಮೇಲಾದರೂ ನಾವು ನಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಪ್ರಯತ್ನ ಮಾಡೋಣ. ನಮ್ಮ ಕಾಲ ಮೇಲೆ ನಾವು ನಿಲ್ಲುವುದನ್ನು ಕಲಿಯೋಣ, ಎಲ್ಲಿಯವರೆಗೆ ನಾವು ಪಂಜಾಬ್‌ನವರು ಕೊಡುವ ಭತ್ತ ಅಕ್ಕಿ, ಗೋಧಿಯನ್ನು ತಿಂದು ಬದುಕಲು ಸಾಧ್ಯವಾಗುತ್ತದೆ ? ಆದುದರಿಂದ ನಮ್ಮಲ್ಲಿರತಕ್ಕಂಥ ಅನೇಕ ದವಸಧಾನ್ಯಗಳನ್ನು ಸಂಗ್ರಹಿಸಿ ನಮ್ಮ ರಾಜ್ಯದ ಜನರಿಗೆ ಹೆಚ್ಚಿನ ಒಂದು ಉತ್ಪಾದನೆಯನ್ನು ಮಾಡಲು ಹಣವನ್ನು ಕೊಟ್ಟು ಸಹಾಯ ಮಾಡಿ, ಅಗ್ರಿಕಲ್ಚರಲ್ ರಿಸರ್ಚ್‌ನ್ನು ಬೆಳೆಸಿ, ನಾವು ನಮ್ಮ ಸ್ವಾವಲಂಭನೆಯನ್ನು ಪಡೆಯುವುದೇ ನಮ್ಮ ಮುಖ್ಯವಾದ ಉದ್ದೇಶ. ಅದಕ್ಕಾಗಿ ಈ ಸಂಸ್ಥೆ ಸ್ಥಾಪನೆಯಾಗಿದೆ.

ಇನ್ನು ಡಿಸ್ಟ್ರಿಬ್ಯೂಷನ್ ವಿಚಾರದಲ್ಲಿ ಹೇಳುವುದಾದರೆ, ಈ ಡಿಸ್ಟ್ರಿಬ್ಯೂಷನ್ ಹೇಗೆ ನಡೆದಿದೆ ಎಂದರೆ ಕೆಂಪು ಕಾರ್ಡ್, ಹಸಿರು ಕಾರ್ಡ್, ಎಂದೆಲ್ಲಾ ಹೆಸರು ಇಟ್ಟುಕೊಂಡಿದ್ದಾರೆ. ಆ ಬಗ್ಗೆ ಏನೇನೋ ಹೇಳುತ್ತಾರೆ. ಆದರೆ ಒಟ್ಟು ಕಾರ್ಡ್‌ದಾರರ ಸಂಖ್ಯೆ, ಇವರ ಅಂಕಿಅಂಶಗಳ ಪ್ರಕಾರ ಇದು ನಿಜವೋ ಅಥವಾ ಅದಕ್ಕಿಂತ ಹೆಚ್ಚಿಗೆ ಇದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಮನೆತನಗಳ ಸಂಖ್ಯೆ ನಮಗೆ ಗೊತ್ತಿಲ್ಲ. ಆದರೆ ನಮ್ಮಲ್ಲಿರತಕ್ಕಂಥ ಕಾರ್ಡ್ ರಿಜಿಸ್ಟರ್ ಆಗಿದ್ದು ನೀವು ಕೊಟ್ಟಂತಹ ಲೆಕ್ಕಗಳ ಪ್ರಕಾರ ೮೦,೭೮,೦೦೦ ಆಗುತ್ತದೆ. ಇದನ್ನು ಹಂಚಲಿಕ್ಕೆ ನಿಮ್ಮಲ್ಲಿ ಎಷ್ಟು ಶಾಪ್‌ಗಳನ್ನು ಮಾಡಿದ್ದೀರಿ ಅಂದರೆ, ಅದು ೧೪ ಸಾವಿರ ಎಂದು ತಿಳಿದು ಬರುತ್ತದೆ. ಅಂದರೆ ಒಂದೊಂದು ಅಂಗಡಿಗೆ ೫೦೫ ಕಾರ್ಡ್‌ಗಳು ಬರುತ್ತವೆ. ತಮಗೆ ಗೊತ್ತಿದೆ, ಸುಮಾರು ೭೦ ರಷ್ಟು ಶಾಪ್‌ಗಳು ಕದ ಹಾಕಿರುತ್ತವೆ.

ಸಕ್ಕರೆ ಯಾವಾಗಲೋ ಬಂದಾಗ, ಚಿಮಿಣಿ ಎಣ್ಣೆ ಯಾವಾಗಲೋ ಸಿಕ್ಕಿದಾಗ, ಕದವನ್ನು ತೆಗೆಯುದ ಶಾಪ್‌ಗಳೇ ಬಹಳವಾಗಿವೆ. ಅವುಗಳನ್ನು ಬಿಟ್ಟರೆ, ನಿಜವಾಗಿಯೂ ವಿತರಣೆ ಮಾಡತಕ್ಕಂಥ ಶಾಪ್‌ಗಳು ೧೦–೧೫ ಪರ್ಸೆಂಟ್ ಇರಬಹುದು, ಅದಕ್ಕಿಂತ ಹೆಚ್ಚಿಗೆ ಇಲ್ಲ. ಇಂತಹದ್ದರ ಮೇಲೆ ನಿಮ್ಮ ವಿತರಣೆ ಸರಿಯಾಗಿ ನಡೆಯುತ್ತಿದೆ ಎಂದರೆ ಹೇಗೆ ನಂಬುವುದು ? ಇವೊತ್ತಿನ ದಿವಸ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಸಲುವಾಗಿ ಸಹಕಾರಿ ಸಂಘಗಳ ಮುಖಾಂತರವಾಗಿ ಹೇರಳವಾದಂತಹ ಹಣವನ್ನು ಕೊಟ್ಟು, ನ್ಯಾಷನಲ್ ಕೋಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಕನ್ಸೂಮರ್ ಮೂವ್‌ಮೆಂಟ್ ನಿಂದ ಕನ್ಸೂಮರ್ಸ್ ಸೊಸೈಟಿಯವರು ಹೇರಳವಾದ ಹಣವನ್ನು ಸರಕಾರಕ್ಕೆ ಸಹಾಯ ಮಾಡುತ್ತಿದ್ದರೂ ಸಹಿತ ಅದರ ಲಾಭವನ್ನು ಪಡೆದು ನಮ್ಮ ಜನತೆಗೆ, ಅದನ್ನು ಅದರ ಸೌಕರ್ಯಗಳನ್ನು ಮುಟ್ಟಿಸತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿಸದಿದ್ದರೆ, ನಾವುಗಳು ಇದ್ದು ಏನು ಉಪಯೋಗ ? ಇದನ್ನು ಮಾನ್ಯ ಲಕ್ಷ್ಮೀಸಾಗರ್‌ರವರಲ್ಲಿ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ರಾಜ ಕಾರಣದಲ್ಲಿ ಜನತಾ ಪಕ್ಷಕ್ಕೆ ಬರುವುದಕ್ಕಿಂತ ಮೊದಲು, ನನ್ನ ಸ್ನೇಹಿತರು. ನಾನು, ಅವರು ಕೂಡಿ ರಾಜಕೀಯದ ಒಂದೇ ಗರಡಿಯಲ್ಲಿ ಇದ್ದವರು. ಆ ದೃಷ್ಟಿಯಿಂದ ನನಗೆ ಅವರ ಮೇಲೆ ಸತ್ಯೆಧಾರಣೆ ಮಾಡಲಿಕ್ಕೆ ಆಗುತ್ತದೆ. ಕೆಲವರಿಂದ ಅವರು ಕೊಡುತ್ತಿದ್ದಾರೆ. ಅವರು ಕೆಡಬಾರದು ಎಂದು ನನ್ನ ಆಶೆಯಾಗಿದೆ. ಆ ದೃಷ್ಟಿಯಿಂದ ನಾನು ಅವರಿಗೆ ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವೊತ್ತು ಕನ್ಸೂಮರ್ಸ್ ಮೂವ್‌ಮೆಂಟ್ ಎಂದು ಕನ್ಸೂಮರ್ಸ್‌ಗೆ ಕೊಡತಕ್ಕಂಥ ಹಣ ವನ್ನು ಸಹಕಾರಿ ಸಂಘದವರು ಎಲ್ಲರೂ ತಿಂದು ಹಾಕಿದರು. ಆ ಬಗ್ಗೆ ವಿವರವಾಗಿ ಸಹಕಾರಿ ಇಲಾಖೆಯ ಮೇಲೆ ನಡೆಯುವ ಚರ್ಚೆಯಲ್ಲಿ ಮಾತನಾಡುತ್ತೇನೆ. ಆದರೆ ಒಂದು ಮಾತನ್ನು ಇವರು ಲಕ್ಷದಲ್ಲಿಟ್ಟು ಕೊಳ್ಳಬೇಕು. ಇವೊತ್ತು ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಅಂದು ಏನು ಹೆಸರು ಹಾಕಿಕೊಂಡಿದ್ದೀರಿ, ಅದು ಕೇವಲ ನಿಮಿತ್ತ ಮಾತ್ರವಾಗಿದೆ. ಅದರಿಂದ ಡಿಸ್ಟ್ರಿಬ್ಯೂಷನ್ ಆಗುವುದಿಲ್ಲ, ಮತ್ತೆ ತಿರುಗಿ ದಲಾಲರ ಕೈಗೆ ಹೋಗುತ್ತದೆ. ಆ ದಲಾಲರಿಂದ ಮತ್ತೆ ತಿರುಗಿ ಕನ್ಸೂಮರ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಾದರೂ ಒಬ್ಬರು ನಾಚಿಕೆ ಇಲ್ಲದವರು ನಿಮ್ಮ ಅಂಗಡಿಯಲ್ಲಿ ತೆಗೆದುಕೊಳ್ಳಬೇಕಾಗಿದೆಯೋ ವಿನಹ, ನಾಚಿಕೆ ಇದ್ದವರು, ಅಲ್ಲಿ ತೆಗೆದುಕೊಳ್ಳಲಾರದಂತಹ ಒಂದು ಸ್ಥಿತಿ ಇದೆ. ಬಡವರಿಗಂತೂ ಈ ಕಂಗಾಲು ಮಯ ಸ್ಥಿತಿಯಲ್ಲಿ ಏನೂ ಸಿಗಲಾರದಂತೆ ಆಗಿದೆ. ಇವೊತ್ತು ನೀವು ಹಳ್ಳಿಗಳಿಗೆ ಸಕ್ಕರೆ ಕೊಡುತ್ತೀರಿ. ಒಂದು ಊರಿಗೆ ಒಂದು ಚೀಲ ಸಕ್ಕರೆ ಕೊಟ್ಟರೆ, ಅದನ್ನು ಒಯ್ದು ಹಂಚುವವರು ಯಾರು ? ಅವನಿಗೆ ಒಂದು ಶಹರದಿಂದ ಅದನ್ನು ತನ್ನ ಹಳ್ಳಿಗೆ ತೆಗೆದುಕೊಂಡು ಹೋಗುವುದಕ್ಕೆ, ಇತ್ಯಾದಿಯಾಗಿ ಎಷ್ಟು ಖರ್ಚು ಬರುತ್ತದೆ, ನೀವು ಅವನಿಗೆ ಎಷ್ಟು ಕಮೀಷನ್ ಕೊಡುತ್ತೀರಿ? ಇದನ್ನೆಲ್ಲಾ ಅವನು ತನ್ನ ಸ್ವಂತ ಕೈಯಿಂದ ಖರ್ಚು ಮಾಡಿಕೊಂಡು ಒಯ್ಯಲಿಕ್ಕೆ ಸಾಧ್ಯವಿಲ್ಲ. ಅಂತೆಯೇ ಅವನು ಏನೂ ಇಲ್ಲದೆ, ನಷ್ಟ ಮಾಡಿಕೊಂಡು ತನ್ನ ಹಳ್ಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಲಿಕ್ಕೆ ಆತನೇನೂ ಸತ್ಯಹರಿ ಶ್ಚಂದ್ರನಲ್ಲವಲ್ಲಾ ? ಹಾಗೆಂದ ಮೇಲೆ ಅವನು ಏನು ಮಾಡುತ್ತಾನೆ ಅಂದರೆ, ಅಲ್ಲಿಯೇ ಇರುವ ಒಂದು ಚಹಾದ ಅಂಗಡಿಗೆ ಅದನ್ನು ಕೊಟ್ಟುಬಿಟ್ಟು ತನ್ನ ಊರಿಗೆ ಹೋಗುತ್ತಾನೆ. ಊರಿನವರ ಕಾರ್ಡ್‌ಗಳ ಮೇಲೆ ಖರ್ಚು ಹಾಕಿ ಇಲ್ಲಿಗೆ ತಂದುಕೊಡುತ್ತಾನೆ. ಇದು ತಮೆಲ್ಲರಿಗೂ ಗೊತ್ತಿದೆ ಎಂದ ನಾನು ಭಾವಿಸಿದ್ದೇನೆ, ಈ ರೀತಿಯಾದಂತಹ ವ್ಯವಹಾರವನ್ನು ಎಷ್ಟು ದಿವಸಗಳವರೆಗೆ ಮಾಡುತ್ತೀರಿ?

ಇದನ್ನು ತಪ್ಪಿಸಬೇಕೆಂದು ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈ ಕಾರ್ಪೊರೇಷನ್ ಮಾಡಿ ದ್ದೇವೆ. ತಾವು ಹೇಳಿದ್ದೀರಿ, ಆ ಕಾರ್ಪೊರೇಷನ್‌ನವರು ಟ್ರಾನ್ಸ್‌ಪೋರ್ಟ್ ಮಾಡುತ್ತಿದ್ದಾರೆ, ಪ್ರೊಸೆ ಸಿಂಗ್ ಮಾಡುತ್ತಿದ್ದಾರೆ ಎಂದು ಹಾಗಾದರೆ ಅವರು ಏನು ಪ್ರೊಸೆಸಿಂಗ್ ಮಾಡುತ್ತಿದ್ದಾರೆ ? ಅವರು ಪಾಮೋಲಿನ್ ಆಯಿಲ್ ತರುತ್ತಾರೆ. ಯಾವುದೋ ಒಬ್ಬ ಖಾಸಗಿ ಏಜಂಟ್‌ನನ್ನು ಹಿಡಿಯುತ್ತಿ ದ್ದಾರೆ. ಇಲ್ಲದಿದ್ದರೆ ಆಗ್ರೋಪ್ರೂಟ್ಸ್‌ನವರಂತಹವರನ್ನು ಹಿಡಿಯುತ್ತಿದ್ದಾರೆ. ಅಲ್ಲಿ ಎಣ್ಣೆಯನ್ನು ರಿಫೈಂಡ್ ಮಾಡಿ ಮಾರುತ್ತಿದ್ದಾರೆ. ಈ ದಿಸೆಯಲ್ಲಿ ಅನೇಕ ಸಹಕಾರ ಸಂಘಗಳ ಸಹಾಯವನ್ನು ಏಕೆ ತೆಗೆದುಕೊಳ್ಳುವುದಿಲ್ಲ ಇವರು ? ಇದಕ್ಕೆ ಕಾರಣ ಎಂದರೆ, ನಡುಮಧ್ಯ ಬರತಕ್ಕಂಥ ಲಾಭ ಇವರಿಗೆ ಸಿಗುವುದಿಲ್ಲ ಎಂದು ಇರಬಹುದು. ಅದರ ಕಡೆಗೆ ಲಕ್ಷ ಹಾಕಲಿಕ್ಕೆ ನಿಮಗೆ ವೇಳೆ ಇಲ್ಲ. ನಿಮಗೆ ಕಾನೂನು ಇದೆ, ಹೈಕೋರ್ಟ್ ಇದೆ. ಎಲ್ಲವನ್ನೂ ಮುಗಿಸಿಕೊಂಡು ಬರುವಾಗ ಸರಬರಾಜು ನಿಗಮದ ವರಿಗೆ ಸಮಯ ಸಿಗುವುದಿಲ್ಲ. ಇದು ನಿಮ್ಮ ಪರಿಸ್ಥಿತಿಯಾಗಿದೆ.

೪-೦೦ ಪಿ. ಎಂ.

ನಾನು ತಮ್ಮಲ್ಲಿ ಬಿನ್ನಹ ಮಾಡುತ್ತೇನೆ. ಬಹುಭಾಗ ತಾವು ಇದಕ್ಕೆ ಹೆಚ್ಚು ಗಮನ ಕೊಡಬೇಕು. ಇದು ಜನಸಾಮಾನ್ಯರಿಗೆ ಶ್ರೀಸಾಮಾನ್ಯನಿಗೆ ಹಿತ ಮಾಡುವಂತಹ ಇಲಾಖೆಯಾಗಿದೆ. ಸರಕಾರದ ಬೊಕ್ಕಸದ ಹಣ ಕೂಡ ಇದಕ್ಕೆ ಹೋಗುತ್ತದೆ. ಕರ್ನಾಟಕದ ತುಂಬಾ ಬಡವರಿದ್ದಾರೆ. ಇವರು ಹಸಿರು ಕಾರ್ಡುಗಳನ್ನು ಯಾವ ರೀತಿ ಹಂಚಿದ್ದಾರೆಂದರೆ, ಹಂಚಿರುವ, ೩೧,೧೬,೦೦೦ ಕಾರ್ಡುಗಳ ಪೈಕಿ ಶೇಕಡ ೭೦ ರಷ್ಟು ಕಾರ್ಡುಗಳು ಮಿಸ್‌ಯೂಸ್ ಆಗಿದೆ. ಇದರ ಬಗ್ಗೆ ತಕರಾರು ಕೂಡ ಇದೆ. ಕೆಲವು ದಿವಸ ಅದನ್ನು ಬಿಟ್ಟು ಬಿಡೋಣ, ಸರಿಯಾಗಿ ಕೊಟ್ಟಿದ್ದಾರೆಂದೇ ಹೇಳಿದರೂ ಸಹ ನಮ್ಮಲ್ಲಿ ನಾಲ್ಕು ಕೋಟಿ ಜನರಿದ್ದಾರೆ. ನೀವು ಕೊಟ್ಟಿರುವುದು ೩೧,೧೬,೦೦೦ ಜನರಿಗೆ. ಅವರ ಅಭಿಪ್ರಾಯ ದಲ್ಲಿ ಇವರೆಲ್ಲಾ ಯೋಗ್ಯರೆಂದು ಅನಿಸುತ್ತದೆಯೇ ಎಂದು ಪ್ರಶ್ನೆ ಕೇಳಬೇಕಾಗುತ್ತದೆ. ನಿಮ್ಮ ಅಧಿಕಾರಿ ಗಳು ಯಾರನ್ನು ಬಡವರೆಂದು ಹೇಳಿದ್ದಾರೆ ಎಂಬುದನ್ನು ತಾವು ನೋಡಬೇಕು. ಅನೇಕ ಜನ ಶ್ರೀಮಂ ತರಿಗೆ ಕೊಟ್ಟಿದ್ದಾರೆ, ಮತ್ತೊಬ್ಬರಿಗೆ. ಹಾಗೂ ಮಾರುವವರಿಗೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದನ್ನು ರದ್ದು ಮಾಡುವುದು ಬೇಡ ಎಂದು ಅವರಿಗೂ ಇಷ್ಟು ಕೊಡೋಣ ಎಂದು ಕೊಟ್ಟರು. ೩೧,೧೬,೦೦೦ ಜನರಿಗೆ ಹಸಿರು ಕಾರ್ಡುಗಳನ್ನು ಕೊಟ್ಟಿದ್ದೀರಿ ಉಳಿದವರಿಗೆ ರೆಡ್ ಕಾರ್ಡುಗಳನ್ನು ಕೊಟ್ಟಿದ್ದಾರೆ. ಕಾರ್ಪೋರೇಷನ್ ಏರಿಯಾ, ಮುನಿಸಿಪಲ್ ಏರಿಯಾದಲ್ಲಿರತಕ್ಕಂತಹ ಅಂಗಡಿಗಳ ಸಂಖ್ಯೆ ೧೪೨೦, ಅದರಲ್ಲಿ ಎಂಟು ಲಕ್ಷ ಜನರಿಗೆ ಡಿಸ್ಟ್ರಿಬ್ಯೂಷನ್ ಮಾಡುತ್ತಿದ್ದಾರೆ. ನಾನು ಆಹಾರ ಮಂತ್ರಿಯಾಗಿದ್ದಾಗ ಹೋಗುತ್ತಿದ್ದೆ. ತಾವೂ ಕೂಡ ಹೋಗಿ ನೋಡಿರಬಹುದು, ನೀವು ಕುಳಿತು ಹೇಳುವವರಲ್ಲ. ನೀವು ನೋಡಿದ್ದೀರಿ, ಅದು ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ಇದೆಲ್ಲಾ ನಿಮ್ಮ ಕಣ್ಣಿಗೆ ಕಾಣದ ಹಾಗೆ ನಡೆಯುತ್ತಿವೆ. ಇದು ಆಗಬಾರದು. ದೇವರು ನಿಮ್ಮ ಕಣ್ಣಿಗೆ ಕಾಣುವ ರೀತಿ ಯಲ್ಲಿ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಹಸಿರು ಕಾರ್ಡ್, ಕೆಂಪು ಕಾರ್ಡ್ ಗಳನ್ನು ಕೊಟ್ಟಿದ್ದಾರೆ, ನನಗಂತೂ ಯಾವ ಕಾರ್ಡು ಬಂದಿಲ್ಲ, ಅದನ್ನು ತೆಗೆದುಕೊಳ್ಳುವ ಅವಶ್ಯ ಕತೆಯೂ ಇಲ್ಲ. ಇವತ್ತು ಅನೇಕ ಬೋಗಸ್ ಕಾರ್ಡುಗಳಿವೆ. ಅಧಿಕಾರಿಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ಅವರೂ, ಇವರೂ ಕೂಡಿ ಬರತಕ್ಕಂತಹ ಸಕ್ಕರೇ, ಧವಸ ಧಾನ್ಯಗಳನ್ನು ಬೇರೆ ಕಡೆಗೆ ಬೇರ್ಪಡಿಸಿ ಜನರ ಹಿತವನ್ನು ಮೀರಿ ಮಾರಾಟ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಇನ್ನು ಫುಡ್ ಕಾರ್ಪೋರೇಷನಿನಲ್ಲಿ ಲೆಕ್ಕ ಇಟ್ಟಿಲ್ಲ. ಯಾವು ದಾದರೂ ಸೊಸೈಟಿಯಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆದರೆ ದೊಡ್ಡದಾಗಿ ಪ್ರಚಾರ ಮಾಡುತ್ತೇವೆ. ಒಬ್ಬ ಮನುಷ್ಯ ಡಬಲ್ ಭತ್ಯ ತೆಗೆದುಕೊಂಡರೆ ಅದನ್ನೇ ದೊಡ್ಡದಾಗಿ ಹೆಡ್ಡಿಂಗ್‌ಸಲ್ಲಿ ಹಾಕುತ್ತಾರೆ. ಫುಡ್ ಕಾರ್ಪೋರೇಷನ್‌ನಲ್ಲಿ ೧೯೮೪-೮೫ ರಿಂದ ಯಾರಿಂದ ಎಷ್ಟು ಹಣ ಬರಬೇಕು ಅದನ್ನು ವಸೂಲು ಮಾಡಿಲ್ಲ. ಇದರ ಬಗ್ಗೆ ಲೆಕ್ಕವನ್ನೇ ಇಟ್ಟಿಲ್ಲ. ತಾವು ಕಾನೂನು ಮಂತ್ರಿಯಾಗಿದ್ದೀರಿ, ಬಹಳ ಅನು ಭವಶಾಲಿಗಳಾಗಿದ್ದೀರಿ. ಒಳ್ಳೆಯ ರೀತಿಯಿಂದ ಕೆಲಸ ಮಾಡಬೇಕೆನ್ನುವ ಮನಸ್ಸು ನಿಮಗೆ ಇದೆ. ತಾವು ನಗರ ಸಭೆಯಲ್ಲಿ. ಪುರಸಭೆಯಲ್ಲಿ ದುಡಿದ್ದಿದ್ದೀರಿ, ಇದನ್ನೆಲ್ಲಾ ಕಂಡು ಹಿಡಿದು ಲೆಕ್ಕಗಳನ್ನು ಬಯಲಿಗೆ ಎಳೆದು ಇದನ್ನು ಒಂದು ಪರಿಶುದ್ಧವಾಗಿ ಸಂಸ್ಥೆಯನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡು ತ್ತೀರಾ ಎಂದು ನಾನು ಅವರಲ್ಲಿ ಕೇಳಬಯಸುತ್ತೇನೆ. ನನಗೆ ಬಹಳ ಆಶ್ಚರ್ಯವೆನಿಸುತ್ತದೆ. ಈ ಪುಸ್ತಕ ವನ್ನು ಬಹಳ ಉತ್ತಮವಾಗಿ ಪ್ರಿಂಟ್ ಮಾಡಿದ್ದಾರೆ. ಇದರಲ್ಲಿ ಕೇಂದ್ರ ಸರಕಾರವು ನಿಗದಿ ಪಡಿಸಿದ ಲೆವಿ ಅಕ್ಕಿಯ ಶೇಖರಣಾ ದರದಲ್ಲಿಯೇ ರಾಜ್ಯ ಸರಕಾರವೂ ಲೆವಿ ಅಕ್ಕಿಯನ್ನು ಶೇಖರಣೆ ಮಾಡುತ್ತಿದೆ ಎಂದು ಹೇಳಿದ್ದಾರೆ, ಇದರಲ್ಲಿ ೨೪೧ ಅತ್ಯುತ್ತಮ, ಉತ್ತಮ ಅಕ್ಕಿ ೨೩೫, ಸಾಮಾನ್ಯ ಅಕ್ಕಿ ೨೨೯ ಎಂದು ಇದೆ.

೨೫-೨-೮೭ ಕ್ಕೆ ಭಾರತ ಆಹಾರ ನಿಗಮವು ರಾಜ್ಯ ಸರ್ಕಾರದ ಪರವಾಗಿ ೭೫,೫೮೪ ಟನ್ ಲೆವಿ ಅಕ್ಕಿಯನ್ನು ಶೇಖರಿಸಿದೆ. ಇದನ್ನು ಕೇಂದ್ರ ಸರ್ಕಾರ ಮಾಡಿದ್ದು. ತಾವು ಎಷ್ಟು ಮಾಡಿದ್ದೀರಿ ಎಂದರೆ ೨೩೨ ಟನ್. ಹೈಬ್ರಿಡ್ ಜೋಳವನ್ನು ಬೆಂಬಲದ ಬೆಲೆಯಲ್ಲಿ ಖರೀದಿಸಲಾಯಿತು. ಸೆಂಟ್ರಲ್ ವೇರ್‌ಹೌಸ್ ಮಾಡಿದ್ದು ಬಿಟ್ಟುಬಿಡಿ. ನೀವು ಮಾಡಿದ್ದು ಎಷ್ಟು ? ನಮ್ಮದನ್ನು ವಿಚಾರ ಮಾಡ ಬೇಕಾಗುತ್ತದೆ. ನೀವು ಕೊಟ್ಟಿರುವ ವರದಿಯ ಮೇಲೆ ಹೇಳುತ್ತಿದ್ದೇನೆ. ಬೇರೆ ಏನೂ ಹೇಳುವು ದಿಲ್ಲ. ಈವರೆಗೆ ಒಟ್ಟು ೨೩೨ ಟನ್ ಹೈಬ್ರಿಡ್ ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲಾಯಿತು.

ಇಷ್ಟನ್ನು ದೊಡ್ಡವರ ಮನೆಯಲ್ಲಿ ಇದ್ದರೆ, ಶ್ರೀಮಂತಿ ನಾಗರತ್ನಮ್ಮನವರ ಮನೆಯಲ್ಲಿ ಇದ್ದರೆ, ೨೩೨ ಟನ್ನನ್ನು ಯಾವುದಾದರೂ ಒಂದು ಬೋರ್ಡಿಂಗ್‌ಗೆ ದೇಣಿಗೆಯಾಗಿ ಕೊಡುತ್ತಿದ್ದರೋ ಏನೋ ? ಈ ರೀತಿಯಾದಂಥ ವ್ಯವಹಾರವನ್ನು ಮಾಡಿ ಎಷ್ಟು ಜನ ಕೊಟ್ಟಿದ್ದಾರೆ, ಇವರ ಪಗಾರ ಎಷ್ಟು ? ಇವರಿಗೆ ಕೊಡತಕ್ಕಂಥ ತಿಂಗಳ ಭತ್ಯವೆಷ್ಟು ? ದಯವಿಟ್ಟು ಇದನ್ನೆಲ್ಲಾ ಲೆಕ್ಕ ಹಾಕಿದರೆ ಸ್ಟೇಟ್ ಎಕ್ಸ್‌ಚೆಕರ್ ಹಣ ಎಷ್ಟು ಎಂಬುದು ಗೊತ್ತಾಗುತ್ತದೆ. ಕಡಿಮೆಯಾಗುತ್ತಿದೆ, ಈ ರೀತಿಯಲ್ಲಿ ಆದರೆ ಹಣ ಇಲ್ಲದೆ ಇನ್ನೇನು ಆಗುತ್ತದೆ ? ಎಲಾ ಕಡೆ ಉಪಯೋಗ ಮಾಡ್ರಿ. ನಾನು ಅಧಿಕಾರಿಗಳನ್ನು ನೋಡಿಲ್ಲ. ಯಾವ ಅಧಿಕಾರಿಗಳು ಇದ್ದಾರೋ ನನಗಂತೂ ಗೊತ್ತಿಲ್ಲ. ಎಲ್ಲಾ ಅಧಿಕಾರಿಗಳನ್ನೂ ಬೈಯ್ಯುವುದು ಸರಿಯಲ್ಲ. ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ಅನೇಕ ಜನ ಅಧಿಕಾರಿಗಳು ಎಲೆ ಮರೆಯ ಕಾಯಿಯಂ ಹಾಗೆ ಇರುತ್ತಾರೆ. ಕೆಲವು ಅಧಿಕಾರಿಗಳು ತಿನ್ನುವವರು ಬಯಲಿಗೆ ಬರುವುದಿಲ್ಲ. ಈ ರೀತಿಯಲ್ಲಿ ಎಲೆಮರೆಯ ಕಾಯಿಯ ಹಾಗೆ ಇರುವ ಅಧಿಕಾರಿಗಳು ಬಯಲಿಗೆ ಬರುತ್ತಿದ್ದಾರೆ. ಇದರ ಬಗ್ಗೆ ನಿಗಾ ವಹಿಸಬೇಕು. ತಾವು ದಯವಿಟ್ಟು ಈ ಕೆಲಸವನ್ನು ಮಾಡಬೇಕು. ಖಾದ್ಯ ತೈಲ ಎಂದು ಇವರಿಗೆ ಕೊಡುತ್ತಿದ್ದಾರೆ. ಇವರು ಎಷ್ಟು ಕೊಡುತ್ತಿದ್ದಾರೆ ಎಂದು ಹೇಳಿದರೆ ಎರಡರಿಂದ ನಾಲ್ಕು ಕೆ. ಜಿ. ತಲಾ ಒಬ್ಬರಿಗೆ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಎಲ್ಲಿ ಕೊಡುತ್ತಾರೋ, ಅದನ್ನು ಸರಿಯಾಗಿ ಕೊಡುತ್ತಿದ್ದಾರೋ ಏನೋ ಗೊತ್ತಿಲ್ಲ. ನಮ್ಮ ಊರಿನಲ್ಲಂತೂ ಒಂದು ಕೆಜಿ ಸಹಿತ ಕೊಟ್ಟಿಲ್ಲ. ಹಾಗಾದರೆ ಅಲ್ಲಿಂದ ಬಂದಮೇಲೆ ಎಲ್ಲಿಗೆ ಹೋಗುತ್ತಿದೆ ? ಕರ್ನಾಟಕದಿಂದ ಖಾದ್ಯ ತೈಲವು ಬಾಂಬೆಯ ಡಾಲ್ಡಾ ಕಂಪೆನಿಯವರಿಗೆ ಹೋಗುತ್ತಿದೆ ಎಂದು ತಿಳಿದುಬಂದಿದೆ. ಇಲ್ಲಿಂದ ಹೋಗುತ್ತಿದೆ ಮತ್ತೆ ಅಲ್ಲಿಂದ ನಮಗೆ ಬರುತ್ತಿದೆ, ಹಾಗಾದರೆ ಹೇಗೆ ಹೋಗುತ್ತಿದೆ ? ಇದರ ಬಗ್ಗೆ ನಿಮ್ಮಲ್ಲಿ ವಿಜಿಲೆನ್ಸ್ ಇದ್ದರೆ, ನಿಮ್ಮಲ್ಲಿ ಇಂಟೆಲಿಜೆನ್ಸ್ ಇದ್ದರೆ, ನಿಮ್ಮಲ್ಲಿ ಪೋಲೀಸರು ಈ ಕೆಲಸವನ್ನು ಮಾಡಬೇಕು ಎಂದು ಇದ್ದರೆ ದಯವಿಟ್ಟು ಈ ಖಾದ್ಯ ತೈಲ ಎಲ್ಲಿಗೆ ಹೋಗುತ್ತಿದೆ ಎನ್ನುವುದನ್ನು ಕಂಡುಹಿಡಿಯಬೇಕು ಎಂದು ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಕೆ. ಹೆಚ್. ಪಾಟೀಲರು ಬರೀ ಮಾತನಾಡುತ್ತಾರೆ. ಅವರು ಇದ್ದಾಗ ಏನು ಮಾಡಿದರು ಎನ್ನುವ ದೃಷ್ಟಿಯಿಂದ ಪ್ರಿಂಟ್ ಮಾಡಿದ್ದಾರೆ, ಅಂದರೆ ಆಗ ೨.೬೦ ಸಾವಿರ ರೂಪಾಯಿ ಸಂಗ್ರಹವಾಗಿದೆ ಎಂದು ಈ ೨.೬೦ ಸಾವಿರ ಯಾರಿಂದ ಸಂಗ್ರಹವಾಗಿದ್ದು ಎಂದು ಹೇಳಿದರೆ ಅನೇಕ ಖದೀಮರು ಕೂಡಿಟ್ಟಿದ್ದ ಹಣ. ಅವರುಗಳನ್ನೆಲ್ಲಾ ಬಯಲಿಗೆಳೆದಾಗ ಬ್ಲಾಕ್ ಮಾರ್ಕೆಟ್‌ನಲ್ಲಿ ಇಟ್ಟಿದ್ದ ಹಣ ಹೊರಗೆ ಬಂತು. ಆ ಕೆಲಸವನ್ನು ಮಾಡಿ ಜನರಿಗೆ ಕಲ್ಯಾಣ ಮಾಡಿದೆವು. ಅದನ್ನು ತಾವು ಕೂಡಾ ಮಾಡಬೇಕೆಂದು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ನಮಗಿಂತ ನೀವು ಹೆಚ್ಚು ಕೀರ್ತಿವಂತರಾಗಬೇಕು, ನಿಮ್ಮಿಂದ ರಾಜ್ಯಕ್ಕೆ ಕಲ್ಯಾಣವಾಗಬೇಕು ಎನ್ನುವ ಇಚ್ಛೆ ನನಗಿದೆ. ಸಕ್ಕರೆ ಬಗ್ಗೆ ಬಂದರೆ ಎಷ್ಟು ಸಕ್ಕರೆ ಖರ್ಚಾಗುತ್ತಿದೆ ? ಈಗ ಸಕ್ಕರೆಯ ಕ್ವಾಂಟಮ್ ಹೆಚ್ಚು ಮಾಡಿದ್ದೇವೆ, ಅದಕ್ಕಾಗಿ ಹೆಚ್ಚು ಶಹಭಾಷ್‌ಗಿರಿ ಕೊಡಬೇಕು ಎಂದು ಕೇಳಿದ್ದಾರೆ. ನಾನು ಕೇಳುತ್ತಿದ್ದೇನೆ. ಈ ಸಕ್ಕರೆಯನ್ನು ನೀವು ಎಷ್ಟು ಜನರಿಗೆ ಮುಟ್ಟಿಸುತ್ತೀರಿ ? ಇದರ ಬಗ್ಗೆ ನೀವು ಲೆಕ್ಕ ಕೊಡಬೇಕಾಗುತ್ತದೆ. ಹೋದ ಸಾರಿ ಬಜೆಟ್ ಮೇಲೆ ಮಾತನಾಡುವಾಗ ಆಗ ಇದ್ದಂಥ ಮಾನ್ಯ ಬಸವಣ್ಣೆಪ್ಪನವರಿಗೆ ಹೇಳಿದ್ದೆ. ಕೋ-ಆಪರೇಟಿವ್ ಸೊಸೈಟಿಯವರಿಗೆ ಸಕ್ಕರೆಯನ್ನು ಕೊಡದೆ, ಖಾಸಗಿಯವರಿಗೆ ಕೊಡುತ್ತೀರಿ ? ಇದರ ಅರ್ಥ ಏನು ? ಎಂದು ಕೇಳಿದ್ದೆ.

ನಾನು ಹಾಗೆ ಮಾಡುವುದಿಲ್ಲ. ಕೆಲಸ ಮಾಡುತ್ತೇನೆಂದು ಅವರು ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಬೇಕಾದರೆ ತಾವು ಹೋದಸಾರಿಯ ಪ್ರೊಸೀಡಿಂಗ್ಸ ಅನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ ಆದರೆ ಈ ಖಾತೆಗೆ ಮೊದಲು ಮಂತ್ರಿಯಾಗಿದ್ದ ಶ್ರೀ ಬಸವಣ್ಣೆಪ್ಪನವರು ಹೋದರು ಈಗ ತಾವು ಬಂದಿರಿ ಅವರು ಹೋದರು ನೀವು ಬಂದಿರಿ ಅಷ್ಟೇ ಆದರೆ ಅಧಿಕಾರಿಗಳು ಮಾತ್ರ ಅಲ್ಲೇ ಉಳಿದರು ಅಧಿಕಾರಿಗಳು ಮಾಡುವ ಕೆಲಸ ಅವರೇ ಮಾಡುತ್ತಿದ್ದಾರೆ. ಕೋ–ಆಪರೇಟೀವ್ ಸೊಸೈಟಿಗೆ ಕೊಟ್ಟರೆ ಆ ಕೋ–ಆಪರೇಟೀವ್ ಸೊಸೈಟಿ ಸೆಕ್ರೆಟರಿ ಆ ಸೊಸೈಟಿಯಿಂದ ಕದ್ದು ಹೆಚ್ಚು ಖರ್ಚು ಮಾಡುವುದಕ್ಕಾಗುವುದಿಲ್ಲ ಆದುದರಿಂದ ಆ ಅಧಿಕಾರಿಗಳಿಗೆ ಈ ಸೊಸೈಟಿಗಳಲ್ಲಿ ಹೆಚ್ಚು ವ್ಯವಹಾರಗಳು ನಡೆಯುವುದಿಲ್ಲ. ಬೇರೆಯವರ ವ್ಯವಹಾರ ನಡೆಸಿದರೆ ಆ ಅಧಿಕಾರಿಗಳಿಗೆ ಹೆಚ್ಚು ಖರ್ಚು ಮಾಡುವುದಕ್ಕೆ ಶರಾಬು ಕುಡಿಯುವುದಕ್ಕೆ ಸಿನಿಮಾಕ್ಕೆ ಹೋಗುವುದಕ್ಕೆ ಇನ್ನು ಇತರೇ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವರ ಹತ್ತಿರ ಆ ಅಧಿಕಾರಿಗಳು ಅಂಡರ್‌ಡೀಲಿಂಗ್ಸ್ ಮಾಡಬಹುದು. ನೀವು ಕೊಡುವ ಸಂಬಳ ಅವರಿಗೆ ಸಾಕಾಗುವುದಿಲ್ಲ ಇಲ್ಲದೇ ಹೋದರೆ ಅವರಿಗೆ ಹೆಚ್ಚು ಸಂಬಳ ಕೊಡಬೇಕಾಗುತ್ತದೆ. ನೀವು ಹೆಚ್ಚು

ಸಂಬಳ ಕೊಡುವುದಿಲ್ಲ. ಅವರು ಬೇಕಾದ ಹಾಗೆ ಖರ್ಚು ಮಾಡುವುದಕ್ಕೆ ಅವರಿಗೆ ಸಂಬಳ ಸಾಕಾಗದೇ ಇರುವುದರಿಂದ ಅಂಡರ್ ಡೀಲಿಂಗ್ಸ್‌ಗೆ ಕೈಹಾಕುತ್ತಾರೆ. ಆದುದರಿಂದ ತಾವು ಇದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು.

ಇನ್ನು ಸೀಮೆಯೆಣ್ಣೆ ಬಡವರಿಗೆ ಬೇಕಾದಂಥ ಅತ್ಯಂತ ಅವಶ್ಯಕವಾದಂಥಹ ವಸ್ತು ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ಅದನ್ನು ಇವರು ಏನು ಮಾಡುತ್ತಾರೆಂದರೆ ಸ್ವಲ್ಪ ದಿವಸ ಅದನ್ನು ಬಚ್ಚಿಟ್ಟು ಅನಂತರ ಹೆಚ್ಚು ಧಾರಣೆಗೆ ಮಾರುತ್ತಾರೆ ಇವರು ಬಡವರ ರಕ್ತವನ್ನು ಹೀರ ತಕ್ಕಂಥಾ ಜನ ಆದುದರಿಂದ ಇದನ್ನೆಲ್ಲಾ ತಾವು ನೋಡಿ ಬಂದ್ ಮಾಡಿರಿ ಎಂದು ಹೇಳುತ್ತೇನೆ.

ಇನ್ನು ಈ ಫುಡ್ ಡಿಪಾರ್ಟ್‌ಮೆಂಟ್ ಬಗ್ಗೆ ಎಷ್ಟು ಹೇಳಿದರೂ ಸಾಲದು ನಾನು ಹೇಳುವುದು ಇಷ್ಟೇ ಸಾಹುಕಾರ ರಂಗದಲ್ಲಾಗಲಿ, ಸಹಕಾರೀ ರಂಗದಲ್ಲಾಗಲಿ, ಈ ತರಹ ದಿನನಿತ್ಯಕ್ಕೆ ಬೇಕಾದಂಥ ಆವಶ್ಯಕವಾದಂಥ ವಸ್ತುಗಳು ಏನು ಇವೆ, ಅದು ಆಹಾರ ಧಾನ್ಯವೇ ಆಗಿರಲಿ, ಸೀರೆ ಬಟ್ಟೆಯೇ ಆಗಲಿ, ಒಂದು ಹಣ್ಣಿನ ರಸವೇ ಆಗಲಿ, ಒಂದು ಚಾಕ್ಲೇಟೇ ಆಗಲಿ ಇಂಥಾ ವಸ್ತುಗಳನ್ನು ಕರ್ನಾಟಕ ಫುಡ್ ಕಾರ್ಪೋರೇಷನ್ನಿನವರು ಸಂಗ್ರಹಿಸಿ ಅವನ್ನೆಲ್ಲಾ ಕನ್‌ಸ್ಯೂಮರ್ಸ್ ಸೊಸೈಟಿಗಳ ಮುಖಾಂತರ ಮಾರಾಟ ಆಗುವ ಹಾಗೆ ಮಾಡಿದರೆ ಅದು ಒಳ್ಳೆಯ ಸಾಧನೆ ಆದೀತು ಎಂದು ಹೇಳುತ್ತೇನೆ ಇದಕ್ಕೆ ತಮಗೆ ಅವಶ್ಯಕವಾಗಿ ಬೇಕಾದರೆ ಶ್ರೀಮಾನ್ ರಾಚಯ್ಯನವರ ಸಹಾಯ ತೆಗೆದುಕೊಳ್ಳಿ, ಪೋಲೀಸಿನವರು ಹೊಡೆಯುವುದನ್ನು ಬಿಟ್ಟು ನಿಮ್ಮ ಸಹಕಾರಕ್ಕೆ ಬರುವಂತೆ ಮಾಡಿ ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಯವರಿಂದ ಉತ್ತರ (೨-೩ ಜನ ಸದಸ್ಯರು ನಮಗೆ ಮಾತನಾಡಲು ಅವಕಾಶ ಕೊಡಿ ಎಂದು ಕೇಳಿದರು)

ಅಧ್ಯಕ್ಷರು,—ನಿಮಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಕೊಡುತ್ತೇನೆ ಈಗ ಮಾನ್ಯ ಮಂತ್ರಿಗಳ ಉತ್ತರ ಹೇಳಲಿ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ನಗರಾಭಿವೃದ್ಧಿ ಮತ್ತು ಆಹಾರ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ನಾಲ್ಕು ಗಂಟೆಗಳ ಕಾಲ ನನ್ನ ಬೇಡಿಕೆಗಳ ಮೇಲೆ ಚರ್ಚೆ ನಡೆದು ಅದರ ಬಗ್ಗೆ ಮಾನ್ಯ ಸದಸ್ಯರು ಹಲವಾರು ವಿಷಯಗಳ ಬಗ್ಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪಮಟ್ಟಿಗೆ ಕೆಲವು ವಿಷಯಗಳ ಮೇಲೆ ಮಂದಸ್ಮಿತವಾದ ಟೀಕೆಗಳೂ ಸಹ ಬಂದಿವೆ ಆದರೆ ಅದು ಒಂದು ದೊಡ್ಡ ಟೀಕೆ ಎಂದು ನನಗೆ ಅನಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ದೊಡ್ಡ ಟೀಕೆ ಎಂದರೆ ಕಟ್ಟಿಗೆ ತೆಗೆದುಕೊಂಡು ಹೊಡೆಯಬೇಕೇನು ?

ಶ್ರೀ ಎ. ಲಕ್ಷ್ಮೀಸಾಗರ್.—ಅದೂ ನನಗೆ ಗೊತ್ತು. ಈಗ ಅದು ಬೇಡ ನಿಮಗೆ ಬೇಕಾದರೆ ಅಚ್ಚ ಕನ್ನಡದಲ್ಲೇ ಹೇಳುತ್ತೇನೆ, ಶ್ರೀಮಾನ್ ಧರ್ಮಸಿಂಗ್‌ರವರು ಹಿಂದಿನ ಮಂತ್ರಿಗಳಾಗಿದ್ದವರು. ಅವರೂ ಸಹ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಏನು ಮಂದಸ್ಮಿತಿಯಲ್ಲಿ ಟೀಕೆಗಳನ್ನು ಮಾಡಿದ್ದಾರೋ ಅವೆಲ್ಲವನ್ನೂ ಕೂಡ ನಾನು ಬ್ರಾಡ್ ಆಗಿ ತೆಗೆದುಕೊಂಡು, ಅದನ್ನೆಲ್ಲಾ ಸ್ವಾಗತ ಮಾಡಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕೆ ಕಾರಣ ಇಷ್ಟೆ. ಈ ಪ್ರಜಾಪ್ರಭುತ್ವದಲ್ಲಿ ನಾವು ಮಾಡುವುದೇ ಸರಿ ಎಂದುಕೊಂಡರೆ ಅದು ನಾವು ಮಾಡತಕ್ಕಂಥಾ ಕೆಲಸಕ್ಕೆ ಒಂದು ಅಳತೆಗೋಲು ಹಾಕಿದಂತಾಗುತ್ತದೆ. ಆದುದರಿಂದ, ನಾವು ಜನರ ಮಾತನ್ನೂ ಕೂಡ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದರೆ ಅದು ಬುದ್ಧಿವಂತರ ಲಕ್ಷಣ. ಈ ಪ್ರಜಾಪ್ರಭುತ್ವದಲ್ಲಿ ಟೀಕೆಗಳು ಬರಬೇಕಾದ್ದು ಒಂದು ಸಾರವಾದಂಥ ಭಾಗ ಏತಕ್ಕೆಂದರೆ, ವಾಹನಕ್ಕೆ ಒಂದು ಕಡಿವಾಣ ಇದ್ದ ಹಾಗೆ ಅದೂ ಇರಬೇಕು. ಆದುದರಿಂದ, ಅವರೆಲ್ಲರ ಟೀಕೆಗಳನ್ನೂ ಅನುಮೋದಿಸುತ್ತೇನೆಂದು ಪ್ರಪ್ರಥಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇಲ್ಲಿ ಟೀಕೆ ಮಾಡುವುದು ಅಷ್ಟು ಸುಲಭವಲ್ಲ. ಕೆಲವು ಮಾನ್ಯ ಸದಸ್ಯರು ಇಲ್ಲಿ ತಮ್ಮ ಒಂದು ಅನುಭವದ ಮಾತುಗಳನ್ನು ಹೇಳಿದರೆ, ತಮ್ಮ ಒಂದು ಪ್ರಪಂಚಜ್ಞಾನದ ಬಗ್ಗೆ ಹೇಳಿದರೆ, ತಮ್ಮ ಒಂದು

ಜ್ಞಾನಭಂಡಾರದ ಕಿಡಿಯನ್ನು ಹಾರಿಸಿದರೆ, ಅವೆಲ್ಲವೂ ಟೀಕೆಗಳಾಗುವುದಿಲ್ಲ. ಇಲ್ಲಿ ಟೀಕೆ ಮಾಡುವವರನ್ನು ನನ್ನ ಸ್ನೇಹಿತರು ಎಂದು ಭಾವಿಸುತ್ತೇನೆ. ನಿಂದಕರೂ ಇರಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ದಾಸರ ಪದವನ್ನು ನೆನಪು ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರಿಗೂ ಮೊಟ್ಟಮೊದಲನೆಯದಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಧರ್ಮಸಿಂಗ್ ಅವರು ಈ ಹಿಂದೆ ನಗರಾಭಿವೃದ್ಧಿ ಮತ್ತು ವಸತಿ ಖಾತೆ ಮಂತ್ರಿಗಳಾಗಿದ್ದರು. ಅವರು ತಮ್ಮ ಒಂದು ಅನುಭವದ ಹಿನ್ನೆಲೆಯಲ್ಲಿ ಹಲವಾರು ರಚನಾತ್ಮಕವಾದಂಥ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ನಾನು ಅದೆಲ್ಲವನ್ನೂ ಬ್ರಾಡ್ ಆಗಿ ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಕೆಲವು ಮೂಲಭೂತವಾದ ಪ್ರಶ್ನೆಗಳಿಗೆ ಉತ್ತರ ಕೊಡುವುದು ಅತ್ಯಂತ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಮೊಟ್ಟಮೊದಲನೆಯದಾಗಿ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ನಿಗಮದ ಹಣಕಾಸಿನ ವ್ಯವಸ್ಥೆ ಮತ್ತು ಅದು ಕೆಲಸ ಮಾಡಿಕೊಂಡು ಬಂದಂಥ ರೀತಿಯ ಬಗ್ಗೆ ಪ್ರಪ್ರಥಮವಾಗಿ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಮಂಡಳಿ ಈಗ ೫ ವಿಧವಾದ ಕೆಲಸಗಳನ್ನು ಮಾಡುತ್ತಿದೇ ಅವು ಯಾವುವೆಂದರೆ.

1) Piped water supply Schemes,
2) Urban Water Supply Schemes,
3) Board Water Supply Schemes,
4) Under Ground Drainage Schemes,
5) Low Cost Sanitation.

ಇವುಗಳೆಲ್ಲವೂ ಕೂಡ ongoing works as on 1-4-85 46 and the estimated cost was Rs. 4578 lakhs but the expenditure incurred was only Rs. 1302 lakhs. The balance money required was of the order of Rs. 3276 lakhs ಇದು ಆರನೆಯ ಪಂಚ ವಾರ್ಷಿಕ ಯೋಜನೆ. In the Programme for VII Five yearsPlan the number of new works proposed is 166 and the additional amount required is Rs. 17,689 lakhs. The total number of works is 210 and the amount required is Rs. 17965 lakhs. ಇದು ಸಮಸ್ಯೆಯ ಗಾತ್ರ In respect of 1985-86 the Budget provision was Rs. 756 lakhs ನಮಗೆ ರಿಲೀಸ್ ಆದದ್ದು is Rs. 830.50 lakhs. Expenditure incurred so far is Rs. 700 lakhs. The balance required is Rs. 17,296 lakhs. In respect of 1986-87 the Budget provided is of the order of Rs. 858 lakhs the amount released by the Government in 1986-87 is Rs. 549 lakhs. the balance to be released is Rs. 309 lakhs. The expenditure incurred is 377.76 lakhs. The balance amount required is 16,438 lakhs. ಇದು ಸಮಸ್ಯೆಯ ಗಾತ್ರ.

As on 1-4-1986. on going and fresh works together totalling 212 works require a sum of Rs. 172.96 Crores for Completion. Against the above requirements, a sum of Rs. 8.58 crores has been provided for in the Year 1986-87. For 1987-88, a budget proposal of Rs. 8.50 crores is made, Even this provision is not sufficient as the balance required for completing the 212 works will be Rs. 225.00 crores, including the escalation of 35%.

ಇದು ಈ ಸಂಸ್ಥೆಯ ಗಾತ್ರ ಮತ್ತು ಇರತಕ್ಕಂಥ ಹಣ. ಇದರಿಂದ ಏನು ವ್ಯಕ್ತವಾಗುತ್ತದೆ ಅಂದರೆ. ಈ ನಗರ ನೀರು ಸರಬರಾಜು ನಿಗಮ ಏನಿದೆ ಅದರಿಂದ ನಾವು ಏನು ನಿರೀಕ್ಷೆ ಮಾಡುತ್ತೇವೋ ಆ ನಿರೀಕ್ಷೆಗೆ ಸರಿಯಾಗಿ ನಮಗೆ ಪ್ರತಿಫಲ ಸಿಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ನಾವು ಪೋಷಕವಾಗಿ

ಈ ನಿಗಮಕ್ಕೆ ಸರ್ಕಾರ ಸಾಕಷ್ಟು ಹಣವನ್ನು ಸರ್ಕಾರಕ್ಕೆ ಕೊಡುವುದಕ್ಕೆ ಆಗುತ್ತಾ ಇಲ್ಲ. ಎರಡನೆಯದು, ಸನ್ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಈ ಸಭೆಯಲ್ಲಿ ಮತ್ತು ಮೇಲಿನ ಸಭೆಯಲ್ಲಿ ಹೇಳಿದ್ದೇನೆ. ಕರ್ನಾಟಕ ನಗರ ನೀರು ಸರಬರಾಜು ಮಂಡಲಿಗೆ ೫೭ ನಗರಸಭೆಗಳು ಮತ್ತು ಪುರಸಭೆಗಳಿಂದ ೨೭ ಕೋಟಿ ೪೬ ಲಕ್ಷದಷ್ಟು ಬಾಕಿ ಹಣ ಬರಬೇಕಾಗಿದೆ. ಬರೀ ಕಾರ್ಪೊರೇಷನ್ಸ್ ಮುನಿಸಿಪಾಲಿಟಿಗಳನ್ನು ಸೇರಿಸಿ ಹೇಳಿದ್ದೇನೆ. ಇದರ ಜೊತೆಗೆ ಸಿಟಿ ಮುನಿಸಿಪಲ್ ಕಾರ್ಪೊರೇಷನ್, ಮೈಸೂರು, ಸಿಟಿ ಮುನಿಸಿಪಲ್ ಕಾರ್ಪೊರೇಷನ್, ಹುಬ್ಬಳ್ಳಿ-ಧಾರವಾಡ ಇವೆರಡು ಮಹಾನಗರ ಪಾಲಿಕೆಗಳಿಂದ ೧೭ ಕೋಟಿ ೯೫ ಲಕ್ಷ ರೂಪಾಯಿಗಳು ಕರ್ನಾಟಕ ನಗರ ನೀರು ಸರಬರಾಜು ಮಾಡತಕ್ಕಂಥ ನಿಗಮಕ್ಕೆ ಬಹಳ ಬರಬೇಕಾಗಿದೆ. ಹಿಂದಿನ ವರ್ಷ ೧೯೮೬-೮೭ರಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೆವು ಅದನ್ನು ಎತ್ತಿತೋರಿಸಿ ಕೊಟ್ಟಿರತಕ್ಕ ಲೆಕ್ಕದ ಪ್ರಕಾರ ನೀವು ಗುರಿಯನ್ನು ಸಾಧನೆ ಮಾಡಲಿಕ್ಕೆ ಆಗಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ೮.೧೮ ಲಕ್ಷ ಏಸಿದೆ ಇದರಲ್ಲಿ ಮುಕ್ಕಾಲು ಭಾಗದಷ್ಟು ಹಣ ಅಭಾವ ಪರಿಸ್ಥಿತಿಯ ಸಮಯದಲ್ಲಿ ನೀರಿನ ತೊಂದರೆಯಾದಾಗ ಮೇಂಟೆನೆನ್ಸ್‌ಗೆ ಖರ್ಚಾಗಿದೆ. ಹೀಗಾಗಿ ಯೋಜನೆಗಳನ್ನು ಜಾರಿಗೊಳಿಸುವ ಅಥವಾ ಅರ್ಧ ಮುಗಿದಿರತಕ್ಕ ಯೋಜನೆಗಳಿಗೆ ಹಣ ಒದಗಿಸಲಿಕ್ಕೆ ಆಗಲಿಲ್ಲ. ಇದು ಕರ್ನಾಟಕ ನಗರ ನೀರು ಸರಬರಾಜು ನಿಗಮ ಕೆಲಸ ಮಾಡುವುದರ ಬಗ್ಗೆ ತಮಗೆ ವಿವರಣೆ ಕೊಟ್ಟಿದ್ದೇನೆ. ಇದರ ಜೊತೆಗೆ ಕರ್ನಾಟಕ ನಗರ ನೀರು ಸರಬರಾಜು ನಿಗಮದ ಆರ್ಥಿಕ ಪರಿಸ್ಥಿತಿ ಮತ್ತು ಇವರು ಯಾರುಯಾರಿಗೆ ಎಷ್ಟೆಷ್ಟು ಹಣ ಕೊಡಬೇಕು ಎನ್ನುವುದನ್ನು ಹೇಳುತ್ತೇನೆ. ೧೯೮೬-೮೭ನೇ ಇಸವಿಯಲ್ಲಿ ಎಲ್. ಐ. ಸಿ. ಗೆ ಕೊಡಬೇಕಾದಂಥ ಹಣ ೨೧೪.೨೩ ಲಕ್ಷ ರೂ.ಗಳು ಡಿಬೆಂಚರ್‌ಗೆ ಕೊಡಬೇಕಾದುದು ೦.೬೬ ಲಕ್ಷ ರೂ.ಗಳು ಗವರ್ನಮೆಂಟ್ ಲೋನ್ಸ್ ೧೬೦.೧೧ ಲಕ್ಷ ರೂ.ಗಳು ಒಟ್ಟು ೩೭೫ ಲಕ್ಷ ರೂಪಾಯಿಗಳು ಆಮೇಲೆ ೧೯೮೭-೮೮ಕ್ಕೆ ಕೊಡಬೇಕಾಗಿರುವುದು ಮೇಲಿನ ಶೀರ್ಷಿಕೆಗಳಿಗೆ ೧೪೨.೫೭ ಲಕ್ಷ ರೂಪಾಯಿಗಳು ಎಲ್ಲಾ ಸೇರಿ ಒಟ್ಟು ೫೧೭.೫೭ ಲಕ್ಷ ಕೊಡಬೇಕಾಗಿದೆ, ಇಷ್ಟು ಇವರು ಕೊಡಬೇಕಾಗಿರತಕ್ಕಂಥ ಹಣ.

(ಡಾ. ಪುಷ್ಪಾವತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದುದರಿಂದ ಸನ್ಮಾನ್ಯ ಧರ್ಮಸಿಂಗ್‌ರವರಿಗೆ ನಾನು ಉತ್ತರವಾಗಿ ತಿಳಿಸತಕ್ಕ ವಿಚಾರ ಏನೆಂದರೆ, ಕರ್ನಾಟಕ ನಗರ ನೀರ ಸರಬರಾಜು ಮಂಡಲಿ ಎಷ್ಟು ಪ್ರಯತ್ನ ಮಾಡಿದರೂ ಕೂಡ ಜನರ ನಿರೀಕ್ಷೆಯ ಪ್ರಕಾರ ಅವರು ಬಯಸಿದ ರೀತಿಯಲ್ಲಿ ಹಣದ ಅಭಾವದ ಕಾರಣಕ್ಕೋಸ್ಕರ ಕೆಲಸ ಮಾಡುವುದಕ್ಕೆ ಆಗಲಿಲ್ಲ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದಾದ ಮೇಲೆ, ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಒಂದು ಸಣ್ಣ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರವನ್ನು ತಾವು ಪ್ರಸ್ತಾಪ ಮಾಡುತ್ತೀರಿ ಎಂದು ತಿಳಿದು ಇದರ ಬಗ್ಗೆ ಒಂದು ನೋಟನ್ನು ತಯಾರು ಮಾಡಿದ್ದೇನೆ. ೧೯೮೧ ರಿಂದ ೧೯೯೧ರ ವರೆಗೆ ೧೦ ವರ್ಷಗಳ ಅವಧಿಯಲ್ಲಿ ಮಾಡಬೇಕು ಎನ್ನುವುದು ನಮ್ಮ ಗುರಿ ಇತ್ತು. ಆದರೆ ಇದರಲ್ಲಿ ಕೇಂದ್ರ ಸರ್ಕಾರದವರು ಗುರಿಗಳನ್ನು ಪೂರ್ತಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಕಡಿಮೆ ಮಾಡಿದ್ದಾರೆ. ಆ ಗುರಿಗಳ ಪ್ರಕಾರ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡಂತೆ ಕುಡಿಯುವ ನೀರಿನ ಪ್ರಮಾಣ ಇದೆ.

> "೧೯೮೫ ಅಕ್ಟೋಬರ್‌ನಲ್ಲಿ ಮಧ್ಯ ಕಾಲೀನ ಪ್ರಗತಿಯನ್ನು ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆ ವೀಕ್ಷಿಸಿದಾಗ, ಹಣದ ಕೊರತೆಯಿಂದಾಗಿ ನಿಗದಿಪಡಿಸಲಾದ ಗುರಿಯನ್ನು ಸಾಧಿಸುವುದು, ಸಾಧ್ಯವಿಲ್ಲವೆಂದು ಕಂಡುಬಂತು. ಅದರಿಂದಾಗಿ ಈ ಕೆಳಗಿನಂತೆ ಗುರಿಯನ್ನು ಮಾರ್ಪಡಿಸಲಾಯಿತು."

ನೀರು ಪೂರೈಕೆ ಬಗ್ಗೆ ಶೇಕಡಾ ೮೫ರಷ್ಟು ಜನಸಂಖ್ಯೆಗೆ ನೀರು ಒದಗಿಸುವುದು. ನೈರ್ಮಲೀಕರಣದಲ್ಲಿ ಶೇ. ೫೦ ರಷ್ಟು ಜನಸಂಖ್ಯೆಗೆ ಒಳಚರಂಡಿ ವ್ಯವಸ್ಥೆ ಒದಗಿಸುವುದು ಎಂಬುದು ಉದ್ದೇಶವಾಗಿದೆ. ೧೯೮೧ರಲ್ಲಿ ಈ ಮೊದಲೇ ಅಂದಾಜಿಸಲಾದ ಮೊತ್ತಕ್ಕೆ ೧೯೮೫-೮೬ರ ವರೆಗಿನ ಬೆಲೆಗಳ ಏರಿಕೆಯನ್ನೂ ಗಮನದಲ್ಲಿಟ್ಟುಕೊಂಡರೆ, ಮಧ್ಯಕಾಲೀನ ಮಾರ್ಪಾಟನ್ನು ಮಾಡಿ ಗುರಿಯನ್ನು ಸಾಧಿಸಲೂ ಸಹ ೩೪೦ ಕೋಟಿ ರೂಪಾಯಿಗಳು ಬೇಕೆಂದು ಅಂದಾಜಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಪ್ರಮಾಣ ಈ ಕೆಳಗಿನಂತಿದೆ. ೩೬ ನಗರಗಳಲ್ಲಿ ತಲಾದಿನಂಪ್ರತಿ ಶೇ. ೧೦೦ ಲೀಟರ್‌ಗೂ ಅಧಿಕ. ೬೩ ನಗರಗಳಲ್ಲಿ ತಲಾದಿನಂಪ್ರತಿ ೭೦ ರಿಂದ ೧೦೦

ಲೀಟರ್ ಬೆಳಗಾಂ ದಂಡು ಪ್ರದೇಶದಲ್ಲಿ ತಲಾದಿನಂಪ್ರತಿ ೭೦ ರಿಂದ ೧೦೦ ಲೀಟರ್ ೧೩೩ ನಗರಗಳಲ್ಲಿ ತಲಾದಿನಂಪ್ರತಿ ೭೦ ಲೀಟರ್‌ಗೂ ಕಡಿಮೆ ೯ ಅನುಸೂಚಿತ ಪ್ರದೇಶಗಳು, ಸ್ಯಾನಿಟರಿ ಬೋರ್ಡ್ ಮತ್ತು ವಿಶೇಷ ಪ್ರದೇಶಗಳಲ್ಲಿ ತಲಾದಿನಂಪ್ರತಿ ೭೦ ಲೀಟರ್‌ಗೂ ಕಡಿಮೆ. ಅಂತರ್ ರಾಷ್ಟ್ರೀಯ ನೀರು ಸರಬರಾಜು ಮತ್ತು ನೈರ್ಮಲ್ಯ ದಶಕದಲ್ಲಿ ಮಧ್ಯ ಕಾಲೀನ ಗುರಿಯನ್ನು ಸಾಧಿಸಲು ಬೇಕಾದ ಅಪಾರ ಹಣವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಮಟ್ಟವನ್ನು ತಲಾದಿನಂಪ್ರತಿ ೭೦ ಲೀಟರ್ ಕನಿಷ್ಟ ಎಲ್ಲಾ ಪಟ್ಟಣಗಳಲ್ಲೂ ತಲುಪುವ ಗುರಿಯನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿಕೊಳ್ಳಲಾಗಿದೆ. ಇದಕ್ಕೆ ೧೯೮೬-೮೭ರ ದರ ಪಟ್ಟಿಯ ಪ್ರಕಾರ ೧೦೮ ಕೋಟಿ ರೂಪಾಯಿ ಬೇಕೆಂದು ಅಂದಾಜಿಸಲಾಗಿದೆ ಆದರೆ, ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಉಳಿದ ೩ ವರ್ಷಗಳಲ್ಲಿ ೨೩.೭೫ ಕೋಟಿ ರೂಪಾಯಿಗಳು ಮಾತ್ರ ದೊರಕುವ ಸಂಭವ ಇದೆ. ಈಗ ರಾಜ್ಯದಲ್ಲಿ ೨೪೨ ಪಟ್ಟಣಗಳ ಪೈಕಿ ೨೫೯ ಪಟ್ಟಣಗಳಲ್ಲಿ ಕೊಳವೆಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ಪಟ್ಟಣಗಳಲ್ಲಿ ಅಂದರೆ ತಕ್ಕಲಕೋಟೆ ಒಂದು ಇನ್ನೊಂದು ಬೈಂದೂರು ಮತ್ತು ಸಾಲಿಗ್ರಾಮ ಪಟ್ಟಣಗಳಲ್ಲಿ ಕೆಲಸವನ್ನು ಇಷ್ಟರಲ್ಲೇ ಪ್ರಾರಂಭಿಸಲಾಗುವುದು. ಈಗ ಶೇ ೯೯.೩೨ ಜನಸಂಖ್ಯೆಗೆ ಕೊಳವೆಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ನಗರ ನೈರ್ಮಲ್ಯ ಮತ್ತು ಒಳಚರಂಡಿ ವ್ಯವಸ್ಥೆ ವಿಚಾರದಲ್ಲಿ ಹೇಳುವುದಾದರೆ ೧೯೮೩-೮೪, ೧೯೮೪-೮೫ ರಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಂತು ತದನಂತರ ಹಣ ಬಂದಿಲ್ಲ. ಆದರೂ ಆ ಒಂದು ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಅದರ ಲೆಕ್ಕವನ್ನು ಕೊಟ್ಟು ಬಿಡುತ್ತೇನೆ. ಇನ್ನು ಆರ್ಥಿಕವಾಗಿ ಹಿಂದುಳಿದವರ ಮನೆಗಳ ವಿಚಾರದಲ್ಲಿ ಹೇಳುವುದಾದರೆ, ೧೯೮೫-೮೬ರಲ್ಲಿ ನಾವು ೨೫೦೦ ಮನೆಗಳನ್ನು ಕಟ್ಟಬೇಕೆಂದು ಗುರಿ ಹಾಕಿಕೊಂಡಿದ್ದೆವು. ಸ್ಟೇಟ್ ಗ್ರಾಂಟ್ ೭೫,೦೦೦ ರೂ.ಗಳು ಅಚೀವ್‌ಮೆಂಟ್ ಮಾಡಿದ್ದು ೩೦೮ ಮನೆಗಳು. ೮೬-೮೭ಕ್ಕೆ ೬೦೦ ಮನೆಗಳನ್ನು ಕಟ್ಟಿಸಬೇಕೆಂದು ಗುರಿ ಹಾಕಿಕೊಳ್ಳಲಾಯಿತು ಆದರೆ ೩೦೦ ಆಗಿದೆ. ೪೦೦ ಮನೆಗಳು ಕೊನೆ ಹಂತದಲ್ಲಿ ಇವೆ ಎಂಬುದು ನನ್ನ ವರದಿಯಲ್ಲಿ ಸಣ್ಣದಾಗಿ ಇದೆ. ದಯವಿಟ್ಟು ತಾವು ಅದನ್ನು ಗಮನಿಸಬೇಕೆಂದು ಹೇಳುತ್ತೇನೆ. ನಾವು ೬೬,೦೦೦ ಮನೆಗಳನ್ನು ಕಟ್ಟಬೇಕೆಂದು ಗುರಿ ಹಾಕಿಕೊಂಡಿದ್ದು, ಆ ಪೈಕಿ ೩೮೭೧೫ ಮನೆಗಳು ಮುಗಿದಿವೆ. ಬಾಕಿ ಇರತಕ್ಕ ಮನೆಗಳನ್ನು ಈ ತಿಂಗಳ ಕೊನೆಯಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಲಾಗುವುದು,

ಸನ್ಮಾನ್ಯ ಅಧ್ಯಕ್ಷರೇ, ನಗರ ಸರಬರಾಜು ಬಗ್ಗೆ ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಎತ್ತಿದಂಥ ವಿಷಯಗಳಿಗೆ ಅಂಕಿಅಂಶಗಳಿಂದ ಕೂಡಿದ ಉತ್ತರವನ್ನು ಹೇಳಿದ್ದೇನೆ. ಇನ್ನು ನಗರಾಭಿವೃದ್ಧಿ ಬಗ್ಗೆ ಮೂಲಭೂತವಾಗಿ ಕೆಲವು ಮಾತುಗಳನ್ನು ಪ್ರಾರಂಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಸದಸ್ಯರುಗಳು ಹೇಳಿದಹಾಗೆ, ಈಗ ನಗರ ಪ್ರದೇಶಗಳಲ್ಲಿ ಶೇಕಡವಾರು ಜನಸಂಖ್ಯೆ ೩೦ರಷ್ಟು ಇದೆ. ಈ ಸಂಖ್ಯೆ ಪ್ರತಿವರ್ಷ ಹೆಚ್ಚುತ್ತರಷ್ಟು ಹೆಚ್ಚುವಂತಹ ಚಿನ್ಹೆ ಇದೆಯೇ ಹೊರತು ಕಡಿಮೆಯಾಗ ತಕ್ಕಂಥಾದ್ದು ಇಲ್ಲ. ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಅನೇಕ ಕಾರಣಗಳಿಗೋಸ್ಕರ ಜನರು ಬರತಕ್ಕ ಚಿತ್ರವನ್ನು ನಾವು ಕಾಣುತ್ತಿದ್ದೇವೆ. ನಮ್ಮ ರಾಜ್ಯದ ಗ್ರಾಮೀಣ ಪ್ರದೇಶಗಳಿಂದ ಬೆಂಗಳೂರು ನಗರ ಪ್ರದೇಶಕ್ಕೆ ಬರತಕ್ಕಂಥದ್ದು ಒಂದು ಚಿತ್ರ. ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬರತಕ್ಕಂಥ ಜನರ ಜವಾಬ್ದಾರಿಯನ್ನು ಯಾರು ಹೊರಬೇಕು? ಇದಕ್ಕೆ ತಗಲತಕ್ಕ ಹಣವನ್ನು ಕೇಂದ್ರ ಸರ್ಕಾರ ಕೊಡಬೇಕೆ ರಾಜ್ಯಸರ್ಕಾರ ಕೊಡಬೇಕೆ ಎಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಇವತ್ತು ಬಡವರಿಗೆ ಸಹಾಯ ಮಾಡಬೇಕು ; ಪಟ್ಟಣದಲ್ಲಿರತಕ್ಕ ಜನಗಳಿಗೆ ನೀರು ಕೊಡಬೇಕು ಹಾಗೂ ಇನ್ನಿತರೇ ಸೌಲಭ್ಯ ಕೊಡಬೇಕೆಂದು ನಾವೆಲ್ಲರೂ ಭಾಷಣ ಮಾಡುತ್ತೇವೆ. ಆಡಳಿತ ನಡೆಸತಕ್ಕ ಸರ್ಕಾರ ಏನು ಮಾಡಬೇಕು ? ಪಕ್ಕದ ಯಾವುದೋ ಒಂದು ರಾಜ್ಯದಿಂದ ಕಳೆದ ೧೦ ವರ್ಷಗಳಲ್ಲಿ ೧೨ ಲಕ್ಷ ಜನ ಬೆಂಗಳೂರಿಗೆ ಬಂದಿದ್ದಾರೆ, ರಾಜ್ಯಸರ್ಕಾರದ ಜವಾಬ್ದಾರಿ ಏನು ? ಈ ಬಗ್ಗೆ ರಾಜ್ಯ ಸರ್ಕಾರ ಏನು ಮಾಡಲಿಕ್ಕಾಗುತ್ತದೆಂಬುದನ್ನು ತಾವುಗಳೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

೪-೩೦ ಪಿ.ಎಂ.

೧೯೫೨ ನೇ ಇಸವಿಯಿಂದ ಇಲ್ಲಿಯುವರೆಗೆ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ನಗರ ಬೆಳವಣಿಗೆಯ ಬಗ್ಗೆ, ನಗರ ಸಮಸ್ಯೆಗಳ ಬಗ್ಗೆ ಕೇಂದ್ರಸರ್ಕಾರದ ಒಂದು ಯೋಜನೆಯಾಗಲಿ, ರಾಜ್ಯ ಸರ್ಕಾರದ ಒಂದು ಯೋಜನೆಯಾಗಲಿ ಸಿದ್ಧವಾಗಿಲ್ಲ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೋಸ್ಕರ ಯಾವುದೇ ರೀತಿಯಾದ ಪ್ಲಾನ್ ಯೋಜನಾಬದ್ಧವಾದಂಥ ಶೀರ್ಷಿಕೆಯ ಹೆಸರಿನಲ್ಲಿ ಹಣ ಸಂದಾಯವಾಗುವ ಬಗ್ಗೆ, ನಗರದ ಬೆಳವಣಿಗೆಯ ಬಗ್ಗೆ, ನಗರದ ಜನರಿಗೆ ಸಾಮಾನ್ಯವಾದಂಥ ಕನಿಷ್ಟ ಪೌರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕೇಂದ್ರ ಸರ್ಕಾರದವರಾಗಲಿ, ರಾಜ್ಯಸರ್ಕಾರವಾಗಲಿ ಯೋಚನೆ ಮಾಡಿಲ್ಲ. ಇಲ್ಲೋ, ಅಲ್ಲೋ, ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ನಡೆದಿದೆ, ಆದರೆ ಅಮೂಲಾಗ್ರವಾಗಿ ಶಾಶ್ವತವಾದ ರೀತಿಯಲ್ಲಿ ನಗರ ಪ್ರದೇಶದ ಜನರಿಗೆ ಯೋಜನಾಬದ್ಧವಾದ ರೀತಿಯಲ್ಲಿ ಈ ಕೆಲಸ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ನಡೆದಿಲ್ಲ. ಇತ್ತೀಚೆಗೆ ಕೇಂದ್ರಸರ್ಕಾರದವರು ಕೊರಿಯಾ ಅವರ ನೇತೃತ್ವದಲ್ಲಿ ಈ ದೇಶಕ್ಕೆ ಸಂಬಂಧಪಟ್ಟಂತೆ, ನಗರಪ್ರದೇಶಗಳಿಗೆ ಸಂಬಂಧಪಟ್ಟ ವರದಿಯನ್ನು ಕೊಡಬೇಕೆಂದು ಕೇಳಿದರು. ಅವರು ಇಂಟರಿಮ್ ರಿಪೋರ್ಟ್ ಕೊಟ್ಟಿದ್ದಾರೆ. ನಮ್ಮ ರಾಜ್ಯಸರ್ಕಾರದವರು ಒಂದು ಯೋಜನಾ ವರದಿಯನ್ನು ಕೊಡಿ ಎಂದು ಕೇಳಿದ್ದೇವೆ. ಅವರು ಕೊಟ್ಟಿದ್ದಾರೆ. ಇನ್ನು ಮೇಲೆ ಅದರ ಬಗ್ಗೆ, ಕ್ರಮ ಕೈಗೊಳ್ಳಬೇಕಾಗಿದೆ ನಗರಾಭಿವೃದ್ಧಿ ಮಂತ್ರಿಗಳ ಎರಡು ಸಭೆಗಳಿಗೆ ಹೋಗಿದ್ದೇನೆ. ಆ ಎರಡೂ ಸಭೆಗಳಲ್ಲೂ ಮುಖ್ಯ ಸಲಹೆಗಳನ್ನು ಕೊಟ್ಟಿದ್ದೇನೆ. ಆ ಸಭೆಯಲ್ಲಿ ನನ್ನ ಸಲಹೆಗಳನ್ನು ಒಪ್ಪಿಕೊಂಡಿದ್ದಾರೆ. ಯು.ಡಿ.ಬಿ.ಐ. ಜಾರಿಗೆ ತರಬೇಕು, ನಗರ ಪ್ರದೇಶಗಳ ಅಭಿವೃದ್ಧಿಗೋಸ್ಕರ ಹಣ ಸಿಕ್ಕುವುದಕ್ಕೆ ಅದರಿಂದ ಅನುಕೂಲವಾಗುತ್ತದೆ ಎಂದು ಸಲಹೆ ಮಾಡಿದ್ದೆ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಇನ್ನು ಮುಂದೆ ವಿತ್ತೀಯ ಆಯೋಗಕ್ಕೆ ನಗರ ಪ್ರದೇಶಗಳಿಗೆ ಹಣ ಒದಗಿಸಿಕೊಡತಕ್ಕ ರೀತಿಯಲ್ಲಿ ಒಂದು ವಿಶೇಷವಾದ ಟರ್ಮ್ಸ್ ಆಫ್ ರೆಫರೆನ್ಸ್ ಹಾಕಿ ಹಣ ಕೊಡತಕ್ಕ ವ್ಯವಸ್ಥೆಯನ್ನು ನಮ್ಮ ವಿತ್ತೀಯ ವರದಿಯಲ್ಲಿ ಕೊಡಬೇಕು. ಫೈನಾನ್ಸ್ ಕಮಿಷನ್ ರಿಪೋರ್ಟ್‌ನಲ್ಲಿ ಇವರ ಬಗ್ಗೆ ವರದಿ ಬರಬೇಕೆಂಬ ಉದ್ದೇಶದಿಂದ ಈ ಮನವಿಯನ್ನು ಕೇಂದ್ರಸರ್ಕಾರದ ಮುಂದೆ ಇಟ್ಟು ಹೇಳಿದ್ದೇನೆ, ಅದನ್ನು ಆ ಸಭೆಯು ಕೂಡ ಒಪ್ಪಿಕೊಂಡಿದೆ. ಕೇಂದ್ರಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ಇವೊತ್ತು ನಗರ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆಯುತ್ತಿವೆ. ಎಲ್ಲರ ಮನಸ್ಸು ಕೂಡ ಈ ಕಡೆ ಬೀಳುತ್ತಿದೆ ಒಂದು ಸಂತೋಷದ, ಆಶ್ಚರ್ಯದ ವಿಚಾರ, ಏನೆಂದರೆ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಎಲ್ಲ ಮಾನ್ಯ ಸದಸ್ಯರೂ ಬೆಂಗಳೂರು ನಗರ ಪ್ರದೇಶದ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಹಾಕುತ್ತಾರೆಯೇ ಹೊರತು ಅವರ ಊರುಗಳಿಗೆ ಸಂಬಂಧ ಪಟ್ಟಂತೆ ಪ್ರಶ್ನೆಗಳನ್ನು ಹಾಕುವುದಿಲ್ಲ. ಇದರ ಅರ್ಥ ಏನು ಎಂದರೆ ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ನೋಡಿಕೊಳ್ಳುವುದಕ್ಕೆ ಒಂದು ಪರಿಪೂರ್ಣವಾದ ಚೌಕಟ್ಟಿನಲ್ಲಿ ಒಂದು ವ್ಯವಸ್ಥೆಯಾಗಿದೆ. ಅದು ನಗರ ಪ್ರದೇಶದವರಿಗೆ ಇನ್ನೂ ಆಗಿಲ್ಲ ಎಂದು ಅರ್ಥವಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಈ ಸಮಸ್ಯೆಗಳನ್ನು ಕುರಿತು ಯೋಚನೆ ಮಾಡುವಾಗ ಸೀಮಾ ರೇಖೆಯ ಚೌಕಟ್ಟಿನೊಳಗೆ ಇವುಗಳನ್ನು ನೋಡಬೇಕೇ ಹೊರತು ಬೇರೆ ಬೇರೆಯಾಗಿ ನೋಡಿ ಇದು ಜಾಸ್ತಿಯಾಗಿದೆ, ಇದು ಕಡಿಮೆಯಾಗಿದೆ, ಎಂದು ಬೃಹದಾಕಾರವಾದ ಚಿತ್ರವನ್ನು ತೋರಿಸಿ ಟೀಕೆ ಮಾಡತಕ್ಕಂತಾದ್ದು ವಸ್ತು ಪರಿಸ್ಥಿತಿಗೆ ವಿಭಿನ್ನವಾಗಿದೆ. ಇದು ಬಹಳ ದೂರವಾದ ಟೀಕೆಯಾಗುತ್ತದೆ. ಆ ಟೀಕೆ ಬೇಡ ಎಂದು ಅವರಲ್ಲಿ ನಾನು ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ಮಾನ್ಯ ಸದಸ್ಯರಾದ ಧರ್ಮಸಿಂಗ್ ಅವರು ಎತ್ತಿರತಕ್ಕ ವಿಷಯಗಳ ಬಗ್ಗೆ ನಾನು ವಿವರಗಳಿಗೆ ಹೋಗದೆ ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೌರಕಾರ್ಮಿಕರಿಗೆ ಸಂಬಳ ಸಿಕ್ಕುತ್ತಿಲ್ಲ. ೧೭೧ ಮುನಿಸಿಪಾಲಿಟಿಗಳು ಇವೆ. ಸಿಟಿ ಮುನಿಸಿಪಾಲಿಟಿಗಳು,

(ಅಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಟೌನ್ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಸೇರಿ ಆದರೆ ಇದರಲ್ಲಿ ಸ್ವಲ್ಪಮಟ್ಟಿಗೆ ೩೦-೩೫ ಮುನಿಸಿಪಾಲಿಟಿಗಳನ್ನು ಬಿಟ್ಟರೆ ಮಿಕ್ಕ ಯಾರಿಗೂ ಸಂಬಳ ಕೊಡಲಿಕ್ಕೆ ಶಕ್ತಿ ಇಲ್ಲದೇ ಇಲ್ಲ. ನನ್ನ ಹತ್ತಿರ ಲೆಕ್ಕ ಇದೆ. ಅವರ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ವಿಷಯಕ್ಕೆ ಅನಂತರ ಬರುತ್ತೇನೆ ನಗರ ಪ್ರದೇಶಗಳಲ್ಲಿ ನೀವು ಹಾಕತಕ್ಕ ಮೋಟಾರು ವಾಹನಗಳ ತೆರಿಗೆಯಿಂದ ೧೭೫ ಕೋಟಿ ರೂ. ಸರ್ಕಾರಕ್ಕೆ ಬರುತ್ತದೆ, ಅದನ್ನು ಆ ಮುನಿಸಿಪಾಲಿಟಿಗಳಿಗೆ

ಏತಕ್ಕೆ ಕೊಡಬಾರದೆಂದು ಹೇಳಿದರು. ಸ್ವಾಮಿ, ಅವರೂ ವಕೀಲರು, ನಾನೂ ವಕೀಲ. ನಮ್ಮ ಸ್ನೇಹಿತರೊಬ್ಬರು ಕೆ.ಜಿ.ಎಫ್.ನಿಂದ ಬಂದಿರುವವರು ಹೇಳುತ್ತಾರೆ, ಚಿನ್ನ ಕೆ.ಜಿ.ಎಫ್.ನಲ್ಲಿ ಸಿಕ್ಕುತ್ತದೆ, ಆ ಚಿನ್ನದ ಬೆಲೆ ಏನಿದೆ ಆ ಹಣವನ್ನೆಲ್ಲಾ ಕೆ.ಜಿ.ಎಫ್.ನಲ್ಲೇ ಖರ್ಚುಮಾಡಿ ಅಂತ. ನಮ್ಮ ಮಾನ್ಯ ಬೈರೇಗೌಡರು ಇದಕ್ಕೆ ಬಹಳ ಸಂತೋಷಪಡುತ್ತಾರೆಂದು ಅಂದುಕೊಂಡಿದ್ದೇನೆ. ಆದರೆ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅವರು ಆಗಾಗ್ಗೆ ಪ್ಲೀಡ್ ಮಾಡುತ್ತಿರುತ್ತಾರೆ. ನಮ್ಮ ಕೋಲಾರದಲ್ಲಿ ಯಾವುದೇ ನದಿ ಇಲ್ಲ, ಅದು ಜಲಾನಯನ ಪ್ರದೇಶ ಅಲ್ಲ, ಅದು ಕೈಗಾರಿಕಾ ಪ್ರದೇಶವಲ್ಲ, ಭೂಮಿ ಒಳ್ಳೆಯದಿದೆ, ಆದರೆ ನೀರಿಲ್ಲ. ಯಾವಾಗಲೂ ಬರಗಾಲ ಇದ್ದೇ ಇರುತ್ತದೆ. ಬರಗಾಲವನ್ನು ಬಿಟ್ಟರೆ ಬೇರೆ ಕಾಲವನ್ನೇ ನಮ್ಮ ಭಾಗದ ಜನರು ನೋಡಿಲ್ಲ ಎಂದು ವಾದ ಮಾಡುತ್ತಾರೆ. ಸ್ವಾಮಿ, ನಾನೂ ಕೂಡ ಈ ಬವಣೆಯ ಹಿನ್ನೆಲೆಯಲ್ಲೇ ಹುಟ್ಟಿ ಬಂದವನು. ನನಗೂ ಕೂಡ ಪರಿಸ್ಥಿತಿ ಅರ್ಥವಾಗುತ್ತದೆ. ಕೇವಲ ಯಾವುದೋ ಒಂದು ಭಾಗವನ್ನಾಗಲಿ, ಅಥವಾ ಒಂದು ಇಲಾಖೆಯನ್ನಾಗಲಿ ಗಮನಕ್ಕೆ ತೆಗೆದುಕೊಂಡರೆ ಸಾಲದು. ಬೇರೆ ಬೇರೆ ಇಲಾಖೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಲೋಕಲ್ ಫೈನಾನ್ಸ್ ಕಮಿಷನ್‌ನವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಸ್ವಲ್ಪಮಟ್ಟಿಗೆ ತಡವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರೆ, ಮಾನ್ಯ ಸದಸ್ಯರು ಮಾಡಿರತಕ್ಕ ಟೀಕೆ ಟಿಪ್ಪಣಿಗಳಿಗೆ ಪೂರ್ಣವಾದ ಉತ್ತರವನ್ನು ಅದು ಕೊಟ್ಟಂತೆ ಆಗುತ್ತದೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಮಾತನಾಡುತ್ತಾ, ಪೌರಾಡಳಿತ ನಿರ್ದೇಶನಾಲಯ ಅಸ್ತಿತ್ವಕ್ಕೆ ಬಂದಿದೆ, ಆದರೆ ಅದಕ್ಕೆ ಅಧಿಕಾರವನ್ನು ಕೊಟ್ಟಿಲ್ಲವೆಂದು ಹೇಳಿದರು. ನಾನು ಈಗಲೇ ಬೇಕಾದರೂ ಅದಕ್ಕೆ ಅಧಿಕಾರವನ್ನು ಕೊಟ್ಟುಬಿಡುತ್ತೇನೆ. ಆದರೆ ಆ ವಿವರ ಅವರಿಗೆ ಬೇಕಾಗಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಅವರಿಗೆ ಏನೇನು ಕಾನೂನು ಕೊಡಬೇಕೋ ಅದನ್ನು ಮಾಡಿಕೊಟ್ಟಿದ್ದೇವೆ. ಇದರ ನಂತರ ೨೨ವರ್ಷಗಳ ಹಿಂದೆ ಬಂದಂಥ ಕಾಯಿದೆಯ ಪ್ರಕಾರ ಟೌನ್ ಮುನಿಸಿಪಾಲಿಟೀಸ್ ಆ್ಯಕ್ಟ್, ಸಿಟಿ ಮುನಿಸಿಪಲ್ ಆ್ಯಕ್ಟ್, ಕಾರ್ಪೊರೇಷನ್ ಆ್ಯಕ್ಟ್ ಅವಧಿಯಲ್ಲಿ ಹೆಚ್ಚಿನ ಹಣಕಾಸಿನ ಅಧಿಕಾರವನ್ನು ಆಯಾಯ ಮುನಿಸಿಪಾಲಿಟಿಗಳಿಗೆ ಕೊಟ್ಟಿದ್ದೇವೆಂದು ಈ ಸಂದರ್ಭದಲ್ಲಿ ತಮಗೆ ನೆನಪು ಮಾಡಿಕೊಡುತ್ತೇನೆ.

ಇನ್ನು ಶೇಕಡಾ ೧೮ ಪರ್ಸೆಂಟ್ ಹಣವನ್ನು ಎಸ್.ಸಿ. ಎಸ್. ಟಿ. ಯವರಿಗೋಸ್ಕರ ಖರ್ಚು ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾನು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಅವರು ಈ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ೧೯೫೨ನೇ ಇಸವಿಯಿಂದ ಇದುವರೆಗೂ ರಾಜ್ಯದಲ್ಲಿ ಮುನಿಪಾಲಿಟಿಗಳವರು ಖರ್ಚು ಮಾಡಬೇಕಾದಂಥ ೧೮ ಪರ್ಸೆಂಟ್ ಹಣದ ಬಗ್ಗೆ ಲೆಕ್ಕವನ್ನು ಇದುವರೆಗೂ ಇಟ್ಟಿಲ್ಲ. ಕೇವಲ ಬಾಯಲ್ಲಿ ಮಾತ್ರ ಹೇಳಿದ್ದಾರೆ, ಅಷ್ಟೆ. ಯಾವ ಸ್ಥಳೀಯ ಸಂಸ್ಥೆಗಳವರೂ ಕೂಡ ಇದರ ಬಗ್ಗೆ ನಿಖರವಾದ ಲೆಕ್ಕಪತ್ರವನ್ನು ಇಟ್ಟಿಲ್ಲ. ಇದಾದನಂತರ ೧೦–೧೫ ವರ್ಷಗಳ ಕಾಲ ಈ ಮುನಿಸಿಪಾಲಿಟಿಗಳು ಆಡಳಿತಾಧಿಕಾರಿಗಳ ಹತೋಟಿಯಲ್ಲಿದ್ದುವು. ಆಗಲೂ ಕೂಡ ಯಾರು ಈ ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡಿಲ್ಲ. ಸ್ಥಳೀಯ ಸಂಸ್ಥೆಗಳು ತಮ್ಮ ಒಟ್ಟು ಆದಾಯದಲ್ಲಿ ಈ ೧೮ ಪರ್ಸೆಂಟ್ ಹಣವನ್ನು ಯಾವರೀತಿ ಲೆಕ್ಕಾಚಾರ ಹಾಕಬೇಕೆಂಬ ಬಗ್ಗೆ ಸರ್ಕಾರದವರು ೧೯೭೭ನೇ ಇಸವಿಯಲ್ಲಿ ಒಂದು ಸರ್ಕಾರೀ ಆದೇಶವನ್ನು ಹೊರಡಿಸಿತು. ಅದರ ಪ್ರಕಾರ ಲೆಕ್ಕ ಹಾಕಿ ೪ ಐಟಂಗಳನ್ನು ಬಿಟ್ಟು ಉಳಿದ ಹಣದಲ್ಲಿ ಶೇಕಡ ೧೮ ರಷ್ಟು ಖರ್ಚು ಮಾಡಬೇಕೆಂದು ತಿಳಿಸಿದರು. ಕೆಲವರು ಅದನ್ನು ಹೇಳದೆ ಸರ್ಕಾರದವರು ಕೊಟ್ಟಂಥ ಹಣವನ್ನು ಸೇರಿಸಿಕೊಂಡು ಒಟ್ಟು ಆದಾಯ ಎಂದು ತೆಗೆದುಕೊಂಡು ಲಕ್ಷಗಟ್ಟಲೆ ಹಣವನ್ನು ಎಸ್, ಸಿ. ಎಸ್.ಟಿ.ಗೆ ಖರ್ಚು ಮಾಡಬೇಕೆಂದು ಲೆಕ್ಕ ತೋರಿಸುತ್ತಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಇದೇ ವಿಷಯದ ಬಗ್ಗೆ ಈ ರೀತಿ ಲೆಕ್ಕ ಹಾಕಿ ಹಣವನ್ನು ಖರ್ಚು ಮಾಡಬೇಕೆಂದು ಹಿಂದೆ ಎಲ್ಲ ಮುನಿಸಿಪಾಲಿಟಿಗಳಿಗೂ ತಿಳಿಸಲು ಒಂದು ಆದೇಶವನ್ನು ಕಳುಹಿಸಿದ್ದು ನನಗೆ ನೆನಪಿದೆ. ಅದೇ ರೀತಿಯಲ್ಲಿ ಅವರು ಹಣವನ್ನು ಖರ್ಚು ಮಾಡಿದ್ದಾರೆಯೋ, ಇಲ್ಲವೋ, ಎಂಬುದನ್ನು ನೋಡಿದ್ದೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹಿಂದೆ ೨ ವರ್ಷಕಾಲ ನಗರಾಭಿವೃದ್ಧಿ ಸಚಿವನಾಗಿದ್ದ ಸಂದರ್ಭದಲ್ಲಿ ಪ್ರತಿಯೊಂದು ಮುನಿಸಿಪಾಲಿಟಿಯ ಅಧ್ಯಕ್ಷರು, ಮತ್ತು ಚೀಫ್ ಆಫೀಸರ್‌ಗಳನ್ನು ವರ್ಷಕ್ಕೆ ೪ ಸಾರಿಗಿಂತ ಕಡಿಮೆ ಇಲ್ಲದ ರೀತಿಯಲ್ಲಿ ಅವರನ್ನು ಮುಖತ: ಕರೆಸಿ ಛೀಮಾರಿ

ಮಾಡತಕ್ಕ ಕಡೆ ಛೀಮಾರಿ ಮಾಡಿ, ಹೊಗಳತಕ್ಕ ಕಡೆ ಹೊಗಳಿ, ಪ್ರೋತ್ಸಾಹ ಕೊಡತಕ್ಕ ಕಡೆ ಪ್ರೋತ್ಸಾಹ ಕೊಟ್ಟು ಅವರು ಸಾಕಷ್ಟು ಕೆಲಸ ಮಾಡುವುದಕ್ಕೆ ಸಹಾಯ ಮಾಡಲು ಪ್ರಯತ್ನ ಮಾಡಿದ್ದೇನೆ. ಆದರೆ ಮಾನ್ಯ ಸದಸ್ಯರು ಮಾತನಾಡುವಾಗ ನೀವು ಬೆಂಗಳೂರನ್ನೇ ಬಿಟ್ಟು ಹೊರಗಡೆ ಹೋಗಿಲ್ಲವೆಂದು ಹೇಳಿದರು. ತಾತ್ವಿಕವಾಗಿ ಮತ್ತು ಹೆಚ್ಚಿನ ರೀತಿಯಲ್ಲಿ ಕೆಲಸ ಆಗತಕ್ಕ ಬಗ್ಗೆ ನಾನು ಶಕ್ತಿಮೀರಿ ಶ್ರಮಿಸಿರುವಷ್ಟು ಹಿಂದೆ ಯಾರೂ, ಯಾವಾಗಲೂ ಮಾಡಿಲ್ಲ ಎಂಬುದಕ್ಕೆ ನಾನು ಅಂಕಿ ಅಂಶಗಳನ್ನು ಇವತ್ತು ಉದಾಹರಣೆಯಾಗಿ ಕೊಟ್ಟು ಹೇಳಿದ್ದೇನೆ. ಇದರ ಜೊತೆಗೆ ದುರದೃಷ್ಟವಶಾತ್ ೧೯೮೧ನೇ ಇಸವಿಯಲ್ಲಿ ಇನ್ನೊಂದು ಸರ್ಕ್ಯುಲರ್ ಹೊರಟಿದೆ, ಅದರಲ್ಲಿ ಕ್ಯಾಲ್ಕುಲೇಷನ್ ಮಾಡತಕ್ಕ ವಿಧಾನವನ್ನು ಕೊಟ್ಟಿದೆ. ಅಲ್ಲಿ ಸ್ವಲ್ಪ ಕನ್‌ಫ್ಯೂಷನ್ ಆಗಿದೆಯೆಂದು ನಾನು ಅಂದುಕೊಂಡಿದ್ದೇನೆ. ಅದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಕನ್‌ಫ್ಯೂಷನ್ ಹೇಗಾದರೂ ಇರಲಿ ಹಿಂದಿನ ೩ ವರ್ಷಗಳಲ್ಲಿ ನಿಮ್ಮ ಆದಾಯ ಎಷ್ಟಿತ್ತು ಅದನ್ನು ಲೆಕ್ಕ ಹಾಕಿಕೊಂಡು ೧೯೭೭ನೇ ಇಸವಿಯ ಸರ್ಕಾರೀ ಆದೇಶದ ಪ್ರಕಾರ ಈ ಹಣವನ್ನು ಖರ್ಚು ಮಾಡಬೇಕೆಂದು ಹೇಳಿದ್ದೇನೆ. ಹೀಗೆ ಮಾಡುವುದರಿಂದ ಸ್ವಲ್ಪಮಟ್ಟಿಗೆ ಸರಿದೂಗಬಹುದೆಂದು ಅಂದುಕೊಂಡಿದ್ದೇನೆ. ಆದರೆ ಇಷ್ಟರಿಂದಲೇ ನನಗೆ ಸಮಾಧಾನವಾಗಿದೆಯೆಂದು ನನಗನಿಸುತ್ತಿಲ್ಲ. ಆದ್ದರಿಂದ ಈಗ ಸಮಾಧಾನವಾಗಿದೆ ಎಂದು ಹೇಳುತ್ತಿಲ್ಲ. ಸಮಾಜದಲ್ಲಿ ಮುಖ್ಯವಾದ ಕರ್ತವ್ಯವೇನೆಂದರೆ ಸ್ಥಳೀಯ ಸಂಸ್ಥೆಗಳಲ್ಲಿ ಇರತಕ್ಕಂಥ ಹರಿಜನ–ಗಿರಿಜನರಿಗೆ ಕಾನೂನು ಬದ್ಧವಾಗಿ, ಸಂವಿಧಾನ ಬದ್ಧವಾಗಿ ಅವರಿಗೆ ದೊರಕಬೇಕಾದಂಥ ಮೀಸಲಾತಿ, ಅವರಿಗೆ ಇಟ್ಟಿರತಕ್ಕಂಥ ಹಣದ ಮೊತ್ತ ಖಾಯಂ ಆಗಿ, ಪ್ರತ್ಯೇಕವಾಗಿ ಖರ್ಚು ಮಾಡತಕ್ಕಂಥ ಜವಾಬ್ದಾರಿಯು ನಮ್ಮೆಲ್ಲರ ಮೇಲಿದೆ. ಅದು ನಮ್ಮ ಕರ್ತವ್ಯವಾಗಿದೆ. ಈ ಕರ್ತವ್ಯದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಅದನ್ನು ಸರಿಪಡಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲವಲ್ಲವೆಂದು ವಿಷಾದದಿಂದ ವ್ಯಕ್ತಪಡಿಸುತ್ತಾ ಅದನ್ನು ಸರಿಪಡಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ, ಈ ನಿರ್ದೇಶನಾಲಯವನ್ನು ಸ್ಥಾಪನೆ ಮಾಡಿದ ಮೇಲೆ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಪ್ರಮೋಷನ್ ಕೊಟ್ಟಿದ್ದೇನೆ. ಮೊಟ್ಟಮೊದಲನೆಯ ಸಲ ಖಾಯಂ ಆಗಿ ಇಲಾಖೆಯಲ್ಲಿ ಇರತಕ್ಕಂಥವರಿಗೆ ೧೦–೧೫ ವರ್ಷಗಳ ಕಾಲ ಕೆಲಸ ಮಾಡಿದ್ದರೂ ಪ್ರಮೋಷನ್ ಸಿಕ್ಕದೇ ಇದ್ದವರಿಗೆ ಪ್ರಮೋಷನ್ ಕೊಟ್ಟಿದ್ದೇನೆ. ಕ್ಲಾಸ್ ಒನ್ ಆಫೀಸರ್ ಮಾಡಿದ್ದೇನೆ. ಇದರ ಜೊತೆಗೆ ಬೇರೆ ಬೇರೆ ಇಲಾಖೆಗಳಿಂದ ಬಂದು ಹೆಗ್ಗಣಗಳಾಗಿ ಸಾಲಂಕೃತರಾಗಿರತಕ್ಕಂಥವರಿಗೆ ಸ್ವಲ್ಪ ಹಂತಹಂತವಾಗಿ ಹೊರಗಡೆ ಹಾಕುವುದಕ್ಕೂ ಪ್ರಯತ್ನ ಮಾಡಿದ್ದೇನೆ. ಪಟಬದ್ರ ಹಿತಾಸಕ್ತಿಗಳು ನನ್ನ ಮೇಲೆ ಪ್ರಭಾವ ತಂದು ಬೇರೆ ಬೇರೆ ಇಲಾಖೆಯವರು, ತಾವು ಅಲ್ಲೇ ಇರಬೇಕೆಂದು ಪ್ರಯತ್ನ ಮಾಡುತ್ತಿರತಕ್ಕಂಥದ್ದು ಸ್ವಲ್ಪ ಮಟ್ಟಿಗಾದರೂ ಫಲಕಾರಿಯಾಗಿಲ್ಲ. ಅವರುಗಳನ್ನು ಹೊರಗಡೆ ಹಾಕುತ್ತಿದ್ದೇವೆ. ಕೆಲವರು ನಮ್ಮವರು ಬರುತ್ತಾರೆ, ನಿಮ್ಮ ಪಕ್ಷದವರೂ ಬರುತ್ತಾರೆ ಬೇರೆಯವರು ಬರುತ್ತಾರೆ ಏನೋ ಇದು ಅದು ಸಾವಿರಾರು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನಾದರೂ ಸ್ವಲ್ಪ ಯೀಲ್ಡ್ ಆಗಿದ್ದೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಯಾರನ್ನು ಮೆಚ್ಚಿಸುವುದಕ್ಕೂ ಇಲ್ಲಿಲ್ಲ. ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಜವಾಬ್ದಾರಿಯನ್ನು ತಿಳಿದು ಇಲ್ಲಿ ಇದ್ದೇನೆ. ನಾನು ಯಾರಿಗೂ ಮೆಚ್ಚಿಸಬೇಕಾಗಿಲ್ಲ. ನಮ್ಮ ಅಪ್ಪ ನಮಗೆ ಓಟು ಕೊಟ್ಟಿದ್ದಾನಲ್ಲಾ. ನಮ್ಮ ಅಪ್ಪ ಹೊರಗಡೆ ಇದ್ದಾನಲ್ಲಾ. ಅವನಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇನೆ. ಅವನಿಗೆ ಸಹಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇನೆ. ರಾಜ್ಯದ ಜನತೆಗೆ ಸಹಾಯವಾಗಬೇಕು ಎಂದು ಕೆಲಸ ಮಾಡುತ್ತಿದ್ದೇನೆ. ಇದನ್ನು ನಾನು ಕಟ್ಟುನಿಟ್ಟಾಗಿ ಹೇಳುವಾಗ ನಾನು ಬಹಳ ಒರಟಾಗಿ ಉತ್ತರವನ್ನು ಕೊಡುತ್ತೇನೆಂದು ಹೇಳುತ್ತಾರೆ. ಸ್ವಾಮಿ, ನಾನು ದೇಶಾವರಿ ನಗೆಯನ್ನು ಬೀರುತ್ತಿಲ್ಲ. ಹೇಳುವುದು ಪುರಾಣ, ಹಾಕುವುದು ಗಾಣ ಎಂದು ಹೇಳುತ್ತಾರಲ್ಲಾ, ಆ ಒಂದು ಪರಿಪಾಠವನ್ನು ನಾನು ಬೆಳೆಸಿಕೊಂಡು ಬಂದಿಲ್ಲ. ನಾನು ಅದನ್ನು ಮಾಡಬೇಕಾದ್ದಿಲ್ಲ. ಒಳ್ಳೆಯ ೧೮ ವರ್ಷದ ನಿರಾಭರಣ ಸುಂದರಿಯಾಗಿ ಮಟ ಮಟ ಮಧ್ಯಾಹ್ನದಲ್ಲಿ ಅವರು ಮಾಡಬಾರದ್ದನ್ನು ಮಾಡುತ್ತೇನೆಂದು ಕನಸನ್ನು ಅವರ ತಲೆಗೆ ಹಚ್ಚಿ, ತಲೆ ಕೆಟ್ಟಿದನ್ನಾಗಿ ಮಾಡತಕ್ಕಂಥ ಚೈತನ್ಯ, ಶಕ್ತಿ ನನ್ನಲ್ಲಿಯೂ ಇದೆ.

ಆದರೆ ನಾನು ಅದನ್ನು ಮಾಡಬಾರದು ಎಂದು ಇದ್ದೇನೆ. ನೀವೆಲ್ಲರೂ ಗಾಂಧಿ ಟೋಪಿಯನ್ನು ಹಾಕಿಕೊಂಡು, ಖಾದಿ ಹಾಕಿಕೊಂಡು ಬಂದು "ಸತ್ಯಂ ವದ, ಧರ್ಮಂ ಚರ" ಎಂದು ಗಾಂಧಿ ಹೇಳಿದರು ಎಂದು ಯಾರೂ ಮಾಡುವುದಿಲ್ಲ. ನಾನು ಮಾಡುತ್ತೇನೆ. ಅದಕ್ಕೋಸ್ಕರವಾಗಿ ನನ್ನ ಮೇಲೆ ಟೀಕೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತೇನೆ.

"ನಿಂದಂತು ನೀತಿ ನಿಪುಣಾಃ ಯದಿ ವಾ ಸ್ತುವಂತು, ಅದ್ಯೇವ ವಾ ಮರಣಮಸ್ತು
ಯುಗಾಂತರೇವಾ, ಲಕ್ಷ್ಮೀ ಸಮಾವಿಶತ್ ಗಚ್ಛತು ವಾ ಯಥೇಷ್ಟಂ ನ್ಯಾಯಾತ್ ಪಥಃ
ಪ್ರವಿಚಲಂತಿ ಪದಂ ನ ಧೀರಾ?"

ಶ್ರೀ ಆರ್. ಎನ್. ನಾಯಕ್.—ನಿಮ್ಮ ಪಕ್ಷದಲ್ಲಿ ನಿಮ್ಮಂತೆಯೇ ಇರುತ್ತಾರೋ ಅಥವಾ ಬೇರೆ ರೀತಿ ಇದ್ದಾರೋ?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಎಲ್ಲಾ ನಾಯಕರ ತರಹ ಇದ್ದಾರೆ.

ಶ್ರೀ ಎ ಲಕ್ಷ್ಮೀಸಾಗರ್,—ನನಗೆ ಬಹಳ ಸಂತೋಷವೇನೆಂದರೆ, ನನಗೆ ಮಾನ್ಯ ನಾಯಕ್‌ರವರು ನನಗಿಂತಲೂ ಚೆನ್ನಾಗಿ ಕೆಲಸ ಮಾಡಬೇಕೆಂದು ನನ್ನ ಇಚ್ಛೆ ನನಗಿಂತಲೂ ಚೆನ್ನಾಗಿ ಕೆಲಸ ಮಾಡಿ, ನನ್ನನ್ನು ಮೀರಿಸತಕ್ಕಂಥ ರೀತಿಯಲ್ಲಿ ಸಾರ್ವಜನಿಕ ಜೀವನದಲ್ಲಿ ಇರಬೇಕು, ಇದು ನನ್ನ ಆಶೆ ಇದನ್ನು ನೋಡಿ ನಾನು ಸಂತೋಷ ಪಡಬೇಕು. "ಶಿಷ್ಯಾದಿಚ್ಛೇ ಪರಾಜಯಂ"

ಶ್ರೀ ಆರ್. ಎನ್. ನಾಯಕ್.—ನಾನು ಕೂಡ ಸ್ವಲ್ಪ ಪ್ರಯತ್ನ ಮಾಡುತ್ತಿದ್ದೇನೆ. ಆದರೆ ನಿಮ್ಮ ಮಟ್ಟಕ್ಕೆ ಅಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಂತೋಷ, ಸಂತೋಷ, ಬಹಳ ಸಂತೋಷ,

ಶ್ರೀ ಎಂ. ರಘುಪತಿ.—ಗಾಡ್‌ಬ್ಲೆಸ್ ಯು.

ಶ್ರೀ ಆರ್.ಎನ್. ನಾಯಕ್.—ಆಶೀರ್ವಾದ ಇರಲಿ, ಆದರೆ ನಿಮ್ಮ ಹಾಗೆ ಪ್ರಯಂತ ಮಾಡುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಇನ್ನು ಮುನಿಸಿಪಲ್ ವರಮಾನದ ಬಗ್ಗೆ ಮಾನ್ಯ ಎಂ.ಎಸ್. ಕೃಷ್ಣನ್‌ರವರು ಪ್ರಶ್ನೆ ಮಾಡಿದ್ದಾರೆ, ನಾನು ಏನು ಮಾಡಲಿಲ್ಲವೆನ್ನತಕ್ಕಂಥ ಮಾತನು ಹೇಳಿದ್ದಾರೆ. ನಾನು ಅವರು ಹೇಳಿದ್ದನ್ನು ಬರೆದುಕೊಂಡಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಏನು ಮಾಡಲಿಲ್ಲವೆಂದು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಹೇಳಿರತಕ್ಕಂಥ ಮಾತುಗಳಿಗೆ ಬೆಲೆ ಇಲ್ಲದೆ ಹೋದರೆ, ತಾವು ಹೇಳತಕ್ಕಂಥ ಪದ, ಉಪಯೋಗಿಸತಕ್ಕಂಥ ಪದ. ಉಪಯೋಗಿಸತಕ್ಕಂಥ ವಾಕ್ಯಗಳಿಗೆ ಅರ್ಥ ಇಲ್ಲದೆ ಬೇರೆ ಅರ್ಥ ಇದೆ ಎಂದರೆ ನಾನು ವ್ಯಾಕರಣ, ಗ್ರಾಮರ್ ತಿಳಿದುಕೊಂಡು ಬಂದವನಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಹೇಳಿದ ಪದ ಏನು ಎನ್ನುವುದು ನನಗೆ ಗೊತ್ತು. ನಿಮ್ಮ ಬಾಯಿನಲ್ಲಿ ಬೇರೆ ಹೇಳಿ ಅದನ್ನು ನಾನು ಹೇಳಿದೆ ಅಂದರೆ ಅದು ನಿಮ್ಮ ತಪ್ಪು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಬರೆದುಕೊಂಡಿದ್ದೇನೆ ಹುಬ್ಬಳ್ಳಿ ಧಾರವಾಡ ನಗರಕ್ಕೆ ನೀವು ಏನೂ ಮಾಡಲಿಲ್ಲವೆಂದಿರಿ. ಟೀಕೆ ಮಾಡಿದ್ದೀರಿ. ನಿಮ್ಮ ಟೀಕೆಯನ್ನು ಅನುಮೋದನೆ ಮಾಡಿದ್ದೇನೆ. ಈಗ ಮತ್ತೆ ರಿಪೀಟ್ ಮಾಡುತ್ತೇನೆ ಕೇಳಿ. 'ನಿಂದಕರಿರಬೇಕಯ್ಯ ಹಂದಿಯಂತೆ; ಹಂದಿಯಿದ್ದರೆ ಕೇರಿ ಶುದ್ಧಿ, ಎಂದು ದಾಸರು ಹೇಳಿದ್ದಾರೆ.

ಶ್ರೀ ಆರ್.ಎನ್. ನಾಯಕ್.—ಹಂದಿ ಯಾರು, ಮಂತ್ರಿ ಯಾರು ಎಂದು ಗೊತ್ತಾಗಲಿಲ್ಲ,

ಶ್ರೀ ಎಂ.ಎಸ್. ಕೃಷ್ಣನ್.—ದಾಸರ ಪದ, ಭಗವದ್ಗೀತೆ, ರಾಮಾಯಣ ಎಲ್ಲಾ ಹೇಳುತ್ತಿದ್ದೀರಿ, ಸಂತೋಷ.

ಶ್ರೀ ಬಿ.ಎಸ್. ಎಡಿಯೂರಪ್ಪ.—ವೇದಾಂತ ಹೇಳುವುದಕ್ಕೆ ಒಂದು ಇಲಾಖೆ ಮಾಡಿ. ಅದಕ್ಕೆ ಒಬ್ಬರು ಮಂತ್ರಿಗಳನ್ನು ಮಾಡಿದರೆ ತುಂಬಾ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ನಿಮ್ಮ ಸಹಾಯ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರ ತಲೆ ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ತಲೆ ತೆಗೆದುಕೊಂಡರೆ ನಾನು ಕೆಟ್ಟೆ. ಮಾನ್ಯ ಧರ್ಮಸಿಂಗರು ಇನ್ನೇ ಹಂತದ ಕಾವೇರಿ ಯೋಜನೆ ಮಾಡುತ್ತೀರೋ ಇಲ್ಲವೋ ಎಂಬ ಸಂಶಯ ಇದೆ ಎಂದು ಹೇಳಿದ್ದಾರೆ. ಅದಕ್ಕೆ ಹಣಕಾಸು ಒದಗಿಸತಕ್ಕ ಹಿನ್ನೆಲೆಯಲ್ಲಿ ಆ ಯೋಜನೆಯನ್ನು ಕಾರ್ಯಗತ ಮಾಡತಕ್ಕ ನಿಶ್ಚಲ ಮನಸ್ಸು ಮಾಡಿದ್ದೇವೆ. ಸರ್ಕಾರ ಇದಕ್ಕೆ ಪೂರ್ಣವಾಗಿ ಹಣಕಾಸಿನ ಸಹಾಯವನ್ನು ಕೊಡಿಸತಕ್ಕ ತೀರ್ಮಾನ ಮಾಡಿ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಮಾಡಿದೆ. ಬೆಂಗಳೂರು ಮಹಾನಗರ ಸಭೆಯವರು, ಬೆಂಗಳೂರು, ಅಭಿವೃದ್ಧಿ ಪ್ರಾಧಿಕಾರದವರು, ಕೇಂದ್ರ ಸರ್ಕಾರದ ಒಂದು ಇಂಡಸ್ಟ್ರಿಯವರು, ಜೀವವಿಮಾ ನಿಗಮದವರು ಹಾಗೂ ರಾಜ್ಯ ಸರ್ಕಾರ ಇಷ್ಟು ಜನ ೨೪೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟು, ಈ ಯೋಜನೆಯನ್ನು ೧೯೯೦ರ ಹೊತ್ತಿಗೆ ಜಾರಿಗೊಳಿಸಿ ಬೆಂಗಳೂರು ನಗರಕ್ಕೆ ನೀರನ್ನು ತಲುಪಿಸತಕ್ಕ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನೇ ಯೋಜನೆಯನ್ನು ಗಮನದಲ್ಲಿಟ್ಟುಕೊಂಡಿರಬೇಕು, ಬೆಂಗಳೂರಿನಲ್ಲಿ ಬಡಾವಣೆಗಳು ಜಾಸ್ತಿಯಾಗುತ್ತಿವೆ, ಬಡಾವಣೆಗಳು ಹೆಚ್ಚುತ್ತಿದ್ದರೆ ನೀರು ಸಿಗುತ್ತದೋ ಇಲ್ಲವೋ ಎಂಬುದನ್ನು ಲೆಕ್ಕ ಹಾಕಿದ್ದೀರೋ ಇಲ್ಲವೋ, ಬಡಾವಣೆಗಳು ಜಾಸ್ತಿ ಆದರೆ ನೀರು ಸಾಲದೆ ಬರತಕ್ಕ ಸನ್ನಿವೇಶಗಳು ಬರಬಹುದು, ಇದನ್ನೆಲ್ಲಾ ಯೋಚನೆ ಮಾಡಿದ್ದೀರಾ ಎಂದು ಕೇಳಿದ್ದಾರೆ. ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇನೇ ಯೋಜನೆಯನ್ನು ಜಾರಿಗೆ ತರಬೇಕೆಂಬ ಚಿಂತನೆಯ ಹಿನ್ನೆಲೆಯಲ್ಲಿ ಇನೇ ಯೋಜನೆಗೆ ಸಂಬಂಧಪಟ್ಟ ಕೆಲವು ಮೂಲಭೂತ ಕೆಲಸಗಳನ್ನು ತೆಗೆದುಕೊಂಡು ಅದಕ್ಕೆ ಈಗಾಗಲೇ ಯೋಜನೆ ಮಾಡಿದ್ದೇವೆಂದು ಮಾನ್ಯ ಧರ್ಮಸಿಂಗರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೆಂಟ್ರಲ್ ಇನ್ಸೆಂಟೀವ್ ಸ್ಕೀಂ ಪ್ರಕಾರ ಕೇಂದ್ರ ಸರ್ಕಾರ ಕೊಡತಕ್ಕ ಹಣದ ಬಗ್ಗೆ ಉತ್ತರಿಸಿದ್ದೇನೆ. ಕೊಳಚೆ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದೀರೋ ಇಲ್ಲವೋ ಎಂದು ಕೇಳಿದ್ದಾರೆ. ೧೯೮೬ರಲ್ಲಿ ಕ್ರಾಪ್ ಪ್ರೋಗ್ರಾಂ ಅನ್ನು ಕೈಗೆತ್ತಿಕೊಂಡು ೧೦ ಲಕ್ಷ ರೂಪಾಯಿಗಳಲ್ಲಿ ೧೧೮ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ೧೯೮೬-೮೭ರಲ್ಲಿ, ೭೭ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಒಳಚರಂಡಿ ಬಗ್ಗೆ ಹೇಳಿದ್ದೇನೆ. ಗದಗ್ ಬೆಟಗೇರಿ ಬಗ್ಗೆ ತಾವು ಕೇಳಲಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ವಿಶ್ವಾಸದಿಂದ ಬಿಟ್ಟಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ವಿವರವನ್ನು ಕೊಡುತ್ತೇನೆ. ತಮಗೆ ಒಂದು ಪತ್ರ ಬರೆದಿದ್ದೇನೆ. ಅದನ್ನು ಓದಬೇಕೆಂದರೆ ಓದುತ್ತೇನೆ. ನಿಮ್ಮ ಟೀಕೆ ಸರಿಯಾಗಿದೆ. ಅದಕ್ಕೆ ಕಾರಣ ಹೇಳುತ್ತೇನೆ. ಕೊಟ್ಟ ಹಣವನ್ನು ಖರ್ಚು ಮಾಡುವುದಕ್ಕಾಗಿಲ್ಲ ಎಂಬುದು ಮುಖ್ಯವಾದ ಟೀಕೆ. ಜೀವವಿಮಾ ನಿಗಮದಿಂದ ೧೫೦ ಲಕ್ಷ ರೂಪಾಯಿ ಬಂದಿದ್ದರೆ ಖರ್ಚು ಮಾಡಿರುವುದು ೮೬ ಲಕ್ಷದ ೨೩ ಸಾವಿರ ರೂಪಾಯಿಗಳು. ಈ ಹಣವನ್ನು ಖರ್ಚು ಮಾಡಲಿಲ್ಲವೆಂದು ಹೇಳಬಹುದು. ತಾವು ಹೇಳುವುದು ನಿಜ. ಆದರೂ ಕೂಡ ಇದರ ಬಗ್ಗೆ ಕಾಳಜಿ ವಹಿಸುವುದು ಸ್ವಾಭಾವಿಕವಾಗಿದೆ. ನಾನು ಬೇಗ ಕೆಲಸ ಮಾಡಿಸಿ ಯೋಜನೆ ಕಾರ್ಯಗತವಾಗುವುದಕ್ಕೆ ಪ್ರಯತ್ನಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಈ ನಿವೇಶನಗಳ ಬಗ್ಗೆ ಸ್ವಲ್ಪಮಟ್ಟಿಗೆ ಇಲ್ಲಿ ವಾದ ನಡೆದಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ಕೊಟ್ಟಿರುವ ಬಗ್ಗೆ ತಡವಾಗಿದೆ ಎಂಬ ಬಗ್ಗೆ ಮತ್ತು ಕೊಡಲಿಲ್ಲ ಎಂಬ ಬಗ್ಗೆಯೂ ವಾದ ನಡೆದಿದೆ. ಅದರ ಬಗ್ಗೆ ಕೆಲವು ಮಾತುಗಳನ್ನು ಮೊದಲೇ ಹೇಳಿಬಿಟ್ಟರೆ ಉತ್ತರ ಹೇಳುವುದು ಸುಲಭ. ಬಿ.ಡಿ.ಎ.ಸವರು ಏನಿದ್ದಾರೆ ಅವರ ಸ್ವಾಧೀನದಲ್ಲಿ ೬೪ ಸ್ಲಂಗಳು ಇವೆ. ಅದಕ್ಕೆ ಖರ್ಚು ಮಾಡಬೇಕಾದಂಥ ಹಣ ೫೪ ಲಕ್ಷ ರೂಪಾಯಿಗಳು ಸುಮಾರು ೪೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಎನ್‌ವೈರ್‌ಮೆಂಟ್ ಇಂಪ್ರೂವ್ ಮಾಡುವುದಕ್ಕೆ ಮತ್ತು ಇತರೆ ಸೌಲಭ್ಯಗಳಿಗೆ. ಇದರ ಜೊತೆಗೆ ಬೆಂಗಳೂರು ನಗರ ಪ್ರಾಧಿಕಾರದವರು ೧೯೮೩ರಿಂದ ಈಚೆಗೆ ೧೧,೬೮೫ ನಿವೇಶನಗಳನ್ನು ಹಂಚಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ ಎನ್.ಜಿ.ಇ.ಎಫ್. ಲೇ ಔಟ್‌ನಲ್ಲಿ ೩,೮೦೦ ಸೈಟುಗಳನ್ನು ಸರ್ಜಾಪುರ ಹೊಸೂರು ರೋಡ್ ಲೇ ಔಟ್‌ನಲ್ಲಿ ೧೨ ಸಾವಿರ ಸೈಟುಗಳನ್ನು ಒಟ್ಟು ೧೫,೮೦೦ ಸೈಟುಗಳನ್ನು ಹಂಚತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದರ ಜೊತೆಗೆ ೧೨ ಹೊಸ ಯೋಜನೆಗಳನ್ನು ತೆಗೆದುಕೊಂಡು ಅವರಿಂದ ಸುಮಾರು ೮೭ ಸಾವಿರ ನಿವೇಶನಗಳನ್ನು ಮುಂದಿನ ವರ್ಷಗಳಲ್ಲಿ ಹಂಚತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

ಶಾಸಕರಿಗೆ ಸೈಟ್ ಕೊಡಲಿಲ್ಲ ಎಂಬ ಮಾತನ್ನು ಕೂಡ ಹೇಳಿದ್ದಾರೆ. ಈಗಾಗಲೇ ಅವರಿಗೆ ೧೨೨ ಸೈಟುಗಳನ್ನು ಕೊಟ್ಟಿದ್ದೇವೆ. ಮಠದಹಳ್ಳಿಯಲ್ಲಿ ಕೊಟ್ಟಿದ್ದೇವೆ. ಮತ್ತು ಈಚೆಗೆ ಕೋರಮಂಗಲ ಜಿನೇ ಬ್ಲಾಕ್‌ನಲ್ಲಿ ೫೬, ಕೋರಮಂಗಲ, ಗಂಗೇನಹಳ್ಳಿ ಮತ್ತು ಸಾರಕ್ಕಿಯಲ್ಲಿ ೯೯, ೧೪೫ ನಿವೇಶನಗಳನ್ನು, ಲೆಜಿಸ್ಲೇಟರ್ಸ್ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿ ಮತ್ತು ಸರ್ವೋದಯ ವೆಲ್‌ಫೇರ್ ಸೊಸೈಟಿಗೆ ಕೊಟ್ಟಿದೆ. ರಾಜಾಮಹಲ್ ವಿಲಾಸ್ ಸೆಕೆಂಡ್ ಸ್ಟೇಜ್ ಲಟ್ಟೆಗೊಲ್ಲಹಳ್ಳಿಯಲ್ಲಿ ೧೦೦ ಸೈಟುಗಳನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಇದು ಹೈಕೋರ್ಟಿನಲ್ಲಿ ಸ್ಟೇ ಆಗಿದೆ. ಎಲ್ಲ ಸದಸ್ಯರಿಗೆ ಕೊಡತಕ್ಕ ಪ್ರಯತ್ನ ನಡದಿದೆ. ಕಾರ್ಯರೂಪದಲ್ಲಿ ಇದನ್ನು ತೋರಿಸಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೦ ಸಾವಿರ ಸೈಟುಗಳನ್ನು ಹಂಚುತ್ತೇವೆ ಎಂದು ಹೇಳಿದ್ದರೂ ಹಂಚಿಲ್ಲ ಎಂದು ಹೇಳಿದರು. ಅದು ನಮ್ಮ ರಿಪೋರ್ಟ್‌ನಲ್ಲಿ ಬರಲಿಲ್ಲ, ಈ ೧೨ ಸ್ಕೀಮಿನಲ್ಲಿ ಬರತಕ್ಕದ್ದನ್ನು ಸೇರಿಸಿಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾವೇರಿ ನೀರಿನ ಯೋಜನೆ ಬಗ್ಗೆ ಈಗಾಗಲೇ ಹೇಳಿದ್ದೇನೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನ ಬೆಲೆ ಜಾಸ್ತಿ ಎಂದು ಮಾನ್ಯ ಎಂ.ಎಸ್. ಕೃಷ್ಣನ್ ಅವರು ಹೇಳಿದರು. ಬೆಲೆ ಜಾಸ್ತಿಯಾಗುತ್ತದೆ ಕಾರಣಾಂತರಗಳಿಂದ. ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ತಡವಾಗುತ್ತದೆ. ಕೋರ್ಟಿಗೆ ಹೋಗುತ್ತಾರೆ: ಈ ಎಲ್ಲ ಕಾರಣಗಳಿಂದ ಬೆಲೆ ಜಾಸ್ತಿಯಾಗುತ್ತದೆ. ಸೈಟುಗಳನ್ನು ವಿಂಗಡಣೆ ಮಾಡುವಾಗ ಎಕನಾಮಿಕಲಿ ವೀಕರ್ ಸೆಕ್ಷನ್‌ಗೆ ಬಿಡಬೇಕು. ರಸ್ತೆಗೆ ಸಿ.ಎ.ಗೆ ೨೫ ಪರ್ಸೆಂಟ್ ಬಿಡಬೇಕು. ಪಬ್ಲಿಕ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಸೈಟ್ ಕೊಡಿ ಎಂದು ಕೇಳುತ್ತಾರೆ. ಈ ಕಾರಣಕ್ಕೋಸ್ಕರ ಸೈಟಿನ ಬೆಲೆ ಕಡಿಮೆಯಾಗತಕ್ಕ ಚಿಹ್ನೆ ಕಾಣಿಸುವುದಿಲ್ಲವೆಂದು ನನಗನ್ನಿಸುತ್ತದೆ. ಆ ಮೇಲೆ ಬೆಂಗಳೂರಿನ ನೀರಿನ ದರವನ್ನು ಹೆಚ್ಚಿಸಿದ ಬಗ್ಗೆ ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ ದಯವಿಟ್ಟು ಇದರ ಬಗ್ಗೆ ಮಾನ್ಯ ಧರ್ಮಸಿಂಗ್ ಅವರು ಯೋಚನೆ ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ಜಲ ಮಂಡಳಿಯ ಎರಡು ವರ್ಷದ ಆದಾಯ, ಖರ್ಚನ್ನು ಹೇಳುತ್ತೇನೆ. ಜಾಸ್ತಿ ಬೇಡ. ೧೯೮೫–೮೬ರಲ್ಲಿ ಆದಾಯ ೧೮.೮೯ ಕೋಟಿ ರೂಪಾಯಿಗಳು. ಖರ್ಚು ಎಷ್ಟು ಎಂದರೆ ೨೭.೨೫ ಕೋಟಿ ರೂಪಾಯಿ. ಶಾರ್ಟ್‌ಫಾಲ್ ೮ ಕೋಟಿ ೩೬ ಲಕ್ಷ ರೂಪಾಯಿಗಳು. ೧೯೮೬–೮೭ರಲ್ಲಿ ಆದಾಯ ೨೦.೩೧ ಕೋಟಿ ರೂಪಾಯಿಗಳು. ಖರ್ಚು ೩೪.೪೭ ಕೋಟಿ.

೧೪.೧೬ ಕೋಟಿ ರೂಪಾಯಿಗಳು ನಷ್ಟ. ಇದಕ್ಕೆ ನಾನಾ ಕಾರಣಗಳಿದ್ದರೂ ಮುಖ್ಯವಾದ ಕಾರಣಗಳು ಎಂದು ನನಗನ್ನಿಸುತ್ತದೆ, ಬಹಳ ಮುಖ್ಯವಾದುದು. ಮೊದಲನೆಯದು, ನೀರು ಕಡಿಮೆ ಇದ್ದುದರಿಂದ, ನೀರನ್ನು ಕೊಡದೇ ಇದ್ದುದರಿಂದ ವರಮಾನ ಕಡಿಮೆಯಾಗಿದೆ ಇದು ಒಂದು. ಎರಡನೆಯದು, ಪವರ್ ದರ ಜಾಸ್ತಿಯಾಗುತ್ತಾ ಬಂದಿದೆ. ೧೦೦ ರೂ.ಗಳಲ್ಲಿ ೮೫ ಪರ್ಸೆಂಟ್ ಪವರ್‌ಗೆ ಕೊಡಬೇಕಾಗುತ್ತದೆ. ನೀರು ಇದ್ದರೂ ಪವರ್ ಇಲ್ಲದಿದ್ದರೆ ನೀರು ಇಲ್ಲ. ಇದು ಇರತಕ್ಕ ಪರಿಸ್ಥಿತಿ. ಆದ್ದರಿಂದ ಈ ಹಿನ್ನಲೆಯನ್ನು ತಾವು ಯೋಚನೆ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನೀರಿನ ಬವಣೆಯನ್ನು ನೀಗಿಸುವ ಸಲುವಾಗಿ ಬೆಂಗಳೂರು ನಗರದಲ್ಲಿ ಕೊಳವೆ ಬಾವಿಗಳನ್ನು ತೆಗೆದಿದ್ದೀರಲ್ಲಾ, ಅದಕ್ಕೆ ಖರ್ಚು ಮಾಡಿರುವ ಹಣವೂ ಸಹ ಈ ಲಾಸ್‌ನಲ್ಲಿ ಸೇರಿದೆಯೋ ?

ಶ್ರೀ. ಎ. ಲಕ್ಷ್ಮೀಸಾಗರ್.—ಬೆಂಗಳೂರು ನಗರದಲ್ಲಿ ೧೪೧೪ ಕೊಳವೆ ಬಾವಿಗಳನ್ನು ಹಾಕಿದ್ದೇವೆ ಅದಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದು ಇದರಲ್ಲಿ ಬರುವುದಿಲ್ಲ. ನೀರಿನ ದರವನ್ನು ಹೆಚ್ಚು ಮಾಡಿದ್ದರಿಂದ, ಎಷ್ಟು ಆದಾಯ ಹೆಚ್ಚು ಬರುತ್ತದೆಂಬುದರ ಬಗ್ಗೆ ಸೂಕ್ಷ್ಮವಾಗಿ ಹೇಳುವುದಾದರೆ ೭೨ ಲಕ್ಷ ಬರುತ್ತದೆ ಅದೂ ಒಂದು ತಿಂಗಳಿಗೆ. ೧೪ ಕೋಟಿಯೂ ಇದರಿಂದ ಬರುವುದಿಲ್ಲ. ಬರೀ ಮಾಡುತ್ತೇನೆ ಎನ್ನತಕ್ಕಂತಹದ್ದಕ್ಕಿಂತ ಡೊಮೆಸ್ಟಿಕ್‌ಗೆ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಇಂಡಸ್ಟ್ರೀಸ್‌ಗಳಿಗೆ ಇನ್ನೂ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಈ ಹಿನ್ನಲೆಯನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಉದಾಹರಣೆಗಾಗಿ ಹೇಳುವುದಾದರೆ, ಮೈಸೂರು ನಗರದಲ್ಲಿ ಕಳೆದ ೨೦ ವರ್ಷಗಳಿಂದ ನೀರಿನ ದರವನ್ನು ಜಾಸ್ತಿ ಮಾಡಿಲ್ಲ. ಬೆಂಗಳೂರು ನಗರದಲ್ಲೂ ಮಾಡಿಲ್ಲ. ಹುಬ್ಬಳಿ-ಧಾರವಾಡ ಮಹಾ ನಗರಸಭೆಯಲ್ಲೂ ಪರಿಷ್ಕರಣೆ ಮಾಡಿಲ್ಲ. ಮೈಸೂರು ನಗರದಲ್ಲಿ ಒಂದು ಸಾವಿರ ಗ್ಯಾಲನ್ ನೀರಿಗೆ ಬರೀ ೭೫ ಪೈಸೆ, the least in the country. For 30 years they have not revised the

water rates. How are we to meet the ever increasing administrative expenditure ? ಸನ್ಮಾನ್ಯ ಕೃಷ್ಣನ್‌ರವರು ಎನ್.ಎಂ.ಆರ್.ನಲ್ಲಿ ಇರುವವರನ್ನೆಲ್ಲಾ ಪರ್ಮನೆಂಟ್ ಆಗಿ ನೇಮಕ ಮಾಡಿಕೊಳ್ಳಿ, ಸುಪ್ರೀಂ ಕೋರ್ಟಿನ ತೀರ್ಮಾನ ಇದೆ ಎಂಬುದಾಗಿ ಹೇಳಿದ್ದಾರೆ. ನಿಜ. ಅವರನ್ನು ಖಾಯಂ ಆಗಿ ನೇಮಕ ಮಾಡಿಕೊಂಡಿದ್ದೇ ಆದರೆ ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿಗಳವರೆಗೆ ಹೆಚ್ಚು ಖರ್ಚು ಬರುತ್ತದೆ. ಕರ್ನಾಟಕ ನೀರು ಸರಬರಾಜು ಮಂಡಲಿ ಒಂದು ಸ್ವಾಯತ್ತ ಸಂಸ್ಥೆ. It lives and functions only with the co-operation and active support it receives from the Government, the financial institutions and from the public. ನಿಜ ಪ್ರಪಂಚದಲ್ಲಿ-ಜೀವನದಲ್ಲಿ ಗಾಳಿ ಬೆಳಕು ಒಂದನ್ನು ಬಿಟ್ಟರೆ ಇನ್ನುಳಿದ ಪ್ರತಿಯೊಂದಕ್ಕೂ ಬೆಲೆಯನ್ನು ಕೊಡಬೇಕಾಗುತ್ತದೆ. ಇದರಿಂದ ಗತ್ಯಂತರವಿಲ್ಲ. ಎಲ್ಲಾ ಕೊಡಿ, ಆದರೆ ತೆರಿಗೆಯನ್ನು ಮಾತ್ರ ಜಾಸ್ತಿ ಮಾಡಬೇಡಿ ಅಂತ ಹೇಳಿದರೆ ಅದು ದ್ವಂದ್ವ ನೀತಿಯಾಗುತ್ತದೆ ಇದನ್ನು ವಿರೋಧ ಮಾಡುವುದಾದರೆ, ಜೀವನವನ್ನೇ ನಡೆಸುವುದಕ್ಕಾಗುವುದಿಲ್ಲ. ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ ಎನ್ನುವುದನ್ನು ಸನ್ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ನೀರಿನ ತೆರಿಗೆಯನ್ನು ಹೆಚ್ಚು ಮಾಡಿದಾಗ ನೀವು ಹಾಗೂ ಮಾನ್ಯ ರಘುಪತಿಯವರು ಅಪೋಸ್ ಮಾಡಿದ್ದೀರಿ, ಈಗ ನೀವೆ ಮಾಡುತ್ತಿದ್ದೀರಲ್ಲಾ

ಶ್ರೀ. ಎ. ಲಕ್ಷ್ಮೀಸಾಗರ್.—ನಾನು ಬೆಂಗಳೂರು ನಗರ ಸಭೆಯಲ್ಲಿ ಮತ್ತು ಬೆಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ರಾಜಕೀಯದಲ್ಲಿದ್ದೇನೆ. ಈ ರಾಜ್ಯದಲ್ಲೂ ಇದ್ದೇನೆ. ತಮಗೆ ಬಹುಶಃ ನನ್ನ ವಿಚಾರದಲ್ಲಿ ಪೂರ್ಣ ಮಾಹಿತಿ ಇಲ್ಲ. ನಾನು ಹೇಳಿದ್ದು ನೀರಿನ ತೆರಿಗೆಯ ಪರಿಷ್ಕರಣದ ವಿಚಾರದಲ್ಲಿ ವಿರೋಧ ಮಾಡಿಲ್ಲ. ಎಲ್ಲೂ ರೆಕಾರ್ಡಿನಲ್ಲಿ ಸಿಕ್ಕುವುದಿಲ್ಲ. ಆದರೆ ಒಂದು ಮಾತನ್ನು ಹೇಳಿದ್ದೇನೆ. ಅದೇನೆಂದರೆ, ಬೆಂಗಳೂರು ನಗರ ಸಭೆಗೆ ಚುನಾವಣೆಯನ್ನು ಮಾಡದೆ ಆಸ್ತಿ ತೆರಿಗೆ ಪರಿಷ್ಕರಣವನ್ನು ಮಾಡಬೇಡಿ ಅಂತ ಹೇಳಿದ್ದೇನೆ. ಅದು ಅಫಿಸಿಯಲ್ ರೆಕಾರ್ಡಿನಲ್ಲೂ ಇದೆ. ಮಹಾನಗರಸಭೆಯ ಬಡ್ಜೆಟ್ಟಿನಲ್ಲಿ ಆ ಬಗ್ಗೆ ೮ ಗಂಟೆ ಮಾತನಾಡಿದ್ದೇನೆ. ಅದರ ರೆಕಾರ್ಡು ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಶ್ರೀಮಾನ್ ಶಾಮಣ್ಣನವರು ನಾವು ಎಲ್ಲಾ ಸೇರಿಕೊಂಡು ನೀರಿನ ತೆರಿಗೆಯ ಬಗ್ಗೆ ದೊಡ್ಡ ಚಳುವಳಿಯನ್ನು ಮಾಡಿದಾಗ ನೀವೂ ನಮ್ಮ ಜೊತೆಯಲ್ಲೇ ಇದ್ದಿರಿ.

ಶ್ರೀ. ಎ. ಲಕ್ಷ್ಮೀಸಾಗರ್.—ಆಸ್ತಿಯನ್ನು ವರ್ಗೀಕರಣೆ ಮಾಡಿದಾಗ ಮಾಡತಕ್ಕಂತಹದ್ದು ತಪ್ಪು ಎಂಬುದಾಗಿ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಆಗ ನೀರಿನ ತೆರಿಗೆಯನ್ನು ಯದ್ವಾತದ್ವ ಜಾಸ್ತಿ ಮಾಡಿದ್ದರು.

೫-೦೦ ಪಿ. ಎಂ.

ಅದನ್ನು ಸರಿಪಡಿಸುವುದಕ್ಕೆ ಮಾನ್ಯ ಎಂ ವೈ. ಘೋರ್ಪಡೆಯವರು ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದರು. ನಾವು ಹೇಳಿದ ದರ ತಪ್ಪು ಎಂದು ಗೊತ್ತಾಗಿ ನೀವು ಹೇಳಿದ ದರವನ್ನು ಒಪ್ಪಿಕೊಳ್ಳಲಾಯಿತು. ಲೆಕ್ಕ ಸರಿಯಾಗಿ ಇರಲಿಲ್ಲ. ಆದ್ದರಿಂದ ನೀರಿನ ದರದ ಪರಿಷ್ಕರಣವನ್ನು ವಿರೋಧ ಮಾಡಿರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ನೀವು ಎಲ್ಲಾ ಅಜಿಟೇಷನ್ ಮಾಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.-ನೀವು ಹೇಳುವ ಮಾತು ತಪ್ಪು ತಪ್ಪು. ಮಾಡಿದರೆ ಬುದ್ಧಿವಂತಿಕೆಯಿಂದ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳಬೇಕು ನೀವು ಅವೊತ್ತು ಆ ತಪ್ಪು ಮಾಡದಿದ್ದರೆ ಇವತ್ತು ೬೦ ಮಿಲಿಯನ್, ಗ್ಯಾಲನ್ ನೀರು ಬರತಕ್ಕ ಪೈಪನ್ನು ಹಾಕಬಹುದಾಗಿತ್ತು. ಇವತ್ತು ೬೦ ಮಿಲಿಯನ್ ಗ್ಯಾಲನ್ ನೀರು ಬರತಕ್ಕ ಪೈಪು ಹಾಕಲಿಕ್ಕೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗಿರುವಷ್ಟು ಬುದ್ಧಿವಂತಿಕೆ ಆಗ ನಿಮ್ಮ ಜೊತೆಯಲ್ಲಿದ್ದಾಗ ಇರಲಿಲ್ಲ. ಮಾನ್ಯ ಕೃಷ್ಣನ್‌ನವರು ಕೊಳಚೆಪ್ರದೇಶಗಳ ನಿರ್ಮೂಲನದ ಬಗ್ಗೆ ಮಾತನಾಡುವಾಗ ಆ ಬಗ್ಗೆ ಏನೂ ಆಗಿಲ್ಲವೆಂದು ಹೇಳಿದರು

ನಾವು ಯಾವಾಗಲೂ ಲಾಯರುಗಳು ಕೋರ್ಟಿನಲ್ಲಿ What is stated in the plaint is wrong ಎಂದು ಅವರುಹೇಳುವುದು ಹೇಳುವ ಹಾಗೆ ಇದೆ. ನಾವು ಕೊಟ್ಟಿರತಕ್ಕದ್ದನ್ನು ತಾವು ಸ್ವಲ್ಪ ನೋಡಿ. ಕೊಟ್ಟಿರತಕ್ಕ ಫರ್‌ಫಾರ್ಮೆನ್ಸ್ ಅಪೂರ್ಣವಾಗಿದೆ ಅದು ಡಿಸೆಂಬರ್‌ವರೆಗೆ ಮಾತ್ರ ಇದೆ. ನಂತರ ಆಗಿರತಕ್ಕದ್ದನ್ನು ನೋಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಪೂರ್ಣವೆಂದು ನೀವೇ ಒಪ್ಪಿಕೊಂಡ ಮೇಲೆ, ಮತ್ತೆ ತಪ್ಪೇನು ಇದೆ?

ಶ್ರೀ ಎ. ಲಕ್ಷ್ಮೀಸಾಗರ್.—೬೦೦ ಮನೆಗಳನ್ನು ಕಟ್ಟುವುದಕ್ಕೆ ಒಪ್ಪಿಸಿದ್ದೇವೆ ೩೦೦ ಮನೆಗಳನ್ನು ಕಟ್ಟಿರುವುದು ಎಂದು ಹೇಳಿದರು ಇತ್ತೀಚೆಗೆ ೪೯೦ ಮನೆಗಳನ್ನು ಈಗಾಗಲೇ ಕಟ್ಟಲಿಕ್ಕೆ ಪ್ರಾರಂಭ ಮಾಡಿದ್ದಾರೆ, ಮಾರ್ಚ್ ಅಂತ್ಯದೊಳಗೆ ಪೂರ್ಣವಾಗುತ್ತದೆ. ಕಣ್ಣಿಗೆ ಕುಕ್ಕತಕ್ಕ ಭಾಷಣಗಳನ್ನು ಮಾತ್ರ ನೋಡುತ್ತೀರಿ. ಮುಂದೆ ಏನಿದೆ ಅನ್ನುವುದನ್ನು ನೋಡುವುದಿಲ್ಲ. ಪರಿಸರವನ್ನು ಉತ್ತಮಗೊಳಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಅದರ ಬಗ್ಗೆ ಕೂಡ ಪೂರ್ಣವಾದ ವಿವರಗಳನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರುಗಳು ಪೆಂಡೆನ್ಸಿ ಕೇಸುಗಳ ಬಗ್ಗೆ ಮಾತನಾಡಿದ್ದಾರೆ. ಕೇಸುಗಳು ಕೋರ್ಟಿನಲ್ಲಿರುವುದರಿಂದ, ಸಭೆಯು ಸದಸ್ಯರ ಅಭಿಪ್ರಾಯಗಳನ್ನು ಹೈಕೋರ್ಟಿನವರಿಗೆ ತಿಳಿಸಬಹುದು. ಅದಕ್ಕಿಂತ ಮುಂದೆ ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಇದು ಆರ್ಡಿನೆನ್ಸ್ ಗೌರ್ನ್‌ಮೆಂಟ್ ಆಗಿದೆ ಎಂದು ಹೇಳಿದ್ದಾರೆ. ಆರ್ಡಿನೆನ್ಸ್ ಅನ್ನು ಕೆಲವು ಸಂದರ್ಭಗಳಲ್ಲಿ ಅವಶ್ಯಕವಾಗಿ ಮಾಡಬೇಕಾಗುತ್ತದೆ. ಆರ್ಟಿಕಲ್ ೨೧೩ರ ಪ್ರಕಾರ ಜನರ ಹಿತದೃಷ್ಟಿಯಿಂದ ಆರ್ಡಿನೆನ್ಸ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಆರ್ಡಿನೆನ್ಸ್ ಮಾಡಿದ್ದೇವೆ. ಲೀಗಲ್ ಏಡ್ ಬೋರ್ಡ್ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅದರ ಬಗ್ಗೆ ಒಂದೆರಡು ವಿವರಗಳನ್ನು ಕೊಡುವುದು ಅವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ಕರ್ನಾಟಕ ರಾಜ್ಯ ಕಾನೂನು ನೆರವು ಮಂಡಳಿ ಸ್ಥಾಪನೆಯಾಗಿದೆ ಅದು ಕೆಲಸ ಮಾಡುತ್ತಾ ಇದೆ, ಅದು ೧೯೭೮ರಲ್ಲೇ ಪ್ರಾರಂಭವಾಯಿತು. ನಾನು ಕಾನೂನು ಮಂತ್ರಿಯಾದಮೇಲೆ ೧೯೮೩ ರಿಂದ ೧೯೮೭ರವರೆಗೆ ಏನೇನು ಮಾಡಿದ್ದೇವೆ ಎನ್ನುವ ಬಗ್ಗೆ ಕೆಲವೊಂದು ಅಂಕಿಅಂಶಗಳನ್ನು ಕೊಡುತ್ತೇನೆ. ೧೯೮೩–೮೭ರವರೆಗೆ ಹೇಳುತ್ತೇನೆ. ಅದಕ್ಕೆ ಮೊದಲು ೧೯೭೮ ರಿಂದ ೧೯೮೩ರವರೆಗೆ ಏನೇನು ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ೨೧,೨೮೦ ಕೇಸುಗಳಲ್ಲಿ ಲೀಗಲ್ ಏಡ್ ಕೊಟ್ಟಿದ್ದಾರೆ. ೧೯೮೩–೮೭ರವರೆಗೆ ನಾವು ೨೦ ಸಾವಿರ ಕೇಸುಗಳಲ್ಲಿ ಲೀಗಲ್ ಏಡ್ ಕೊಟ್ಟಿದ್ದೇವೆ. ಅವರು ನಾಲ್ಕು ವರ್ಷಗಳಲ್ಲಿ ಮಾಡಿದ ಕೆಲಸವನ್ನು ನಾವು ಸಹ ನಾಲ್ಕು ವರ್ಷಗಳಲ್ಲಿ ಅಷ್ಟೇ ಪ್ರಮಾಣದಲ್ಲಿ ಸಹಾಯ ಮಾಡಿದ್ದೇವೆ. ಲ್ಯಾಂಡ್ ರಿಫಾರ್ಮ್ಸ್ ಕೇಸುಗಳಲ್ಲಿ ಲೀಗಲ್ ಏಡ್ ಕೊಟ್ಟಿದ್ದೇವೆ. ಇರತಕ್ಕ ಲ್ಯಾಂಡ್ ರಿಫಾರ್ಮ್ಸ್ ಕೇಸುಗಳು ೨೧ ಸಾವಿರ ಅದರಲ್ಲಿ ನಾವು ೩,೨೯೨ ಕೇಸುಗಳಿಗೆ ಲೀಗಲ್ ಏಡ್ ಕೊಟ್ಟಿದ್ದೇವೆ. ಲೀಗಲ್ ಏಡ್ ಬೋರ್ಡ್ ಮತ್ತು ಸೆಲ್‌ನಿಂದ ಸಹಾಯವನ್ನು ಮಾಡಿದ್ದೇವೆ. ವಿಶೇಷವಾದ ಪ್ರಯತ್ನ ನಮ್ಮ ರಾಜ್ಯದಲ್ಲಿ ನಡೆದಿದೆ. ಮೋಟಾರು ಅಪಘಾತಗಳಲ್ಲಿ ತೊಂದರೆಗೆ ಈಡಾದವರಿಗೆ ತಹಶೀಲ್ದಾರ್‌ರವರ ಮುಖಾಂತರ ವಿಚಾರಣೆ ಇಲ್ಲದೆ ಕೋರ್ಟಿನ ಹೊರಗಡೆಯಲ್ಲಿಯೇ ಅವರಿಗೆ ಸಹಾಯವನ್ನು ಕೊಡಿಸುವಂತಾ ಕೆಲಸ ನಮ್ಮ ರಾಜ್ಯದಲ್ಲಿ ನಡೆದಿದೆ. ಕೇವಲ ಐದಾರು ತಿಂಗಳುಗಳಲ್ಲಿ ೨೦೫೮ ಕೇಸುಗಳಲ್ಲಿ ೨ ಕೋಟಿ ೮೦ ಲಕ್ಷ ರೂಪಾಯಿಗಳನ್ನು ಪರಿಹಾರಧನವನ್ನಾಗಿ ಕೊಡಿಸಿದ್ದೇವೆ. ಕೇವಲ ಐದಾರು ತಿಂಗಳುಗಳಲ್ಲಿ ಇಷ್ಟೊಂದು ಕೇಸುಗಳಲ್ಲಿ ಪರಿಹಾರವನ್ನು ಕೊಡಿಸಿರತಕ್ಕದ್ದು ನಮ್ಮದೇಶದಲ್ಲೇ ಇದೊಂದು ದಾಖಲೆ. ನಮ್ಮರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಈ ಒಂದು ಪ್ರಯತ್ನ ನಡೆದಿದೆ ವಕೀಲರು, ನ್ಯಾಯಾಧೀಶರು ಸಾರ್ವಜನಿಕ ಮುಖಂಡರು ಇನ್ಸೂರೆನ್ಸ್ ಕಂಪನಿಗಳವರೂ ವಿಶೇಷವಾದ ತಮ್ಮ ಪೂರ್ಣ ಸಹಾಯ ಮತ್ತು ನೆರವನ್ನು ಕೊಟ್ಟಿದ್ದಾರೆ. ಇದು ನಮ್ಮದೇಶದಲ್ಲಿ ದಾಖಲೆಯನ್ನು ಸೃಷ್ಟಿಸತಕ್ಕ ಕೆಲಸವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೩೩೭ ಲೀಗಲ್ ಏಡ್ ಕ್ಯಾಂಪುಗಳನ್ನು ಮಾಡಿ ೧೦೯೬ ಜನರಿಗೆ ಸಹಾಯ ಮಾಡಿದ್ದೇವೆ. ೪ ಸಾವಿರ ಜನರಿಗೆ ಲೀಗಲ್ ಅಡ್ವೈಸ್ ಕೊಟ್ಟಿದ್ದೇವೆ. Public Interest litigation ನಲ್ಲಿ, ಹರಿಹರ ಪಾಲಿಫೈಬರ್ ಮೇಲೆ ೧೦ ದಾವೆ ಹಾಕಲಿಕ್ಕೆ ಕೇಸುಗಳಲ್ಲಿ ಹಣ ಕೊಟ್ಟು ಸಹಾಯ ಮಾಡಿದ್ದೇವೆ. ಗುಲ್ಬರ್ಗದಲ್ಲಿ ಮಹಿಳೆಯರ ಸಹಾಯಕ್ಕೋಸ್ಕರವಾಗಿ ಉಚಿತವಾದ ಕಾನೂನು

ನೆರವನ್ನು ಕೊಡಲಾಗಿದೆ. ಮಹಿಳೆಯರಿಗೋಸ್ಕರ ಪ್ರತ್ಯೇಕವಾಗಿ ಮಾಡಿದ್ದೇವೆ. ಇದು ವಿಶೇಷವಾದ ಪ್ರಯತ್ನ. ಇಷ್ಟು ರೀತಿಯಲ್ಲಿ ಉಚಿತ ಕಾನೂನು ನೆರವನ್ನು ಕೊಡತಕ್ಕ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರಾದ ಗುತ್ತೇದಾರ್‌ರವರು ಕೆಲವು ಸಂಸ್ಥೆಗಳು ನಿಷ್ಕ್ರಿಯವಾಗಿವೆ ಎಂದು ಹೇಳಿದರು. ಜೊತೆಗೆ ಅವುಗಳಿಗೆ ಹಣ ಸಹಾಯ ಮಾಡಬೇಕೆಂದು ಹೇಳಿದರು. ಮಾನ್ಯ ಸದಸ್ಯರು ಅವು ಯಾವುವು ಎಂದು ಹೇಳಿದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಕಾಂತಾರವರು ಎರಡು ಮೂರು ವಿಷಯಗಳನ್ನು ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಟೌನ್ ಪ್ಲಾನಿಂಗ್, ಸಿಐಟಿಬಿ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಹೊಂದಾಣಿಕೆಯಿಂದ ಕೆಲಸವನ್ನು ಮಾಡಬೇಕೆಂದು ಈಗಾಗಲೇ ಕಾನೂನು ಇದೆ. ಒಂದು ಸಂಸ್ಥೆಯ ಪ್ರತಿನಿಧಿ ಮತ್ತೊಂದು ಸಂಸ್ಥೆಯ ಪ್ರತಿನಿಧಿಯ ಜೊತೆಯಲ್ಲಿ ಹೊಂದಾಣಿಕೆಯಿಂದ ಇರಬೇಕೆಂದೂ ಎಲ್ಲರೂ ಸೇರಿ ಕೆಲಸವನ್ನು ಮಾಡಬೇಕೆಂದು ಈಗಾಗಲೇ ಕಾನೂನು ಇದೆ. ಮೂರು ಜನರು ಇದ್ದರೆ ಮೂರು ಜನರೂ ಮೂರು ಕಡೆ ನೋಡುತ್ತಾರೆ. ಅದನ್ನು ನಾನು ಸರಿಪಡಿಸುವುದಕ್ಕೆ ನಾನು ಪ್ರಯತ್ನ ಮಾಡಿ ಆ ಕೆಲಸವನ್ನು ಮಾಡುತ್ತೇನೆ. ಕೆಲವು ಸ್ವಂತ ವಿಚಾರಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಅವುಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಕಾಂತರವರಿಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಚಿಣ್ಣೆ ತೊರೆಯಿಂದ ಕುಡಿಯುವ ನೀರನ್ನು ತರತಕ್ಕ ಯೋಜನೆಯನ್ನು ಜಾರಿಗೆ ಕೊಡಬೇಕೆಂದು ಹೇಳುತ್ತಿದ್ದಾರೆ ಕೆಲವರು ಭೀಮಾನದಿಯಿಂದ ಕುಡಿಯುವ ನೀರನ್ನು ತಂದರೆ ಕಾಸ್ಟ್ ಜಾಸ್ತಿ ಯಾಗುತ್ತದೆಂದು ಹೇಳುತ್ತಾರೆ. ತಜ್ಞರು ಕಳುಹಿಸಿರುವ ಮಾಹಿತಿ ಪ್ರಕಾರ ಚಿಣ್ಣೆ ತೊರೆಯಿಂದ ತಂದರೆ ಅದು ಹೆಚ್ಚು ಶಾಶ್ವತವಾಗಿ ನೀರು ದೊರೆಯುತ್ತದೆ. ಕಾಸ್ಟ್ ಕೂಡ ಕಡಿಮೆಯಾಗುತ್ತದೆ, ಎನ್ನುವ ವಿಚಾರ ಇದೆ. ಅದು ನನಗೆ ಗೊತ್ತಿಲ್ಲ ಅದರ ಬಗ್ಗೆ ವಿಚಾರಮಾಡಿ ಬೇಗ ರಿಪೋರ್ಟ್ ತರಿಸಿಯೆಂದು ಅಧಿಕಾರಿಗಳಿಗೆ ಹೇಳಿದ್ದೇನೆ, ಯಾವುದು ಸರಿಯೆಂದು ಕಾಣುತ್ತದೋ ಅದನ್ನು ಬೇಗ ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಕೃಷ್ಣನ್‌ರವರು ಕೊಳಚೆ ಪ್ರದೇಶಗಳ ಪ್ರಗತಿ ಸಾಲದು ಎಂದು ಹೇಳಿದ್ದಾರೆ. ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂಬುದನ್ನು ವಾರ್ಷಿಕ ವರದಿಯಲ್ಲಿ ಹೇಳಿದ್ದೇನೆ. ಎರಡು ಕಾರ್ಯಕ್ರಮಗಳನ್ನು ಮಾಡಿದ್ದೇವೆಂದು ವರದಿಯಲ್ಲಿ ಹೇಳಿದ್ದೇನೆ ಐಡಿಎಸ್‌ಎಂಟಿ ಸ್ಕ್ಯಾವೆಂಜರ್ಸ್ ಸ್ಕೀಮ್ ಅದನ್ನು ಜಾರಿಗೆ ಗೊಳಿಸಿದ್ದೇವೆ. ಐಡಿಎಸ್‌ಎಂಟಿ ಸ್ಕೀಮ್ ಅದು ಜಾರಿಗೆ ಬಂದಿದೆ. ಅದನ್ನು ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅವರು ತೆಗೆದುಕೊಂಡು ಆ ಕೆಲಸ ಮಾಡಿಕೊಡುತ್ತಿದ್ದಾರೆ.

ದೊಡ್ಡ ದೊಡ್ಡ ಕೆಲಸಗಳನ್ನು ಲ್ಯಾಂಡ್ ಆರ್ಮಿಗೆ ವಹಿಸಿ ಅವರಿಂದ ಮಾಡಿಕೊಡಲು ಪ್ರಯತ್ನ ಮಾಡುತ್ತಿದ್ದೇವೆ. ಆ ಮೇಲೆ ಡಿ.ಸಿ.ಬಿ ಆಗಿಲ್ಲವೆಂದು ಹೇಳಿದ್ದಾರೆ. ಈ ಕೆಲಸ ಶಾಶ್ವತವಾಗಿ ಸಿಟಿ ಮುನಿಸಿಪಾಲಿಟಿಗಳಲ್ಲಿ ಮಾಡಿದ್ದೇವೆ ಅವರಿಗೆ ತಿಂಗಳಿಗೆ ಡಿ.ಸಿ.ಬಿ. ಮಾಡುವುದು ಗೊತ್ತಿರಲಿಲ್ಲ. ಮುನಿಸಿಪಾಲಿಟಿ ಆ್ಯಕ್ಟ್ ಅವರ ಹತ್ತಿರ ಇರಲಿಲ್ಲ. ರೂಲ್ಸ್ ರೆಗ್ಯುಲೇಷನ್ ಸಹ ಇರಲಿಲ್ಲ, ಡಿ.ಸಿ.ಬಿ. ಹೇಗೆ ಮಾಡುವುದು ಅಂತ ಗೊತ್ತಿರಲಿಲ್ಲ. ಕ್ರಾಷ್. ಪ್ರೋಗ್ರಾಮ್‌ನಲ್ಲಿ ಅವರಿಗೆ ಟ್ರೈನಿಂಗ್ ಕೊಡಿಸಿದ್ದೇವೆ. ಎಲೆಕ್ಟೆಡ್ ಮುನಿಸಿಪಲ್ ಪ್ರೆಸಿಡೆಂಟ್ಸ್‌ಗೆ ಕ್ರಮವಾಗಿ ಲೆಕ್ಕ ಇಡುವಂಥ ಅಭ್ಯಾಸವನ್ನು ಅವರಲ್ಲಿ ಮಾಡಿಸಿದ್ದೇವೆ. ಶ್ರೀಮಾನ್ ಕೃಷ್ಣನ್‌ರವರು ಮುನಿಸಿಪಾಲಿಟಿಗಳ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲಿಲ್ಲ ಎಂದು ಹೇಳಿದರು. ಇದಕ್ಕೆ ಯಾರು ಜವಾಬ್ದಾರರು ಸ್ವಾಮಿ? ತೆರಿಗೆ ಪರಿಷ್ಕರಣ ಮಾಡತಕ್ಕಂಥ ಜವಾಬ್ದಾರಿಯನ್ನು ನಾವು ಮಾಡಬೇಕೇ ? ನಗರಾಭಿವೃದ್ಧಿ ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು ಮಾಡಬೇಕೇ? ಅವರು ಮಾಡುವುದು ಬೇಡ, ಸರ್ಕಾರವೇ ಮಾಡಲಿ ಎಂದರೆ, ಆಗ ಬೇರೆಯುದ್ದೇ ಆದ ಚರಿತ್ರೆ ಶುರುವಾಗುತ್ತದೆ. ೧೨೦ ಸಿಟಿ ಮುನಿಸಿಪಾಲಿಟಿಗಳು ತೆರಿಗೆ ಪರಿಷ್ಕರಣವನ್ನು ಹತ್ತು-ಹದಿನೈದು ವರ್ಷಗಳ ನಂತರವೂ ಮಾಡಿಲ್ಲ. ಇದಕ್ಕೆ ಯಾರು ಜವಾಬ್ದಾರರು? ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಖರ್ಚು ಜಾಸ್ತಿಯಾಗುತ್ತದೆ, ಸಿಬ್ಬಂದಿ ಖರ್ಚು ಜಾಸ್ತಿಯಾಗುತ್ತದೆ ಎಂದರೆ, ಪ್ರತಿಯೊಂದಕ್ಕೂ ರಸ್ತೆ ರಿಪೇರಿ ಮಾಡುವುದಕ್ಕೂ ಸರ್ಕಾರದ ಅನುದಾನವೇ ಚರಂಡಿ ಕಟ್ಟಿಕೊಂಡಿದ್ದರೆ ಸರ್ಕಾರದ ಅನುದಾನ, ಗುಡಿಸಿದ ಕಸ ತೆಗೆಯುವುದಕ್ಕೂ ಸರ್ಕಾರದಿಂದ ಅನುದಾನ ಬೇಕೆನ್ನುವುದಾದರೆ ಮುನಿಸಿಪಾಲಿಟಿಗಳು ಏಕೆ ಇರಬೇಕು?

ಶ್ರೀ ಎಂ. ಎಸ್. ಕೃಷ್ಣನ್.— ನಾನು ಹೇಳಿದ್ದೇನೆಂದರೆ ಇವತ್ತು ಫೈನಾನ್ಸಿಯಲ್ ರಿಸೋರ್ಸಸ್ ಜಾಸ್ತಿ ಮಾಡಕೂಡದು ಅಂತ ಅಲ್ಲ. ಏನೂ ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ನಾನು

ಹೇಳಿದ್ದು, ಜಾಕಬ್ ಕಮಿಟಿ ಶಿಫಾರಸ್ಸುಗಳಿವೆ. ಅದರಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಮಾಡಿದೆಯೆಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾತನಾಡಿದಂಥ ಟೀಕಾಕಾರರು ನಾವು ತೆರಿಗೆ ಪರಿಷ್ಕರಣ ಮಾಡಿ ಸ್ಥಳೀಯ ಸಂಸ್ಥೆಗಳು ಸ್ವಂತ ಶಕ್ತಿಯ ಆಧಾರದ ಮೇಲೆ, ಸ್ವಂತ ಶಕ್ತಿಯ ಬೆಳವಣಿಗೆಯ ಹಿನ್ನೆಲೆಯಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡಿಲ್ಲವೆಂದು ಯಾರೂ ಹೇಳಲಿಲ್ಲ. ತೆರಿಗೆ ಪರಿಷ್ಕರಣ ಬೇಡ ನೀರು ತೆರಿಗೆಯ ಪರಿಷ್ಕರಣ ಬೇಡ, ಪ್ರಾಪರ್ಟಿಟ್ಯಾಕ್ಸ್ ಪರಿಷ್ಕರಣ ಬೇಡ, ಎಂದು ಹೇಳಿದ್ದಾರೆ. ಯಾವಾಗಲೂ ಕೊಡಲಿಕ್ಕೆ ಅಭ್ಯಾಸವನ್ನು ಜನರಲ್ಲಿ ಉದ್ಭವಿಸಲಿಕ್ಕೆ ಮಾನಸಿಕ ಧೋರಣೆಯನ್ನು ಸಂಪಾದನೆ ಮಾಡಿಕೊಳ್ಳಬೇಕು. ಶ್ರೀ ರಾಮಕೃಷ್ಣಹೆಗಡೆಯವರು ಟಂಕಸಾಲೆಯನ್ನು ಇಟ್ಟಿಲ್ಲ. ನಗರಾಭಿವೃದ್ಧಿ ಮಂತ್ರಿಗಳು ಜೇಬಲ್ಲಿ ದುಡ್ಡು ಇಟ್ಟುಕೊಂಡು ಬಂದವರಿಗೆಲ್ಲಾ ಕೊಡಲಿಕ್ಕೆ ಹಣ ಇಲ್ಲ. ಶ್ರೀಮಾನ್ ಯಡಿಯೂರಪ್ಪನವರು ಪ್ರಜಾಪ್ರಭುತ್ವವನ್ನು ಕೊಲ್ಲುತ್ತಿದ್ದೀರಿ ಎಂದು ಹೇಳಿದರು. ಕೊಂದಿದ್ದು ಯಾರು? ಹದಿನೈದು ವರ್ಷ ಕಾಲ ಚುನಾವಣೆಯನ್ನೇ ಮಾಡಿರಲಿಲ್ಲ. ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ನವೆಂಬರ್‌ನಲ್ಲಿ ಅಂತ ಹೇಳಿದರು. ಯಾವ ವರ್ಷದ ನವೆಂಬರ್ ತಿಂಗಳು ಎಂದು ಕೇಳುತ್ತಿದ್ದೆವು ಸ್ವಾಮಿ, ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಕೊಂದುಹಾಕಿ ಮುಟ್ಟುಗೋಲು ಹಾಕಿ ಅದರ ಮೇಲೆ ಚಪ್ಪಡಿ ಹಾಕತಕ್ಕಂಥ ಜನ ಬೇರೆ ಇದ್ದಾರೆ. ಅವರು ಏನು ಮಾಡಿದರು ಎಂಬುದನ್ನು ಜೀವನದುದ್ದಕ್ಕೂ ಅನುಭವಿಸಿದಂಥ ಅನುಭವ ನಮ್ಮ ತಲೆಯೊಳಗೆ ಇದೆ. ಅದರ ಬಗ್ಗೆ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಆ ಪರಿಸ್ಥಿತಿ ಬಂದಾಗ ನಿಮ್ಮ ಜೊತೆಯಲ್ಲೇ ಇದ್ದೆ.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಧ್ಯಕ್ಷರೇ, ನನ್ನ ಸತತ ಪ್ರಯತ್ನದ ಫಲವಾಗಿ, ನಮ್ಮ ಡೈರಕ್ಟೊರೇಟ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅವರ ಸತತ ಪ್ರಯತ್ನ, ನಮ್ಮ ಸೆಕ್ರಟರಿಯವರ ಪ್ರಯತ್ನ ಹಾಗೂ ಸರ್ಕಾರದ ಅಧಿಕಾರಿಗಳ ಸತತ ಪ್ರಯತ್ನದಿಂದ ಮೊಟ್ಟಮೊದಲ ಸಲ ೧೯೮೫–೮೬ನೇ ಸಾಲಿನಲ್ಲಿ ೨೫ ಕೋಟಿ ರೂಪಾಯಿಗಳನ್ನು ತೆರಿಗೆ ಮುಖಾಂತರ ವಸೂಲ್ಮಾಡಿದ್ದೇವೆ, ಇದರಲ್ಲಿ ೧೦ ಕೋಟಿ ರೂಪಾಯಿ ಸೆಸ್ ಮುಖಾಂತರ ಸರ್ಕಾರಕ್ಕೆ ನಿವ್ವಳ ಬಂದಿದೆ. ಇದು ಮೊದಲನೇ ಸಲ. ಅವರು ಬಂದು ಹೇಳಿದ್ದಾರೆ. ಸಾಹೇಬರೇ, ನೀವು ಚಲೋ ಕೆಲಸ ಮಾಡುತ್ತಿದ್ದೀರಿ. ೧೯೫೦ರ ನಂತರ ಮುನಿಸಿಪಾಲಿಟಿಗಳಿಂದ ಕಾರ್ಪೊರೇಷನ್‌ಗಳಿಂದ ಒಟ್ಟು ಎಷ್ಟು ಆದಾಯ ಬರಬೇಕೆಂಬುದಕ್ಕೆ ನಿಮ್ಮ ಹತ್ತಿರ ಲೆಕ್ಕ ಇರಲಿಲ್ಲ. ಕೆ.ಇ.ಬಿ.ನವರಿಗೆ ಮುನಿಸಿಪಾಲಿಟಿಯವರು ಕೊಡುವ ಹಣಕ್ಕೆ. ಅದನ್ನು ಇತ್ಯರ್ಥ ಮಾಡುವುದಕ್ಕಾಗಿ ನಾವು ಕೊಡತಕ್ಕ ಅನುದಾನದಲ್ಲಿ ಕಟ್ ಮಾಡಿ ಕೊಡುತ್ತಿದ್ದೇವೆ. ಸುಮಾರು ನೂರು ಮುನಿಸಿಪಾಲಿಟಿಗಳಿಂದ ಹಣ ಕಟ್ ಮಾಡುವುದಕ್ಕಾಗಲಿಲ್ಲ. ಅವರಿಗೆ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನು ಕೊಡಬೇಕಾಯಿತು. ಏಕೆಂದರೆ ಅವರಿಂದ ಬಾಕಿ ಇರಲಿಲ್ಲ ನಾವು ಇವುಗಳಿಗೆಲ್ಲಾ ಎಲ್ಲಿಂದ ಹಣ ತೆಗೆದುಕೊಂಡು ಬರುವುದು? ಆದ್ದರಿಂದ ಈ ವರ್ಷ ೧೯೮೬–೮೭ನೇ ಸಾಲಿಗೆ ೨೦ ಕೋಟಿ ರೂಪಾಯಿ ವಸೂಲಾಗಿದೆ. ೧೦ ಕೋಟಿ ರೂಪಾಯಿ ಸೆಸ್ ಮುಖಾಂತರ ಸರ್ಕಾರಕ್ಕೆ ಬಂದಿದೆ. ೧೦ ಕೋಟಿ ರೂಪಾಯಿ ಮುನಿಸಿಪಾಲಿಟಿಗಳು ಅವರಲ್ಲಿ ವಸೂಲ್ಮಾಡಿ ಕೊಂಡಿದ್ದಾರೆ. ಅಂದರೆ ಇಷ್ಟು ಪ್ರಯತ್ನದ ನಂತರ ಶೇಕಡ ೪೩ರಷ್ಟು ವಸೂಲಾಗಿದೆ. ಈ ಒಂದು ಪ್ರಯತ್ನ ಇಲ್ಲದೇ ಹೋಗಿದ್ದರೆ ಶೇಕಡ ೫೦ರಷ್ಟು ಬರುತ್ತಿತ್ತು. ಈ ಪ್ರಯತ್ನದ ಹಿನ್ನೆಲೆಯಲ್ಲಿ ಇಷ್ಟು ಕೆಲಸ ನಡೆದಿದೆ ಎಂದು ವಿನಯದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಲಕ್ಷ್ಮಣರಾವ್ ಸಮಿತಿ ವರದಿ ಸರ್ಕಾರಕ್ಕೆ ಬಂದಿದೆ. ಇದರ ಮೇಲೆ ಸರ್ಕಾರ ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ, ಸ್ವಲ್ಪ ನಿಧಾನವಾಗಿದೆ.

ಶ್ರೀ ಧರ್ಮಸಿಂಗ್.—ಹೋದಸಲ ಕೂಡ ಇದೇ ಮಾತನ್ನು ಹೇಳಿದ್ದೀರಿ. ನೀವು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ನಿಧಾನವಾಗಿದೆಯೆಂದು ನಾನೇ ಹೇಳಿದ್ದೇನೆ. ಇನ್ನು ಪಾರ್ಕುಗಳ ಬಗೆ ಮಾನ್ಯ ಕೃಷ್ಣನ್‌ರವರು ಹೇಳಿದ್ದಾರೆ. ಆದಷ್ಟು ಕಟ್ಟುನಿಟ್ಟಾಗಿ ಇದರ ಬಗ್ಗೆ ಕಠಿಣವಾಗಿ ನಡೆದುಕೊಂಡು ಪಾರ್ಕುಗಳನ್ನು ರಚನೆ ಮಾಡುತ್ತೇವೆ. ಬೆಂಗಳೂರು ಪ್ಯಾಲೇಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನೋಟೀಸ್ ಕೊಟ್ಟಿದ್ದೇವೆ. ಇದರ ಬಗ್ಗೆ ಕೋರ್ಟಿಗೆ ಹೋಗಿದ್ದಾರೆಂದು

ಹೇಳಿದ್ದಾರೆ. ಇದನ್ನು ವಿಚಾರ ಮಾಡುತ್ತೇವೆ. ಬೆಂಗಳೂರು ಸುತ್ತಮುತ್ತಲೂ ಇರತಕ್ಕ ಕೆರೆಗಳ ರಕ್ಷಣೆ ಮಾಡಬೇಕೆಂದು......

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಕ್ ಎಂದು ಅದನ್ನು ಮೀಸಲಾಗಿಡುತ್ತಿದ್ದೀರೋ ಹೇಗೆ ? ಇಂಟರ್‌ನ್ಯಾಷನಲ್ ಕಾಂಪ್ಲೆಕ್ಸ್ ಎಂದು ಮಾತನಾಡುತ್ತಿದ್ದಾರೆ. ಯಾವುದನ್ನೂ ಸ್ಪಷ್ಟವಾಗಿ ಹೇಳಿ ಬಿಟ್ಟರೆ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಪರಭಾರೆ ಮಾಡುವುದಕ್ಕೆ ಬಿಡುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಇನ್ನೂ ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ಹೇಳಿದ್ದಾರೆ, ಲೇಔಟ್‌ಗಳನ್ನು ನಗರಸಭೆಗೆ ಕೊಡಬೇಕೆಂದು ಹೇಳಿದ್ದಾರೆ. ನಾನು ಈ ತತ್ವವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಬೆಂಗಳೂರು ನಗರಸಭೆಯಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತಿದ್ದಾರೆ. ಸನ್ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿರುವಹಾಗೆ ೧೯೬೪ನೇ ಇಸವಿಯಲ್ಲಿ ೬೪ ಲೇಔಟ್‌ಗಳನ್ನು ಮುನಿಸಿಪಾಲಿಟಿಗೆ ಕೊಟ್ಟರು. ಅವುಗಳು ಅವತ್ತು ಹೇಗಿದ್ದವೋ, ಇವತ್ತು ಹಾಗೆಯೆ ಇವೆ. ಹೊಸ ಲೇಔಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತಿದ್ದಾರೆ. ತತ್ವವನ್ನು ಒಪ್ಪಿಕೊಳ್ಳುತ್ತೇನೆ, ಆದಷ್ಟು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ವಾಮಿ, ಟ್ಯಾಕ್ಸ್ ಕೊಟ್ಟರೂ ತೆಗೆದುಕೊಳ್ಳಲಿಲ್ಲವೆಂದು ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇನೆ. ಬಿ. ಡಿ. ಎ. ನವರು ಡಿ.ಸಿ.ಬಿ. ಇಟ್ಟಿಲ್ಲವೆಂದು ಹೇಳಿದರು, ತಕ್ಷಣ ಇದನ್ನು ಮಾಡಿ ಎಂದು ಹೇಳುತ್ತೇನೆ.

ಇನ್ನು ಕೃಷ್ಣಭಟ್ಟರವರ ವಿಚಾರ, ಇದು ಭಾಗಶಃ ಕೋರ್ಟಿನಲ್ಲಿದೆ. ಕೊನೆಯ ತೀರ್ಮಾನ ಏನಾಗುತ್ತದೆಯೋ ನೋಡೋಣ. ಇನ್ನು ಮನ್‌ಜೋಗ್ ಬಗ್ಗೆ, ಏನೂ ಮಾಡಿದ್ದು, ಕೈಕಟ್ಟಿಕೊಂಡು ಕುಳಿತಿದ್ದೀರೆಂದು ಹೇಳಿದರು.

ಸ್ವಾಮಿ ನಾವು ಜನತಂತ್ರದಲ್ಲಿದ್ದೇವೆ. ಸಂವಿಧಾನಾತ್ಮಕ ಆಡಳಿತದ ಚೌಕಟ್ಟಿನಲ್ಲಿದ್ದೇವೆ. ಕಾಂಟ್ರಾಕ್ಟ್ ಆಕ್ಟ್ ಪ್ರಕಾರ ಪರ್ಚೇಸರ್ ಜವಾಬ್ದಾರಿ ಆಗುತ್ತಾನೆ ಎಂದು ಒಂದು ಸೆಕ್ಷನ್ ಇದೆ. ಕೊಂಡುಕೊಳ್ಳುವವನೇ ಜವಾಬ್ದಾರಿಯಾಗಿರುತ್ತಾನೆ ಎಂದು ಇದೆ, ಇದನ್ನು ಹೇಳಿದರೆ ತತ್ವ ಹೇಳುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಕೊಂಡುಕೊಳ್ಳುವವನು ಜವಾಬ್ದಾರಿಯಿಂದ ಕೊಂಡುಕೊಳ್ಳಬೇಕೆಂದು ಇದೆ. ನೀವು ಈ ರೀತಿ ಮಾಡಬಾರದು, ಇದು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಗೆ ವಿರುದ್ಧವಾಗಿದೆ, ಅರ್ಬನ್ ಸೀಲಿಂಗ್ ಆಕ್ಟ್‌ಗೆ ವಿರುದ್ಧವಾಗಿದೆ, ಲ್ಯಾಂಡ್ ಸೀಲಿಂಗ್ ಆಕ್ಟ್‌ಗೆ ವಿರುದ್ಧವಾಗಿದೆ, ಕಾನೂನು ಬಾಹಿರವಾಗಿದೆ ಎಂದು ಬಿ. ಡಿ. ಎ. ನವರು ಜಾಹೀರಾತು ಮುಖಾಂತರ ಜನಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ, ಇದನ್ನು ಅವರು ಮಾಡಿದ್ದಾರೆ. ಎರಡನೆಯದಾಗಿ, ಎಂ.ಆರ್.ಟಿ.ಪಿ ಆಕ್ಟ್ ಪ್ರಕಾರ ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ, ಬೇರೆ ಆಕ್ಟ್ ಮುಖಾಂತರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಎಂದು ವಿಚಾರ ಮಾಡಿ ಎಂದು ಕಾನೂನು ಇಲಾಖೆಯವರಿಗೆ ಹೇಳಿದ್ದೇನೆ. ಅದನ್ನು ತಿಳಿದುಕೊಳ್ಳದ ಹೊರತು ನಾನು ಬೇರೆ ಏನೂ ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಎನ್. ಎಸ್. ಎ. ಪ್ರಕಾರ ಕ್ರಮ ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಬರುತ್ತದೋ ಇಲ್ಲವೋ ನೋಡಬೇಕಲ್ಲಾ. ರಿಸ್ಟ್ರಿಕ್ಟೀವ್ ಟ್ರೇಡ್ ಪ್ರಾಕ್ಟೀಸಸ್ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ಎಂದು ನೋಡುತ್ತಿದ್ದೇ. ನನಗೆ ತಿಳಿದ ಮಟ್ಟಿಗೆ ಎನ್. ಎಸ್. ಎ. ಪ್ರಕಾರ ಬರುವುದಿಲ್ಲ. ನಿಮ್ಮ ವಿಚಾರದಲ್ಲಿ ನನಗೆ ಸಂಶಯ ಇದೆ, ನೀವು ಏನು ಹೇಳುತ್ತೀರಿ, ಅದನ್ನು ಹೇಳಲಿಲ್ಲ ಎಂದು ಹೇಳಿಬಿಡುತ್ತೀರಿ. ಆದುದರಿಂದ ನಾನು ಇಲ್ಲಿ ಬರೆದುಕೊಂಡಿರುತ್ತೇನೆ. ಜನತಾ ಪಕ್ಷದವರು ದುಡ್ಡು ತೆಗೆದುಕೊಂಡಿರುತ್ತಾರೆ ಎಂದು ಹೇಳಿದ್ದೀರಿ. ಹಾಗೆ ತಾವು ಮಾತನಾಡಬಹುದೇ ? ರಸ್ತೆಯೊಳಗೆ ನಿಮ್ಮ ವಿಚಾರದಲ್ಲಿ ಏನೇನೋ ಹೇಳುತ್ತಾರೆ ಎಂದು ಅದನ್ನು ನಾನು ಹೇಳಿದರೆ ನನಗೆ ಮರ್ಯಾದೆ ಇದೆಯೋ ? ಯೋಚನೆ ಮಾಡಿ. ತಾವು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕವರು, ಕಾರ್ಮಿಕ ಮುಖಂಡರು. ನನಗೆ ಗೊತ್ತಿರುವ ಹಾಗೆ, ನನ್ನ ತಿಳುವಳಿಕೆಯಲ್ಲಿ, ನನ್ನ ಪರ್ಸನಲ್ ನಾಲೆಡ್ಜ್‌ನಲ್ಲಿ ೧೯೪೮–೪೯ ರಿಂದ ಈ ಕಾರ್ಮಿಕರಂಗದ ಮುಂಚೂಣಿಯಲ್ಲಿ ಇರತಕ್ಕವರು. ಜನತಾ ಪಕ್ಷದವರು ದುಡ್ಡು ತೆಗೆದುಕೊಂಡಿದ್ದಾರೆ ಎಂದು ಹೇಳು

ತ್ತೀರಿ. ಇದನ್ನು ಯಾರು ಬೇಕಾದರೂ ಹೇಳಬಹುದು. ಆದರೆ ನಾನು ಹಾಗೆ ಆ ರೀತಿ ಹೇಳುವುದಿಲ್ಲ. ಬಜಾರ್‌ನಲ್ಲಿ ಕೇಳಿ ಬರತಕ್ಕಂಥ ಮಾತುಗಳನ್ನು, ರಾಜಕೀಯ ಪಕ್ಷಕ್ಕೆ ಮಸಿ ಬಳಿಯತಕ್ಕ ಮಾತುಗಳನ್ನು ಹೇಳುವುದು ನ್ಯಾಯ ಅಲ್ಲ, ನೀತಿ ಅಲ್ಲ, ಮರ್ಯಾದೆ ಅಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೂವ್ ಮಾಡಬೇಕೆಂದು ಹೇಳುತ್ತೀರಿ. ಪ್ರೂವ್ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅದನ್ನೂ ಕೇಳಿದ್ದೇನೆ. ಪ್ರೂವ್ ಮಾಡೋಣ ಎಂದು ತಾವು ಹೇಳುತ್ತೀರಿ. ಇಲ್ಲಿ ಕೇಳಿ. ಇದಕ್ಕೆ ಸ್ವಲ್ಪ ಹಿಂದೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಒಂದು ಪ್ರಶ್ನೆಯನ್ನು ಕೇಳಿದರು. ಎಷ್ಟು ಆಯೋಗಗಳನ್ನು ರಚನೆ ಮಾಡಿದ್ದೀರಿ, ಅದಕ್ಕೆ ಎಷ್ಟು ಖರ್ಚಾಗಿದೆ, ಎಷ್ಟು ವರದಿ ಬಂದಿದೆ ಎಂದು ಕೇಳಿದ್ದರು. ಇದು ಏನಾಗಿದೆ ಎಂದರೆ, ಆಯೋಗ ಮಾಡುತ್ತೇವೆ ಎಂದರೆ ಟೀಕೆ ಮಾಡುವುದು. ಆಯೋಗ ಮಾಡದೇ ಹೋದರೆ ಏತಕ್ಕೆ ಮಾಡಿಲ್ಲ ಎನ್ನುವುದು, ಆಯೋಗ ಮಾಡಿದರೆ ಏತಕ್ಕೆ ಮಾಡಿದಿರಿ ಎಂದು ಹೇಳುವುದು, ಇದು ಯಾವ ವಿತಂಡ ವಾದ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮ್ಮನ್ನು ಕೇಳಿಕೊಳ್ಳುವುದು ಇಷ್ಟೇ, ನಾನು ಆರೋಪಗಳನ್ನು ಏನು ಮಾಡಿದ್ದೇನೆ, ಅದರ ಬಗ್ಗೆ ಆಯೋಗ ರಚನೆ ಮಾಡಿ. ಅದರ ತೀರ್ಮಾನ ಬರಲಿ, ಆಮೇಲೆ ನೀವು ಏನು ಹೇಳುತ್ತೀರಿ ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಬೇರೆ ವೇದಿಕೆಗಳು ಇದೆ. So many other platforms within the existing law are available to you. you can make use of them.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಬಹಳ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ ಎನ್ನುವ ರೀತಿಯಲ್ಲಿ ನೀವು ಮಾತನಾಡುತ್ತಿದ್ದೀರಿ. ನಾನು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ಆದುದರಿಂದಲೇ ನಾನು ಹೇಳುವುದು ಇದರ ಬಗ್ಗೆ ಎನ್‌ಕ್ವೈರಿ ಮಾಡಿ ಎಂದು.

ಶ್ರೀ ಎ. ಲಕ್ಷ್ಮೀಸಾಗರ್.—ಜನತಾ ಪಕ್ಷದವರು ದುಡ್ಡು ತೆಗೆದುಕೊಂಡಿದ್ದಾರೆ, ಹಣ ತೆಗೆದುಕೊಂಡಿದ್ದಾರೆ ಎಂದು ಕೇಳಿಬರುತ್ತಿದೆ ಎಂದು ಹೇಳಿದ್ದೀರಿ, ಈ ಮಾತು ಸತ್ಯಾಂಶ ರಹಿತವಾದುದು, ಬೇಜವಾಬ್ದಾರಿಯಿಂದ ಹೇಳಿದ್ದು, ಎಚ್ಚರಿಕೆಯಿಂದ ಹೇಳತಕ್ಕ ಮಾತಲ್ಲ ಎನ್ನತಕ್ಕಂಥದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವೂ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ ಎಂದು ನಾನು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಆಯೋಗ ಮಾಡಿ ಎನ್‌ಕ್ವೈರಿ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ಆಹಾರ ನಿಗಮದ ಬಗ್ಗೆ ಮಾತನಾಡಿದ್ದಾರೆ. ಸಗಟು ವ್ಯಾಪಾರ ಸರ್ಕಾರ ಮಾಡಬೇಕೆಂದು ಅದರ ಬಗ್ಗೆ ಪ್ರೈವೇಟ್ ಮೆಂಬರ್ ರೆಸಲ್ಯೂಷನ್ ತಂದಿದ್ದರು. ಅದು ಆಗುವುದಿಲ್ಲ ಎಂದು ಹೇಳಿದ್ದೇನೆ. ಇಲ್ಲ ಎಂದು ಹೇಳಿದ್ದೇವೆ ಮತ್ತೊಮ್ಮೆ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಲೆವಿಯನ್ನು ಶೇಕಡಾ ೫೦ ರಿಂದ ಶೇಕಡಾ ೩೩ ೧/೩ಕ್ಕೆ ಏತಕ್ಕೆ ಇಳಿಸಿದ್ದೀರಿ ಎಂದು ಕೇಳಿದ್ದಾರೆ, ಇದರ ಬಗ್ಗೆ ಬೆಳೆಗಾರರಿಂದ ಸಾರ್ವಜನಿಕರಿಂದ ಮತ್ತು ಸಾರ್ವಜನಿಕ ಪ್ರತಿನಿಧಿಗಳಿಂದ, ಉಭಯ ಸದನಗಳ ಸದಸ್ಯರಿಂದ ಸ್ವಲ್ಪ ಕಡಿಮೆ ಮಾಡಿ, ಇದು ಬಹಳ ಹಿಂದೆ ನಿಗದಿ ಮಾಡಿದ್ದು, ಬರಗಾಲದ ಸಮಯದಲ್ಲಿ ಸರಿಯಾಗಿ ಬೆಳೆ ಆಗಿಲ್ಲ, ಸ್ವಲ್ಪ ಕಡಿಮೆಮಾಡಿ ಎಂದು ಕೇಳಿದರು, ಸರಕಾರದ ತೀರ್ಮಾನದಂತೆ ಮಾಡಿದ್ದೇವೆ, ಅದರ ಪ್ರಕಾರ ಈಗ ವಸೂಲಾಗುತ್ತಿದೆ

ಆಮೇಲೆ ಮಾನ್ಯ ಸದಸ್ಯರು ಕಾನೂನು ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರವನ್ನು ತಾವು ಪ್ರಸ್ತಾಪ ಮಾಡಬಾರದಾಗಿತ್ತು. ಕೆಲವು ವಿಚಾರಗಳಿಗೆ ನಾನು ಉತ್ತರ ಹೇಳುವಂತಹ ಸ್ಥಿತಿಯಲ್ಲಿರುವುದಿಲ್ಲ. ೧೫ ಲಕ್ಷ ರೂಪಾಯಿಗಳನ್ನು ರಿನೋವೇಟ್‌ಗಾಗಿ ಖರ್ಚು ಮಾಡಿದ್ದಾರೆಂದು ಅವರು ಹೇಳಿದರು. ಈ ವಿಚಾರವನ್ನು ಪ್ರಸ್ತಾಪ ಮಾಡಬಹುದೇ , ಇನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೆಂಕಟರಾಮಯ್ಯನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಮಾತನಾಡುತ್ತಾ ಕೇಸ್‌ಗಳಲ್ಲಿ ಬಹಳ ಡಿಲೇ ಆಗುತ್ತಿದೆಯೆಂದು ಹೇಳಿದರು, ಮಾನ್ಯ

ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಂದು ನಾನು ಹೈಕೋರ್ಟಿಗೆ ತಿಳಿಸುತ್ತೇನೆ. ಅವರು ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇನ್ನು ಸಿವಿಲ್ ಜಡ್ಜ್‌ಗಳನ್ನು ಜಾಸ್ತಿ ಕೊಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಈ ವರ್ಷ ನಾವು ಎರಡು ಸಿವಿಲ್ ಜಡ್ಜ್ ಕೋರ್ಟ್‌ಗಳನ್ನು ಸ್ಥಾಪನೆ ಮಾಡುತ್ತೇವೆ. ಅವರ ಪಕ್ಕದ ಕ್ಷೇತ್ರವಾದ ಚಿಂತಾಮಣಿಯಲ್ಲಿ ಒಂದು, ಅರಸೀಕೆರೆಯಲ್ಲಿ ಒಂದು ಕೋರ್ಟನ್ನು ಸ್ಥಾಪನೆ ಮಾಡುತ್ತೇವೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಈ ವರ್ಷ ಕೋರ್ಟ್‌ಗಳನ್ನು ಜಾಸ್ತಿ ಮಾಡಿದ್ದೇವೆ. ಅವುಗಳಲ್ಲಿ ೮ ಮುನ್ಸೀಫ್ ಕೋರ್ಟ್‌ಗಳು, ೨ ಅಡಿಷನಲ್ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟ್‌ಗಳು, ೨ ಅಡಿಷನಲ್ ಸಿವಿಲ್ ಜಡ್ಜ್ ಕೋರ್ಟ್‌ಗಳನ್ನು ಕೊಟ್ಟು ಕೋರ್ಟ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತಿದ್ದೇವೆ. ಅವರು ಇಲ್ಲಿ ಈಗ ಇಲ್ಲ, ಅವರು ಊರಿಗೆ ಹೊರಟು ಹೋಗಿದ್ದಾರೆ. ನನಗೆ ಗೊತ್ತು. ಇನ್ನು ಸಂಬಳ ಜಾಸ್ತಿ ಮಾಡಬೇಕೆನ್ನುವ ಮಾತನ್ನು ಸಹ ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಮೂರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿದೆ. ಅವರಿಗೂ ಸಹ ಹೆಚ್ಚಿನ ಸಂಬಳ ಬರತಕ್ಕಂಥ ಸನ್ನಿವೇಶಗಳು ಇವೆ. ಇದರಲ್ಲಿ ಏನಾದರೂ ನ್ಯೂನ್ಯತೆಗಳು ಇವೆ ಎನ್ನುವುದಾದರೆ ಅವುಗಳನ್ನು ತೀರ್ಮಾನ ಮಾಡುವ ಸಲುವಾಗಿಯೇ ಸರ್ಕಾರದವರು ಅಧಿಕಾರಿಗಳ ಮಟ್ಟದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಅವರ ಮುಂದೆ ಯಾರಿಗೆ ಅನ್ಯಾಯವಾಗಿದೆಯೋ ಅವರು ಹೋಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಅವಕಾಶ ಇದೆ. ಇನ್ನು ಮುನ್ಸೀಫ ಪೋಸ್ಟಿಂಗ್ಸ್ ಮಾಡಬೇಕೆಂದು ಹೇಳಿದರು. ಈಗಾಗಲೇ ನಾವು ಮುನ್ಸೀಫ್ ಸೆಲೆಕ್ಟ್ ಮಾಡಿಕೊಂಡಿದ್ದೇವೆ. ಅವರು ತರಬೇತಿಯನ್ನು ಮುಗಿಸಿದ ತಕ್ಷಣ ಪೋಸ್ಟಿಂಗ್ಸ್ ಕೊಡುತ್ತಾರೆ. ಅದು ನಾನು ಮಾಡುವಂತಹ ಕೆಲಸವಲ್ಲ. ಇನ್ನು ಎ. ಪಿ. ಪಿ. ಗಳನ್ನು ಸೆಲೆಕ್ಷನ್ ಮಾಡಿಕೊಂಡಿದ್ದೇವೆ. ಅವರು ಸಹ ತರಬೇತಿಯನ್ನು ಮುಗಿಸಿದ ಮೇಲೆ ಪೋಸ್ಟ್ ಮಾಡತಕ್ಕಂಥ ಕೆಲಸ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ಗ್ರೀನ್ ಕಾರ್ಡ್ ಸಿಸ್ಟಂನ್ನು ಸಿಟಿಗಳಿಗೂ ಅನ್ವಯಿಸಬೇಕೆಂದು ಹೇಳಿದ್ದಾರೆ. ಇದು ಅವರ ಹಳೆಯ ಡಿಮಾಂಡ್ ಆಗಿತ್ತು. ತಕ್ಷಣದಲ್ಲಿ ಆ ವಿಷಯ ನಮ್ಮ ಸರ್ಕಾರದ ಮುಂದೆ ಇಲ್ಲ. ಇನ್ನು ಟ್ರಾನ್ಸಪರೆಂಟ್ ರೀತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸೀರೆ ವಿಚಾರ ನನಗೆ ಗೊತ್ತಿಲ್ಲ ಸ್ವಾಮಿ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ಮಾನ್ಯ ಮಂತ್ರಿಗಳು ಮಾತನಾಡುತ್ತಾ ನೇಚರ ವಿರುದ್ಧವಾಗಿ ಯಾರೂ ಹೋಗಬಾರದೆಂದು ಹೇಳಿದರು. ಈಗ ಅವರೇನು ಮಾಡುತ್ತಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಸೀರೆ ವಿಚಾರ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ನೇಚರ್ ಎಂದರೆ ಏನು ತಿಳಿದುಕೊಂಡಿದ್ದಾರೆ ? ಆ ಬಗ್ಗೆ ಬೇಕಾದರೆ ನಾನು ವ್ಯಾಖ್ಯಾನ ಮಾಡಲೇನು ? ಅದು ಈಗ ಬೇಡ. ಇನ್ನು ಒಳ್ಳೆಯ ಸೀರೆಯನ್ನು ಕೊಡುವ ವ್ಯವಸ್ಥೆ ಮಾಡೋಣ. ಇನ್ನು ಸಕ್ಕರೆ ವಿತರಣೆ ಮಾಡತಕ್ಕಂಥ ವಿಚಾರದಲ್ಲಿ, ಸೀಮೆ ಎಣ್ಣೆಯನ್ನು ವಿತರಣೆ ಮಾಡತಕ್ಕಂಥ ವಿಚಾರದಲ್ಲಿ ಹೇಳಿದ್ದಾರೆ, ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಬರತಕ್ಕಂಥ ಪ್ರಮಾಣ ಬಹಳ ಕಡಿಮೆ. ಇನ್ನು ಆಕ್ಸಪ್ರಿಯರ್‌ಗೆ ಬದಲಿ ಪರಿಹಾರವನ್ನು ಸರ್ಕಾರದವರು ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರಾದಂಥ ಪಾಟೀಲರು ಹೇಳಿದ್ದಾರೆ. ಈಗಾಗಲೇ ನಾವು ಎರಡು ಕಂತು ಕೊಟ್ಟಿದ್ದೇವೆ. ಇನ್ನು ಎರಡು ಕಂತು ಕೊಡಬೇಕು. ಅದಷ್ಟು ಬೇಗ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು. ಅದೇನೆಂದರೆ ಶಿಕಾರಿಪುರ ಮತ್ತು ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇದೆ ಎಂದು, ಈ ಬಗ್ಗೆ ನಮ್ಮ ಕೈಯಲ್ಲಿ ಎಷ್ಟು ಸಹಾಯವಾಗುತ್ತದೆಯೋ ಅಷ್ಟು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಸೈಟ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಳ್ಳುವುದರಲ್ಲಿ ಸ್ವಲ್ಪ ತಡವೇ ಆಗಿದೆ. ಈಗಾಗಲೇ ಎಲ್ಲೆಲ್ಲಿ ಅಕ್ವಿಸಿಷನ್ ಮಾಡಿಕೊಳ್ಳಬೇಕೆಂದು ಲಿಸ್ಟ್ ಮಾಡಿದ್ದೇವೆ. ಆ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ಕ್ರಮ ಕೈಗೊಳ್ಳಬೇಕೆಂದು ನಮ್ಮ ಸರ್ಕಾರದವಕೀಲರಿಗೆ ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ, ಈ ಸರ್ಕಾರ ಬಹಳ ದಿವಸಗಳ ಕಾಲ ಉಳಿಯುವುದಿಲ್ಲವೆಂದು ಹೇಳಿದರು, ಮಾನ್ಯ ಸದಸ್ಯರಾದಂಥ

ಯಡಿಯೂರಪ್ಪನವರೇನು ಬ್ರಹ್ಮನೇ ಈ ರಾಜ್ಯದ ಜನ ನಿಮ್ಮ ಕೈಯಲ್ಲಿದ್ದಾರೇನು ? ಅವರು ಶಾಪ ಕೊಡುತ್ತಿದ್ದಾರೆ ಎಂದಿದ್ದಾರೆ ನೀವೇನು ಋಷಿಗಳೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನಾನು ಹೇಳಿದ್ದೇನೆಂದರೆ ಇದೇ ರೀತಿಯಲ್ಲಿ ನಿಮ್ಮ ಸರ್ಕಾರ ಮುಂದುವರಿದರೆ ಬಹಳ ದಿವಸಗಳು ಉಳಿಯುವುದಿಲ್ಲವೆಂದು ನಾನು ಹೇಳಿದ್ದು.

೫-೩೦ ಪಿ. ಎಂ.

ಇವರು ಏನು ಹೇಳುತ್ತಾರೆ ಎಂದರೆ, ಹಿಂದೆ ಒಬ್ಬ ಋಷಿ ಇದ್ದನಂತೆ ಅವನು ಕೊಟ್ಟರೆ ವರ, ಇಟ್ಟರೆ ಶಾಪ ಎನ್ನುವ ಹಾಗಿದೆ ಇವರ ಮಾತು. ಇವರ ಕೈಯಲ್ಲಿ ಇದ್ದರೇನು ಜನರು!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನ ಎಲ್ಲಾ ನಿಮ್ಮ ಜೇಬಿನಲ್ಲಿ ಇದ್ದಾರೆಂದು ತಿಳಿದು ಕೊಂಡಿದ್ದಿರಾ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ತಮಗೇ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಕಡೆಗೇ ಜನ ಇರುತ್ತಾರೆಂದು ತಿಳಿದುಕೊಳ್ಳಬೇಡಿ

ಶ್ರೀ ಎ. ಲಕ್ಷ್ಮೀಸಾಗರ್.—ಆ ಮೇಲೆ, ಮಾನ್ಯ ಸದಸ್ಯರಾದ ಉಸ್ತಾದ್‌ರವರು ಬಿಜಾಪುರದಲ್ಲಿ ಜನಗಳು ನೀರಿನ ಬವಣೆ ಪಡುತ್ತಿದ್ದಾರೆ. ಸರ್ಕಾರದವರು ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಬಿಜಾಪುರದಲ್ಲಿ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವ ಬಗ್ಗೆ ಸರ್ಕಾರವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕೊಳವೆ ಬಾವಿಗಳನ್ನು ತೋಡಿಸಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ೮೭ ಹಳ್ಳಿಗಳಲ್ಲಿರುವ ಬಾವಿಗಳಲ್ಲಿ ಹೂಳು ತೆಗೆಸಿ ಜನರಿಗೆ ನೀರನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ ಬಿಜಾಪುರದಲ್ಲಿರುವ ಭೂತನಾಳ ಕೆರೆಯನ್ನು ದುರಸ್ತಿ ಮಾಡಿ ಜನರಿಗೆ ನೀರನ್ನು ಕೊಡುವ ಬಗ್ಗೆ ನಾನು ಹೆಚ್ಚಿನ ಪ್ರಯತ್ನವನ್ನು ಮಾಡುತ್ತೇನೆಂದು ಇಷ್ಟನ್ನು ನಾನು ಹೇಳಬಹುದು. ಮಾನ್ಯ ಉಸ್ತಾದ್ ರವರು ನೀರನ್ನು ಬಿಜಾಪುರಕ್ಕೆ ಕೊಡಬೇಕು ಎಂದು ಬೆಳಿಗ್ಗೆ ಹೇಳುತ್ತಿರುವಾಗ ಇದ್ದ ಸಮಸ್ಯೆಯನ್ನು ಹೇಳಬಹುದಾಗಿತ್ತು. ಅದು ಬಿಟ್ಟು ಇವರು ಬಾಯಿಯನ್ನು ಏಕೆ ಬಡಿದುಕೊಳ್ಳಬೇಕಾಗಿತ್ತೋ ಎಂಬುದು ನನಗೆ ಗೊತ್ತಾಗಲಿಲ್ಲ. ಈ ರೀತಿ ಬಾಯಿ ಬಡಿದುಕೊಳ್ಳುವುದು ಸಂಸ್ಕೃತಿಯ ಲಕ್ಷಣವಲ್ಲ. ಬಾಯಿ ಬಡಿದುಕೊಂಡರೆ ನೀರು ಬರುವುದಿಲ್ಲ. ಹಾಗೇನಾದರೂ ನೀರು ಬರುವ ಹಾಗಿದ್ದರೆ ಬಡಿದು ಕೊಳ್ಳಲಿ. ನೀರು ಕೊಡಿ ಎಂದು ಮಾತ್ರ ನಮ್ಮನ್ನು ಕೇಳಬಾರದು.

ಆ ಮೇಲೆ ಮಾನ್ಯ ಸದಸ್ಯರಾದ ಶ್ರೀ ವೇದಾಂತ ಹೆಮ್ಮಿಗೆಯವರು ಬೆಂಗಳೂರು ನಗರದ ಜನತೆಗೆ ಇನ್‌ಫಾರ್ಮಲ್ ರೇಷನಿಂಗ್‌ನ್ನು ಜಾಸ್ತಿ ಕೊಡುತ್ತಿದ್ದೀರಿ, ಬೆಂಗಳೂರಿನ ಜನರಿಗೆ ಕೊಡುವ ರೇಷನಿಂಗ್ ರೀತಿಯಲ್ಲೇ ಮೈಸೂರು ಜನರಿಗೂ ಕೊಡಿ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ನಮಗೆ ಜಾಸ್ತಿ ಅಲಾಟ್‌ಮೆಂಟ್ ಕೊಟ್ಟರೆ ಬೆಂಗಳೂರು ನಗರದಲ್ಲಿ ಜನರಿಗೆ ಕೊಡುತ್ತಿರುವಷ್ಟೇ ಮೈಸೂರು ಜನರಿಗೂ ಕೊಡುತ್ತೇವೆ ಎಂದು ಸನ್ಮಾನ್ಯ ಸದಸ್ಯರಾದ ಶ್ರೀ ವೇದಾಂತ ಹೆಮ್ಮಿಗೆಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಲೋಕಲ್ ಫೈನಾನ್ಸ್ ಕಮೀಷನ್ ಬಗ್ಗೆ ಸನ್ಮಾನ್ಯ ಸದಸ್ಯರಾದ ಶ್ರೀ ಬ್ಲೆಸಿಯಸ್ ಡಿಸೋಜಾ ರವರು ತುಂಬಾ ಹೇಳಿದ್ದಾರೆ. Basically, I have answered that question. About vented dam, I certainly promise to do the best as far as possible within the finances of the Corporation in the Water Supply Dept. Then, Mr. Patil told about Karpurihalla and Poona Borewell scheme-Sir, Mr. Patil, found himself a very good lawyer in Mr. D'Souza-I will try to do something for this. It requires huge sums of money-that is the only constraint. He is not in favour of getting Karpurihalla borewell scheme which I am trying to finalise with the assistance of HUDCO - they are prepared to pay but

Mr. Patil is not willing. I will take to him on this. About Prathima Apartment – I will look into it – it is an individual allegation... ಆ ಮೇಲೆ, ಸನ್ಮಾನ್ಯ ಸದಸ್ಯರಾದ ಮಾಲೀಕಯ್ಯ ಗುತ್ತೇದಾರ್‌ರವರು ಹೆಚ್ಚಿನ ಸಂಖ್ಯೆಯಲ್ಲಿ ಕೋರ್ಟ್‌ಗಳನ್ನು ತೆಗೆಯಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಇಷ್ಟೇ, ಹಿಂದೆ ಆಗದೇ ಇರುವಷ್ಟು ಪ್ರಮಾಣದಲ್ಲಿ ಕೋರ್ಟ್‌ಗಳ ಸ್ಥಾಪನೆಯನ್ನು ನಾವು ಮಾಡಿದ್ದೇವೆ. ಈಗಾಗಲೇ ನಾವು 20 ಕೋರ್ಟ್‌ಗಳನ್ನು ತೆಗೆದಿದ್ದೇವೆ.

ಬರ ನಾಲ್ಕು ವರ್ಷಗಳಿಂದ ಇದ್ದರೂ ಕೂಡ, ನಾಲ್ಕು ಕೋಟಿ ರೂಪಾಯಿಗಳನ್ನು ಕೋರ್ಟ್ ಕಾಂಪ್ಲೆಕ್ಸ್ ಕಟ್ಟುವುದಕ್ಕೆ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಾ ಇದ್ದೇವೆ. ಅದೇ ರೀತಿಯಾಗಿ ಜ್ಯುಡಿಷಿಯಲ್ ಆಫೀಸರ್ಸ್ ಮನೆಗಳನ್ನು ಕಟ್ಟುವುದಕ್ಕೂ ಕೂಡ ಹಣವನ್ನು ಅವರಿಗೆ ಒದಗಿಸಿ ಕೊಡುತ್ತಾ ಇದ್ದೇವೆ. ಆ ಮೇಲೆ ಹೆಚ್ಚಿಸಬೇಕೆಂದು ಕೇಳಿದ್ದಾರೆ. ನಾನು ಅವರ ವಾದವನ್ನು ಒಪ್ಪುತ್ತೇನೆ. ಆದರೆ ಅದಕ್ಕೆ ಹೈಕೋರ್ಟ್‌ನವರು ಸಮ್ಮತಿಸಬೇಕು. ಅವರು ಒಪ್ಪಿಕೊಂಡರೆ ಸದರಿ ಆಕ್ಟ್‌ನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದನ್ನು ಮಾನ್ಯ ಸದಸ್ಯರಾದ ಗುತ್ತೇದಾರರು ಗಮನದಲ್ಲಿಟ್ಟುಕೊಳ್ಳಬೇಕೆಂದು ಅವರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಅಧ್ಯಕ್ಷರು.—ತಾವುಗಳು ಹೈಕೋರ್ಟ್‌ಗೆ ಬರೆದು ತರಿಸಿಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಆಗುವುದಿಲ್ಲ ಎಂದು ಹೇಳಿದ್ದಾರೆ. ಆ ಬಗ್ಗೆ ನಾನು ಈಗಾಗಲೇ ಬರೆದು ಕೇಳಿದ್ದೇನೆ. ಕೋರ್ಟ್‌ಗಳಲ್ಲಿ ಸಾಕ್ಷಿದಾರರಿಗೆ ಕುಳಿತುಕೊಳ್ಳಲು ಸ್ಥಳ ಬೇಕು ಎಂದು ಹೇಳಿದ್ದಾರೆ. ಇದು ಲಾರ್ಡ್‌ಕಾರ್ನ್‌ವಾಲೀಸ್‌ರ ಕಾಲದಿಂದಲೂ ಬರುತ್ತಾ ಇದೆ. ಈಗ ಹೊಸ ಕೋರ್ಟ್ ಕಚೇರಿಗಳು ಎಲ್ಲಿ ಬರುತ್ತಾ ಇವೆ, ಅಲ್ಲಿ ಎಲ್ಲಾ ಕಡೆಗಳಲ್ಲಿಯೂ ಪ್ರತ್ಯೇಕವಾಗಿ ಸಾಕ್ಷಿದಾರರಿಗೆ ಕುಳಿತುಕೊಳ್ಳುವುಕ್ಕೆ ಮತ್ತು ಶೌಚಾಲಯ, ಇತ್ಯಾದಿ ಸೌಕರ್ಯಗಳನ್ನು ಒದಗಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ಹೊಸ ಕೋರ್ಟ್‌ಗಳು ಬರತಕ್ಕಂಥ ಎಲ್ಲಾ ಭಾಗಗಳಲ್ಲಿಯೂ ಮಾಡುತ್ತೇವೆ. ಇನ್ನು ಕಾನೂನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಕಾನೂನು ಬದಲಾವಣೆಗಳನ್ನು ಮಾಡುತ್ತಾ ಬಂದಿದ್ದೇವೆ. ಹಾಗೆಯೇ ಸ್ಪೆಷಲ್ ಕೋರ್ಟ್ ವ್ಯವಸ್ಥೆ ಮಾಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಬೆಂಗಳೂರಿನಲ್ಲಿ ಫ್ಯಾಮಿಲಿ ಕೋರ್ಟ್ ಮಾಡಿದ್ದೇವೆ. ಕೋರ್ಟ್ ಕಟ್ಟಡ ಆಗುತ್ತಾ ಇದೆ. ಅದು ಕೆಲವೇ ತಿಂಗಳುಗಳಲ್ಲಿ ಅಸ್ತಿತ್ವಕ್ಕೆ ಬರುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ವಕೀಲರ ಸಂಘಕ್ಕೆ ಅನುದಾನವನ್ನು ಕೊಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಒಂದು ಬದಲಾವಣೆ ಮಾಡಿದ್ದೇವೆ. ಈ ಸಂಘಕ್ಕೆ ಅನುದಾನ ಕೊಡುವ ವಿಷಯದಲ್ಲಿ ಎಲ್ಲಾ ಸರಕಾರಗಳು ಇದ್ದಾಗಲೂ, ಅಂದರೆ, ಮಾನ್ಯ ಪಾಟೀಲರು ಇದ್ದಾಗಲೂ ಮತ್ತು ಮಾನ್ಯ ಖರ್ಗೆಯವರು ಇದ್ದಾಗಲೂ ಅಷ್ಟೆ. ಈ ಸಂಘಕ್ಕೆ ಅಂದರೆ ಲಾಸ್ಟ್ ಪ್ರೈಯಾರಿಟಿ. ಆದುದರಿಂದ the money that would available for distribution by way of grants to Bar Associations... ಜಾಸ್ತಿ ಮಾಡಬೇಕೆಂದು ಕೇಳಿದ್ದೀರಿ. ಅದು ಈವರೆಗೂ ಆಗಲಿಲ್ಲ. ಈ ವರ್ಷ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಹಿಂದಿನ ವರ್ಷಗಳಲ್ಲಿ ಜಾಸ್ತಿ ಕೇಳುವುದು, ಕೇಳದೆ ಇರುವುದು ಹೀಗೆಲ್ಲಾ ಆಗಿದೆ. ಇದನ್ನು ತಪ್ಪಿಸುವುದಕ್ಕೆ ರೂಲ್ಸ್ ಮಾಡಿದ್ದೇವೆ. Depending upon number of advocates practicing in each bar association, ಕೊಡಬೇಕೆಂದು ರೂಲ್ಸ್ ಮಾಡಿದ್ದೇವೆ. ಅದರ ಪ್ರಕಾರ ಕೇಳಲಿ, ಕೇಳದೇ ಇರಲಿ ಅವರ ಗ್ರ್ಯಾಂಟ್ ಅವರಿಗೆ ಸೇರತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ.

ಇನ್ನು ಕೋರ್ಟ್‌ಗಳಲ್ಲಿ ಕನ್ನಡ ಬೆರಳಚ್ಚು ಯಂತ್ರಗಳು ಬೇಕೆಂದು ಕೇಳಿದ್ದಾರೆ, ಅದನ್ನು ಕೊಡೋಣ ಎಂದು ಹೇಳುತ್ತೇನೆ.

ಲಕ್ಷ್ಮೇಶ್ವರದಲ್ಲಿ ನೀರಿನ ತೊಂದರೆ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಸರಿ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಯೇ ಮಾನ್ಯ ಹಿಂಡಸಗೇರಿಯವರು ಯಥಾ ಪ್ರಕಾರ ಹುಬ್ಬಳ್ಳಿ–ಧಾರವಾಡ ಪ್ರದೇಶದಲ್ಲಿ ನೀರಿನ ವಿಚಾರದಲ್ಲಿ ಕೇಳಿದ್ದಾರೆ. ಅದಕ್ಕೆ ಸವಿಸ್ತಾರವಾದ

ಉತ್ತರವನ್ನು ಈಗಾಗಲೇ ಒಂದು ಸಂದರ್ಭದಲ್ಲಿ ಕೊಟ್ಟಿದ್ದೇನೆ. ಹಾಗೆಯೇ ನ್ಯೂನ್ಯತೆಗಳ ಬಗ್ಗೆ ಸರಿಪಡಿಸುವ ಪ್ರಯತ್ನ ಮಾಡುತ್ತೇನೆ. ಅಂತೆಯೇ ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು, ಕರ್ನಾಟಕ ನೀರು ಸರಬರಾಜು ಮಂಡಳಿಯವರಿಗೆ ಕೊಡಬೇಕಾದಂತಹ ೭ ಕೋಟಿ ರೂಪಾಯಿಗಳಲ್ಲಿ ಅರ್ಧ ಭಾಗವನ್ನಾದರೂ ಕೊಡುವುದಕ್ಕೆ ನಮ್ಮ ಪರವಾಗಿ ವಕಾಲತ್ತು ವಹಿಸಬೇಕೆಂದು ಅವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನೀವು ಕೆಲವು ಸಾರಿ ಅವರು ಕೇಳದಿದ್ದರೂ ಗ್ರ್ಯಾಂಟ್ ಕೊಡುತ್ತೀರಿ. ಇದನ್ನೂ ಕೂಡ ಗ್ರ್ಯಾಂಟ್ ಎಂದು ತಿಳಿದುಕೊಂಡು ಬಿಟ್ಟುಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ಪೆಷಲ್ ಗ್ರ್ಯಾಂಟ್‌ನ್ನು ಅವರಿಗೆ ನಾವು ಕೊಟ್ಟಿದ್ದೇವೆ. ನಾವು ೫೦ ಲಕ್ಷ ರೂಪಾಯಿಗಳ ಸ್ಪೆಷಲ್ ಗ್ರ್ಯಾಂಟ್‌ನ್ನು ಕೊಟ್ಟಿದ್ದಕ್ಕೆ, ನನ್ನ ಮೇಲೆ, ಮಾನ್ಯ ಬೊಮ್ಮಾಯಿಯವರ ಮೇಲೆ, ಹೋದ ಸಲ ತಾವುಗಳು ಕತ್ತಿ, ಗದೆ, ತೆಗೆದುಕೊಂಡು ಬಂದಿದ್ದೀರಿ, ಅದು ಮಾನ್ಯ ಹಿಂಡಸಗೇರಿಗೆಯವರಿಗೆ ಗೊತ್ತಿಲ್ಲ. ೩೦೦ ಬೋರ್‌ವೆಲ್‌ಗಳನ್ನು ಕೊಡಿ ಎಂದು ಹೇಳಿದ್ದಾರೆ. ನಾನು ಅವರಿಗೆ ಹೇಳಬಯಸುವುದೇನೆಂದರೆ ನೀರಿನ ಪ್ರಮಾಣ ಬೋರ್‌ವೆಲ್‌ಗಳನ್ನು ಹೆಚ್ಚಿಗೆ ಹಾಕುವುದಿಲ್ಲ. ಇದರ ಬಗ್ಗೆ ಬೆಂಗಳೂರು ನಗರದಲ್ಲಿ ನಮಗೆ ಆಗಿರುವ ಕಟು ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇರತಕ್ಕಂಥ ಬೋರ್‌ವೆಲ್‌ಗಳಲ್ಲಿ ಎಷ್ಟು ನೀರು ಸಿಗುತ್ತದೆ ಎಂಬುದನ್ನು ತಿಳಿದುಕೊಂಡು ಇನ್ನು ಎಷ್ಟು ಬೋರ್‌ವೆಲ್‌ಗಳನ್ನು ಹಾಕಬೇಕೆಂಬುದನ್ನು ನಿರ್ಣಯ ಮಾಡುವುದು ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ. ಈಗಾಗಲೇ ೧೫೦ ಬೋರ್‌ವೆಲ್‌ಗಳನ್ನು ಹಾಕಿಸಲಾಗಿದೆ. ಇನ್ನುಳಿದುದನ್ನು ಈ ತಿಂಗಳಲ್ಲಿ ಕೊಡುತ್ತೇವೆ. ಈ ಬಗ್ಗೆ ಬಂದ ಗಮನ ಸೆಳೆಯುವ ಸೂಚನೆಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ.

ಇನ್ನು ಮಾನ್ಯ ಚಿಕ್ಕಬೋರೇಗೌಡರು ಮೈಸೂರು ಮಹಾನಗರ ಪಾಲಿಕೆಯ ಗೋಳಿನ ಕತೆಯನ್ನು ಇಲ್ಲಿ ಹೇಳಿಕೊಂಡಿದ್ದಾರೆ. ಸುಂಕದವರ ಮುಂದೆ ಸುಖ-ದುಃಖವನ್ನು ಹೇಳಿಕೊಂಡರೆ ಏನು ಪ್ರಯೋಜನ ಎಂದು ಅವರಿಗೆ ಉತ್ತರವನ್ನು ಕೊಡಬಯಸುತ್ತೇನೆ. ಅವರು ೧೨ ಕೋಟಿ ರೂಪಾಯಿಗಳ ಬಾಕಿಯನ್ನು ಕೊಡಬೇಕು ಸ್ವಾಮಿ.

ಮಾನ್ಯ ಸದಸ್ಯರಾದ ಮೊಯ್ದುದ್ದೀನ್‌ರವರು ಕೆಲವು ಬೇಸಿಕ್‌ನ್ನು ರೈಸ್ ಮಾಡಿದ್ದಾರೆ. ಅವುಗಳ ಅರ್ಬನ್ ಗ್ರೋಥನ್ನು ಚೆಕ್ ಮಾಡುವ ಬಗ್ಗೆ ಇದೆ. ಹೀಗೆ ಇದು ಬೆಳೆಯುತ್ತಾ ಇದೆ, ಈ ಬಗ್ಗೆ ಸಂವಿಧಾನ ಬದಲಾವಣೆ ಮಾಡುವುದಕ್ಕೆ ಆಗುತ್ತದೆಯೇ ಎಂದು ನೋಡಿ ಎಂದು ನಾನು ಒಂದು ವಿಚಾರ ಗೋಷ್ಠಿಯಲ್ಲಿ ಹೇಳಿಬಿಟ್ಟಿದ್ದಕ್ಕೆ, ನನ್ನ ಮೇಲೆ ಕತ್ತಿ ತೆಗೆದುಕೊಂಡು ಬಂದರು. ನಮ್ಮ ಪಕ್ಷದವರೇ ನಮ್ಮ ಮೇಲೆ ಕತ್ತಿ ತೆಗೆದುಕೊಂಡು ಬಂದರು. ಹಾಗಾದರೂ ನಾನು ಬಾಯಿ ಮುಚ್ಚಿಕೊಂಡು ಸುಮ್ಮನೆ ಇದ್ದೆ.

ಶ್ರೀ ಆರ್. ಎನ್. ನಾಯ್ಕ.—ನಿಮ್ಮ ಪಕ್ಷದವರು ಹಾಗೆ ಮಾಡಬಾರದಾಗಿತ್ತು....ಪಾಪ...

ಶ್ರೀ ಎ. ಲಕ್ಷ್ಮೀಸಾಗರ್.—ಮೇಷ್ಟ್ರು ಹೀಗೆಲ್ಲಾ ಮಾತನಾಡುವಾಗ ತೊಂದರೆ ಮಾಡಬಾರದು...

ಶ್ರೀ ಆರ್. ಎನ್. ನಾಯಕ್.—ತಾವು ಛೇಷಾಗಿ ಮಾತನಾಡುತ್ತೀರೆಂದು ಹೇಳಬಾರದೇ?

ಶ್ರೀ ಎ. ಲಕ್ಷ್ಮೀಸಾಗರ್.—ಅರ್ಬನ್ ಗ್ರೋಥ್ ಅನ್ನು ನಿಲ್ಲಿಸಬೇಕೆಂದು ನಾನು ಹೇಳಿದ್ದಕ್ಕೆ ನನ್ನ ಮೇಲೆ ಗಧಾ ಪ್ರಹಾರ ಶುರುವಾಯಿತು, ಈಗ ಎಲ್ಲರೂ ನನ್ನ ವಾದವನ್ನು ಒಪ್ಪಿಕೊಳ್ಳುತ್ತಿದ್ದಾರೆ. "ವಿಪ್ರಹ ಪಶ್ಚಿಮ ಬುದ್ಧಾಹ'' ಎಂದು ಸಂಸ್ಕೃತದಲ್ಲಿ ಒಂದು ಗಾದೆ ಇದೆ ಅಂದರೆ ಬ್ರಾಹ್ಮಣನಿಗೆ ಇನ್‌ಸಲ್ಟ್ ಆದ ಮೇಲೆ ಬಂತು ಬಯ ಎನ್ನುವ ಹಾಗೆ ಈಗ ಇವರಿಗೂ ಬುದ್ಧಿ ಬಂದಿರುವ ಹಾಗೆ ಕಾಣಿಸುತ್ತಿದೆ. ಅರ್ಬನ್ ಪಾವರ್ಟಿಯನ್ನು ನೀವು ಐಡೆಂಟಿಫೈ ಮಾಡಿಲ್ಲ, ಹಳ್ಳಿಗಾಡಿನ ಪ್ರದೇಶದಲ್ಲಿ ಬಡತನದಲ್ಲಿರತಕ್ಕಂತಹ ಜನರಿಗಿಂತಲೂ ಹೆಚ್ಚಿನ ಕಠಿಣ ಬಡತನದಲ್ಲಿರತಕ್ಕಂತಹ ಜನರು ನಗರ ಪ್ರದೇಶಗಳಲ್ಲಿದ್ದಾರೆ, ಇಂತಹ ಜನರನ್ನು ಐಡೆಂಟಿಫೈ ಮಾಡತಕ್ಕಂತಹ ಶಾಸ್ತ್ರೀಯವಾದಂತಹ ಅಳತೆಗೋಲನ್ನು ನೀವು ಇನ್ನೂ ಸಿದ್ಧ ಮಾಡಿಲ್ಲ ಅನ್ನತಕ್ಕಂತಹ ಶ್ರೀ ಮೊಹಿನುದ್ದೀನ್‌ರವರ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇನೆ. ಕಳೆದ ಸಲ ಪ್ರಶ್ನೋತ್ತರ ವೇಳೆಯಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದರು, ಸಂತೆ ಹೊತ್ತಿಗೆ ಮೂರು ಮೊಳ ಸೀರೆ ನೇಯ್ದು ಹಾಗೆ ಒಂದು ತಾತ್ಕಾಲಿಕವಾದ

ಉತ್ತರವನ್ನು ಕೊಟ್ಟಿದ್ದೆ, ಆ ಉತ್ತರ ಸಮರ್ಪಕವಾಗಿಲ್ಲವೆಂದು ನಾನು ಅವರಿಗೂ ಹೇಳಿದ್ದೇನೆ. ಈ ವಿಷಯದ ಬಗ್ಗೆ ಅಧ್ಯಯನ ನಡೆಯಬೇಕು. ಇದನ್ನು ಐಡೆಂಟಿಫೈ ಮಾಡತಕ್ಕಂತಹ ಕೆಲಸ ಮಾಡಬೇಕು ಎಂಬ ತತ್ವವನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಬೆಂಗಳೂರಿನಲ್ಲಿ ನೀರನ್ನು ಕನ್‌ಸರ್ವ್ ಮಾಡಬೇಕೆಂದು, ಜಾಸ್ತಿ ಉಪಯೋಗ ಮಾಡಬಾರದೆಂದು ಹೇಳಿದರು. ಇಂಡಿಯಾ ದೇಶದಲ್ಲಿ, ಭಾರತ ದೇಶದಲ್ಲಿ ಅವನು ಯಾವುದೇ ಜಾತಿಯವನಾಗಿರಲೀ ನಾವು ನೀರನ್ನು ಬಾಹುಳ್ಯವಾಗಿ ಉಪಯೋಗಿಸುವಷ್ಟು ಪ್ರಪಂಚದ ಬೇರೆ ಯಾವ ದೇಶದ ಜನರೂ ಕೂಡ ಉಪಯೋಗಿಸುವುದಿಲ್ಲ. ಇದು ನಮಗೆ ಅಭ್ಯಾಸಕ್ಕೆ ಒಂದು ಬಿಟ್ಟಿದೆ ಏನು ಮಾಡೋಣ ಕಡಿಮೆ ಮಾಡಿಕೊಳ್ಳಿ ಎಂದು ಸಾಹೇಬರು ಹೇಳುತ್ತಾರೆ, ಆದು ಹೇಗೆ ಸಾಧ್ಯವಾಗುತ್ತದೋ ಗೊತ್ತಿಲ್ಲ. ಇನ್ನು ಚರಂಡಿ ನೀರನ್ನು ರೀ ಸೈಕಲ್ ಮಾಡಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದು ಕೆ. ಎಂ. ಸಿ ವ್ಯಾಲಿ, ಕೋರಮಂಗಲ ವ್ಯಾಲಿ, ಏರ್ ಕ್ರಾಫ್ಟ್ ಹತ್ತಿರ ಈ ಚರಂಡಿ ನೀರನ್ನು ಸೋಸತಕ್ಕಂತಹ ಕೆಲಸ ನಡೆದಿದೆ ಇದಕ್ಕೆ ಸೆಕೆಂಡರಿ ಟ್ರೀಟ್‌ಮೆಂಟ್ ಕೊಟ್ಟರೆ ಕುಡಿಯುವುದಕ್ಕೆ ಯೋಗ್ಯವಾದಂತಹ ನೀರು ಆಗುತ್ತದೆ. ಆ ನೀರನ್ನು ಕುಡಿಯುವುದಿಲ್ಲವೆಂದು ಮಲೇಶಿಯಾದಿಂದ ಬಂದಂತಹ ಸ್ನೇಹಿತರು ಹೇಳಿದ್ದಾರೆ. ಇದು ಒಂದು ತರಹ ಸೈಕಲಾಜಿಕಲ್ ಅವರ್ಷನ್ ಇದೆ ಇದನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ವೃಷಭಾವತಿಯಲ್ಲಿ ಇದೇ ರೀತಿಯಾದಂತಹ ಕೆಲಸ ನಡೆದಿದೆ ಈ ಎರಡು ವಿಧವಾದಂತಹ ಕೆಲಸವನ್ನು ಹೆಬ್ಬಾಳ ವ್ಯಾಲಿಯಲ್ಲಿ ಮಾಡಬೇಕೆಂದು ಕಾರ್ಯಕ್ರಮ, ಹಾಕಿಕೊಂಡಿದ್ದೇವೆ.

ಶ್ರೀ ಎಂ. ಎನ್. ಕೃಷ್ಣನ್.—ಆ ನೀರು ಅಲ್ಲವೆಂದು ಹೇಳಿದರೆ ಕುಡಿಯುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಆಗುವುದಿಲ್ಲ ಯೂರೋಪಿನಲ್ಲಿ ಇದು ನಡೆದಿದೆ ಇದೇ ರೀತಿ ಮಾಡಿ ಅಲ್ಲಿನ ಡ್ಯಾನ್ಯೂಬ್ ನದಿಗೆ ಇದನ್ನು ಕೊಡುವುದಕ್ಕೆ ಹೋದರು, ನಾವ್ಯಾರು ಕುಡಿಯುವುದಿಲ್ಲ ವೆಂದು ಜನ ಹೇಳಿದರು, ಆಗ ಬುದ್ಧಿವಂತನಾದ ಇಂಜಿನಿಯರ್ ಏನು ಮಾಡಿದನೆಂದರೆ ಶೋಧಿಸಿದ ನೀರನ್ನು ನದಿಯ ಮೇಲ್ಭಾಗದಲ್ಲಿ ೧೫ ಮೈಲಿ ದೂರಕ್ಕೆ ತೆಗೆದುಕೊಂಡು ಹೋಗಿ ಬಿಟ್ಟನಂತೆ. ಈಗ ಕುಡಿಯುತ್ತಿದ್ದಾರೆ. ಕಾರ್ಪೊರೇಷನ್ನಿನವರು ಕೆಲಸ ಮಾಡಲಿಲ್ಲವೆಂದು, ಮಾರ್ಕೆಟ್ ಕಟ್ಟಲಿಲ್ಲವೆಂದು, ಫ್ಲೈ ಓವರ್ ಕಟ್ಟಿಲ್ಲವೆಂದು ಹೇಳಿದರು, ಫ್ಲೈ ಓವರ್ ಕಟ್ಟುವುದಕ್ಕೆ ಏರ್ಪಾಡಾಗಿದೆ. ಎಸ್.ಕೆ.ಆರ್. ಮಾರ್ಕೆಟ್ ಅನ್ನು ನವೀಕರಿಸತಕ್ಕಂತಹ ಕೆಲಸ ಆಗಿದೆ. ಇಲ್ಲಿ ಗಗನ ಲೋಕವನ್ನು ತೋರಿಸತಕ್ಕಂತಹ ಒಂದು ಸಂಸ್ಥೆ ತಯಾರಾಗಿದೆ, ಅದು ಆದಷ್ಟು ಬೇಗ ತೆರೆಯಲ್ಪಡುತ್ತದೆ. ಬೆಂಗಳೂರು ಮಹಾ ನಗರ ಪಾಲಿಕೆ ಮಾಡಬೇಕಾದಂತಹ ಕೆಲಸಕ್ಕೆ ನನ್ನನ್ನು ಕೇಳಿದರೆ ನಾನು ಮಂತ್ರಿಯಾಗಿ ಏನು ಮಾಡುವುದ ಕ್ಕಾಗುತ್ತದೆ ಎಂದು ಸನ್ಮಾನ್ಯ ಸದಸ್ಯರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕೆ.ಹೆಚ್. ಪಾಟೀಲ್ ರವರು ಪರ್ಟಿಕ್ಯುಲರ್‌ಲೀ ಆಹಾರ ನಿಗಮದ ಬಗ್ಗೆ ಅವರ ಅನುಭವದ ಹಿನ್ನೆಲೆಯಲ್ಲಿ ಹೇಳಿದ್ದಾರೆ. ಅವರು ಹೇಳಿದ ತೂಕವಾದಂತಹ ಮಾತುಗಳನ್ನು ನಾನು ಗಮನಿಸಿದ್ದೇನೆ. ಆಹಾರ ನಿಗಮ ನಡೆಸುತ್ತಿರತಕ್ಕಂತಹ ಕೆಲಸಕಾರ್ಯಗಳು ಸರಿಯಾಗಿವೆ ಎಂದು ಹೇಳುವುದಕ್ಕೆ ನಾನು ಸಿದ್ಧನಾಗಿಲ್ಲ, ಅದರಲ್ಲಿ ಇನ್ನೂ ಸುಧಾರಣೆಯಾಗಬೇಕಾಗಿದೆ ಅದು ತನ್ನ ಸ್ವಂತ ಕಾಲಿನ ಮೇಲೆ ನಿಲ್ಲಬೇಕು ಸ್ವಾವಲಂಬನೆಯ ದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಡಿಸ್ಟ್ರಿಬ್ಯೂಷನ್ ವಿಚಾರದಲ್ಲಿ ತಮ್ಮ ಸಂಶಯವನ್ನು ವ್ಯಕ್ತಪಡಿಸಿದ್ದೀರಿ. ನಾನು ತಮ್ಮ ಸಂಶಯವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿಲ್ಲದೇ ಹೋದರೂ ಕೂಡ ಸಂಶಯವಿಲ್ಲದೆ ನಾನೂ ಕೂಡ ಇಲ್ಲ. ಇದನ್ನು ಸದಾ ನೋಡಿ ಕಣ್ಣಿನಲ್ಲಿ ಕಣ್ಣು ಇಟ್ಟುಕೊಂಡು ಜಾಗರೂಕರಾಗಿರತಕ್ಕಂತಹ ಚಿಂತನೆ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಇರಬೇಕೆಂದು ತಾವು ಹೇಳಿದ್ದೀರಿ, ಅದನ್ನು ನಾನು ಒಪ್ಪಿ ಕೊಳ್ಳುತ್ತೇನೆ

ಆಮೇಲೆ ಈ ಹಸಿರು ಕಾರ್ಡ್‌ನ್ನು ಕೊಡುವುದರಲ್ಲಿ ಹೆಚ್ಚು ಕಡಿಮೆಯಾಗಿವೆ, ಶ್ರೀಮಂತರಿಗೆ ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳಿದರು. ವಿತರಣೆ ವಿಚಾರವನ್ನು ನೋಡಿದ್ದೇ ಆದರೆ ೮೦ ಲಕ್ಷ ಕಾರ್ಡುದಾರರಿಗೆ ೧೫ ಸಾವಿರ-೨೦ ಸಾವಿರ ಅಂಗಡಿಗಳು ಇದ್ದರೆ ಏನು ಸಾಲುವುದಿಲ್ಲ ಎಂದು ಹೇಳಿ ದ್ದಾರೆ. ಇದರ ಬಗ್ಗೆ ಲೆಕ್ಕ ಹಾಕಿ ಭಾಗಾಕಾರ ಹಾಕಿದರೆ ಏನೇನೂ ಸಾಲುವುದಿಲ್ಲ ಎಂದು ಹೇಳಿದ್ದಾರೆ. ಇದು ವಿಚಾರ ಮಾಡತಕ್ಕಂಥ ವಿಷಯ. ನಾನು ಅವರ ವ್ಯವಸ್ಥಿತವಾದ ಸಾರಭೂತವಾದಂಥ ಅಂಶ ವನ್ನು ಗ್ರಹಿಸುವುದಕ್ಕೆ ಸಿದ್ಧನಾಗಿದ್ದೇನೆ. ನಾನು ಹೇಳುವಂಥದ್ದನ್ನು ಸನ್ಮಾನ್ಯ ಪಾಟೀಲರೂ ಕೇಳಬೇಕು. ಈಗ ನಾನು ಆಹಾರಮಂತ್ರಿಯಾಗಿ ಸುಮಾರು ಒಂದು ವರ್ಷ ಎರಡು ತಿಂಗಳೋ

ಮೂರು ತಿಂಗಳೋ ಆಗಿರಬಹುದು. ಎರಡು ಸಲ, ಮೂರು ಸಲ ನಮ್ಮ ರಾಜ್ಯದ ಎಲ್ಲಾ ಕಡೆಗೆ ಹೋಗಿ ಬಂದಿದ್ದೇನೆ. ನಾನು ಪ್ರಯಾಣ ಮಾಡುವಾಗ ಗನ್‌ಮ್ಯಾನ್ ಇರುವುದಿಲ್ಲ. ನಮ್ಮ ಸೆಕ್ರೆಟರಿ ಇರುವುದಿಲ್ಲ. ಪಿ ಎ. ಇರುವುದಿಲ್ಲ. ಡ್ರೈವರ್ ಆಯಿತು, ನಾನು ಆಯಿತು. ಕಾರ್ ಬಿಡು ಎಂದು ಹೇಳಿದರೆ ಹೋಗುತ್ತಿರುತ್ತದೆ. ಅಲ್ಲಿ ಈ ರೀತಿಯಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಎಷ್ಟೋ ಕಡೆಯಲ್ಲಿ ನೀವು ಮಂತ್ರಿಯೋ ಎಂದು ಕೇಳಿದ್ದಾರೆ. ನಿಮ್ಮ ಜೇವರ್ಗಿಯಲ್ಲಿ ಕೇಳಿದ್ದಾರೆ. ಈ ರೀತಿಯಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ನನ್ನ ಅನುಭವದ ಒಂದು ಸಾರಾಂಶವನ್ನು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವ್ಯಾಪಕವಾದಂಥ ನಮ್ಮ ರಾಜ್ಯದ ಎಲ್ಲಾ ಮೂಲೆ ಮೂಲೆಗಳಿಗೂ ಇಪ್ಪತ್ತಾರು ಸಾವಿರ ಹಳ್ಳಿಗಳಿಗೂ ದಿನನಿತ್ಯ ಜನರು ತಿನ್ನತಕ್ಕಂಥ ಆಹಾರಧಾನ್ಯಗಳನ್ನು ಅಂದರೆ ಸಕ್ಕರೆ, ಗೋಧಿ, ಬಟ್ಟೆ, ಮುಂತಾದುವುಗಳನ್ನು ಕೊಡತಕ್ಕಂಥದ್ದು ಇದೆ. ಡಿಸ್ಟ್ರಿಬ್ಯೂಷನ್ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ. ಟ್ರಾನ್ಸ್‌ಪೋರ್ಟ್ ಛಾರ್ಜನ್ನು ಕೊಡುತ್ತಿದ್ದೇವೆ. ೧೯ ಜಿಲ್ಲೆಯಲ್ಲಿ ಮಾಡತಕ್ಕಂಥ ಕೆಲಸ ನೋಡಿದರೆ ಚೆನ್ನಾಗಿ ನಡೆಯುತ್ತಿದೆ ಎಂದು ನನಗನ್ನಿಸುತ್ತದೆ ಹಳ್ಳಿ ಹಳ್ಳಿಗೂ ಹೋಗಿ ನೋಡಿದ್ದೇನೆ. ನ್ಯಾಯಬೆಲೆ ಅಂಗಡಿಗಳಿಗೆ ಹೋಗಿ ಹತ್ತು ಕಾರ್ಡಿನ ನಂಬರ್, ಮನೆಯವರ ಹೆಸರನ್ನು ತೆಗೆದುಕೊಂಡು ಹೋಗಿ ನೋಡಿ ಸಂಗಪ್ಪನ ಮನೆ ಎಲ್ಲಿ, ಹುಸೇನ್ ಮನೆ ಇಲ್ಲಿ ಈ ರೀತಿಯಾಗಿ ವೆರಿಫೈ ಮಾಡಿ ಬಂದಿದ್ದೇನೆ. ನಮ್ಮ ಜನ ಹೇಗಿದ್ದಾರೆ ಎಂದರೆ ಧಾನ್ಯ ಬಂದಿದೆ ಎಂದರೆ ಊರಿನಿಂದ ಜನರು ಕಾರ್ಡ್ ತೆಗೆದುಕೊಂಡು ಹೋಗಿ ನಿಂತುಕೊಳ್ಳತಕ್ಕಂಥ ತಿಳುವಳಿಕೆ ಬಂದಿದೆ. ಈ ವಿತರಣಾ ವ್ಯವಸ್ಥೆ ರೂಪಾಯಿಗೆ ಎರಡು ರೂಪಾಯಿಗೆ ಒಂದು ಕೆಜಿ ಅಕ್ಕಿ ಕೊಡತಕ್ಕಂಥ, ಧಾನ್ಯಗಳನ್ನು ಕೊಡತಕ್ಕಂಥ ವ್ಯವಸ್ಥೆಯಿಂದ ಓಪನ್ ಮಾರ್ಕೆಟ್‌ನಲ್ಲಿ ಯಂದ್ವಾತದ್ವ ಜನರಿಗೆ ದಿನವಹಿ ತಿನ್ನತಕ್ಕಂಥ ಆಹಾರಪದಾರ್ಥಗಳ ಬೆಲೆ ಜಾಸ್ತಿಯಾಗಿಲ್ಲ, ಎನ್ನತಕ್ಕಂಥ ಮಾತನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. It has Kept the open market pricss of the essential commodities in check. I have verified in Chikamgalur. Mr. Parthasarathy, the Deputy Commissioner is maintaining the open market operations of these Commodities and the pricen at which they are sold in these depots There is not even a singlopaisa difference. ಕೆಲವು ಕಡೆ ಐದು ಪೈಸೆ, ಹತ್ತು ಪೈಸೆ ಡಿಫರೆನ್ಸ್ ಇದೆ. ಅದನ್ನೂ ಕೂಡಾ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಂಥ ಒಂದು ದೊಡ್ಡ ಆಪರೇಷನ್ ನಡೆಯುತ್ತಿರತಕ್ಕಂಥದ್ದರಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಇಲ್ಲ ಎಂದು ಹೇಳುವುದಿಲ್ಲ. ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ನಿಮ್ಮ ಮಾತನ್ನು ಮೂಲಭೂತವಾಗಿ ತತ್ವದ ಆಧಾರದ ಮಾತು ಎಂದು ನಾನು ತಿಳಿದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ ಎಂದು ತಮ್ಮಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಚ್ಚಿಟ್ಟ ಧಾನ್ಯವನ್ನು ತೆಗೆಯುವುದಕ್ಕೆ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದ್ದಾರೆ. ನಿಮ್ಮಷ್ಟು ಧೈರ್ಯ ಇದೆ ಎಂದು ನನಗೆ ಅನಿಸುವುದಿಲ್ಲ ಪ್ರಯತ್ನ ಮಾಡೋಣ ಇದನ್ನು ನಾನು ಗಮನದಲ್ಲಿಟ್ಟಿರುತ್ತೇನೆ. ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟನ್ನು ಹೇಳಿ ಸನ್ಮಾನ್ಯ ಸದಸ್ಯರು ನನ್ನ ಮೂರು ಇಲಾಖೆಗಳ ಬೇಡಿಕೆಗಳ ಮೇಲೆ ಹೊರಪಡಿಸಿದಂಥ ವಿಷಯಗಳೆಲ್ಲವನ್ನೂ ಕೂಡಾ ನಾನು ನನ್ನ ಉತ್ತರದಲ್ಲಿ ಸಮಜಾಯಿಷಿ ಹೇಳಿ ಅವಗನ್ನು ಸಮಾಧಾನಪಡಿಸುವುದಕ್ಕೆ ಪ್ರಮಾಣವಾಗಿ ಪ್ರಯತ್ನ ಮಾಡಿದ್ದೇನೆ. ಇಷ್ಟೆಲ್ಲಾ ಹೇಳಿದಮೇಲೆ ಈ ಎಲ್ಲಾ ಇಲಾಖೆಗಳು ಪರಿಪೂರ್ಣವಾಗಿ ಟೀಕೆಟಿಪ್ಪಣಿಗಳಿಗೆ ಒಳಗಾಗದಂತೆ ನಡೆಯುತ್ತದೆ ಎಂದು ನಾನು ಹೇಳುತ್ತಿಲ್ಲ. ಮಾಡಬೇಕಾದ್ದು ಬಹಳ ಇದೆ. ಆದರೆ ನಾನು ಈ ಮಾನ್ಯ ಸಭೆಯ ಸದಸ್ಯರಲ್ಲಿ ಮತ್ತು ಸಾರ್ವಜನಿಕರಲ್ಲಿ ಮನವಿ ಮಾಡುವುದು ಇಷ್ಟೆ. ನೀರಾವರಿ ಸರಬರಾಜು ಮಾಡತಕ್ಕಂತಹ ನಿಗಮಗಳು, ಸಾರ್ವಜನಿಕ ಸೇವೆಗಳನ್ನು ಕೊಡತಕ್ಕಂಥಸಂಸ್ಥೆಗಳು, ಜನರ ಬೆಂಬಲದಿಂದ ಮತ್ತು ಸಾರ್ವಜನಿಕರ ಆಶೀರ್ವಾದದಿಂದ ಬೆಳೆಯತಕ್ಕಂಥ ಒಂದು ಹಿನ್ನೆಲೆ ಅಥವಾ ಭೂಮಿಕೆ ನಮ್ಮ ರಾಜ್ಯದಲ್ಲಿ ಬರಬೇಕು, ಮತ್ತು ಅದು ಫಲಗೊಳ್ಳಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ ನಾನು ಒಂದು ಮಾತು ಹೇಳುತ್ತೇನೆ. ಮೊದಲು ಹೇಳುವುದನ್ನು ಬಿಟ್ಟು ಬಿಟ್ಟಿದ್ದೆ. ಅದೇನೆಂದರೆ ಈ ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಆಕ್ಟನ್ನು ಕೇಂದ್ರ ಸರ್ಕಾರದವರು ಜಾರಿಗೆ ತಂದಿದ್ದಾರೆಂದು ಕೇಂದ್ರ ಆಹಾರ ಮಂತ್ರಿಗಳು ಇತ್ತೀಚಿನ ಸಭೆಯಲ್ಲಿ ಹೇಳಿದರು. ಅವರು ಹೇಳಿದ ರೀತಿಯಲ್ಲಿ ಆ ಕಾನೂನು ಪ್ರಕಾರ ನಾವೂ ಕೂಡ ನಮ್ಮ ನಮ್ಮ ರಾಜ್ಯದಲ್ಲಿ ಅದೇತರ ಕನ್‌ಸ್ಯೂಮರ್ಸ್

ಪ್ರೊಟೆಕ್ಷನ್ ಅನ್ನು ಮಾಡುವುದಕ್ಕೆ ಸಿದ್ಧರಾಗಿದ್ದೇವೆ, ಮಾಡುತ್ತೇವೆ ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಎಲ್ಲರೂ ಕೂಡ ಕನ್‌ಸ್ಯೂಮರೇ. ಕನ್‌ಸ್ಯೂಮರ್‌ಗಿಂತ ಮಿಗಿಲಾದುದು ಯಾವುದೂ ಇಲ್ಲ. ಈ ಕೆಲಸವನ್ನು ಮನಸ್ಸು ಇಟ್ಟು ಮಾಡುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡುತ್ತೇವೆಂದು ಹೇಳಿ ಸನ್ಮಾನ್ಯ ಸದಸ್ಯರಿಗೆ ನನ್ನ ಧನ್ಯವಾದಗಳನ್ನು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುವಾಗ ಪ್ರಾಮಾಣಿಕವಾಗಿ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಕಾವೇರಿ ಮೂರನೇ ಸ್ಟೇಜ್ ಬಗ್ಗೆ ಹೇಳುವುದಾದರೆ ಇದು ೧೯೯೦ರ ವೇಳೆಗೆ ಮುಗಿಯುತ್ತದೆ ಎನ್ನುವ ಮಾತನ್ನು ಅವರು ಪದೇ ಪದೇ ಹೇಳುತ್ತಿದ್ದಾರೆ. ಇದಕ್ಕೆ ಫೈನಾನ್ಷಿಯಲ್ ಪ್ಯಾಟರ್ನ್ ಯಾವ ರೀತಿ ಇದೆ ಎನ್ನುವುದನ್ನು ಹೇಳಿಲ್ಲ. ೧೯೮೭-೮೮ರವರೆಗೆ ಎಷ್ಟು ಖರ್ಚು ಮಾಡುತ್ತೀರಿ, ೧೯೮೮-೮೯ಕ್ಕೆ ಎಷ್ಟು ಖರ್ಚು ಮಾಡುತ್ತೀರಿ ೧೯೮೯-೯೦ಕ್ಕೆ ಎಷ್ಟು ಖರ್ಚು ಮಾಡುತ್ತೀರಿ ? ಇದು ಒಟ್ಟು ೨೪೦ ಕೋಟಿ ರೂಪಾಯಿ ಯೋಜನೆ. ಇದರ ಬಗ್ಗೆ ತಾವು ಡೆಫನೆಟ್ ಆಗಿ ಹೇಳಿಲ್ಲ. ಅಲ್ಲದೆ ತಾವು ಇದಕ್ಕೆ ವರ್ಲ್ಡ್ ಬ್ಯಾಂಕ್ ಲೋನ್ ಕೂಡ ತೆಗೆದುಕೊಳ್ಳುವುದಿಲ್ಲ ಅಂತ ಹೇಳಿದ್ದೀರಿ. ಇದರ ಬಗ್ಗೆ ನಿರ್ದಿಷ್ಟವಾದ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಖರ್ಚು ಮಾಡುತ್ತೀರಿ ಎಷ್ಟು ವೇಗದಲ್ಲಿ ಮಾಡುತ್ತೀರಿ ಅನ್ನುವುದನ್ನು ಹೇಳಬೇಕು.

ಇನ್ನು ಎರಡನೆಯದಾಗಿ, ಲಕ್ಷ್ಮಣರಾವ್ ಕಮಿಟಿ ರಿಪೋರ್ಟ್ ಬಂದು ಒಂದು ವರ್ಷವಾಯಿತು. ಆ ರಿಪೋರ್ಟ್‌ನಲ್ಲಿ ಫೈನಾನ್ಸ್ ಬಗ್ಗೆ ಏನೂ ಮೆನ್‌ಷನ್ ಮಾಡಿಲ್ಲ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮುನಿಸಿಪಾಲಿಟಿಗಳಿಗೆ ಫೈನಾನ್ಸ್ ಅನ್ನುವುದು ಬಹಳ ಮುಖ್ಯವಾದುದು. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು. ಆದುದರಿಂದ ಮಾನ್ಯ ಸಚಿವರು ಇದರ ವಿಚಾರದಲ್ಲಿ ನಿರ್ದಿಷ್ಟವಾಗಿ ಹೇಳಬೇಕು.

ಇನ್ನು ಆಕ್ಟ್ರಾಯ್ ಕಾಂಪನ್ಸೇಷನ್ ಬಗ್ಗೆ ಮುನಿಸಿಪಾಲಿಟಿಗಳಿಗೆ ಪರಿಹಾರವನ್ನು ತಡವಾಗಿ ಕೊಡುತ್ತಾ ಇದ್ದೀರಿ. ಇದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಅವರಿಗೆ ಇನ್ನೂ ಎರಡು ಇನ್‌ಸ್ಟಾಲ್‌ಮೆಂಟ್ಸ್ ಕೊಡಬೇಕು. ಅವರಿಗೆ ಸರಿಯಾದ ವೇಳೆಯಲ್ಲಿ ಕೊಡದೆ ಬಹಳ ತೊಂದರೆಯಾಗಿದೆ ಇದರ ಬಗ್ಗೆ ತಾವು ಹೇಳಬೇಕು. ಮಾನ್ಯ ಶ್ರೀ ಎ. ಎಸ್. ಕೃಷ್ಣನ್‌ರವರು ಬಡ್ಜೆಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಅಥವಾ ಎರಡು ಪರ್ಸೆಂಟ್ ಟ್ಯಾಕ್ಸನ್ನು ಈ ಮೋಟಾರ್ ವೆಹಿಕಲ್ ಟ್ಯಾಕ್ಸ್ ಮೇಲೆ ಹಾಕುತ್ತೇವೆಂದು ಹೇಳಿದ್ದಾರೆ. ಈಗ ಆಕ್ಟ್ರಾಯ್ ಇಲ್ಲವಾದ್ದರಿಂದ ಈಗ ಏನು ತಾವು ಅದರ ಮೇಲೆ ತೆರಿಗೆಗಳನ್ನು ಹಾಕುತ್ತೀರಾ ? ಅದರಿಂದ ಬರತಕ್ಕಂಥಾ ಆದಾಯದಲ್ಲಿ ಮುನಿಸಿಪಾಲಿಟಿಗಳಿಗೂ ಮತ್ತು ಕಾರ್ಪೊರೇಷನ್ನಿಗೂ ಇನ್ನೂ ಸ್ವಲ್ಪ ಹೆಚ್ಚು ಪರಿಹಾರವನ್ನು ಕೊಟ್ಟು ಇವುಗಳಿಗೆ ಬರಬೇಕಾದ ಶೇರನ್ನು ಕೂಡಲೇ ಕೊಡುವ ಹಾಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಅನ್ನುವುದನ್ನು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮೊದಲನೇ ಪ್ರಶ್ನೆಗೆ ಉತ್ತರ. ಈಗ ಕಾವೇರಿ ಮೂರನೇ ಸ್ಟೇಜ್‌ಗೆ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಈಗ ಒಟ್ಟು ಅದಕ್ಕೆ ೨೪೦ ಕೋಟಿ ರೂಪಾಯಿ ಯೋಜನೆ ಏನು ಇದೆ. ಇದರಲ್ಲಿ ಯಾರ್ಯಾರಿಂದ ಎಷ್ಟೆಷ್ಟು ಹಣ ಖರ್ಚಾಗುತ್ತದೆಂದರೆ ರಾಜ್ಯ ಸರ್ಕಾರದ್ದು ೫೦ ಕೋಟಿ ರೂಪಾಯಿ, ಎಲ್‌ಐಸಿ ಯಿಂದ ೧೪ ಪರ್ಸೆಂಟ್ ಬಡ್ಡಿ ಮೇಲೆ ೬೦ ಕೋಟಿ ರೂಪಾಯಿ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಇಂಟರೆಸ್ಟ್ ಫ್ರೀ ಲೋನ್ ೪೦ ಕೋಟಿ ರೂಪಾಯಿ, ಇನ್ನು ಬಿಡಿಎ ಗ್ರಾಂಟ್ ೪೦ ಕೋಟಿ ರೂಪಾಯಿ, ಆಮೇಲೆ ಡಿಫೆನ್ಸ್ ಅಂಡ್ ಸೆಂಟ್ರಲ್‌ನಿಂದ ೫೦ ಕೋಟಿ ರೂಪಾಯಿ.

ಹೋದ ವರ್ಷ ನಾವು ೧೫ ಕೋಟಿ ರೂಪಾಯಿಗಳ ಕೆಲಸವನ್ನು ತೆಗೆದುಕೊಂಡಿದ್ದೇವೆ. ಸುಮಾರು ೬ ಕೋಟಿ ರೂಪಾಯಿಗಳಷ್ಟು ಹಣ ಈ ಯೋಜನೆಗೆ ಸಂಬಂಧಪಟ್ಟ ಸೇತುವೆ ಕೆಲಸಕ್ಕಾಗಿ ಖರ್ಚಾಗಿದೆ. ೧೯೮೭-೮೮ನೇ ಸಾಲಿನ ಬಡ್ಜೆಟ್‌ನಲ್ಲಿ ಈ ಕೆಲಸಕ್ಕೆಂದು ಸುಮಾರು ೧೩ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದರ ಜೊತೆಗೆ ಎಲ್. ಐ. ಸಿ. ಯಿಂದ ಹಣ ತೆಗೆದುಕೊಂಡು

ಬರುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ನಡೆದಿದೆ. ಮತ್ತೆ ಕಾರ್ಪೊರೇಷನ್ ಅವರು, ಬಿಡಿಎ, ನವರು ಸಹ ಹಣ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಒಳ್ಳೆಯ ರೀತಿಯಿಂದ ಉತ್ತರ ಕೊಟ್ಟಿದ್ದಾರೆ ಆದರೆ ಅವರು ಉತ್ತರ ಕೊಡುವಾಗ ಈ ಸ್ಥಳೀಯ ಸಂಸ್ಥೆಗಳಿಗೆ ಪರಿಹಾರ ಕೊಡುವ ವಿಚಾರದಲ್ಲಿ.—

ಶ್ರೀ ಎ. ಲಕ್ಷ್ಮೀಸಾಗರ್.—ಲಕ್ಷ್ಮಣರಾವ್ ಸಮಿತಿಯವರು ಎಂಟ್ರಿ ಟ್ಯಾಕ್ಸ್, ಮೋಟಾರ್ ವಹಿಕಲ್ಸ್ ಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಇವೆಲ್ಲವುಗಳ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿದ್ದಾರೆ. ಇದಕ್ಕೂ ಮೊದಲು ಮಾನ್ಯ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮುನಿಸಿಪಲ್ ಟ್ಯಾಕ್ಸ್ ಬಗ್ಗೆ ರಚನೆ ಮಾಡಲಾಗಿತ್ತು. ಅವರು ಸಹ ಒಂದು ವರದಿಯನ್ನು ಕೊಟ್ಟರು. ನಂತರ ಅದು ಅಲ್ಲಿಗೆ ನಿಂತು ಹೋಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ವರದಿಯಲ್ಲಿ ಆಕ್ಟ್ರಾಯ್ ತೆಗೆಯಬೇಕೆಂದು ಹೇಳಿರಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಕೆಲವೊಂದು ತೆರಿಗೆಗಳಿಂದ ಸರ್ಕಾರಕ್ಕೆ ಬರುತ್ತಿರುವ ಹಣದಲ್ಲಿ ಸ್ಥಳೀಯ ಸಂಸ್ಥೆಗಳಿಗೂ ಸಹ ಒಂದು ಪಾಲು ಹಣ ಕೊಡುವ ವಿಚಾರದಲ್ಲಿ ತೀರ್ಮಾನ ತೆಗೆದು ಕೊಳ್ಳುವುದು ಸ್ಥಾನವಾಗಿದೆ. ಇದರ ಬಗ್ಗೆ ಆದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದು ಕೊಳ್ಳುತ್ತದೆ. ಮತ್ತೆ ಆಕ್ಟ್ರಾಯ್ ಕಂತುಗಳು ಏನು ಬಾಕಿ ಇವೆ, ಅವುಗಳನ್ನು ಕೊಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೆ ಇವರ ವರದಿಯಲ್ಲಿ ದಿನಾಂಕ ೩೧-೧೨-೧೯೭೫ ರಂದು ಇತ್ಯರ್ಥವಾಗಬೇಕಾಗಿದ್ದ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆಯು ೯,೯೯,೨೪೦ ಇದ್ದರೆ ೩೧-೧೨-೧೯೭೬ ರಂದು ಇತ್ಯರ್ಥವಾಗಬೇಕಾಗಿದ್ದ ಮೊಕದ್ದಮೆಗಳ ಒಟ್ಟು ಸಂಖ್ಯೆಯು ೮,೮೬,೦೦೪ ಇದ್ದಿತು. ಹೀಗೆ ಇತ್ಯರ್ಥವಾಗ ಬೇಕಾಗಿರುವ ಮೊಕದ್ದಮೆಗಳ ಸಂಖ್ಯೆ ಸುಮಾರು ೮೧,೪೫೬ ರಷ್ಟು ಇಳಿದಿದೆ. ಎಂದು ಹೇಳಿದ್ದಾರೆ. ಇದರ ಜೊತೆಗೆ ಇಲ್ಲಿ ೩೫ ಸಿವಿಲ್ ನ್ಯಾಯಾಧೀಶರು, ೩೩ ಜಿಲ್ಲಾ ನ್ಯಾಯಾಧೀಶರು ಮತ್ತು ೩ ಮುನ್ಸೀಫ್‌ಗಳು "ಓ.ಓ.ಡಿ" ಮೇಲೆ ಇದ್ದಾರೆಂದು ಹೇಳಿದ್ದಾರೆ. ಇದೇ ಕಾರಣದಿಂದ ಇಲ್ಲಿ ಕೇಸ್‌ಗಳು ಇಷ್ಟೊಂದು ಬಾಕಿ ಉಳಿಯಲು ಕಾರಣವಾಗಿದೆ. ಇಲ್ಲಿ ೦೫ ಮುನ್ಸಿಫ್‌ಗಳ ಹುದ್ದೆಗಳು ಖಾಲಿ ಇವೆ ಎಂದು ಸಹ ಹೇಳಿದ್ದಾರೆ. ಈ ಕಾರಣದಿಂದ ಈ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಮತ್ತು ಓಓಡಿ ಮೇಲೆ ಕಳುಹಿಸಿರುವಂಥವರ ಜಾಗಗಳನ್ನು ಯಾವ ರೀತಿ ತುಂಬುತ್ತೀರಿ ಎಂಬುದನ್ನು ತಿಳಿಸಬೇಕು. ಈ ಸ್ಥಾನಗಳನ್ನು ಭರ್ತಿ ಮಾಡದಿದ್ದರೆ ಬಾಕಿ ಇರುವ ಕೇಸ್‌ಗಳು ಜಾಗ್ರತೆ ಇತ್ಯರ್ಥ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಾ ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಬೇಕು.

ಇನ್ನು ಎಲ್ಲ ಮುನಿಸಿಪಾಲಿಟಿಯವರು ತಮ್ಮ ಬಜೆಟ್ ತಯಾರು ಮಾಡುವಾಗ ೧೮ ಪರ್ಸೆಂಟ್ ರಿಜರ್ವ್ ಫಂಡ್ ಎಂದು ತೆಗೆದಿರುತ್ತಾರೆ. ಇಂತಹ ಹಣ ೨ ಕೋಟಿ ೦೮ ಲಕ್ಷ ರೂಪಾಯಿಗಳು ಇದ್ದರೆ, ಇದರಲ್ಲಿ ಖರ್ಚು ಮಾಡಿರುವುದು ಕೇವಲ ೩೨ ಲಕ್ಷ ರೂಪಾಯಿಗಳು ಮಾತ್ರ. ಅಂದರೆ ಇನ್ನೂ ೨ ಕೋಟಿ ೪.. ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ಹಣವನ್ನು ಖರ್ಚು ಮಾಡುವ ಬಗ್ಗೆ ಪ್ರಯತ್ನ ನಡೆದಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದಿರಿ. ತಮ್ಮ ಪ್ರಯತ್ನ ಇದರ ಬಗ್ಗೆ ಎಷ್ಟೇ ನಡೆದಿದ್ದರೂ ಸಹ ಇಲ್ಲಿ ೫ ಪರ್ಸೆಂಟ್ ಸಹ ಅಚೀವ್‌ಮೆಂಟ್ ಆಗಿಲ್ಲ ಈ ಹಣ ಖರ್ಚು ಮಾಡುವುದಕ್ಕೆ ನಿಮಗೆ ಏನು ತೊಂದರೆ ಇದೆ. ರಿಜರ್ವ್ ಫಂಡ್ ಎಂದು ತೋರಿಸಿದ ಮೇಲೆ ಅದನ್ನು ಖರ್ಚು ಮಾಡಬೇಕು ಇಲ್ಲದಿದ್ದರೆ ಅದನ್ನು ಇದರಲ್ಲಿ ತೋರಿಸುವುದರ ಔಚಿತ್ಯವಾದರೂ ಏನು ? ಇಲ್ಲಿ ಇಷ್ಟು ಕಡಿಮೆ ಹಣ ಖರ್ಚು ಮಾಡಲು ಕಾರಣವೇನು ? ಇದರ ಬಗ್ಗೆ ತಾವು ರಿವ್ಯೂ ಮಾಡಲಿಲ್ಲವೇ ಅಥವಾ ತಮ್ಮ ಅಧಿಕಾರಿಗಳು ರಿವ್ಯೂ ಮಾಡಲಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಕೇಸಸ್ ಪೆಂಡಿಂಗ್ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಹೈಕೋರ್ಟಿನವರಿಗೆ ತಿಳಿಸುತ್ತೇನೆಂದು ಈಗಾಗಲೇ ಹೇಳಿದ್ದೇನೆ. ಇದು ನೇರವಾಗಿ ಸರ್ಕಾರದ

ಕೆಲಸವಲ್ಲ ಎಂಬುದು ಮಾನ್ಯ ಖರ್ಗೆ ಅವರಿಗೂ ಗೊತ್ತು. ಆದ್ದರಿಂದ ಈ ಸಭೆಯ ಅಭಿಪ್ರಾಯವನ್ನು ನಾನು ಅವರಿಗೆ ತಿಳಿಸುತ್ತೇನೆ. ಈಗ ಮುನ್ಸೀಫ್‌ಗಳನ್ನು ನೇಮಕ ಮಾಡುವ ಬಗ್ಗೆ ಮೌಖಿಕ ಪರೀಕ್ಷೆ ನಡೆಯುತ್ತಿವೆ. ಇದು ಮುಗಿದ ಮೇಲೆ ಪೋಸ್ಟಿಂಗ್ ಮಾಡುತ್ತೇವೆ. ತಮಗೆ ಇಲ್ಲಿ ಒಂದು ವಿಚಾರ ಹೇಳುತ್ತೇನೆ. ಏನೆಂದರೆ. ೧-೧-೧೯೮೬ ರಿಂದ ೩೧-೧೨-೧೯೮೬ರವರೆಗೆ ವಿಲೇಯಾದ ಪ್ರಕರಣಗಳ ಒಟ್ಟು ಸಂಖ್ಯೆ ೨,೪೧,೬೩೧. ಖುಲಾಸೆ ಮತ್ತು ಬಿಡುಗಡೆಯಲ್ಲಿ ಮುಕ್ತಾಯಗೊಂಡ ಪ್ರಕರಣಗಳ ಒಟ್ಟು ಸಂಖ್ಯೆ ೨೧,೪೮೯ ಮತ್ತೆ ಅಪರಾಧ ನಿರ್ಣಯದಲ್ಲಿ ಮುಕ್ತಾಯಗೊಂಡ ಪ್ರಕರಣಗಳ ಒಟ್ಟು ಸಂಖ್ಯೆ ೨,೨೧,೨೧೨.

6–00 P.M.

The number of cases ended in conviction is 2, 21, 212 i.e., about 95%.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಕ್ರಿಮಿನಲ್ ಕೇಸಸ್ ನೋಡಿ. ಪೇಜ್ ೩೮ರಲ್ಲಿದೆ. ನಾನು ಓದುತ್ತೇನೆ ನೋಡಿ.

SRI A. LAKSHMISAGAR.—These are the cases which are directly under the control of the Prosecution Department.

SRI M. MALLIKARJUN KHARGE.—I have asked you the total number of cases, both civil and criminal. The number of cases pending is 8,88,774. There is a huge pendency. To dispose of these cases, you have to fill up the 65 vacant posts, i.e., 30 district judge and 35 Civil judge posts which are vacant. ಈಗಾಗಲೇ ಇದಕ್ಕೆ ಸುಧೀರ್ಘವಾದ ಉತ್ತರ ಕೊಟ್ಟಿದ್ದೇನೆ. ಆದರೆ ಕ್ಲುಪ್ತವಾಗಿ ಹೇಳುತ್ತೇನೆ. ಇದರ ಲೆಕ್ಕ ಸರಿಯಿಲ್ಲ. ಎರಡು ಸರ್ಕಾರಿ ಆಜ್ಞೆಗಳು ಹೊರಟು ಕನ್‌ಫ್ಯೂಷನ್ ಆಗಿದೆ. ಅದನ್ನು ಸರಿಪಡಿಸಿ, ನಿಖರವಾಗಿ ಶೇಕಡ ೧೫ರ ಖರ್ಚನ್ನು ಸರಿಪಡಿಸಿ ಆ ಹಣವನ್ನು ಆಯಾ ವರ್ಷ ಖರ್ಚು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಅನೇಕ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದೀರಿ. ಒಂದು ವಿಷಯ. ಸ್ಲಂ ಕ್ಲಿಯರೆನ್ಸ್ ಬೋರ್ಡ್ ಬಗ್ಗೆ ಮಾತನಾಡುವಾಗ ತಪ್ಪು ತಿಳುವಳಿಕೆ ಎಂದು ಹೇಳಿದಿರಿ. ೧೯ನೇ ಪೇಜ್ ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಯು ಆರ್ ಕರೆಕ್ಟ್. ಡಿಸೆಂಬರ್‌ವರೆಗೆ ಮಾತ್ರ ರೆಡಿ ಇರುವುದು.

ಶ್ರೀ ಎಂ. ಎಸ್. ಕೃಷ್ಣನ್.—೪೪ ಮನೆಗಳನ್ನು ಡಿಸೆಂಬರ್‌ವರೆಗೆ ಮಾಡಿದ್ದೀರಿ, ಇನ್ನು ೫೫೬ ಮನೆಗಳನ್ನು ಮಾಡಬೇಕಾಗುತ್ತದೆ. ೪೫೦ ಮನೆಗಳನ್ನು ಮಾಡುತ್ತೇನೆಂದು ಹೇಳಿದಿರಿ. ಇನ್ನು ಮೂರು ತಿಂಗಳಲ್ಲಿ ೪೫೦ ಮನೆಗಳನ್ನು ಮಾಡಬೇಕಾದರೆ ಅದಕ್ಕೆ ಸಿಬ್ಬಂದಿ ಮತ್ತು ಇತರಕ್ಕೆ ವ್ಯವಸ್ಥೆ ಯಿಂದ ಏನು ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಕೊನೆ ಹಂತಕ್ಕೆ ಬಂದಿದೆ. ಆಲ್‌ಮೋಸ್ಟ್ ಇನ್ ಫಿನಿಷಿಂಗ್ ಸ್ಟೇಜ್ ಫೈನಲ್ ಸ್ಟೇಜ್‌ನಲ್ಲಿ ಬಂದಿದೆ ಎಂದು ನನ್ನ ಹತ್ತಿರ ರಿಪೋರ್ಟ್ ಇದೆ. ಅದರ ಆಧಾರದ ಮೇಲೆ ಹೇಳುತ್ತಾ ಇದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಪೊರೇಷನ್ ಮತ್ತು ಬಿ.ಡಿ.ಎ. ಇವೆರಡರಲ್ಲಿ ನಿಮ್ಮ ಲೀಗಲ್ ಸೆಲ್ ಏನಿದೆ ಅದು ಬಹಳ ವೀಕಾಗಿದೆ. ವೀಕ್ ಅಂದರೆ ಯಾರೋ ಒಬ್ಬರು ಇಂಜಂಕ್ಷನ್ ಆರ್ಡರ್ ತೆಗೆದುಕೊಂಡು ಬಿಟ್ಟರೆ ತಕ್ಷಣ ಎಲ್ಲಿ ಕೆಲಸ ನಿಂತುಹೋಗುತ್ತದೆ, ವೆಕೇಟ್ ಮಾಡುವುದಕ್ಕೆ ಏನೂ ಮಾಡುವುದಿಲ್ಲ. ನೀವು ಪ್ರಾಪರ್ಟಿ ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದರಲ್ಲಿ ಮುಖ್ಯವಾಗಿ ಹೇಳುವುದಾದರೆ, ಮಲ್ಲೇಶ್ವರಕ್ಕೆ ನಾನೇ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅದನ್ನು ಏನು ಮಾಡಿದ್ದೀರಿ. ಹೋದಸಲ ಸರ್ವೆ ನಂ. ೮೯-೧೬ ಪ್ಯಾಲೇಸ್ ಗುಟ್ಟಹಳ್ಳಿ—ಇದರ ಬಗ್ಗೆ ಹೇಳಿದ್ದೆ.

ಖಂಡಿತವಾಗಿ ಪರಭಾರೆ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದಿರಿ. ನನಗೆ ಬಂದ ಲೇಟೆಸ್ಟ್ ವರ್ತಮಾನ ಏನೆಂದರೆ ಇದುವರೆಗೆ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅನೇಕ ಜನ ಪುಢಾರಿಗಳು ಇವರೆಲ್ಲಾ ಒಳಗಿಂದೊಳಗೆ ಮಸಲತ್ತು ಮಾಡಿ ಏನುಬೇಕೋ ಅದನ್ನು ಮಾಡುತ್ತಾರೆ ಎಂದು ತಿಳಿದು ಬಂದಿದೆ. ಆಮೇಲೆ ರೆವಿನ್ಯು ಸೈಟ್‌ದಾರರ ಪ್ರಶ್ನೆ ಸರ್ಕಾರದವರು ಏನು ಕಮಿಟಿ ಮಾಡಿದ್ದಾರೆ, ಕ್ಯಾಬಿನೆಟ್ ಮುಂದೆ ಹೋಗುತ್ತದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಇತ್ಯರ್ಥ ಮಾಡಿದರೆ ಎಲ್ಲರ ಮನಸ್ಸಿಗೆ ನೆಮ್ಮದಿಯಾಗುತ್ತದೆ. ನಾಲ್ಕನೆಯದಾಗಿ, ಆಹಾರ ನಿಗಮದ ಬಗೆ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯ ಅಧ್ಯಕ್ಷರಾಗಿದ್ದ ಮಾನ್ಯ ಬಣಕಾರ್‌ರವರು ಕೊಟ್ಟಿರುವ ರಿಪೋರ್ಟ್ ಏನಿದೆ ಅದರಲ್ಲಿ ಅನೇಕ ರೆಕಮೆಂಡೇಷನ್ಸ್ ಇದೆ, ಅದರ ಬಗ್ಗೆ ಏನು ಮಾಡಿದ್ದೀರಿ ?

SRI A. LAKSHMI SAGAR.—I will get the necessary benefit from the recommendations of the PUC. That much I can tell you. ಆಮೇಲೆ ಲೀಗಲ್ ಸೆಲ್ ಏನಾಗಿದೆಯೆಂದರೆ, ನಾನು ವಾಸ್ತವಾಂಶ ಹೇಳಿದರೆ ನನ್ನ ಮೇಲೆ ಕತ್ತಿ ಗುರಾಣಿ ತೆಗೆದು ಕೊಂಡು ಬರುತ್ತಾರೆ. ಲೀಗಲ್ ಸೆಲ್‌ನಲ್ಲಿ ಎಷ್ಟು ಜನ ವಕೀಲರು ಇರಬೇಕು, ಯಾರು ಇರಬೇಕು ಎನ್ನುವುದನ್ನು ನಾನು ತೀರ್ಮಾನ ಮಾಡುವ ಅಧಿಕಾರ ಈ ಬಿ.ಡಿ.ಎ. ಆಕ್ಟ್‌ನಲ್ಲಿ ಇಲ್ಲ.

ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿ ಪೆಂಡಿಂಗ್ ಇರತಕ್ಕಂತಹ ಕೇಸುಗಳು ಎಷ್ಟು ಎಂಬುದಾಗಿಯೂ ಹಾಗೂ ಅಲ್ಲಿರತಕ್ಕ ಲಾಯರ್ಸ್‌ಗಳಿಗೆ (ಲೀಗಲ್ ಅಡ್ವೈಸರ್ಸ್) ಸರಿ ಸಮಾನವಾದ ಕೆಲಸಗಳು ಇವೆಯೋ ಎಂಬುದಾಗಿ ಕೇಳಿದ್ದಾರೆ. ಲೀಗಲ್ ಅಡ್ವೈಸರ್ಸ್‌ಗಳು ಹಿಂದೆ ಯಾರು ಪಟ್ಟಿ ಮಾಡಿದ್ದಾರೋ ನನಗೆ ತಿಳಿಯದು. ಸಂಬಂಧ ಪಟ್ಟವರಿಗೆ ಎಷ್ಟು ಕೇಸುಗಳು ಪೆಂಡಿಂಗ್‌ನಲ್ಲಿವೆ ಎಂಬುದಾಗಿ ಕೇಳಿದ್ದೇನೆ ಪೆಂಡಿಂಗ್ ಕೇಸುಗಳು ಎಷ್ಟಿವೆ ಎಂಬುದನ್ನು ಲಿಸ್ಟ್ ಮಾಡಿ ಎಂಬುದಕ್ಕೆ ಅದರ ಪಟ್ಟಿಯನ್ನು ಮಾಡು ವುದಕ್ಕೆ ೩ ತಿಂಗಳು ತೆಗೆದು ಕೊಂಡಿದ್ದಾರೆ. ಇದು ಕರೆಕ್ಟ್ ಲಿಸ್ಟ್ ಎಂಬುದಾಗಿ ಕೇಳಿದ್ದಕ್ಕೆ ಇರಬಹುದು ಅಂತ ಹೇಳಿದರು. ಇರತಕ್ಕಂತಹ ೨ ಸಾವಿರ ಕೇಸುಗಳಿಗೆ ೨೦ ಜನ ಲಾಯರ್‌ಗಳು ಇದ್ದಾರೆ. ಒಬ್ಬ ಲಾಯರ್ ಒಂದೇ ಕೇಸನ್ನು ಒಂದು ತಿಂಗಳಿಗೆ ತೆಗೆದುಕೊಳ್ಳುವುದು ಒಂದು ಕೇಸಿನ ಶುಲ್ಕ ೪೦೦ರೂ. ನಂತರ ಅವರಿಗೆ ಮಾಸಿಕ ವೇತನ ೩೦೦ರೂ. ಪ್ರಕಾರ ಲೆಕ್ಕ ಹಾಕಿದರೆ ವರ್ಷಕ್ಕೆ ೩೬೦೦ ರೂ. ಹಾಗೂ ೪೦೦ ರೂ. ಒಂದು ಕೇಸಿಗೆ ಶುಲ್ಕ. ಒಟ್ಟು ೬೦೦೦ ಸಾವಿರ ರೂ. ಗಳನ್ನು ಒಂದು ವರ್ಷಕ್ಕೆ ತೆಗೆದು ಕೊಂಡು ಅದನ್ನು ಜೇಬಿನಲ್ಲಿ ಹಾಕಿಕೊಂಡು ಮಜಾ ಮಾಡುತ್ತಿದ್ದಾರೆ. ಇವರುಗಳನ್ನು ಕಡಿಮೆ ಮಾಡಿ ಅಂತ ಹೇಳಿದ್ದೇನೆ. ಇಲ್ಲಿಯವರೆವಿಗೂ ಮಾಡಿಲ್ಲ. ಇನ್ನು ಸೂಪರ್ ಸೀಡ್ ಪ್ರಚಾರದ ಬಗ್ಗೆ ಹೇಳುವುದಾ ದರೆ, ನ್ಯಾಯಯುತವಾದ ಕಾರಣಗಳಿಗಾಗಿ ಸೂಪರ್ ಸೀಡ್ ಮಾಡಿದರೆ ಇಲ್ಲಿ ಟೀಕೆ ಬರುತ್ತದೆ. ಅದೇ ರೀತಿ ಬಿ. ಡಿ. ಎ. ನಲ್ಲೂ ಇರುವಂತಹದ್ದು ೨ ಸಾವಿರ ಕೇಸುಗಳು. ಅಲ್ಲಿಯೂ ೨೦ ಜನ ಲೀಗಲ್ ಅಡ್ವೈಸರ್‌ಗಳು ಇದ್ದಾರೆ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಇದರ ಬಗ್ಗೆ ಸ್ವಲ್ಪ ಹೆಚ್ಚಿನ ಅಧಿಕಾರವನ್ನು ಸರ್ಕಾರ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಎಲ್ಲಾ ಅಧಿಕಾರವನ್ನೂ ನೀವೇ ತೆಗೆದು ಕೊಳ್ಳುತ್ತಿದ್ದೀರಾ ಎಂಬುದಾಗಿ ಟೀಕೆ ಮಾಡುತ್ತಾರೆ. You say that I am becoming more and more powerful and I am assuming all powers.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ನೀವು ಮಾಡಿದ ರೀತಿಯಲ್ಲೇ ಹೇಳುವುದು.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಮಾಡಿದ ತಪ್ಪನ್ನೇ ನಾವೂ ಮಾಡಬೇಕೆಂದೇನೂ ಇಲ್ಲ. ಮತ್ತೆ ನಾನು ಬ್ರಹ್ಮಚಾರಿಯಾಗಿದ್ದೇನೆ. ನನಗೆ ನಗರದ ಜನರ ಕಷ್ಟ ಸುಖಗಳ ಅರಿವು ಇಲ್ಲ ಎಂಬು ದಾಗಿ ಹೇಳುತ್ತಾರೆ. ನನ್ನ ಹಾಗೆ ಇರುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ ಆ ವಿಚಾರ ಬಿಟ್ಟು ಬಿಡಿ. ಬಿ.ಡಿ.ಎ. ಹಾಗೂ ಕಾರ್ಪೊರೇಷನ್‌ಗಳಲ್ಲಿ ಹೆಗ್ಗಣಗಳು ಸೇರಿ ಕೊಂಡಿವೆ. ಅವುಗಳನ್ನು ವರ್ಗಾವಣೆ ಮಾಡಬೇಕೆಂದರೆ, ಎಲ್ಲಿಯವರೆಗೆ ಹೋಗಿದೆ ಎಂದರೆ, ಜನರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಕೆಲಸ ಮಾಡಿದರೆ. ಸರ್ಕಾರ ಆಡಳಿತಾತ್ಮಕವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ನಮ್ಮ ಮೇಲೆ ಗದಾ ಪ್ರಹಾರ ಮಾಡುವುದಕ್ಕೆ ಬರುತ್ತಾರೆ. ಕಾರ್ಪೊರೇಷನ್‌ನಲ್ಲಿರತಕ್ಕ ಇಂಜಿನೀಯರ್ಸ್ ಹಾಗು ಡಾಕ್ಟರ್‌ಗಳನ್ನು ವರ್ಗಾವಣೆ ಮಾಡಬೇಕೆಂದು ಅಲ್ಲಿನ ಕಾನೂನಿಗೆ ತಿದ್ದು ಪಡಿ ಯನ್ನು ಶ್ರೀಮಾನ್ ಧರ್ಮಸಿಂಗ್ ಅವರು ಹಿಂದೆ ಮಂತ್ರಿಗಳಾಗಿದ್ದಾಗ ಮಾಡಿದ್ದರು. ಅದನ್ನು ಜಾರಿಗೆ ತರುವುದಕ್ಕೆ ಈಗ ನಾವು ಪ್ರಯತ್ನ ಮಾಡಿದರೆ, ಅದರ ವಿರುದ್ಧ ಪೌರ ಕಾರ್ಮಿಕರು ಸ್ಟ್ರೈಕ್ ಮಾಡು ತ್ತಾರೆ. ಇಂಜಿನೀಯರ್ಸ್‌ಗಳನ್ನು ವರ್ಗ ಮಾಡಬಾರದು. ಅವರು ನಮ್ಮ ಒಡೆಯರು ಇದ್ದ ಹಾಗೆ

ಅಂತ ಹೇಳುತ್ತಾರೆ. ಅದೇ ರೀತಿ ಬಿ.ಡಿ.ಎ. ನಲ್ಲೂ ಇರತಕ್ಕ ಕೆಲವು ಭ್ರಷ್ಟ ಅಧಿಕಾರಿಗಳನ್ನು ಬೇರೆ ಕಡೆಗಳಿಗೆ ವರ್ಗಾವಣೆ ಮಾಡಬೇಕೆಂದು ಇರತಕ್ಕಂತಹ ಕಾನೂನಿಗೆ ತಿದ್ದುಪಡಿಯನ್ನು ತಂದು ಅದನ್ನು ಜಾರಿಗೆ ಕೊಟ್ಟರೆ ಅದಕ್ಕೆ ಅವರು ಹೈ ಕೋರ್ಟಿಗೆ ಹೋಗಿ ಸ್ಟೇ ತೆಗೆದು ಕೊಂಡಿದ್ದಾರೆ. ನಂತರ ಸ್ಟೇ ವೇಕೇಟ್ ಆಯಿತು. ಅದರ ವಿರುದ್ಧ ರಿಟ್ ಪಿಟಿಷನ್ ಆಯಿತು. ರಿಟ್ಟೂ ಫೇಲಾಯಿತು. ವರ್ಗ ಮಾಡಿದರೆ ಸ್ಟ್ರೈಕ್ ಮಾಡುತ್ತಾರೆ. ಈ ಮನೆಯ ಸದಸ್ಯರು ಆ ಸಂಘದ ನಾಯಕರಾಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಯಾರು ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅಡ್ಡ ಬರುವುದಿಲ್ಲ. ಸಾರ್ವಜನಿಕ ಹಿತ ದೃಷ್ಟಿಯಿಂದ, ಈ ಊರಿನ ನಾಗರೀಕರ ಜನರ ಹಿತ ದೃಷ್ಟಿಯಿಂದ, ಸೇವಾ ದೃಷ್ಟಿಯಿಂದ ಕೆಲಸ ಮಾಡಬೇಕಾದರೆ, ಪೋಲೀಸ್ ಅಧಿಕಾರಿಗಳನ್ನು ವರ್ಗ ಮಾಡುತ್ತೇವೆ, ಮುನ್ಸೀಫ್ ಮ್ಯಾಜಿಸ್ಟ್ರೇಟ್‌ಗಳನ್ನು ವರ್ಗ ಮಾಡುತ್ತೇವೆ, ಹೈಕೋರ್ಟಿನ ಜಡ್ಜಸ್‌ಗಳನ್ನು ವರ್ಗ ಮಾಡುತ್ತೇವೆ, ಅಂತಹದ್ದರಲ್ಲಿ ನಗರಾಭಿವೃದ್ಧಿ ಸಂಸ್ಥೆಗಳಲ್ಲಿರತಕ್ಕಂತಹ ಅಧಿಕಾರಿಗಳನ್ನು ವರ್ಗ ಮಾಡಬೇಕೆಂದರೆ, ಅದಕ್ಕೆ ಎಲ್ಲರೂ ಸಹಾನುಭೂತಿ ತೋರಿಸುತ್ತಾರೆ. ಶ್ರೀ ಲಕ್ಷ್ಮೀಸಾಗರ್ ಅಡ್ಡ ಇದ್ದಾರೆ. ಇವರಿಗೆ ಮದುವೆಯಾಗಿಲ್ಲ. ಜನರ ಕಷ್ಟ ಗೊತ್ತಿಲ್ಲ ಎಂಬುದಾಗಿ ಟೀಕೆ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಮನೆಯ ಸದಸ್ಯರು ಅಂತ ಹೇಳಿದ್ದೀರಿ. ಯಾರು ಅಂತ ಹೇಳಿ. ಅವರು ಯಾರೆಂಬುದು ಈ ಸದನಕ್ಕೆ ಗೊತ್ತಾಗಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ಕೇಳಿ. ಆದ್ದರಿಂದ ನಾವೂ ನಮ್ಮ ಕೈಲಾದಷ್ಟು ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ನಾನೂ ಆದೇಶವನ್ನು ನೀಡಿದ್ದೇನೆ. ಇನ್ನೂ ಅವರು ಕೆಲಸ ಮಾಡಿಲ್ಲ. ರೈಟಿಂಗ್‌ನಲ್ಲಿ ಆದೇಶವನ್ನು ಕಳುಹಿಸಿ ಮುಂದೆ ಆ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಯೋಚನೆ ಮಾಡುತ್ತೇನೆ. ನನ್ನ ಅಧಿಕಾರವನ್ನು ಸ್ವಲ್ಪ ಉಪಯೋಗಿಸಿದರೆ ನಮ್ಮ ಅಧಿಕಾರವನ್ನೆಲ್ಲಾ ಕಿತ್ತು ಕೊಂಡರು ಅಂತ ಹೇಳುತ್ತಾರೆ. ಅದನ್ನು ನಾನು ಯೋಚನೆ ಮಾಡುತ್ತಿಲ್ಲ. ನಂತರ ರೆವಿನ್ಯೂ ಸ್ಟೈಟ್ ಬಗ್ಗೆ ಅವರು ಏನು ಹೇಳಿದ್ದಾರೆ, ಅದು ನಿಜ. ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಮೂರು ಜನರ ಅಧಿಕಾರಿಗಳ ಸಮಿತಿಯನ್ನು ಮಾಡಿದ್ದೇವೆ. ಇರತಕ್ಕಂತಹ ಕಾನೂನಿನ ತೊಡಕು ಎಲ್ಲವನ್ನೂ ಪರಿಷರಿಸಿ ಅವರು ಅಂತಿಮವಾಗಿ ಶಿಫಾರಸ್ಸು ಸರ್ಕಾರಕ್ಕೆ ಮಾಡಲಿದ್ದಾರೆ. ಬೇಗ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ನೀರು ಸರಬರಾಜು ಮಂಡಲಿಯವರು ಕಾರ್ಯಗತ ಮಾಡಿರುವ ಅನೇಕ ಯೋಜನೆಗಳ ಬಗ್ಗೆ ಎಷ್ಟು ನೀರನ್ನು ಒದಗಿಸಬೇಕೋ ಅಷ್ಟು ನೀರನ್ನು ಒದಗಿಸುತ್ತಾ ಇಲ್ಲ. ಚಿತ್ರದುರ್ಗ ನಗರಕ್ಕೆ ವಾಣಿವಿಲಾಸ ಸಾಗರದಿಂದ ನೀರನ್ನು ಕಳುಹಿಸುತ್ತಿದ್ದಾರೆ. ಅಂದಾಜಿನ ಪ್ರಮಾಣದ ಪ್ರಕಾರ ನೀರನ್ನು ಪೂರೈಕೆ ಮಾಡದೇ ಇರುವುದರಿಂದ ಹೆಚ್ಚು ಹೆಚ್ಚು ಹಣ ಖರ್ಚಾಗುತ್ತಿದೆ. ಈ ರೀತಿ ಅನ್ಯಾಯ ಆಗುವುದನ್ನು ತಡೆಯಲಿಕ್ಕೆ ಸರ್ಕಾರದವರು ನೀರು ಸರಬರಾಜು ಮಂಡಲಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ.

ಶ್ರೀ ಎ. ಲಕ್ಷ್ಮೀಸಾಗರ್.—ವಾಣಿವಿಲಾಸ್ ಸಾಗರ್‌ದಿಂದ ಚಿತ್ರದುರ್ಗಕ್ಕೆ ನೀರನ್ನು ಪಂಪ್ ಮಾಡಬೇಕಾಗುತ್ತದೆ. ಈ ನೀರಿನ ಯೋಜನೆಯನ್ನು ಜಾರಿಗೊಳಿಸುವುದಕ್ಕೋಸ್ಕರ ಜೀವವಿಮಾ ನಿಗಮದಿಂದ ತೆಗೆದುಕೊಂಡಿರತಕ್ಕ ಎರಡು ಕೋಟಿ ರೂಪಾಯಿ ಸಾಲ ಇನ್ನೂ ಕೊಟ್ಟಿಲ್ಲ. ಇನ್ನು ಬಡ್ಡಿ ವಿಚಾರವನ್ನು ಕೇಳಲೇಬೇಡಿ. ನೋಡೋಣ, ಇರುವ ಸನ್ನಿವೇಶದಲ್ಲಿ ಈಗ ಪ್ರಶ್ನೆ ಮಾಡಿದ್ದೀರಿ, ತಮ್ಮನ್ನು ಕರೆಸಿ ಮಾತನಾಡುತ್ತೇನೆ.

SRI MOHAMMED LAIKUDDIN BURANUDDIN.—Sir, my problems have not been solved by the Hon'ble Minister. Bidar is already a neglected area and you are therefo e neglecting me. As regards drinking water to Bidar City, I had asked about the 6½ Crores Scheme. When the scheme is going to be implemented ? I want a definite answer from the Hon'ble Minister. I had also suggested to improve the service conditions of the judicial officers. You have

not replied to my suggestions, Further, I had also stated that loan facility should be extended to the priv te persons. Government servants and the Judicial Officers, by the N tionalised Banks for the construction of houses You have not replied to all the points I request you to kindly answer these points.

Sri. A. LAKSHMI SAGAR —Sir, I have already answered those points. However hon'ble Member Sri Laikuddin wants me to repeat my answer. So far as the service conditions of the judicial officers are concerned, the matter is before the Pay Commission. An Official Committee has been appointed by the Government. I want the Office-bearers of the Judicial Officers Association to represent their grievances to the Official Committee for any in-adequacies which they have found in the recomendations of the Third Pay Commission. As regards Water Supply, I will ask the Water Board to look into it immediately and finalise the scheme without any delay.

ಶ್ರೀ ಸಿ. ಬೈರೇಗೌಡ —ಅಧ್ಯಕ್ಷರೇ, ಮಾನ್ಯ ಲಕ್ಷ್ಮಿಸಾಗರ್‌ರವರು ನಗುವುದನ್ನು ನೋಡ ಬೇಕೆಂದು ಬಹಳ ದಿವಸಗಳಿಂದ ಕಾಯುತ್ತಿದ್ದೆ. ಇವೊತ್ತು ನಗುನಗುತ್ತಾ ಉತ್ತರವನ್ನು ಕೊಟ್ಟಿದ್ದಾರೆ ರೈತರ ವಿಚಾರದಲ್ಲಿ ಒಂದು ಪ್ರಶ್ನೆ ಏನೆಂದರೆ, ಇವೊತ್ತು ಬೂಸಾ ಬೆಲೆ ೬೪ ರೂಪಾಯಿಗೆ ಮಾರಾಟ ಮಾಡಬೇಕಾದ್ದು ೧೦೪ ರೂಪಾಯಿಗೆ ಮಾರಾಟವಾಗುತ್ತಿದೆ. ನನಗೆ ತಿಳಿದಿರುವ ಹಾಗೆ ಈ ಫ್ಲೋರ್‌ಮಿಲ್‌ಗಳಿಗೆ ಕೊಡತಕ್ಕ ಗೋಧಿ ಕಂಟ್ರೋಲ್ ರೂಪದಲ್ಲಿ ಕೊಡುತ್ತಿದ್ದಾರೆ, ಒಂದು ನಿಗದಿಯಾದ ಬೆಲೆಯಲ್ಲಿ ಕೊಡುತ್ತಿದ್ದಾರೆ. ಇಷ್ಟಕ್ಕೆ ಮಾರಾಟ ಮಾಡಬೇಕೆಂದು ನಿಗದಿ ಮಾಡಿದ್ದಾರೆಂದು ತಿಳಿದುಬಂದಿದೆ. ಈಗ ಅದು ಯಾವುದೂ ಪಾಲನೆಯಾಗುತ್ತಿಲ್ಲ. ಇವೊತ್ತು ರೈತರಿಗೆ ೬೪ ರೂಪಾಯಿಗೆ ಮಾರಾಟವಾಗುವ ಬೂಸಾ ೧೦೪ ರೂಪಾಯಿಗೆ ಮಾರಾಟವಾಗಿ ಜಾಸ್ತಿನ ಬೆಲೆ ದುಬಾರಿಯಾಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಕಾನೂನು ಏನಾದರೂ ಇದ್ದರೆ, ಮುಲಾಜು ಇಲ್ಲದೇ ಆ ಕಾನೂನನ್ನು ಜಾರಿಗೆ ತಂದು ಇದನ್ನು ಸರಿಪಡಿಸುತ್ತೇನೆಂದು ನಗುನಗುತ್ತಾ ಹೇಳಿದರೆ ನನಗೂ ಸಂತೋಷ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಭೈರೇಗೌಡರ ಸಲಹೆಯನ್ನು ಪರಿಶೀಲಿಸುವುದಕ್ಕೆ ನಾಳೆ ಸೋಮವಾರ ಅವರನ್ನು ನನ್ನ ಕಛೇರಿಯಲ್ಲಿ ಬರಮಾಡಿಕೊಂಡು ಅಧಿಕಾರಿಗಳ ಜೊತೆ ಮಾತನಾಡಿ ಅವರ ಸಲಹೆಯನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೋ, ಇಲ್ಲವೋ ಎಂಬುದನ್ನು ನೋಡುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್.—ಸ್ವಾಮಿ, ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಆ್ಯಕ್ಟ್ ಎಂದು ಏನರ ಮಾಡಿದ್ದೀರಿ ಅದೇರೀತಿ ಇದನ್ನು ಆ್ಯಕ್ಟ್ ಮಾಡುತ್ತಿರೋ ಅಥವಾ ಸಪರೇಟ್ ಆ್ಯಕ್ ಮಾಡುತ್ತಿರೋ? ೧೪ ಲಕ್ಷ ರೂಪಾಯಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಬಿಡುಗಡೆ ಮಾಡಿದ್ದೇನೆಂದು ಹೇಳಿದ್ದಾರೆ. ಅದಕ್ಕಾಗಿ ವಂದನೆಗಳನ್ನು ಅರ್ಪಿಸಬಯಸುತ್ತೇನೆ.

ಇನ್ನು ೧೯೮೧-೮೨ನೇ ಇಸವಿಯಲ್ಲಿ ಬಿಜಾಪುರ ಸಿಟಿಯಲ್ಲಿ ಕುಡಿಯುವ ನೀರಿನ ಬಗ್ಗೆ ಒಂದು ಎಸ್ಟಿಮೇಟ್ ಆಗಿತ್ತು. ಮೊದಲು ೮೭ ಲಕ್ಷ ರೂಪಾಯಿಗೆ ಅಂದಾಜು ಆಗಿದ್ದುದು ರಿವೈಸ್ ಆಗಿ ೧.೩೫ ಕೋಟಿ ರೂಪಾಯಿಗೆ ಆಯಿತು. ಮತ್ತೆ ಅದು ರಿವೈಸ್ ಆಗಿ ಈಗ ೧.೯೧ ಕೋಟಿ ರೂಪಾಯಿಗೆ ಆಗಿದೆ. ಅದು ಹೆಚ್.ಯು.ಡಿ.ಗೆ ಹೋಗಿ ಅಲ್ಲಿಂದ ಸಚಿವ ಸಂಪುಟಕ್ಕೆ ಬರುತ್ತಿದೆ. ಅದಕ್ಕೆ ತಾವು ಒಪ್ಪಿಗೆಯನ್ನು ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ನಾನು ಹೇಳಿದ್ದೇನೆ. ಈ ಯೋಜನೆಗಳ ಬಗ್ಗೆ ನಾನು ಇಲ್ಲಿ ಏಕಾಏಕಿ ಕಾರ್ಯಗತ ಮಾಡುತ್ತೇನೆ. ಅಥವಾ ಮಾಡುವುದಿಲ್ಲ ಎಂದು ಹೇಳುವುದು ಕಷ್ಟ ವಾಗುತ್ತದೆ. ವಿಚಾರ ಮಾಡಿ ಮಾಡುವುದಾದರೆ ಮಾಡುತ್ತೇನೆಂದು ಹೇಳುತ್ತೇನೆ. ಇದಕ್ಕೆ ಪ್ರತ್ಯೇಕ ಆ್ಯಕ್ಟ್ ಇಲ್ಲ. Hon'ble Member Sri Ustad referred about the Consumers,

Protection Act, 1986. It is a Central Act. If there is a Central Act applicable to all States, the Ssate cannot make separate Act. Please understand this. We are bound to complement it. We are doing it.

ಅಧ್ಯಕ್ಷರು.—ಈಗ ಪ್ರಸ್ತಾವ ಏನೆಂದರೆ :

"೩೧-೩-೮೭ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೨೧, ೩೨, ೩೩, ೩೬ ಮತ್ತು ೩೭ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಭಿಯಾಚನೆ ಕ್ರಮಾಂಕ : ೨೧—ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು,

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೪, ೯೨, ೫೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೧೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ : ೩೨ ನಗರಾಭಿವೃದ್ಧಿ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫, ೭೧,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೨೧,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು".

ಅಭಿಯಾಚನೆ ಕ್ರಮಾಂಕ : ೩೩—ನಿಗಮ ಮತ್ತು ನಗರಪಾಲಿಕೆಗಳಿಗೆ ಪರಿಹಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳಿಗೆ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೭,೨೩, ೪೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ : ೩೬ ರಾಜ್ಯ ವಿಧಾನ ಮಂಡಲ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನ ಸಭೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೧೫,೫೯,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ : ೩೭—ನ್ಯಾಯಪರಿಪಾಲನೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೩, ೬೧, ೨೬,೦೦೦ ರೂ:ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.''

ಅಧ್ಯಕ್ಷರು.—ಈಗ ಸಭೆಯನ್ನು ಮುಕ್ತಾಯಮಾಡಿ ಮತ್ತೆ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಪುನಃ ಸೇರುವುದು.

ಸದನವು ಸಾಯಂಕಾಲ ೬.೧೮ ಗಂಟೆಗೆ ಮುಕ್ತಾಯವಾಗಿ ಮತ್ತೆ ತಾ. ೧೬-೩-೮೭ರ ಸೋಮವಾರದಂದು ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳುವುದಾಗಿ ತೀರ್ಮಾನಿಸಿತು.